# ಅಧ್ಯಾಯ–೧೭

## ಪ್ರೇಕ್ಷಣೀಯ ಸ್ಥಳಗಳು

ಕೋಲಾರ ಜಿಲ್ಲೆಯು ಭೌಗೋಳಿಕವಾಗಿ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿಯಲ್ಲಿದ್ದು, ಅನೇಕ ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಐತಿಹಾಸಿಕವಾಗಿ ಪ್ರಾಮುಖ್ಯತೆ ಪಡೆದಿರುವಂತೆಯೇ ಇತಿಹಾಸ ಪೂರ್ವ ಕಾಲದಲ್ಲಿಯೂ ಅಂದರೆ ಪೂರ್ವ ಶಿಲಾಯುಗ ಮತ್ತು ಬೃಹದ್ ಶಿಲಾಯುಗ ಸಂಸ್ಕೃತಿಗಳ ನೆಲವೀಡಾಗಿದ್ದುದು ಗಣನೀಯವಾಗಿದೆ. ಇತಿಹಾಸದ ಕಾಲದಲ್ಲಿ ಕರ್ನಾಟಕದ ಪ್ರಾಚೀನ ರಾಜವಂಶಗಳಾದ ಬಾಣ, ಗಂಗ ಮತ್ತು ನೊಳಂಬರ ಆಡಳಿತವು ಪ್ರವರ್ಧಮಾನಕ್ಕೆ ಬರುವಲ್ಲಿ ಕೋಲಾರ ಜಿಲ್ಲೆಯು ಪ್ರಮುಖ ಕೇಂದ್ರವಾಗಿದ್ದುದು ಹೆಮ್ಮೆಯ ವಿಚಾರವಾಗಿದೆ. ಕೋಲಾರವನ್ನು ಗಂಗರ ಶಾಸನಗಳಲ್ಲಿ 'ಕುವಲಾಲಪುರ', 'ಕೊವಲಾಲಪುರ' ಎಂದು ವಿಧವಿಧವಾಗಿ ಉಲ್ಲೇಖಿಸಲಾಗಿದೆ. ಈ ಜಿಲ್ಲೆಯಲ್ಲಿ ಅನೇಕ ಪ್ರಮುಖ ಸ್ಥಳಗಳಿದ್ದು, ಕೆಲವು ಪೂರ್ವೇತಿಹಾಸದ ನೆಲೆವೀಡಾಗಿದೆ. ಕೆಲವು ಪ್ರಾಚೀನ ರಾಜವಂಶಗಳ ತವರೂರಾಗಿದೆ. ಕೆಲವು ಸ್ಥಳಗಳು ಧಾರ್ಮಿಕ ಹಾಗೂ ಪೌರಾಣಿಕ ಮಹತ್ವವನ್ನು ಪಡೆದಿರಬಹುದು ಹಾಗೆಯೇ ಕೆಲವು ಸ್ಥಳಗಳು ನೈಸರ್ಗಿಕ ತಾಣಗಳಾಗಿವೆ ಅಥವಾ ಇನ್ನೂ ಕೆಲವು ಸ್ಥಳಗಳು ಪ್ರಾಚೀನ ದೇವಾಲಯಗಳಿಂದ ಅಥವಾ ವಾಸ್ತುಶಿಲ್ಪ ಸಮೃದ್ಧತೆಯಿಂದ ಜನಪ್ರಿಯವಾಗಿವೆ. ಹಿಂದೂ ಧರ್ಮೀಯರಿಗೆ ಕೋಲಾರ ಜಿಲ್ಲೆಯಲ್ಲಿ ಅನೇಕ ಪೌರಾಣಿಕ ಹಾಗೂ ಐತಿಹಾಸಿಕ ತಾಣಗಳು ಕಂಡುಬರುತ್ತವೆ. ಮಹಾಭಾರತದ ಕಾಲದ ಏಕಚಕ್ರನಗರವೆಂದು ಹೇಳಲಾಗುವ ಕೈವಾರದಲ್ಲಿ ಗಂಗ ಹಾಗೂ ನೊಳಂಬರ ಕಾಲದ ಅನೇಕ ಪ್ರಾಚೀನ ದೇವಾಲಯಗಳಿವೆ. ಆವನಿ ಒಂದು ಪವಿತ್ರ ಕ್ಷೇತ್ರವಾಗಿದ್ದು, ಭರತೇಶ್ವರ, ರಾಮಲಿಂಗೇಶ್ವರ, ಲಕ್ಷ್ಮಣೇಶ್ವರ, ಶತೃಘ್ನೇಶ್ವರ ಮೊದಲಾದ ದೇವಾಲಯಗಳನ್ನು ಹೊಂದಿರುವುದು ಮಾತ್ರವಲ್ಲದೇ ರಾಮಾಯಣದ ಘಟನೆಗಳು ಸಂಭವಿಸಿದ ಹಲವಾರು ಸ್ಥಳಗಳನ್ನು ಗುರುತಿಸಲಾಗಿದೆ. ಶ್ರೀಪತೇಶ್ವರ ಹಾಗೂ ಕಾಳಭೈರವ ದೇವಾಲಯಕ್ಕೆ ಹೆಸರು ಪಡೆದಿರುವ ಸೀತಿಬೆಟ್ಟ ಹಾಗೂ ಈ ಪರಿಸರದಲ್ಲಿರುವ ಇತರ ಪ್ರಾಚೀನ ದೇವಾಲಯಗಳು ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಲವರಿಗೆ, ಅದರಲ್ಲೂ ಮೊರಸು ಒಕ್ಕಲಿಗರಿಗೆ ಪವಿತ್ರ ಯಾತ್ರಾಸ್ಥಳವಾಗಿದೆ. ನಂದಿಬೆಟ್ಟ ಅಥವಾ ಶಾಸನೋಕ್ತ ನಂದಿಗಿರಿಯಲ್ಲಿರುವ ಯೋಗನಂದೀಶ್ವರ ಮತ್ತು ನಂದೀಗ್ರಾಮದಲ್ಲಿರುವ ಭೋಗನಂದೀಶ್ವರ ದೇವಾಲಯಗಳಿಂದಾಗಿ ಯಾತ್ರಿಕರ ಗಮನವನ್ನು ಸೆಳೆಯುವ ಜೊತೆಗೆ ಕರ್ನಾಟಕದಲ್ಲಿರುವ ಹಲವೇ ಗಿರಿಧಾಮಗಳಲ್ಲಿ ಒಂದೆನಿಸಿದೆ. ಇಲ್ಲಿಗೆ ಪ್ರವಾಸಿಗಳು ವರ್ಷವಿಡೀ ಅದರಲ್ಲೂ ಬೇಸಿಗೆಕಾಲದಲ್ಲಿ ಹೆಚ್ಚಾಗಿ ಭೇಟಿಕೊಡುತ್ತಾರೆ. ಜಿಲ್ಲೆಯ ಅಂಚಿನಲ್ಲಿರುವ ಮುಳಬಾಗಿಲು ಹಾಗೂ ಸಮೀಪವಿರುವ ನರಸಿಂಹತೀರ್ಥ ತಿರುಪತಿಗೆ ಹೋಗುವ ಯಾತ್ರಿಕರಿಗೆ ಪವಿತ್ರ ಯಾತ್ರಾ ಸ್ಥಳವಾಗಿದೆ. ಕೋಲಾರ ಜಿಲ್ಲೆಯಲ್ಲಿ ಬೌದ್ಧ ಹಾಗೂ ಜೈನ ಅವಶೇಷಗಳು ಅತಿ ವಿರಳವಾಗಿದ್ದು, ಹೆಚ್ಚಾಗಿ ನಾಶಗೊಂಡಿವೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಹರಳಕುಂಟೆ ಗ್ರಾಮದ ಹೊರವಲಯದಲ್ಲಿ ಎರಡು ದೊಡ್ಡ ಬೌದ್ಧ ವಿಹಾರಗಳನ್ನು ಡಾ॥ ಎಂ.ಜಿ. ಮಂಜುನಾಥ ಅವರು ಇತ್ತೀಚೆಗೆ ಪತ್ತೆ ಹಚ್ಚಿರುತ್ತಾರೆ. ಈ ವಿಹಾರಗಳು ಕ್ರಿ.ಶ. ೧ ಮತ್ತು ೨ನೇ ಶತಮಾನಗಳಲ್ಲಿ ಶಾತವಾಹನರ

ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣವಾಗಿರಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ತುಮಕೂರು ಜಿಲ್ಲೆಯ ಮೆಳೆಕೋಟೆಯಲ್ಲಿ ದೊರೆತಿರುವ ಗಂಗದೊರೆ ಇಮ್ಮಡಿ ಮಾಧವನ ತಾಮ್ರಪಟದಲ್ಲಿ ಬೌದ್ಧವಿಹಾರದ ಉಲ್ಲೇಖವಿದ್ದು, 'ಆವನಿ ನದಿಯನ್ನು' ಉಲ್ಲೇಖಿಸಿರುವುದರಿಂದ ಇದು ಕೋಲಾರ ಜಿಲ್ಲೆಗೆ ಸಂಬಂಧಿಸಿದ ಬೌದ್ಧವಿಹಾರ ಇರಬೇಕೆಂದು ಡಾ॥ ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ. ಹಿಂದೆ, ಮುಳಬಾಗಿಲು ತಾಲೂಕಿನ ಕುರುಡುಮಲೆ ಗ್ರಾಮದಲ್ಲಿ ಬುದ್ಧನ ವಿಗ್ರಹ ದೊರೆತ ಬಗ್ಗೆ ಆರ್. ನರಸಿಂಹಾಚಾರ್ಯ ಅವರು ವರದಿ ಮಾಡಿದ್ದರು. ಆದರೆ, ಈ ವಿಗ್ರಹವು ಮೂಲತಃ ಹರಳುಕುಂಟೆ ಗ್ರಾಮದ್ದೆಂದು ತಿಳಿದುಬರುತ್ತದೆ. ಗಂಗರ ದೊರೆ ಎರಡನೇ ಮಾಧವನು ಕ್ರಿ.ಶ. ೫ನೇ ಶತಮಾನದಲ್ಲಿ ಒಂದು ಬೌದ್ಧವಿಹಾರಕ್ಕೆ ಕೊಟ್ಟ ಭೂದಾನದ ವಿವರಗಳು ಈ ತಾಮ್ರಪಟದಲ್ಲಿದ್ದು, ಹರಳುಕುಂಟೆಯ ಬೌದ್ಧವಿಹಾರಗಳು ಗಜಪೃಷ್ಠಾಕಾರ ಅಥವಾ ಕುದುರೆಯ ಲಾಳಾಕಾರದಲ್ಲಿದ್ದು ಪೂರ್ವಾಭಿಮುಖವಾಗಿವೆ. ಈ ವಿಹಾರಗಳ ಸನಿಹದಲ್ಲಿಯೇ ಶಾಸನೋಕ್ತ ಶಾಕ್ಯಶಿಲೆ, ಶಾತವಾಹನರ ಕಾಲದ ಸುಟ್ಟ ಇಟ್ಟಿಗೆಗಳು, ಮಡಿಕೆ ಕುಡಿಕೆಗಳ ಚೂರುಗಳು ಮತ್ತು ಕಬ್ಬಿಣದ ಕುಲುಮೆಯೊಂದರ ಅವಶೇಷಗಳು ಪತ್ತೆಯಾಗಿವೆ. ಮುಳಬಾಗಿಲು ತಾಲೂಕಿನ ಮುಡಿಯನೂರು ಗ್ರಾಮದ ತಾಮ್ರ ಶಾಸನದಲ್ಲಿ ಬಾಣವಂಶದ ಅರಸ ನಂದಿವರ್ಮನು ಬುದ್ಧನಂತೆ ಕರುಣಾಮಯಿ ಎಂದು ಸ್ತುತಿಸಲಾಗಿದೆ. ಈ ಜಿಲ್ಲೆಯಲ್ಲಿ ಜೈನಧರ್ಮದ ಅವಶೇಷಗಳೂ ಅತ್ಯಂತ ವಿರಳವಾಗಿ ದೊರೆತಿರುವುದು ಗಮನಿಸಬೇಕಾದ ಅಂಶವಾಗಿದೆ. ಜೈನ ಶಾಸನಗಳ ಸಂಖ್ಯೆಯೂ ಅತ್ಯಂತ ಕಡಿಮೆಯಾಗಿವೆ. ಮಂಚನಬೆಲೆಯ ಶಿಲಾಶಾಸನ, ಗೋಪಿನಾಥ ಬೆಟ್ಟದ ಶಿಲಾಶಾಸನ, ಗುಡಿಬಂಡೆಯ ಐದು ಶಾಸನಗಳು–ಮಾತ್ರ ಈವರೆಗೆ ಲಭ್ಯವಾಗಿವೆ. ಗಂಗರ ಮೂಲನೆಲೆಯಾದ ತಮಿಳುನಾಡಿನ ಗಂಗ ಪೇರೂರಿನಲ್ಲಿದ್ದ ಜೈನಗುರುಗಳಾದ ಸಿಂಹನಂದಿ ಆಚಾರ್ಯರು ಗಂಗ ಸಾಮ್ರಾಜ್ಯದ ಸ್ಥಾಪನೆಗೆ ದಡಿಗ ಮತ್ತು ಮಾಧವನಿಗೆ ಪ್ರೇರಣೆ ನೀಡಿದ್ದರೆಂದು ಕ್ರಿ.ಶ. ೯–೧೦ನೇ ಶತಮಾನದ ಶಾಸನಗಳಿಂದ ವ್ಯಕ್ತವಾಗುತ್ತದೆ. ಆದರೆ, ಡಾ॥ ಎಂ.ಜಿ. ಮಂಜುನಾಥ ಅವರು ಶ್ರೀನಿವಾಸಪುರ ತಾಲೂಕಿನ 'ಯಲ್ದೂರು' ಹಿಂದಿನ 'ಪೇರೂರು' ಇದ್ದಿರಬಹುದೆಂದು ಅಭಿಪ್ರಾಯಪಡುತ್ತಾರೆ. ಮಾಲೂರು ತಾಲೂಕಿನ ನೋಣಮಂಗಲದ ತಾಮ್ರಶಾಸನದಲ್ಲಿ ಗಂಗದೊರೆ ಅವಿನೀತನು ಉರನೂರಿನ ಜೈನ ಬಸದಿಗೆ ಕೋರಿಕುಂದ ವಿಷಯದ ಚನ್ನೆಲಕರನಿ ಗ್ರಾಮವನ್ನು ಮೂಲಸಂಘದ ಚಂದ್ರನಂದಿ ಆಚಾರ್ಯರಿಗೆ ದಾನವಾಗಿ ಕೊಟ್ಟ ಹಾಗೂ ತನ್ನ ಗುರು ವಿಜಯಕೀರ್ತಿಯ ಉಪದೇಶದಂತೆ ಚಟಿ ಅಡಿಗಳ್ ಎಂಬ ಅಧಿಕಾರಿಯು ನಿರ್ಮಿಸಿದ ಜೈನ ಬಸದಿಗೆ ಕೆಲವು ಕರ್ಷಾಪಣಗಳನ್ನು ದೇವಭೋಗವಾಗಿ ದಾನ ನೀಡಿದ ವಿವರಗಳಿವೆ. ಕೋಲಾರ ತಾಲೂಕಿನ ನರಸಾಪುರದ ತಾಮ್ರ ಶಾಸನದಲ್ಲಿ ತೇನಂದ ಕಯಾಳೆಯರ್ ಎಂಬ ಅಧಿಕಾರಿಯು ಕಣ್ಣಮಂಗಲ ಗ್ರಾಮದಲ್ಲಿ ಒಂದು ಜೈನ ಬಸದಿಯನ್ನು ನಿರ್ಮಿಸಿ ಉತ್ತನಂದಿಪುರಿ ಮಂಡಲದ ಭಟಾರರ ಶಿಷ್ಯೆ ಹಾಗೂ ಕಮುಂಗೆರೆಯ ಕಡಹೂರಭಟಾರರ ಶಿಷ್ಯೆಯಾದ ಕಮುಂಗೆರೆ ಕಂತಿಯವರಿಗೆ ನೀಡಿದ ಹಲವು ಭೂದಾನಗಳ ಬಗ್ಗೆ ವಿವರಗಳಿವೆ. ಶಾಸನೋಕ್ತ ಕಣ್ಣಮಂಗಲವು ಮಾಲೂರು ತಾಲೂಕಿನ ನೋಣಮಂಗಲವಾಗಿದ್ದು, ಅಲ್ಲಿ ಬಸದಿಯ ಅವಶೇಷಗಳನ್ನು ಡಾ॥ ಎಂ. ಜಿ. ಮಂಜುನಾಥ ಅವರು ಪತ್ತೆಹಚ್ಚಿರುತ್ತಾರೆ. ಚಿಕ್ಕಬಳ್ಳಾಪುರ ತಾಲೂಕಿನ ನಂದಿಗಿರಿ ಶ್ರೇಣಿಯಲ್ಲಿ ಇರುವ ಗೋಪಿನಾಥ ಬೆಟ್ಟದಲ್ಲಿರುವ ಜೈನ ಶಾಸನವು ಎಂಟನೇ ಶತಮಾನದಲ್ಲಿ ಇದ್ದ ಬಸದಿಯ ವಿವರಗಳನ್ನು ದಾಖಲಿಸುತ್ತದೆ. ಆದರೆ, ಈಗ ಇಲ್ಲಿ ಯಾವುದೇ ಅವಶೇಷವಿಲ್ಲ. ಈಗಿರುವ ಗೋಪಾಲಕೃಷ್ಣನ ದೇವಾಲಯವೇ ಹಿಂದೆ ಬಸದಿಯಾಗಿತ್ತೆಂಬ ಅಭಿಪ್ರಾಯವಿದೆ. ಮಾಲೂರು ತಾಲೂಕಿನ ಜಯಮಂಗಲವೂ ಹಿಂದೆ ಪ್ರಾಚೀನ ಜೈನ ಕೇಂದ್ರವಾಗಿದ್ದು ಈಗ ಇಲ್ಲಿ ಯಾವುದೇ ಅವಶೇಷಗಳೂ ಉಳಿದುಬಂದಿಲ್ಲ. ಜಿಲ್ಲೆಯಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನು ಕನ್ನಡ ವರ್ಣಮಾಲೆಯ ಆಧಾರದ ಮೇಲೆ 'ಅ'ಕಾರಾದಿಯಾಗಿ ಹೊಂದಿಸಲಾಗಿದೆ ಮತ್ತು ೨೦೦೧ರ ಜನಗಣತಿಯನ್ವಯ ಜನಸಂಖ್ಯೆ ವಿವರಗಳನ್ನೂ ಸಹ ಆಯಾ ಸ್ಥಳಗಳಲ್ಲಿ ಒದಗಿಸಲಾಗಿದೆ.

**ಅಂಬಾಜಿದುರ್ಗ** (ಚಿಂತಾಮಣಿ ತಾಲೂಕು) ಚಿಂತಾಮಣಿಯಿಂದ ಏಳು ಕಿ.ಮೀ. ದೂರದಲ್ಲಿರುವ ಅಂಬಾಜಿದುರ್ಗವು ಸಮುದ್ರ ಮಟ್ಟಕ್ಕಿಂತಲೂ ಸು. ೪,೩೭೯ ಅಡಿ ಎತ್ತರದಲ್ಲಿದ್ದು, ಒಂದು ಪ್ರಶಾಂತ ತಾಣವಾಗಿದೆ. ಟಿಪ್ಪುಸುಲ್ತಾನನು ಈ ದುರ್ಗವನ್ನು ತನ್ನ ವಶಕ್ಕೆ ತೆಗೆದುಕೊಂಡು ೧೭೯೦ ರಲ್ಲಿ ಕೋಟೆಯನ್ನು ನಿರ್ಮಿಸುವ ಮೂಲಕ ಭದ್ರಪಡಿಸಿದನು. ಆದರೆ, ೧೭೯೧ರಲ್ಲಿ ಅಂಬಾಜಿದುರ್ಗವನ್ನು ಲಾರ್ಡ್ ಕಾರ್ನವಾಲೀಸ್‌ನು ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿದ್ದ ಕೋಟೆ ಹಾಗೂ ಇತರೆ ಕಟ್ಟಡಗಳನ್ನು ನಾಶಪಡಿಸಿದನು. ಅಂಬಾಜಿದುರ್ಗಕ್ಕೆ ಚಿಂತಾಮಣಿ–ಬೆಂಗಳೂರು ರಸ್ತೆಯಲ್ಲಿರುವ ಕೊಣಪನಹಳ್ಳಿ ಅಡ್ಡರಸ್ತೆಯ ಮಾರ್ಗವಾಗಿ

ಹೋಗಬಹುದು. ಅಥವಾ ಉಪ್ಪಾರಪೇಟೆಯಿಂದ ಹೊಲಗಳ ಮೂಲಕ ಕಾಲ್ನಡಿಗೆಯ ಕಠಿಣ ಮಾರ್ಗದಲ್ಲಿ ಪ್ರಯಾಸದಿಂದ ಸಂಚರಿಸಿ ಅಂಬಾಜಿದುರ್ಗದ ಮೇಲ್ಭಾಗವನ್ನು ತಲುಪಬಹುದಾಗಿದೆ. ಬೆಟ್ಟದ ತಳದಿಂದ ಮೇಲ್ಭಾಗವನ್ನು ತಲುಪಲು ಸುಮಾರು ಎರಡೂವರೆ ಮೂರು ಘಂಟೆಗಳ ಕಾಲ್ನಡಿಗೆಯ ಪ್ರಯಾಣವಾಗುತ್ತದೆ. ದುರ್ಗದ ಮೇಲ್ಭಾಗವನ್ನು ತಲುಪಲು ವ್ಯವಸ್ಥಿತ ಮಾರ್ಗವಿಲ್ಲದಿರುವುದು ಯಾತ್ರಿಕರಿಗೆ ಪ್ರಮುಖ ಕೊರತೆಯಾಗಿದೆ. ಈ ಬೆಟ್ಟದಲ್ಲಿ ಮೂರು ಸುತ್ತಿನ ಕೋಟೆಯನ್ನು ಅತ್ಯಂತ ಯೋಜಿತ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಈ ಕೋಟೆಯ ಬುರುಜುಗಳು ವೃತ್ತಾಕಾರವಾಗಿದ್ದರೂ ಮಧ್ಯದಲ್ಲಿರುವ ಬುರುಜನ್ನು ಚೌಕಾಕಾರವಾಗಿ ನಿರ್ಮಿಸಲಾಗಿದೆ. ಮೇಲ್ಭಾಗದ ಕೋಟೆಯಲ್ಲಿ ಒಂದೆಡೆ ಚೌಕಾಕಾರವಾದ ಬುರುಜಿಗೆ ಹೊಂದಿಕೊಂಡಂತೆ ಪಿರಮಿಡ್ಡಿನ ಆಕೃತಿಯು ಇದ್ದು ಅದರ ಇನ್ನೊಂದು ಭಾಗವು ಇಳಿಜಾರಾಗಿದೆ. ಈ ರೀತಿಯ ಬುರುಜಿನ ಕಟ್ಟಡ ಶೈಲಿಯು ವೈಶಿಷ್ಟ್ಯಪೂರ್ಣವಾದುವೆಂದು ಕೋಟೆಗಳ ಅಧ್ಯಯನ ತಜ್ಞರಾದ ಡಾ. ಎಸ್.ಕೆ. ಜೋಷಿಯವರು ಅಭಿಪ್ರಾಯಪಟ್ಟಿರುವರು.

ಸಮತಟ್ಟಾದ ಬೆಟ್ಟದ ವಿಶಾಲವಾದ ನಿವೇಶನದಲ್ಲಿ ಒಳಕೋಟೆಯ ಆವರಣದೊಳಗೆ ಒಂದು ಚಿಕ್ಕ ಶಿವಾಲಯವಿದೆ. ಈ ದೇವಾಲಯದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಪ್ರತ್ಯೇಕವಾದ ಕಲ್ಲಿನ ಫಲಕಗಳ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಬಹುಶಃ ಮೂಲದೇವಾಲಯವು ಶಿಥಿಲವಾಗಿದ್ದ ಕಾರಣ ಇತ್ತೀಚಿಗೆ ದುರಸ್ತಿಗೊಳಿಸಿರುವುದು ವ್ಯಕ್ತವಾಗುತ್ತದೆ. ದೇವಾಲಯದ ತಳವಿನ್ಯಾಸದಲ್ಲಿ ಇತರೆ ಭಾಗಗಳಿದ್ದುದು ಕಂಡುಬಂದರೂ ಈಗ ಕೇವಲ ಗರ್ಭಗೃಹದ ಭಾಗವು ಮಾತ್ರ ಕಂಡುಬರುತ್ತದೆ. ಗರ್ಭಗೃಹದಲ್ಲಿ ಹೆಚ್ಚು ಎತ್ತರವಿಲ್ಲದ ಪಾಣಿಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಗರ್ಭಗೃಹದಲ್ಲಿರುವ ಬಾಂದುಕಲ್ಲಿನ ಮೇಲೆ ನಾಗರಿ ಲಿಪಿಯ ಶಾಸನವಿದ್ದು, 'ಲಕ್ಷ್ಮೀನಾರಾಯಣಾಯ ನಮಃ' ಎಂದು ಕೆತ್ತಲಾಗಿದೆ. ಬಹುಶಃ ಮೂಲತಃ ಈ ದೇವಾಲಯವು ವೈಷ್ಣವ ದೇವಾಲಯವಾಗಿದ್ದಿರಬಹುದೆಂಬ ಸಂಶಯವು ನೋಡುಗರಿಗೆ ಬರುತ್ತದೆ. ಗರ್ಭಗುಡಿಯ ಮುಂಭಾಗದಲ್ಲಿ ಒಂದು ಶಿಲಾಸ್ತಂಭವಿದ್ದು, ಸುಂದರವಾದ ನಂದಿಯ ಬಿಡಿಶಿಲ್ಪವಿದೆ. ಈ ದೇವಾಲಯದ ನಿವೇಶನದಿಂದ ಸ್ವಲ್ಪ ದೂರ ಎಡಭಾಗದಲ್ಲಿ ಹಿಂಭಾಗಕ್ಕೆ ಚಲಿಸಿದರೆ ಒಂದು ಕಲ್ಲಿನ ಕಟ್ಟಡವನ್ನು ಹೊಂದಿರುವ ನೆಲಬಾವಿಯು ಕಂಡು ಬರುತ್ತದೆ. ಈ ವಿಶಾಲವಾದ ಹಾಗೂ ಸುತ್ತಲೂ ಎತ್ತರವಾದ ಇಟ್ಟಿಗೆಯ ಗೋಡೆಗಳಿಂದ ಕೂಡಿರುವ ಈ ನೆಲಬಾವಿಯ ಒಳಭಾಗದಲ್ಲಿ ಕಲ್ಲಿನ ಸ್ತಂಭವಿದ್ದು, ಅದು ಮಧ್ಯಭಾಗದಲ್ಲಿ ಛಾವಣಿಗೆ ಆಸರೆಯಾಗಿದೆ. ಇದರ ಮೇಲೆ ಶಿಲ್ಪಾಲಂಕಾರದ ಕೆತ್ತನೆಗಳಿದ್ದಂತೆ ಭಾಸವಾಗುತ್ತದೆ. ಈ ಸ್ತಂಭದ ಮೇಲ್ಭಾಗದಲ್ಲಿ ಚೌಕಾಕಾರವಾದ ಕಲ್ಲಿನ ದಿಮ್ಮಿಗಳು ಕಂಡುಬರುತ್ತವೆ. ಈ ಕಟ್ಟಡದಲ್ಲಿ ಈಗ ನೀರು ನಿಂತಿದ್ದರೂ ಬಿ.ಎಲ್.ರೈಸ್ ಅವರ ಮೈಸೂರು ಮತ್ತು ಕೂರ್ಗ್ ಗ್ಯಾಸೆಟಿಯರ್‌ನಲ್ಲಿ 'ಎಣ್ಣೆತೊಟ್ಟಿ' ಎಂದು ಈ ಕಟ್ಟಡವನ್ನು ಗುರುತಿಸಲಾಗಿದೆ. ಈ ಕಟ್ಟಡದಿಂದ ಉತ್ತರಕ್ಕೆ ಕೋಟೆಯಂಚಿಗೆ ಸರಿದರೆ ಅಲ್ಲೊಂದು ವಿಶಾಲವಾದ ಕೊಳವು ಕಂಡುಬರುತ್ತದೆ. ಅಂಬಾಜಿದುರ್ಗದಲ್ಲಿ ಹಲವು ಅವಶ್ಯಕ ಸೌಲಭ್ಯಗಳನ್ನು ಒದಗಿಸಿದರೆ ಹಾಗೂ ಹತ್ತಿ ಹೋಗಲು ಸುಲಭ ಮಾರ್ಗವನ್ನು ರೂಪಿಸಿದರೆ ಇದೊಂದು ನಿಸರ್ಗ ಯಾತ್ರಿಕರ ತಾಣವಾಗುವುದರಲ್ಲಿ ಸಂಶಯವಿಲ್ಲ. ಎತ್ತರವಾದ ಬೆಟ್ಟದ ಮೇಲ್ಭಾಗದಲ್ಲಿ ನಿಂತು ಪ್ರಕೃತಿ ಸೌಂದರ್ಯವನ್ನು ವೀಕ್ಷಿಸಿದರೆ ಮನೋಲ್ಲಾಸವುಂಟು ಮಾಡುವ ಪ್ರಾಕೃತಿಕ ಸೌಂದರ್ಯದ ದರ್ಶನವಾಗುತ್ತದೆ.

**ಅಗಲಗುರ್ಕಿ:** (ಚಿಕ್ಕಬಳ್ಳಾಪುರ ತಾಲೂಕು: ಜನಸಂಖ್ಯೆ: ೧,೯೫೫): ಚಿಕ್ಕಬಳ್ಳಾಪುರದಿಂದ ಮೂರು ಕಿ.ಮೀ. ದೂರದಲ್ಲಿರುವ ಅಗಲಕುರ್ಕಿಯು ವಿಜಯನಗರೋತ್ತರ ಶೈಲಿಯ ವೀರಭದ್ರ ದೇವಾಲಯದಿಂದ ಜನಪ್ರಿಯವಾಗಿದೆ. ಗರ್ಭಗೃಹದಲ್ಲಿರುವ ವೀರಭದ್ರನ ಪ್ರತಿಮೆಯು ಸುಮಾರು ನಾಲ್ಕು ಅಡಿ ಎತ್ತರವಿದ್ದು, ನಾಲ್ಕು ಕೈಗಳಲ್ಲಿ ಕತ್ತಿ, ಗುರಾಣಿ, ಬಿಲ್ಲು ಹಾಗೂ ಬಾಣಗಳನ್ನು ಹೊಂದಿದೆ. ಗರ್ಭಗೃಹದ ಮುಂಭಾಗದಲ್ಲಿರುವ ನವರಂಗದಲ್ಲಿ ನಂದಿಯ ಕುಳಿತ ಭಂಗಿಯ ಶಿಲ್ಪವಿದ್ದು, ಸ್ಥಳೀಯವಾಗಿ ಬೊಲವೀರಯ್ಯ ಎಂದೂ ಕರೆಯಲಾಗುತ್ತದೆ. ನವರಂಗದ ಬಲಭಾಗದಲ್ಲಿ ಆಭರಣಗಳಿಂದ ಅಲಂಕೃತ ಕೆತ್ತನೆ ಇರುವ ಎರಡು ಕೈಗಳನ್ನು ಮುಗಿದಿರುವ ಹಾಗೂ ನಾಲ್ಕು ಅಡಿ ಎತ್ತರವಿರುವ ಸೆಟ್ಟಪ್ಪನ ಭಕ್ತ ವಿಗ್ರಹವಿದೆ. ಈ ದೇವಾಲಯವನ್ನು ಈತನೇ ನಿರ್ಮಿಸಿದನೆಂದು ಪ್ರತೀತಿಯಿದೆ. ದೇವಾಲಯದ ಹೊರ ಪ್ರಾಕಾರವು ವಿಶಾಲವಾದ ನಿವೇಶನವನ್ನು ಹೊಂದಿದೆ. ಈ ದೇವಾಲಯದ ಸಮೀಪದಲ್ಲಿರುವ ಗೋಪಾಲಕೃಷ್ಣ ಕೆರೆಯ ದಕ್ಷಿಣಕ್ಕಿರುವ ತೂಬಿನ ಬಳಿ ಆರು ಎತ್ತರವಾದ ಸ್ತಂಭಗಳಿಂದ ನಿರ್ಮಿಸಲಾದ ಸುಂದರ ಕಲ್ಲಿನ ಮಂಟಪವು ಕಂಡುಬರುತ್ತದೆ.

**ಅಜ್ಜಾವರ:** (ಚಿಕ್ಕಬಳ್ಳಾಪುರ ತಾಲೂಕು: ಜನಸಂಖ್ಯೆ ೧,೪೧೭): ಚಿಕ್ಕಬಳ್ಳಾಪುರದಿಂದ ಆರು ಕಿ.ಮೀ ದೂರದಲ್ಲಿರುವ ಅಜ್ಜಾವರವು ಸಣ್ಣ ಗ್ರಾಮವಾಗಿದ್ದು, ಪುರಾತನವಾದ ರಂಗನಾಥ ದೇವಾಲಯದಿಂದ ಜನಪ್ರಿಯವಾಗಿದೆ. ಗರ್ಭಗೃಹದಲ್ಲಿ ಕಲ್ಲಿನ ಬೃಂದಾವನವಿದ್ದು, ಅದರ ಮುಂಭಾಗದಲ್ಲಿ ಸುಮಾರು ಮೂರು ಅಡಿ ಎತ್ತರವಿರುವ ಮತ್ತು ಶೇಷಶಯನನಾಗಿರುವ ರಂಗನಾಥನ ಉಬ್ಬು ಶಿಲ್ಪವು ಕಂಡುಬರುತ್ತದೆ.

**ಅಣಕನೂರು:** (ಚಿಕ್ಕಬಳ್ಳಾಪುರ ತಾಲೂಕು: ಜನಸಂಖ್ಯೆ ೯೯) ಚಿಕ್ಕಬಳ್ಳಾಪುರದಿಂದ ಐದು ಕಿ.ಮೀ ದೂರದಲ್ಲಿರುವ ಹಾಗೂ ಶಾಸನೋಕ್ತ 'ಅಣಕನೂರು' ಕ್ರಿ. ಶ. ೧೨ನೇ ಶತಮಾನದಲ್ಲಿಯೇ ಪ್ರಸಿದ್ಧ ಶ್ರೀ ವೈಷ್ಣವ ಕ್ಷೇತ್ರವಾಗಿತ್ತೆಂದು ವ್ಯಕ್ತವಾಗುತ್ತದೆ. ಇದೇ ತಾಲೂಕಿನ ಅಜ್ಜಾವರದಲ್ಲಿರುವಂತೆಯೇ ಈ ಸ್ಥಳದಲ್ಲಿ ರಂಗನಾಥ ದೇವಾಲಯವು ಕಂಡುಬರುತ್ತದೆ. ಈ ದೇವಾಲಯವು ವಾಸ್ತುಶಿಲ್ಪ ದೃಷ್ಟಿಯಿಂದ ಮೂಲತಃ ಚೋಳರ ಶೈಲಿಯಲ್ಲಿದ್ದು, ನಂತರ ವಿಜಯನಗರೋತ್ತರ ಕಾಲದಲ್ಲಿ ದುರಸ್ತಿಗೊಂಡಿರುವ ಸಾಧ್ಯತೆಯಿದೆ. ಈ ದೇವಾಲಯದ ಮುಂಭಾಗದಲ್ಲಿರುವ ಕ್ರಿ. ಶ. ೧೬೮೬ರ ಶಾಸನವು ರಾಜಾದೀತ್ಯ ವೆಂಕಟೇಶನೆಂಬ ಅಧಿಕಾರಿಯು ಈ ಪ್ರದೇಶವನ್ನು ಆಳ್ವಿಕೆಮಾಡುತ್ತಿದ್ದಾಗ ಅಣಕನೂರು ರಂಗನಾಥಸ್ವಾಮಿಯ ಸನ್ನಿಧಿಯಲ್ಲಿ ಶ್ರೀ ವೈಷ್ಣವ ಪಂಥದ ರಾಮಾನುಜ ಕೂಟದ ಮೂಲಗುರು ಪರಾಶರಭಟ್ಟರ ಪರಂಪರೆಯ ವರದಭಟ್ಟರು, ತಿರುಪತಿಭಟ್ಟರು ಮತ್ತು ಶಿಂಗಭಟ್ಟರಿಗೆ ದಿನ ನಿತ್ಯ ಈ ದೇವಾಲಯಕ್ಕೆ ಆಗಮಿಸುವ ಯಾತ್ರಿಕರುಗಳಿಗೆ ಆತಿಥ್ಯ ನೀಡುವ ಸಲುವಾಗಿ ನೂರು ಮುಣಗು ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಶಾಸನದಲ್ಲಿ ಉಲ್ಲೇಖಿಸಿರುವ ಪರಾಶರಭಟ್ಟರು ರಾಮಾನುಜಾಚಾರ್ಯರ ಸಮಕಾಲೀನರು.

**ಆಲಂಬಗಿರಿ:** (ಚಿಂತಾಮಣಿ ತಾಲೂಕು: ಜನಸಂಖ್ಯೆ:೧,೩೦೨) ಚಿಂತಾಮಣಿಯಿಂದ ೧೦ ಕಿ. ಮೀ. ದೂರದಲ್ಲಿರುವ ಅಲಂಬಗಿರಿಯು ತಿರುಮಲನಾಥ ಸ್ವಾಮಿ ಅಥವಾ ವೆಂಕಟರಮಣ ದೇವಾಲಯದಿಂದಾಗಿ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದೆ. ಈ ದೇವಾಲಯದ ಪರಿಸರದಲ್ಲಿ ದೊರೆತಿರುವ ಶಾಸನಗಳಲ್ಲಿ ಈ ಸ್ಥಳವನ್ನು ಕೋಲಾಲ ಸೀಮೆಯಲ್ಲಿ ಕೈವಾರಸ್ಥಳದ ವ್ಯಾಪ್ತಿಯಲ್ಲಿರುವ 'ಅವಲಂಬಗಿರಿ' ಅಥವಾ 'ಹಾಲಂಬಗಿರಿ'ಎಂದು ಉಲ್ಲೇಖಗೊಂಡಿದೆ. ಈ ದೇವಾಲಯದಲ್ಲಿ ಗರ್ಭಗೃಹ ಎರಡು ಅರ್ಧಮಂಟಪಗಳು, ವಿಶಾಲವಾದ ನವರಂಗ ಹಾಗೂ ಆಯತಾಕಾರವಾದ ಮುಖ ಮಂಟಪಗಳು ಕಂಡುಬರುತ್ತವೆ. ದೇವಾಲಯದ ಗರ್ಭಗೃಹ ಹಾಗೂ ನವರಂಗದ ಭಾಗಗಳು ವಿಜಯನಗರಕ್ಕೂ ಹಿಂದಿನ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ. ಏಕೆಂದರೆ ಇಲ್ಲೇ ದೊರೆತಿರುವ ಸುಮಾರು ಕ್ರಿ. ಶ. ೧೩೩೦ರ ಲಕ್ಷಣವನ್ನು ವ್ಯಕ್ತಪಡಿಸುವ ತಮಿಳು ಶಾಸನದಲ್ಲಿ ಮಹಾಮಂಡಳೇಶ್ವರ ತ್ರಿಭುವನಮಲ್ಲನು ಆಗಲೇ ಪ್ರಸಿದ್ಧವಾಗಿದ್ದ ಆಲಂಬಗಿರಿಯ ತಿರುವೆಂಗಳನಾಥ ದೇವರಿಗೆ ಭೂದಾನವನ್ನು ಧಾರ್ಮಿಕ ಔನತ್ಯದ ಕಾರಣಕ್ಕಾಗಿ ನೀಡಿದ ಬಗ್ಗೆ ದಾಖಲಿಸುತ್ತದೆ. ಗರ್ಭಗೃಹವು ಚೌರಸವಾಗಿದ್ದು, ಶಂಖ, ಚಕ್ರ ಅಭಯ ಹಾಗೂ ಕಟಿ ಹಸ್ತಗಳನ್ನು ಹೊಂದಿರುವ ಸಮಭಂಗೀಯ ತಿರುಮಲನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಸ್ಥಳೀಯ ನಂಬುಗೆಯ ಪ್ರಕಾರ ಈ ವಿಗ್ರಹದ ಪಾದದಲ್ಲಿ ವಿಷ್ಣು ಸಾಲಿಗ್ರಾಮವಿದ್ದು, ವೆಂಕಟೇಶನು ಸ್ವಯಂವ್ಯಕ್ತನೆಂದು ಹೇಳಲಾಗುತ್ತದೆ. ಈ ದೇವಾಲಯದ ಪರಿಸರದಲ್ಲೆ ದೊರೆತಿರುವ ಕ್ರಿ.ಶ. ೧೫೩೨ರ ಇನ್ನೊಂದು ಶಾಸನದಲ್ಲಿ ವಿಜಯನಗರದ ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ಕೋಲಾಲ ಸೀಮೆಯ ಕೈವಾರ ಸ್ಥಳದ ಮಾಂಡಲಿಕನಾಗಿದ್ದ ತಿಮ್ಮಪ್ಪನಾಯಕನು ಗೋಕುಲಾಷ್ಟಮಿಯ ಪವಿತ್ರ ದಿನದಂದು ಆಲಂಬಗಿರಿಯ ತಿರುವೆಂಗಳನಾಥನಿಗೆ ಬಂಗಾರದ ನಾಣ್ಯಗಳನ್ನು ಹಾಗೂ ಇತರೆ ದತ್ತಿಗಳನ್ನು ಗೌತಮಗೋತ್ರದ ತಿಮ್ಮಭಟ್ಟನ ಮಗನಾದ ಗಿರಿಭಟ್ಟನಿಗೆ ನೀಡಿದ ವಿಚಾರವನ್ನು ದಾಖಲಿಸಲಾಗಿದೆ. ದೇವಾಲಯದ ನವರಂಗವು ವಿಶಾಲವಾಗಿದ್ದು, ಮಧ್ಯದಲ್ಲಿ ನಾಲ್ಕು ಚೌಕಾಕಾರವಾದ ವಿಜಯನಗರದ ಶೈಲಿಯ ಸ್ತಂಭಗಳಿವೆ. ಇದರ ಛಾವಣಿಯು ಯಾವುದೇ ಕೆತ್ತನೆಗಳಿಲ್ಲದೇ ಸಾಧಾರಣವಾಗಿದೆ. ಗರ್ಭಗೃಹದ ಬಲಭಾಗದಲ್ಲಿ ಸಾಂದಾರ ಪ್ರದಕ್ಷಿಣಾಪಥವಿದೆ. ನವರಂಗದ ಮುಂಭಾಗದಲ್ಲಿ ಆಯತಾಕಾರದ ಹಾಗೂ ವಿಶಾಲ ಮುಖಮಂಟಪವಿದ್ದು ಎಂಟು ಎತ್ತರವಾದ ಚೌಕಾಕಾರದ ಕಂಬಗಳನ್ನು ಹೊಂದಿದೆ. ದೇವಾಲಯದ ಹೊರಭಾಗದಲ್ಲಿ ಸುತ್ತಲೂ ಎತ್ತರವಾದ ಕೋಟೆಯ ಗೋಡೆಗಳ ಆಕಾರದ ಭದ್ರತಾ ಗೋಡೆಗಳಿಂದ ಕೂಡಿರುವ ವಿಶಾಲವಾದ ಒಳಪ್ರಾಕಾರವಿದೆ. ಗರ್ಭಗೃಹದ ಮೇಲ್ಭಾಗದಲ್ಲಿರುವ ಚೌಕಾಕಾರದ ವಿಜಯನಗರ ಶೈಲಿಯ ಶಿಖರವನ್ನು ನವೀಕರಿಸಲಾಗಿದೆ. ಮುಖಮಂಟಪದ ಬಲಭಾಗದಲ್ಲಿ ಸಣ್ಣ ಕೊಠಡಿಗಳಿದ್ದು, ಒಂದರಲ್ಲಿ ಶ್ರೀ ವೈಷ್ಣವ ಪಂಥದ ಆಳ್ವಾರ್‌ಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಪೂರ್ವದಿಕ್ಕಿನಲ್ಲಿರುವ ಪ್ರವೇಶದ್ವಾರವು ಎತ್ತರವಾಗಿದ್ದು, ವಿಜಯನಗರೋತ್ತರ ಶೈಲಿಯಲ್ಲಿ ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಿತವಾಗಿರುವುದು

ವ್ಯಕ್ತವಾಗುತ್ತದೆ. ಈ ದ್ವಾರಬಂಧದ ಒಳಭಾಗದಲ್ಲಿ ಎರಡು ಕಲ್ಲಿನ ಉಬ್ಬು ಶಿಲ್ಪಗಳಿವೆ. ಬಲಭಾಗದಲ್ಲಿ ನರ್ತಕಿ ಅಥವಾ ಮೋಹಿನಿಯ ಆಕರ್ಷಕ ಶಿಲಾಕೃತಿಯಿದ್ದು, ಈಕೆಯ ಕಾಲಿನಿಂದ ಮುಳ್ಳನ್ನು ತೆಗೆಯುತ್ತಿರುವ ಓರ್ವ ಪುರುಷನ ಶಿಲ್ಪವೂ ಇದೆ. ದ್ವಾರಬಂಧದ ಲಲಾಟದಲ್ಲಿ ಗಜಲಕ್ಷ್ಮೀಯ ಉಬ್ಬು ಶಿಲ್ಪವಿದೆ. ಲಲಾಟದ ಎರಡೂ ಪಕ್ಕದಲ್ಲಿ ಗಂಡಭೇರುಂಡ, ನರ್ತಿಸುತ್ತಿರುವ ಕೃಷ್ಣ ಚಂದ್ರ ಹನುಮಂತ, ಶರಭ, ನರಸಿಂಹ, ಹಿರಣ್ಯಕಶಿಪು ಮತ್ತು ಲಕ್ಷ್ಮೀನರಸಿಂಹ ಮೊದಲಾದ ಮೂರ್ತಿಗಳ ಶಿಲ್ಪಾಲಂಕಾರವಿದೆ. ದೇವಾಲಯದ ಪ್ರವೇಶದ್ವಾರದ ಬಲಭಾಗದಲ್ಲಿ ಸ್ತಂಭಗಳಿಂದ ಕೂಡಿರುವ ವಿಶಾಲವಾದ ಕಲ್ಯಾಣ ಮಂಟಪವಿದೆ. ದೇವಾಲಯದ ಎಡಭಾಗದಲ್ಲಿ ಅಲಮೇಲು ಮಂಗಮ್ಮ ಅಥವಾ ಲಕ್ಷ್ಮೀದೇವಿಯ ಪ್ರತ್ಯೇಕ ಗುಡಿಯಿದೆ. ಇದರಲ್ಲಿ ಗರ್ಭಗೃಹ ಹಾಗೂ ಚಿಕ್ಕ ನವರಂಗ ಮಾತ್ರವಿದೆ. ಈ ದೇವಾಲಯದ ಪರಿಸರದಲ್ಲಿರುವ ಇನ್ನೊಂದು ಶಾಸನವು ಕ್ರಿ. ಶ. ೧೬೮೫ರಲ್ಲಿ ಮರಾಠದೊರೆ ಸಾಂಬಾಜಿಯ ಮಗ ಮಲುಕೋಜಿ ರಾಜನು ಕೊಂಡದ ಗ್ರಾಮವನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಈ ಸ್ಥಳವು ಕೋಳಾಲ ಸೀಮೆಯಲ್ಲಿರುವ ಕೈವಾರಸ್ಥಳದ ವ್ಯಾಪ್ತಿಯಲ್ಲಿದ್ದು, ಮರಾಠ ರಾಜ ಛತ್ರಪತಿ ಶಿವಾಜಿಯ ಆಡಳಿತದಲ್ಲಿತ್ತೆಂಬ ವಿಚಾರವು ಇದೇ ಶಾಸನದಿಂದ ತಿಳಿದುಬರುತ್ತದೆ. ಈ ದೇವಾಲಯವು ಪ್ರಸ್ತುತ ಕೈವಾರದ ಯೋಗಿನಾರೇಯಣ ಸಮಿತಿಯವರ ಹತೋಟಿಯಲ್ಲಿದೆ. ದೇವಾಲಯದ ಪರಿಸರವನ್ನು ಅತ್ಯಂತ ಸ್ವಚ್ಛವಾಗಿಡಲಾಗಿದೆ. ವೈಖಾನಸ ಆಗಮದ ರೀತಿಯಲ್ಲಿ ಪೂಜಾ ಕೈಂಕರ್ಯಗಳು ಜರುಗುತ್ತಿದ್ದು ಚೈತ್ರ ಬಹುಳ ಪೂರ್ಣಿಮಿಯಂದು ವಾರ್ಷಿಕವಾಗಿ ತಿರುಮಲನಾಥ ಸ್ವಾಮಿಯ ಬ್ರಹ್ಮರಥೋತ್ಸವನ್ನು ನಡೆಸಲಾಗುತ್ತಿದೆ. ಈ ದೇವಾಲಯದ ಎದುರಿಗೆ ಎತ್ತರವಾದ ಧ್ವಜಸ್ತಂಭವಿದ್ದು, ವಿಶಾಲವಾದ ರಥಬೀದಿಯ ಆಚೆಗೆ ಕ್ಷೇತ್ರಪಾಲ ಆಂಜನೇಯನ ಚಿಕ್ಕಗುಡಿಯಿದೆ.

**ಆವನಿ:** (ಮುಳಬಾಗಿಲು ತಾಲೂಕು: ಜನಸಂಖ್ಯೆ:೨,೭೮೯) ಮುಳಬಾಗಿಲಿನಿಂದ ೧೨ ಕಿ.ಮೀ. ದೂರದಲ್ಲಿರುವ ಆವನಿ ಕ್ಷೇತ್ರವು ಜಿಲ್ಲೆಯ ಪ್ರಾಚೀನ ಸ್ಥಳಗಳಲ್ಲಿ ಪ್ರಮುಖವಾಗಿದ್ದು, ಇಂದಿಗೂ ಜನಪ್ರಿಯ ಧಾರ್ಮಿಕ ಕ್ಷೇತ್ರವಾಗಿದೆ. ಭಾರತದಲ್ಲಿರುವ ಹಿಂದೂ ಧಾರ್ಮಿಕ ಕ್ಷೇತ್ರಗಳ ಪೈಕಿ ಆವನಿಯನ್ನು 'ಆವಂತಿಕಾ' ಕ್ಷೇತ್ರವೆಂದು ಪರಿಗಣಿಸಲಾಗಿದೆ. ಇದೇ ಸ್ಥಳದಲ್ಲಿರುವ ಹಲವಾರು ಶಿಲಾಶಾಸನಗಳಲ್ಲಿ ಈ ಊರನ್ನು 'ಆವನಿಯ ಸ್ಥಾನ', 'ಆವನಿ ಸ್ಥಳ' ಮೊದಲಾದ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಹಾಗೂ ಕ್ರಿ.ಶ. ೯೭೦ರ ಶಾಸನದಲ್ಲಿ ಈ ತಪೋಭೂಮಿಯನ್ನು (ಆವನಿಯೆಂದು ಕರೆದಿರುವುದು) ತ್ರಿಭುವನ ಕರ್ತಾರದೇವನು ಆಳ್ವಿಕೆಯನ್ನು ಮಾಡುತ್ತಿದ್ದ ವಿಚಾರವನ್ನು ದಾಖಲಿಸಲಾಗಿದೆ. ಆವನಿಯ ಅತ್ಯಂತ ಪ್ರಾಚೀನ ಶಾಸನವೆಂದರೇ ಭರತೇಶ್ವರ ಮತ್ತು ಶತ್ರುಘ್ನೇಶ್ವರ ಗುಡಿಗಳ ಅಧಿಷ್ಠಾನದ ಮೇಲಿರುವ ಶಾಸನಗಳಾಗಿವೆ. ಈ ಶಾಸನಗಳು ಗಂಗರಾಜನಿಗೆ ಇದ್ದ ಪೃಥ್ವಿಗಂಗನ ಬಿರುದನ್ನು ಉಲ್ಲೇಖಿಸುತ್ತವೆ. ಆದುದರಿಂದ ಈ ದೇವಾಲಯಗಳು ಗಂಗ ವಂಶದ ಆಳ್ವಿಕೆಯ ಕಾಲಕ್ಕೆ ಸೇರುತ್ತವೆ ಎಂದು ಅಭಿಪ್ರಾಯಪಡಲಾಗುತ್ತದೆ. ಹಾಗೇಯೇ ಶತ್ರುಘ್ನೇಶ್ವರ ಮತ್ತು ಲಕ್ಷ್ಮಣೇಶ್ವರ ದೇವಾಲಯಗಳ ಆದಿಷ್ಠಾನಗಳ ಮತ್ತು ಮಾನಸ್ತಂಭದ ಮೇಲಿನ ಶಾಸನಗಳು ಕನ್ನಡ ಭಾಷೆಯಲ್ಲಿದ್ದು ವೀರನೊಳಂಬ, ದೇವಲಬ್ಬರಸಿ ಮೊದಲಾದವರ ಉಲ್ಲೇಖಗಳನ್ನು ಹೊಂದಿವೆ. ಆವನಿಯು ಒಂದು ಸಾಕಷ್ಟು ಎತ್ತರವಾದ ಕಗ್ಗಲ್ಲಿನ ಬೆಟ್ಟದ ತಪ್ಪಲಲ್ಲಿದ್ದು, ಬಹುಶಃ ಬೆಟ್ಟದ ಮೇಲಿರುವ ಅವಶೇಷಗಳನ್ನು ಗಮನಿಸಿದರೆ ರಾಯಾಯಣ ಕಾಲದ ಹಲವಾರು ಕುರುಹುಗಳು ಕಂಡುಬರುತ್ತವೆ. ಈ ಬೆಟ್ಟವನ್ನು ಆವನಿಯ ಬೆಟ್ಟವೆಂದೇ ಇಂದಿಗೂ ಗುರುತಿಸಲಾಗುತ್ತದೆ. ಸಾಂಪ್ರದಾಯಿಕವಾಗಿ ರಾಮಾಯಣದಲ್ಲಿ ಬರುವ ಸೀತೆಯ ಜೀವನದ ಘಟನೆಗಳು ಆವನಿಯ ಬೆಟ್ಟದ ಮೇಲೆ ಜರುಗಿವೆ ಎಂಬ ಗಾಢವಾದ ಸ್ಥಳೀಯ ನಂಬಿಕೆಯಿದೆ. ಬೆಟ್ಟದ ಮೇಲ್ಭಾಗಕ್ಕೆ ಹೋಗುವ ಮಾರ್ಗದಲ್ಲಿ ಅಸಂಖ್ಯಾತ ಶಿಲಾಶಾಸನಗಳು ಇದ್ದು ಹುಟ್ಟು ಬಂಡೆಗಳ ಮೇಲೆ ಮೊದಲು ಕಂಡುಬಂದಿದ್ದು, ಇತ್ತೀಚಿಗೆ ಇಲ್ಲಿ ನಡೆಯುತ್ತಿದ್ದ ಕಲ್ಲುಗಳ ಆಕ್ರಮ ಗಣಿಗಾರಿಕೆಗಳಿಂದ ನಾಶಹೊಂದಿವೆಯಂದು ಹೇಳಲಾಗುತ್ತದೆ. ಇಲ್ಲಿ ದೊರೆತ ಶಾಸನಗಳ ಪೈಕಿ ಒಂದು ಶಾಸನವನ್ನು (ಎಂ.ಬಿ–೬೧), ಹಿಂದೆ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ ಅವರು ಪ್ರತಿ ಮಾಡಿದ್ದ ಶಾಸನಗಳ ಭಾಗವು ಈಗ ಲಭ್ಯವಿಲ್ಲವಾಗಿದೆ. ಬಹುಶಃ ಇದೇ ಶಾಸನದ ಆಧಾರದ ಮೇಲೆ ದೇವಾಂಬಿಕೆ ಎಂಬ ನೊಳಂಬ ರಾಣಿಯು ತನ್ನ ಜೇಷ್ಠಪುತ್ರ ವೀರ ಮಹೇಂದ್ರ ನೊಳಂಬರಾಜನು ಯುದ್ಧದಲ್ಲಿ ಮಡಿದ ಜ್ಞಾಪಕಾರ್ಥವಾಗಿ ಆವನಿಯಲ್ಲಿ ರಾಮೇಶ್ವರ ದೇವಾಲಯವನ್ನು ನಿರ್ಮಿಸಿದಳೆಂದು ವ್ಯಕ್ತವಾಗುತ್ತದೆ. ಈಕೆಯ ಎರಡನೇ ಪುತ್ರ ಇರಿವ ನೊಳಂಬನು ನಂತರ ಪಟ್ಟಕ್ಕೆ ಬಂದುದು ಈ ದೇವಾಲಯದ ನಿರ್ಮಾಣದಿಂದ ಎಂಬುದು ಸ್ವಯಂ ವೇದ್ಯವಾಗುತ್ತದೆ. ಮೇಲೆ ಹತ್ತಿಹೋಗುವ ದಾರಿಯಲ್ಲಿ ೨೦೦ ಮೆಟ್ಟಿಲುಗಳನ್ನು ನಿರ್ಮಿಸಿರುವ 'ಮೆಟ್ಟಿಲು ಬಂಡೆ' ಕಂಡುಬರುತ್ತದೆ. ಇದರ ಬಳಿಯಲ್ಲೇ ಹಂತ ಹಂತವಾಗಿ ನೈಸರ್ಗಿಕವಾಗಿ ಪೇರಿಸಲಾಗಿರುವ ಬಂಡೆಗಳ ಸಮೂಹವನ್ನು 'ತೊಟ್ಟಿಲು ಬಂಡೆ' ಎಂದು

ಕರೆಯಲಾಗುತ್ತದೆ. ಈ ಎತ್ತರವಾದ ಬಂಡೆಗಳ ಮೇಲೆ ಸೀತಾದೇವಿಯು ನಿಂತು ಕೆಳಗೆ ಅರ್ಧ ಮೈಲಿ ದೂರದಲ್ಲಿದ್ದ ಕಿರು ಬೆಟ್ಟದ ಮೇಲೆ (ಲವಕುಶ ಬಂಡೆ) ತನ್ನ ಮಕ್ಕಳಾದ ಲವ ಮತ್ತು ಕುಶ ಮಾಡಿದ ಹೋರಾಟವನ್ನು ವೀಕ್ಷಿಸಿದಳೆಂದು ಪ್ರತೀತಿಯಿದೆ. ಇದೇ ರೀತಿ ಮುಳಬಾಗಿಲು ತಾಲೂಕಿನಲ್ಲಿರುವ ಗಂಜಿಗುಂಟೆಯ ಬಳಿ ಇದ್ದ ಇನ್ನೊಂದು ಬಂಡೆಯ ಮೇಲೆ ಶ್ರೀರಾಮನು ನಿಂತಿದ್ದ ಕಾರಣ ಆ ಬಂಡೆಯನ್ನು 'ರಾಮಬಂಡೆ' ಎಂದು ಕರೆಯಲಾಗುತ್ತದೆ. ಈ ಎರಡೂ ಬೆಟ್ಟಗಳ ನಡುವೆ ಕಂಡುಬರುವ ಚಿಕ್ಕ–ಚಿಕ್ಕ ಕಲ್ಲಿನ ಗುಡ್ಡಗಳನ್ನು ಬಂಜೆತಾಯಂದಿರು ತಮಗೆ ಮಕ್ಕಳಾಗಲಿ ಎಂದು ಪೂಜಿಸುತ್ತಿದ್ದ ಸ್ಥಳಗಳೆಂದು ಸಹ ಪ್ರತೀತಿಯಿದೆ. ಬೆಟ್ಟವನ್ನು ಏರುತ್ತಾ ಇನ್ನಷ್ಟು ಮೇಲೆ ಹೋದರೆ ಸಿಗುವ ಗವಿಯನ್ನು 'ವಾಲ್ಮೀಕಿ ಗವಿ' ಯಂದು ಕರೆಯಲಾಗುತ್ತದೆ. ಈ ಗವಿಯಲ್ಲಿ ಬಂಡೆಯ ಮೇಲೆ ಪದ್ಮಾಸೀನನಾಗಿ ತಪಸ್ಸು ಮಾಡುತ್ತಿರುವ ಹಾಗೂ ಉದ್ದ ಜಟೆಯುಳ್ಳ ಒಬ್ಬ ಋಷಿಯ ಉಬ್ಬು ಶಿಲ್ಪವನ್ನು ಕೆತ್ತಲಾಗಿದ್ದು, ಇದನ್ನು ವಾಲ್ಮೀಕಿಯ ಶಿಲ್ಪವೆಂದು ಗುರುತಿಸಲಾಗಿದೆ. ಈ ಋಷಿಯ ಶಿಲ್ಪದ ಲಕ್ಷಣಗಳನ್ನು ಗಮನಿಸಿದರೆ, ನಾಥಪಂತಕ್ಕೆ ಸೇರಿದ ಯೋಗಿಗಳ ಸಾಧನೆಯ ಕ್ಷೇತ್ರವಾಗಿತ್ತೆಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಗವಿಯಲ್ಲಿ ಹಿಂಭಾಗದಲ್ಲಿ ಕಂಡುಬರುವ ಇನ್ನೊಂದು ಕಿರುಗವಿಯನ್ನು ಲವ–ಕುಶರ ಜನ್ಮಸ್ಥಾನವೆಂದು ಸ್ಥಳೀಯವಾಗಿ ವರ್ಣಿಸಲಾಗುತ್ತದೆ. ವಾಲ್ಮೀಕಿಯ ಉಬ್ಬು ಶಿಲ್ಪದ ಬಳಿಯಲ್ಲೇ ಇನ್ನೊಂದು ಉಬ್ಬು ಶಿಲ್ಪವಿದ್ದು, ಇದನ್ನು ವೀರಭದ್ರ ಎಂದು ಹಾಗೂ ಪಕ್ಕದಲ್ಲಿರುವ ಕುಳಿತ ಭಂಗಿಯ ಇನ್ನೊಂದು ಶಿಲ್ಪವನ್ನು ದಕ್ಷ ಅಥವಾ ಜನಕರಾಯನೆಂದೂ ವರ್ಣಿಸಲಾಗುತ್ತದೆ. ಈ ಗವಿಯ ಬಳಿಯಲ್ಲೇ ಅನತಿ ದೂರದಲ್ಲಿ ಇನ್ನೊಂದು ಚೋಳಶೈಲಿಯ ಪ್ರಾಚೀನ ದೇವಾಲಯವಿದ್ದು, ಒಳಗೆ ಐದು ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಇವುಗಳನ್ನು ಪಂಚಪಾಂಡವರ ನೆನಪಿಗೆ ನಿರ್ಮಿಸಲಾಗಿದೆ ಎಂದು ಪ್ರತೀತಿಯಿದೆ. ಇದರ ಬಳಿಯಲ್ಲೇ ಕೋಟೆಯ ಗೋಡೆಗಳಲ್ಲಿ ಹುದುಗಿಸಿರುವ ಎರಡು ಪ್ರವೇಶದ್ವಾರಗಳು ಕಂಡುಬರುತ್ತವೆ. ಇವುಗಳಲ್ಲಿ ಒಂದನ್ನು ಪ್ರವೇಶಿಸಿದರೇ ಸೀತಾದೇವಿಯು ತನ್ನ ಬಟ್ಟೆಗಳನ್ನು ತೊಳೆದಳೆಂದು ಹೇಳಲಾಗುವ 'ಕಾಷಾಯ ತೀರ್ಥ'ವೆಂಬ ಚಿಕ್ಕ ಕಲ್ಯಾಣಿಯಿದೆ. ಇದರ ಬಳಿಯೇ ಬಂಡೆಯ ಮೇಲೆ 'ಹಾಲಾಡೆ' (ಒಳಲೆ)ಯ ಕೆತ್ತನೆಯನ್ನು ಕಾಣಬಹುದಾಗಿದೆ. ಇಲ್ಲಿಂದ ಉತ್ತರಕ್ಕೆ ಹೋದರೆ ಉತ್ತರ ದಿಕ್ಕಿಗೆ ಚಾಚಿರುವ ಬೃಹದಾಕಾರವಾದ ಬಂಡೆಯನ್ನು ಸೀಳಿ ಗರ್ಭಗುಡಿಯನ್ನು ಸೃಷ್ಟಿಸಲಾಗಿದೆ. ಒಂದೇ ಪಾಣಿಪೀಠದ ಮೇಲೆ ಜೋಡಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದ್ದು, 'ಲವ–ಕುಶ'ಲಿಂಗಗಳೆಂದು ಕರೆಯಲಾಗುತ್ತದೆ. ಈ ಗುಡಿಯನ್ನು ಸಹ ಲವ–ಕುಶರ ಗುಡಿಯೆಂದು ಗುರುತಿಸಲಾಗುತ್ತದೆ. ಇದರ ಭಾವಣಿಯಲ್ಲಿ ಸುಮಾರು ೧೦ ರಿಂದ ೨೦ ಗುಳಿಗಳಿದ್ದು (೧.೫ ಅಂಗುಲ ಆಳವುಳ್ಳ), ಈ ಗುಳಿಗಳಿಗೆ ಕಲ್ಲಿನ ಕೊಕ್ಕೆಗಳಿದ್ದು ಇವು ಲವ–ಕುಶರ ತೊಟ್ಟಿಲುಗಳೆಂದು ಕರೆಯಲಾಗುತ್ತದೆ. ಇದರಲ್ಲಿ ಬೃಹದಾಕಾರದ ಕಲ್ಲಿನ ಹಂಡೆಯಿದ್ದು, (ಲೋಹದ ನಾದವನ್ನು ನೀಡುತ್ತದೆ) ಇದನ್ನು 'ಸೀತಾದೇವಿಯ ಹಂಡೆ' ಎಂದು ಕರೆಯಲಾಗುತ್ತದೆ.

ಈ ದೇವಾಲಯದ ದಕ್ಷಿಣಕ್ಕೆ ಚೋಳರ ಶೈಲಿಯ ಇನ್ನೊಂದು ಚಿಕ್ಕ ಗುಡಿಯಿದ್ದು, ಕಿರಿದಾದ ಗರ್ಭಗೃಹ (೬' x ೬') ಶುಖನಾಸಿ (೬' x ೬') ಮತ್ತು ನವರಂಗವನ್ನು ಹೊಂದಿದೆ. ಇದನ್ನು ಏಕಾಂತ ರಾಮೇಶ್ವರನ ಗುಡಿಯೆಂದು ಕರೆಯಲಾಗುತ್ತದೆ. ಈ ದೇವಾಲಯದ ನವರಂಗದಲ್ಲಿ ನಾಲ್ಕು ವೃತ್ತಾಕಾರವಾದ ಕಂಬಗಳಿವೆ. ಈ ದೇವಾಲಯವನ್ನು ಈ ಪ್ರಾಂತ್ಯದ ಚೋಳರ ರಾಜ್ಯಪಾಲನಾಗಿದ್ದ ಹೊಯ್ಸಳ ಮೂರನೇ ಬಲ್ಲಾಳನ ಮಾರ್ಗದರ್ಶನದಲ್ಲಿ ನಿರ್ಮಿಸಿದರೆಂದು ಪ್ರತೀತಿಯಿದೆ. ಗರ್ಭಗೃಹದಲ್ಲಿರುವ ಅಷ್ಟಕೋನಾಕಾರವಾದ ಪಾಣಿಪೀಠದ ಮೇಲೆ ಹೆಚ್ಚು ಎತ್ತರವಿಲ್ಲದ ಕಪ್ಪುಶಿಲೆಯ ನುಣುಪಾದ ಶಿವಲಿಂಗವನ್ನು ಪ್ರತಿಷ್ಠಾಪಿಸಿದೆ. ಮೂಲತಃ ನವರಂಗದ ಪ್ರವೇಶದ್ವಾರವು ದಕ್ಷಿಣಕ್ಕಿದ್ದು, ನಂತರ ಸೀತಾ ದೇವಾಲಯದ ಎದುರಿಗೆ ಉತ್ತರ ಪ್ರವೇಶದ್ವಾರವನ್ನು ನಿರ್ಮಿಸಿರುವುದು ವ್ಯಕ್ತವಾಗುತ್ತದೆ. ಉತ್ತರದ ದ್ವಾರಬಂಧದ ಲಲಾಟದಲ್ಲಿ ಚಾಮರಧಾರಿಣಿಯ ಸಮೇತ ಕೆತ್ತಲಾಗಿರುವ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಮುಂಭಾಗದ ಪ್ರವೇಶದ್ವಾರದ ಬಳಿಯಲ್ಲಿ ತ್ರಿಶೂಲವನ್ನು ಕೆತ್ತಲಾಗಿದೆ. ಇಲ್ಲಿಂದ ಸುಮಾರು ನೂರು ಅಡಿ ಎತ್ತರಕ್ಕೆ ಏರಿ ಹೋದರೇ ಚಾಚಿಕೊಂಡಿರುವ ಬಂಡೆಗಳಲ್ಲಿ ಹಲವಾರು ಕವಾಟಗಳು (Cleft) ನೈಸರ್ಗಿಕವಾಗಿ ಉಂಟಾಗಿದ್ದು, ಅವುಗಳಲ್ಲಿ ಒಂದು ಸುಮಾರು ಆರು ಅಡಿ ಅಗಲವಿದ್ದು ನೂರು ಅಡಿಗಳಷ್ಟು ಉದ್ದವಿದೆ. ಹಾಗೂ ಇದನ್ನು ಧನುಷ್ಕೋಟಿತೀರ್ಥವೆಂದು ಕರೆಯಲಾಗುತ್ತದೆ. ಇದನ್ನು ಸೀತಾದೇವಿಯು ಜಳಕ ಮಾಡುವುದಕ್ಕಾಗಿ ಲಕ್ಷ್ಮಣನು ಸೃಷ್ಟಿಸಿದನೆಂದು ಪ್ರತೀತಿಯಿದೆ. ಇದಕ್ಕೆ ಉತ್ತರ ದಿಕ್ಕಿನಲ್ಲಿರುವ ಬಂಡೆಗಳಲ್ಲಿ ಅನೇಕ ಶಾಸನಗಳಿದ್ದು, ಕೆಲವಲ್ಲಿ ಶಿವಲಿಂಗ ಬಸವಣ್ಣ ಹಾಗೂ ಇತರೆ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಕ್ರಿ.ಶ. ಹದಿಮೂರನೇ ಶತಮಾನಕ್ಕೆ ಸೇರಿದ ನಾಲ್ಕಾರು ಶಾಸನಗಳು ಕೂತ್ತಾಡುನ್‌ದೇವ ಮತ್ತು ಅವನ ಸಂತತಿಯವರು ನೀಡಿದ ದಾನಗಳನ್ನು ದಾಖಲಿಸುತ್ತವೆ. ಬೆಟ್ಟದ ತಪ್ಪಲಿನಲ್ಲಿ ಗಿಂಡಿತೀರ್ಥದ ಪಶ್ಚಿಮದಲ್ಲಿರುವ ಗುಂಡಿನ ಮೇಲಿನ ಕ್ರಿ. ಶ. ೯೩೧ರ

ಶಾಸನದಲ್ಲಿ ತ್ರಿಭುವನ ಕರ್ತಾರದೇವನು ಆವನಿಯ ಸ್ಥಾನವನ್ನು ೪೦ ವರ್ಷಗಳ ಆಳ್ವಿಕೆ ಮಾಡಿ, ಆ ವೇಳೆಯಲ್ಲಿ ೫೦ ದೇವಾಲಯಗಳನ್ನು ಹಾಗೂ ಎರಡು ಬೃಹದಾಕಾರವಾದ ಕೆರೆಗಳನ್ನು ನಿರ್ಮಿಸಿದ ಮಹತ್ವದ ವಿಚಾರವನ್ನು ದಾಖಲಿಸಲಾಗಿದೆ. ಇದೇ ಸ್ಥಳದಲ್ಲಿ ದೊರೆತ ಇನ್ನೂ ಎರಡು ಶಾಸನಗಳ ಪೈಕಿ (ಎಂ.ಬಿ–೬೬) ಮೊದಲನೆಯದು ಮುದ್ದಕ್ಕ ಭೋಗಿ ಎಂಬ ಹೆಂಗಸು ಸತಿ ಹೋದ ವಿಚಾರವನ್ನು (ಕ್ರಿ. ಶ. ೯೭೩) ಮತ್ತು ಎರಡನೇಯದು (ಕ್ರಿ. ಶ. ೯೨೦) ಮಹೇಂದ್ರ ಭಟ್ಟನೆಂಬ ಭಕ್ತನು ಕಲಿಯುಗ ರುದ್ರದೇವರ ಚಿಕ್ಕ ಗುಡಿಯನ್ನು ನಿರ್ಮಿಸಿದ ವಿಚಾರವನ್ನು ದಾಖಲಿಸುತ್ತವೆ. ಇದರ ಬಳಿಯಲ್ಲಿರುವುದೇ 'ಬೃಹ್ಮತೀರ್ಥ'ವೆಂಬ ಪುಷ್ಕರಣಿ. ಇದೇ ಸ್ಥಳದ ವಾಯುವ್ಯ ಬೆಟ್ಟಕ್ಕೆ ಹೋಗುವ ದಾರಿಯಲ್ಲಿರುವ ಹುಟ್ಟು ಬಂಡೆಯ ಮೇಲಿರುವ ಕ್ರಿ.ಶ. ೧೫೫೨ರ ಲಕ್ಷಣವನ್ನು ವ್ಯಕ್ತಪಡಿಸುವ ಶಾಸನವು ಅಸ್ಪಷ್ಟವಾಗಿದ್ದು ಕೇವಲ ಸುಗಟೂರಿನ ಆಯಮಗೌಡ ಮತ್ತು ಆತನ ಸೇವಕ ಶೀಲವಂತ ಚಿಕ್ಕ ಇವರ ಹೆಸರುಗಳು ಮಾತ್ರ ದಾಖಲಿಸುತ್ತದೆ. ಏಕಾಂತ ರಾಮೇಶ್ವರ ದೇವಾಲಯದ ಬಾಗಿಲ ಸುತ್ತಲೂ ಇರುವ ಎರಡು ಶಾಸನಗಳ/ ಪೈಕಿ ಮೊದಲನೆಯದು (ಎಂಬಿ–೭೦) ಕ್ರಿ. ಶ. ಸು. ೧೨೨೮ರ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು ಜಯಗೊಂಡ ಚೋಳ ಇಳವಂಜಿರಾಯ ಉರುಫ್ ಕುಟ್ಟಾಡುಣ (ಕೂತ್ತಾಡುನ್) ದೇವನ ರಾಣಿ ಸೇಣಗಂಡ್ಯೆ ಈ ದೇವಾಲಯದ ಬಾಗಿಲನ್ನು ಮಾಡಿಸಿದ ಬಗ್ಗೆ ದಾಖಲಿಸುತ್ತದೆ. ಮತ್ತು ಎರಡನೆಯ ಶಾಸನವು (ಎಂ.ಬಿ–೭೧) ಕ್ರಿ.ಶ. ೧೨೯ರಲ್ಲಿ ಪೆರಿಯ ಉದ್ಯೆಯಾನ್‌ನ ಮಗನಾದ ಸೂರ್ಯಂದನ್ ಎಂಬ ಅಧಿಕಾರಿಯು ಜಯಗೊಂಡ ಚೋಳ ಇಳವಂಜಿರಾಯನ ಆಳ್ವಿಕೆಯ ಕಾಲದಲ್ಲಿ ಈ ದೇವಾಲಯದ ನಿರಂತರ ಪೂಜೆಯನ್ನು ಹಾಗೂ ಇತರೆ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ನೀಡಿದ ದಾನಗಳ ಬಗ್ಗೆ ದಾಖಲಿಸುತ್ತದೆ.

ಬೆಟ್ಟದ ಮೇಲ್ಭಾಗವನ್ನು ತಲುಪಿದರೆ ಸಿಗುವುದೇ ಸೀತಾಪಾರ್ವತಿ ದೇವಾಲಯ. ಇದರ ಪಶ್ಚಿಮಕ್ಕಿರುವ ಗವಿಯಲ್ಲಿ ರಾಮ ಮತ್ತು ಸೀತಾ ಪಗಡೆಯಾಟವನ್ನು ಆಡುತ್ತಿದ್ದರೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಇದಕ್ಕೆ ಪಶ್ಚಿಮದ ತುದಿಯಲ್ಲಿ ಬೆಟ್ಟದ ಮೇಲ್ಭಾಗದ ಕೊನೆಯಲ್ಲಿ ಒಂದು ಬೃಹದಾಕಾರವಾದ ಬಂಡೆಯಲ್ಲಿ ಲಂಬಾಕಾರವಾದ ಕವಾಟವು ನೈಸರ್ಗಿಕವಾಗಿದೆ. ಇಲ್ಲಿ ಮಕ್ಕಳನ್ನು ಬಯಸುವ ಹೆಂಗಸರು ಧನುಷ್ಕೋಟಿ ತೀರ್ಥದಲ್ಲಿ ಮಿಂದ ಬಳಿಕ ಉರುಳು ಸೇವೆಯನ್ನು ಇಂದಿಗೂ ಮಾಡುತ್ತಾರೆ. ಏಕೆಂದರೆ, ಹೀಗೆ ಮಾಡುವುದರಿಂದ ಅವರ ಬಂಜೆತನವು ಮಾಯವಾಗಿ ಮಕ್ಕಳಾಗುತ್ತದೆಂಬ ದೃಢನಂಬಿಕೆಯಿದೆ. ಇಲ್ಲಿಂದ ಉತ್ತರಕ್ಕೆ ಕುರ್ಚಿಯಾಕಾರವಾದ ಇನ್ನೊಂದು ಕಲ್ಲುಗುಂಡಿದ್ದು, ಇದನ್ನು 'ಕುರ್ಚಿ ಗುಂಡು' ಎಂದು ಕರೆಯಲಾಗುತ್ತದೆ. ಮತ್ತು ಇದರ ಮೇಲೆ ಶ್ರೀರಾಮ ಕುಳಿತು ಬೆಟ್ಟದ ಇನ್ನೊಂದು ಬದಿಯಲ್ಲಿ ಸೀತಾದೇವಿಯು ಅಗ್ನಿಪರೀಕ್ಷೆ ಎದುರಿಸುತ್ತಿರುವುದನ್ನು ವೀಕ್ಷಿಸಿದ್ದನೆಂದು ಸ್ಥಳೀಯವಾಗಿ ಪ್ರತೀತಿಯಿದೆ. ವಿಸ್ಮಯವೆಂದರೇ ಈ ಕಲ್ಲಿನ ಗುಂಡು ಪರಿಪೂರ್ಣವಾದ ಬೆನ್ನಿರುವ ಕುರ್ಚಿಯ ಆಕಾರದಲ್ಲಿರುವುದೇ ಆಗಿದೆ. ಶ್ರೀರಾಮ ಮತ್ತು ಸೀತಾ ದೇವಾಲಯವು ನೊಳಂಬ–ಪಲ್ಲವರ ಶೈಲಿಯ ವಾಸ್ತು ರಚನೆಯನ್ನು ಹೊಂದಿದೆ. ಇದರಲ್ಲಿ ಗರ್ಭಗೃಹ ಮತ್ತು ಮುಖಮಂಟಪಗಳು ಮಾತ್ರ ಇವೆ. ಮುಖಮಂಟಪವು ವಿಶಾಲವಾಗಿದ್ದು, ೧೨ ಒರಟಾದ ಕಂಬಗಳಿವೆ. ಗರ್ಭಗೃಹವು ಎತ್ತರವಾದ ಕಲ್ಲಾಸರೆಯ ಕೆಳಗೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿತವಾಗಿದೆ. ಗರ್ಭಗೃಹದಲ್ಲಿರುವ ಎರಡು ವಿಗ್ರಹಗಳ ಪೈಕಿ ಮೊದಲನೆಯದು ಶ್ರೀರಾಮನ ಚತುರ್‌ಬಾಹು ವಿಗ್ರಹವಾಗಿದ್ದು, ನಾಲ್ಕು ಕೈಗಳು ಅಭಯ, ಪದ್ಮ, ಪದ್ಮ ವರದ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಇಲ್ಲಿರುವ ಇನ್ನೊಂದು ಸ್ತ್ರೀ ಪ್ರತಿಮೆಯು ಪ್ರಾಚೀನ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು, ಆರ್. ನರಸಿಂಹಾಚಾರ್ಯರು ೧೯೧೧ರ ಪುರಾತತ್ವ ವರದಿಯಲ್ಲಿ ಇದರ ಬಗೆಗೆ ಪ್ರಸ್ತಾಪಮಾಡದಿದ್ದರೂ, ಗರ್ಭಗೃಹದ ಹಿಂದೆ ಇರುವ ಇನ್ನೊಂದು ಗವಿಯಲ್ಲಿ ದೊರೆಯಿತೆಂದು ೧೯೩೦ರ ಪುರಾತತ್ವ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ವಿಗ್ರಹವು ಕಿರೀಟವನ್ನು ಹೊಂದಿದ್ದು, ಅಭಯ, ಚಕ್ರ, ಶಂಖ ಮತ್ತು ಕಟಿಹಸ್ತಗಳ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದು, ಸೀತಾದೇವಿಯೆಂದು ಹೇಳಲಾಗಿದ್ದರೂ, ಪ್ರತಿಮಾಶಾಸ್ತ್ರದ ಪ್ರಕಾರ ವೈಷ್ಣವಿ ದೇವಿಯ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಈ ವಿಗ್ರಹವು ಬಹುತೇಕವಾಗಿ ನೊಳಂಬ ಪಲ್ಲವರ ಶೈಲಿಯಲ್ಲಿ ರಚಿತವಾಗಿದೆ. ಈ ದೇವಾಲಯದ ಪ್ರವೇಶದ್ವಾರವು ಅಲಂಕೃತವಾಗಿದ್ದು, ನೊಳಂಬ–ಪಲ್ಲವರ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ.

ಆವನಿಯ ಬೆಟ್ಟದಿಂದ ಇಳಿದು ಬಂದರೆ ನೈರುತ್ಯಕ್ಕೆ ಸಿಗುವುದೇ ದೊಡ್ಡ ಆವರಣದಲ್ಲಿ ನಿರ್ಮಿತವಾಗಿರುವ ರಾಮೇಶ್ವರ ದೇವಾಲಯಗಳ ಸಮೂಹ. ಇಲ್ಲಿರುವ ಮಹಾದ್ವಾರ, ಯಾಗಶಾಲೆ ಮತ್ತು ಕಲ್ಯಾಣ ಮಂಟಪಗಳು ಕ್ರಿ. ಶ. ೧೩ನೇ ಶತಮಾನದಲ್ಲಿ

ಈ ಪ್ರದೇಶದಲ್ಲಿ ಹೊಯ್ಸಳ ಮೂರನೇ ಬಲ್ಲಾಳನ ಅಧೀನದಲ್ಲಿ ರಾಜ್ಯಪಾಲನಾಗಿದ್ದ ಇಳವಂಜಿ ವಾಸುದೇವರಾಯನು ನಿರ್ಮಿಸಿರುವನೆಂದು ಗುರುತಿಸಲಾಗುತ್ತದೆ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೇ ರಾಮೇಶ್ವರ, ಲಕ್ಷ್ಮಣೇಶ್ವರ, ಭರತೇಶ್ವರ, ಶತೃಘ್ನೇಶ್ವರ ಮತ್ತು ಅಂಜನೇಶ್ವರ ದೇವಾಲಯಗಳು. ಇವುಗಳ ಜೊತೆಗೆ ಸುಗ್ರೀವೇಶ್ವರ ಮತ್ತು ಅಂಗದೇಶ್ವರ ಹಾಗೂ ಪಾರ್ವತಿ ಸುಬ್ರಹ್ಮಣ್ಯ ದೇವರುಗಳ ಚಿಕ್ಕ ಗುಡಿಗಳೂ ಇವೆ. ಚಿಕ್ಕ ಗುಡಿಗಳ ಎದುರಿಗೆ ಎತ್ತರವಾದ ಮಾನಸ್ತಂಭವಿದೆ. ಇಲ್ಲಿರುವ ಶಿವಲಿಂಗಗಳನ್ನು ಸಾಂಪ್ರದಾಯಿಕವಾಗಿ ಶ್ರೀರಾಮ ಹಾಗೂ ಅವನ ಸಹೋದರರು ಪ್ರತಿಷ್ಠಾಪಿಸಿದರೆಂಬ ಐತಿಹ್ಯವಿದೆ. ರಾಮೇಶ್ವರ ದೇವಾಲಯವು ಗರ್ಭಗೃಹ, ಎರಡು ಅರ್ಧಮಂಟಪಗಳು ಚೌರಸವಾದ ನವರಂಗ ಹಾಗೂ ಮುಂಭಾಗದ ಮುಖಮಂಟಪವನ್ನು ಸೇರಿಸುವ ಚಿಕ್ಕ ಕೊಠಡಿಯಿದ್ದು, ಆಕರ್ಷಕ ಪ್ರವೇಶದ್ವಾರವನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹವು ಚೌರಸವಾಗಿದ್ದು, ಎತ್ತರವಾದ ಪಾಣಿಪೀಠದ ಮೇಲೆ ಕಪ್ಪುಶಿಲೆಯ ನುಣುಪಾದ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಮುಂಭಾಗದಲ್ಲಿರುವ ಅರ್ಧಮಂಟಪದ ಎಡಭಾಗದಲ್ಲಿ ಕಾಮಾಕ್ಷಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ವೇಸರ ಅಥವಾ ದ್ರಾವಿಡ ಶೈಲಿಯ ಶಿಖರವಿದೆ. ನವರಂಗವು ವಿಶಾಲವಾಗಿದ್ದು, ತಗ್ಗಾದ ಅಲಂಕೃತ ಛಾವಣಿಯನ್ನು ಹೊಂದಿದ್ದು ನಾಲ್ಕು ವೃತ್ತಾಕಾರವಾದ ಮಧ್ಯಭಾಗವನ್ನು ಹಾಗೂ ದಿಂಬಿನಾಕಾರಾದ ಪೀಠಗಳನ್ನು ಹೊಂದಿರುವ ಗಂಗರ ಕಾಲದ ಚಿಕ್ಕ ಸ್ತಂಭಗಳಿವೆ. ನವರಂಗದ ಎಡಭಾಗದಲ್ಲಿರುವ ಕಿರು ಕೊಠಡಿಯಲ್ಲಿ ಚಂಡೀಕೇಶ್ವರನ ಪ್ರತಿಮೆಯನ್ನು ಇರಿಸಲಾಗಿದೆ. ನವರಂಗದ ಬಲಭಾಗದಲ್ಲಿ ಎತ್ತರವಾದ ಜಗತಿಯ ಮೇಲೆ ಸಪ್ತಮಾತೃಕೆಯರ ಆಕರ್ಷಕ ಬಿಡಿಶಿಲ್ಪಗಳನ್ನು ಇಡಲಾಗಿದೆ. ಇದರ ಬಳಿಯಲ್ಲಿಯೇ ತ್ರಿಭುವನ ಕರ್ತಾರನ ಕಿರು ಭಕ್ತ ಶಿಲ್ಪವನ್ನೂ ಸಹ ಇಡಲಾಗಿದೆ. ನವರಂಗದ ಮುಂಭಾಗದಲ್ಲಿರುವ ಮುಖಮಂಟಪವು ನಂತರದ ಕಾಲದ ರಚನೆಯಾಗಿದ್ದು, ಹಲವಾರು ಚತುಷ್ಕೋನಾಕಾರವಾದ ಸ್ತಂಭಗಳನ್ನು ಹೊಂದಿದೆ. ಮುಖ್ಯವಾಗಿ ಮಧ್ಯದಲ್ಲಿರುವ ನಾಲ್ಕು ಸ್ತಂಭಗಳು ಅತ್ಯಂತ ಆಕರ್ಷಕ ಅಲಂಕಾರಗಳನ್ನು ಹೊಂದಿವೆ. ಮುಖಮಂಟಪದ ಬಲಭಾಗದಲ್ಲಿ ಪ್ರವೇಶದ್ವಾರವಿದ್ದು, ಗರ್ಭಗೃಹ ಮತ್ತು ಕಿರಿದಾದ ಅರ್ಧಮಂಟಪವನ್ನು ಹೊಂದಿರುವ ಸೀತಾ ಅಥವಾ ಪಾರ್ವತಿಯ ಗುಡಿಯೆಂದು ಗುರುತಿಸಲ್ಪಟ್ಟಿದೆ. ಗರ್ಭಗೃಹವು ಚೌರಸಾಕಾರವಾಗಿದ್ದು, ಪಾರ್ವತಿಯ ವಿಗ್ರಹವು ಸು. ೩.೫ ಅಡಿ ಎತ್ತರದ ಚತುರ್ಬಾಹುಗಳನ್ನು ಹೊಂದಿದ್ದು, ಅಭಯ, ಪದ್ಮ, ಪದ್ಮ ಮತ್ತು ವರದ ಹಸ್ತಗಳನ್ನು ವ್ಯಕ್ತಪಡಿಸುತ್ತದೆ. ಈ ವಿಗ್ರಹ ಮತ್ತು ಹಿಂದೆ ಇರುವ ಪ್ರಭಾವಳಿ ಕ್ರಿ. ಶ. ೧೩ನೇ ಶತಮಾನದ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ. ಗರ್ಭಗೃಹದಲ್ಲಿ ಸೋಮಸ್ಕಂದನ ಸಮೂಹ ವಿಗ್ರಹಗಳೂ ಕಂಡುಬರುತ್ತವೆ. ಗರ್ಭಗೃಹದ ಪ್ರವೇಶದ್ವಾರದ ಬಲಭಾಗದಲ್ಲಿ ಸೂರ್ಯನಾರಾಯಣನ ಹಾಗೂ ನೊಳಂಬ ಇಳವಂಜಿ ವಾಸುದೇವರಾಯ ಮತ್ತು ಆತನ ತಮ್ಮ ಕೋದಂಡರಾಯ ಅಥವಾ ಖಂಡೇರಾಯ ಇವರುಗಳ ಭಕ್ತ ಶಿಲಾಮೂರ್ತಿಗಳು ಕಂಡುಬರುತ್ತವೆ. ಈ ದೇವಾಲಯದ ಮುಖಮಂಟಪದ ಪ್ರವೇಶದ್ವಾರವು ಕಂಡುಬರುತ್ತಿದ್ದು, ರಾಮೇಶ್ವರನಿಗೆ ನೇರವಾಗಿದ್ದು, ಈಗ ಇದನ್ನು ಮುಚ್ಚಲಾಗಿದೆ. ಈ ಮುಖಮಂಟಪದಲ್ಲಿ ನಂದಿಯ ಏಕಶಿಲಾ ಮೂರ್ತಿಯಿದೆ.

ರಾಮೇಶ್ವರ ದೇವಾಲಯದ ಸಂಕೀರ್ಣದ ಮಧ್ಯಭಾಗದಲ್ಲಿ ಪಾರ್ವತಿಯ ದೇವಾಲಯವಿದೆ. ಈ ದೇವಾಲಯದ ಪಶ್ಚಿಮಕ್ಕೆ–ದಕ್ಷಿಣದಿಂದ–ಉತ್ತರಕ್ಕೆ ಚಾಚಿಕೊಂಡಂತೆ ಸಾಲಾಗಿರುವ ದೇವಾಲಯಗಳೆಂದರೇ, ಲಕ್ಷ್ಮಣೇಶ್ವರ, ರಾಮೇಶ್ವರ ಮತ್ತು ಭರತೇಶ್ವರ ಇವುಗಳ ಪೂರ್ವಕ್ಕೆ ಸಾಲಾಗಿರುವ ದೇವಾಲಯಗಳೆಂದರೇ ಶತೃಘ್ನೇಶ್ವರ, ಅಂಜನೇಶ್ವರ, ಸುಗ್ರೀವೇಶ್ವರ ಮತ್ತು ಅಂಗದೇಶ್ವರ. ರಾಮೇಶ್ವರ ದೇವಾಲಯದ ಬಲಭಾಗದಲ್ಲಿ ಶತೃಘ್ನೇಶ್ವರ ದೇವಾಲಯವಿದ್ದು, ದಕ್ಷಿಣಾಭಿಮುಖವಾಗಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಗರ್ಭಗೃಹದ ಪ್ರವೇಶದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಮಧ್ಯದಲ್ಲಿ ವೃತ್ತಾಕಾರವಾದ ನಾಲ್ಕು ಕಂಬಗಳಿದ್ದು, ಮೇಲ್ಭಾಗದಲ್ಲಿ ವೃತ್ತಾಕಾರವಾದ ದಿಂಬಿನ ಆಕಾರದ ಪೀಠಗಳನ್ನು ಹೊಂದಿವೆ. ಇಲ್ಲಿ ಮಧ್ಯದಲ್ಲಿ ಏಕಶಿಲಾಕೃತಿಯ ಆಕರ್ಷಕ ನಂದಿ ಇದೆ. ನವರಂಗದ ಪೂರ್ವ ಹಾಗೂ ಪಶ್ಚಿಮ ಗೋಡೆಗಳಲ್ಲಿ ಅಲಂಕೃತ ಜಾಲಂಧ್ರಗಳಿವೆ. ನವರಂಗದ ಛಾವಣಿಯಲ್ಲಿ ಅತ್ಯಂತ ಆಕರ್ಷಕ ಅಷ್ಠದಿಕ್ಪಾಲಕರ ಶಿಲಾಕೃತಿಗಳಿವೆ. ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಶತೃಘ್ನೇಶ್ವರ ಎಂದು ಕರೆಯಲಾಗುವ ಗಂಗರ ಶೈಲಿಯ ಬಾಣಲಿಂಗವಿದೆ. ಈ ದೇವಾಲಯವು ಮೂಲತಃ ಗಂಗರ ಶೈಲಿಯಲ್ಲಿ ನಿರ್ಮಿತವಾಗಿದ್ದು, ನಂತರ ನೊಳಂಬರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರುವುದು ವ್ಯಕ್ತವಾಗುತ್ತದೆ. ಮುಖಮಂಟಪದ ಸ್ತಂಭಗಳ ಮೇಲೆ ಶೈವ ಪುರಾಣವನ್ನು ಪ್ರತಿನಿಧಿಸುವ ಆಕರ್ಷಕ ಉಬ್ಬು ಶಿಲ್ಪಗಳಿವೆ. ಮುಖಮಂಟಪದ ಎಡಭಾಗದಲ್ಲಿ

ವೀರಭದ್ರನ ವಿಗ್ರಹವಿದೆ. ಈ ದೇವಾಲಯದ ಎದುರಿಗೆ ಅತ್ಯಂತ ಸುಂದರ ಅಲಂಕಾರಗಳಿರುವ ಲಕ್ಷ್ಮಣೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ಗರ್ಭಗೃಹ, ತೆರೆದ ಅರ್ಧಮಂಟಪ ಮತ್ತು ವಿಶಾಲವಾದ ನವರಂಗವಿದೆ. ಗರ್ಭಗೃಹವು ಚೌರಸವಾಗಿದ್ದು, ಪಾಣಿಪೀಠದ ಮೇಲೆ ಅತ್ಯಂತ ಎತ್ತರವಾದ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಗಂಗರ ನಾಲ್ಕು ಕೇಂದ್ರ ಕಂಬಗಳು ವೃತ್ತಾಕಾರವಾಗಿದ್ದು ಮೇಲ್ಭಾಗದಲ್ಲಿ ವೃತ್ತಾಕಾರವಾದ ದಿಂಬಿನ ಪೀಠಗಳನ್ನು ಹೊಂದಿವೆ. ನವರಂಗದ ಬಲಭಾಗದಲ್ಲಿರುವ ಜಗತಿಯ ಮೇಲೆ ಸಪ್ತಮಾತೃಕೆಯರ ಆಕರ್ಷಕ ಬಿಡಿ ಶಿಲ್ಪಗಳಿವೆ. ನವರಂಗದ ಛತ್ತಿನಲ್ಲಿ ಅಷ್ಟದಿಕ್ಪಾಲಕರ ಶಿಲಾಮೂರ್ತಿಗಳನ್ನು ಕೆತ್ತಲಾಗಿದೆ. ಇದರ ಪ್ರವೇಶದ್ವಾರದಲ್ಲಿ ಯಾಳಿಗಳಿರುವ ಮೆಟ್ಟಿಲುಗಳಿವೆ. ದೇವಾಲಯದ ಅದಿಷ್ಠಾನದ ಸುತ್ತಲೂ ಅಲಂಕೃತ ಕೆತ್ತನೆಗಳಿದ್ದು, ಇವುಗಳ ಪೈಕಿ ಒಂದರಲ್ಲಿ ಕುದುರೆಲಾಳದ ಆಕಾರದ ಕಮಾನುಗಳಿದ್ದು, ಆನೆಗಳ, ಸಿಂಹಗಳ, ಯಾಳಿಗಳ ಮತ್ತು ಮಕರಗಳ ಅಲಂಕಾರಗಳನ್ನು ಕೆತ್ತಲಾಗಿವೆ. ಇವುಗಳನ್ನು ಸೂಕ್ಷ್ಮವಾಗಿ ಪರಾಮರ್ಶಿಸಿದರೆ ಬಾಣ ಮತ್ತು ರಾಷ್ಟ್ರಕೂಟರ ಕಾಲದ ಪ್ರಾವೀಣ್ಯತೆಯನ್ನು ವ್ಯಕ್ತಪಡಿಸುವುದರಲ್ಲಿ ಅನುಮಾನವಿಲ್ಲ. ದೇವಾಲಯದ ಹೊರಗೋಡೆಗಳಲ್ಲಿ ಬಹು ಕೋನಾಕಾರದ ಕಿರು ಸ್ತಂಭಗಳಿದ್ದು, ಇವುಗಳ ಮೇಲ್ಭಾಗದ ಪೀಠಗಳು ನಾಶಗೊಂಡಿವೆ. ಈ ಕಿರು ಸ್ತಂಭಗಳ ಮಧ್ಯದಲ್ಲಿರುವ ಪ್ರತಿಮೆಗಳ ಪೈಕಿ ಮುಖ್ಯವಾದುವೆಂದರೆ ದ್ವಾರಪಾಲರು, ಯಕ್ಷರು, ಶಿವ, ಭೈರವ, ವಿಷ್ಣು, ದುರ್ಗ ಜೋಳಿಗೆ ಇದ್ದು, ಯೋಗಾಸನದಲ್ಲಿರುವ ತ್ರಿಭುವನಕರ್ತಾರ ಮೊದಲಾದ ಬಿಡಿ ಶಿಲ್ಪಗಳ ಅಲಂಕಾರವು ಪ್ರವಾಸಿಗರ ಗಮನವನ್ನು ಸೆಳೆಯುತ್ತವೆ. ನವರಂಗದ ಹೊರಗೋಡೆಗಳಲ್ಲಿ ಸೂರ್ಯ, ಮಹಿಷಮರ್ಧಿನಿ, ಯಕ್ಷ ಮತ್ತು ನಟರಾಜನ ಶಿಲಾಕೃತಿಗಳನ್ನೂ ಕಾಣಬಹುದಾಗಿದೆ.

ಇದರ ಎದುರು ಭಾಗದಲ್ಲಿ ಅಂಜನೇಶ್ವರ ದೇವಾಲಯವಿದ್ದು, ಶತೃಘ್ನೇಶ್ವರ ದೇವಾಲಯದ ರೀತಿಯ ವಾಸ್ತು ರಚನೆಯನ್ನೇ ಹೊಂದಿದೆ. ಇದರ ತಳಪಾದಿಯ ಮೇಲೆ ದವಡೆಗಳಿರುವ ಸಿಂಹಗಳು, ಯಾಳಿಗಳು ಮತ್ತು ಜಿಗಿಯುತ್ತಿರುವ ಕುದುರೆಗಳನ್ನು ಅಲಂಕಾರಿಕವಾಗಿ ಕೆತ್ತಲಾಗಿದೆ. ಇದೊಂದು ಚಿಕ್ಕ ಗುಡಿಯಾಗಿದ್ದು, ಗರ್ಭಗೃಹ ಮತ್ತು ನವರಂಗಗಳು ಮಾತ್ರ ಇವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ.

ಇದರ ಬಳಿಯೇ ಸುಗ್ರೀವೇಶ್ವರ ಮತ್ತು ಅಂಗದೇಶ್ವರ ದೇವರುಗಳ ಚಿಕ್ಕ ಚಿಕ್ಕ ಗುಡಿಗಳಿವೆ. ಈ ದೇವಾಲಯಗಳ ಪ್ರವೇಶದ್ವಾರ ಬಂಧಗಳು ಅಲಂಕೃತ ಕಪ್ಪುಶಿಲೆಯಲ್ಲಿ ನಿರ್ಮಿತವಾಗಿವೆ. ಸುಗ್ರೀವೇಶ್ವರ ದೇವಾಲಯದ ಎದುರಿಗೆ ನೊಳಂಬರ ಕಾಲದ ಸು. ೧೬ ಅಡಿ ಎತ್ತರ ಹಾಗೂ ೨ ಅಡಿ ಸುತ್ತಳತೆಯ ಮಾನಸ್ತಂಭವು ಕಂಡುಬರುತ್ತದೆ. ಇದರ ಮಧ್ಯಭಾಗವು ಷೋಡಶಾಕೋನಾಕಾರವಾಗಿದ್ದು, (೧೬ ಕೋನಗಳಲ್ಲಿ) ಮೇಲ್ಭಾಗದಲ್ಲಿ ಹೂಬಳ್ಳಿಗಳ ಆಕರ್ಷಕ ಅಲಂಕಾರಗಳಿವೆ. ಇದರ ಮೇಲ್ಭಾಗದಲ್ಲಿ ಕೆಳಮುಖ ಮಾಡಿರುವ ಚಕ್ರಾಕಾರದ ಉಬ್ಬು ಶಿಲ್ಪವು ಅತ್ಯಂತ ಆಕರ್ಷಕವಾಗಿದೆ.

ಇದೇ ಆವರಣದಲ್ಲಿ ಭರತೇಶ್ವರ ದೇವರ ಚಿಕ್ಕ ಗುಡಿಯಿದ್ದು, ಶತೃಘ್ನೇಶ್ವರ ದೇವಾಲಯಕ್ಕಿಂತಲೂ ಸಾಧಾರಣವಾದ ವಾಸ್ತುರಚನೆಯನ್ನು ಹೊಂದಿದೆ. ಗರ್ಭಗೃಹ ಮತ್ತು ಚಿಕ್ಕ ನವರಂಗಗಳು ಮಾತ್ರ ಇರುವ ಈ ದೇವಾಲಯದಲ್ಲಿ ಸ್ತಂಭಗಳು ಅಷ್ಟಕೋನಾಕಾರವಾಗಿದ್ದು, ಮಾನಸ್ತಂಭದ ಶೈಲಿಯಲ್ಲಿಯೇ ಇವೆ. ಗರ್ಭಗೃಹದಲ್ಲಿರುವ ಭರತೇಶ್ವರ ಲಿಂಗದ ಎದುರಿಗೆ ನಾಲ್ಕು ಸ್ತಂಭಗಳ ಮಂಟಪದಲ್ಲಿ ಕಪ್ಪುಶಿಲೆಯ ನಂದಿಯ ಏಕ ಶಿಲಾಮೂರ್ತಿ ಇದೆ. ಭರತೇಶ್ವರ ಗುಡಿಯ ಎಡಭಾಗದಲ್ಲಿರುವ ಸ್ತಂಭದ ಮೇಲಿನ ಗಂಗರ ಕಾಲದ ಶಾಸನವು ಕ್ರಿ.ಶ.೮೮೩ರಲ್ಲಿ ವಿಷ್ಣುಗೋಪನ ಮಗ ಪೃಥ್ವಿ ಗಂಗರಸನು ಆವನಿಯ ಬಾಣೇಶ್ವರ ದೇವಾಲಯಕ್ಕೆ ಭೇಟಿ ಕೊಟ್ಟು ಆ ದೇವಾಲಯದ ಅರ್ಚಕ ಪಂಡಿತ ಭಟಾರರಿಗೆ ದೈನಂದಿನ ಪೂಜಾ ಕೈಂಕರ್ಯ ಹಾಗೂ ಭಕ್ತ ವೃಂದದ ಪ್ರಸಾದ ವಿನಿಯೋಗಕ್ಕಾಗಿ ನೀಡಿದ ಹಲವು ದಾನಗಳನ್ನು ದಾಖಲಿಸುತ್ತವೆ. ಬಾಣೇಶ್ವರ ದೇವಾಲಯವನ್ನು ಬಾಣವಂಶದವರು ನಿರ್ಮಿಸಿರಬಹುದೆಂದು ಈ ಶಾಸನವು ಸೂಚಿಸುತ್ತದೆ.

ಈ ದೇವಾಲಯ ಸಂಕೀರ್ಣವು ವಿಶಾಲವಾದ ಒಳಪ್ರಾಕಾರವನ್ನು ಹೊಂದಿದ್ದು, ವಾಯುವ್ಯ ಮೂಲೆಯಲ್ಲಿ ಕಾಮಾಕ್ಷಿದೇವಿಯ ಪ್ರತ್ಯೇಕ ದೇವಾಲಯವಿದೆ. ಇದು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ, ಅರ್ಧಮಂಟಪ ಮತ್ತು ತೆರೆದ ಅಂಕಣವಿದ್ದು, ಅದರ ಮುಂಭಾಗದಲ್ಲಿ ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕೇವಲ ಪಾಣಿಪೀಠವಿದ್ದು ಯಾವುದೇ ಶಿಲಾಮೂರ್ತಿಯೂ ಇರುವುದಿಲ್ಲ. ನವರಂಗದಲ್ಲಿರುವ ನಾಲ್ಕು ಕೇಂದ್ರ ಸ್ತಂಭಗಳು ಷೋಡಶಕೋನಾಕಾರವಾಗಿಯೂ ಮತ್ತು

ವೃತ್ತಾಕಾರವಾಗಿಯೂ ಇವೆ. ಮುಂಭಾಗದ ಮುಖಮಂಟಪದಲ್ಲಿರುವ ಎರಡು ಕಂಬಗಳಲ್ಲಿ ಕಳಶದ ಸಂಕೇತಗಳನ್ನು ಕೆತ್ತಲಾಗಿವೆ. ಇವುಗಳನ್ನು ಬೇರೆ ಕಡೆಯಿಂದ ತಂದು ಇಲ್ಲಿ ಬಳಸಲಾಗಿದೆ ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ದೇವಾಲಯದ ಮುಂಭಾಗದ ಕಲ್ಯಾಣ ಹಾಗೂ ವಸಂತೋತ್ಸವ ಮಂಟಪಗಳನ್ನು ಹೊಯ್ಸಳ ಮೂರನೇ ಬಲ್ಲಾಳನ ಅಧೀನದಲ್ಲಿ ಇಳವಂಜಿ ವಾಸುದೇವರಾಯನ ಅಥವಾ ನಂತರ ವಿಜಯನಗರದ ಕಾಲದಲ್ಲಿ ನಿರ್ಮಿತವಾಗಿರುವ ಲಕ್ಷಣಗಳನ್ನು ಹೊಂದಿವೆ. ಇಲ್ಲಿರುವ ಸುಬ್ರಹ್ಮಣ್ಯ ದೇವಾಲಯವನ್ನು ವಿಜಯನಗರದ ಕಾಲದ ರಚನೆ ಎಂದು ಗುರುತಿಸುತ್ತಾರೆ. ಗರ್ಭಗೃಹದಲ್ಲಿರುವ ಸುಬ್ರಹ್ಮಣ್ಯನ ಮೂಲಮೂರ್ತಿಯು ಅಭಯ, ವಜ್ರ, ತ್ರಿಶೂಲ ಮತ್ತು ಕಟಿಹಸ್ತಗಳನ್ನು ಹೊಂದಿದ್ದು, ನವಿಲಿನ ಮೇಲೆ ಆಸೀನನಾಗಿದ್ದಾನೆ. ಈ ದೇವಾಲಯ ಸಮುಚ್ಚಯದ ದಕ್ಷಿಣಕ್ಕೆ ಶೇಷತೀರ್ಥವಿದೆ. ಇದನ್ನು ಹಾಗೂ ಮಹಾದ್ವಾರದ ರಾಯಗೋಪುರಗಳನ್ನು ಇಳವಂಜಿ ವಾಸುದೇವರಾಯನು ನಿರ್ಮಿಸಿರುವನೆಂದು ಪ್ರತೀತಿಯಿದೆ. ಈ ಪುಷ್ಕರಣಿಗಳ ಸಮೀಪವೇ ಇರುವ ದುರ್ಗ ದೇವಾಲಯವು ಈಗ ಶಿಥಿಲವಾಗಿದ್ದು ಕೇವಲ ಅವಶೇಷಗಳಿವೆ. ಇದರಲ್ಲಿರುವ ಎರಡು ವೃತ್ತಾಕಾರವಾದ ಸ್ತಂಭಗಳು ಗಂಗ–ಚೋಳರ ಶೈಲಿಯಲ್ಲಿವೆ. ದುರ್ಗ ಪ್ರತಿಮೆಯು ಪ್ರಾಚೀನ ಶೈಲಿಯಲ್ಲಿದ್ದು, ಕೆಳವಸ್ತ್ರಗಳನ್ನು ಮಾತ್ರ ಹೊಂದಿದ್ದು ಮೇಲ್ಭಾಗ ನಗ್ನವಾಗಿರುವುದು ವಿಶೇಷವಾಗಿದೆ. ಈಗ ಈ ಶಿಲಾಮೂರ್ತಿಯನ್ನು ಬೆಂಗಳೂರಿನಲ್ಲಿರುವ ರಾಜ್ಯ ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇಡಲಾಗಿದೆ.

ಊರಿನಲ್ಲಿರುವ ಆವನಿ ಶಂಕರಮಠವು ಅತ್ಯಂತ ಪುರಾತನವಾದುದು ಎಂದು ಪ್ರತೀತಿಯಿದೆ. ಈ ಮಠವು ಮೂಲತಃ ಶೃಂಗೇರಿ ಶಂಕರಮಠದ ಸಂಪ್ರದಾಯಕ್ಕೆ ಸೇರಿದೆ. ಈ ಮಠವು ಆವನಿ ಬೆಟ್ಟದ ಪಾದದಲ್ಲಿ ವಿಶಾಲವಾದ ನಿವೇಶನವನ್ನು ಹೊಂದಿದೆ. ಎತ್ತರವಾದ ದ್ವಾರದ ಮೂಲಕ ಪ್ರವೇಶಿಸಿದರೆ ಮಠದ ಆವರಣದಲ್ಲಿ ಕೆಲವು ಮಠದ ವಸತಿಗೃಹಗಳು ಕಂಡುಬರುತ್ತವೆ. ಇದರ ಹಿಂಭಾಗದಲ್ಲಿರುವ ಚಿಕ್ಕ ಗುಡ್ಡವನ್ನು ಹತ್ತಿ ಹೋದರೆ ಮೇಲ್ಭಾಗದಲ್ಲಿ ಅಷ್ಟಕೋನಾಕಾರವಾದ ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ನಿರ್ಮಿಸಿರುವ ವಿಶಾಲ ಮುಖಮಂಟಪವು ಸಿಗುತ್ತದೆ. ಇದರ ಎದುರಿಗೆ ಪೂರ್ವಾಭಿಮುಖವಾಗಿರುವ ಆದಿಶಂಕರಾಚಾರ್ಯರ ಹಾಗೂ ಪಕ್ಕದಲ್ಲಿ ಶಾರದಾದೇವಿಯ ಆಕರ್ಷಕ ಗುಡಿಗಳಿವೆ. ಈ ಸ್ಥಳದಿಂದ ವೀಕ್ಷಿಸಿದರೆ ಆವನಿ ಗ್ರಾಮದ ಪಕ್ಷಿನೋಟವನ್ನು ಹಾಗೂ ಹಿಂಭಾಗದಲ್ಲಿರುವ ಎತ್ತರವಾದ ಬೆಟ್ಟಗಳ ಮನೋಲ್ಲಾಸ ನೋಟಗಳನ್ನು ಕಾಣಬಹುದಾಗಿದೆ. ಊರಿನಲ್ಲಿ ಇತ್ತೀಚಿಗೆ ನಿರ್ಮಿಸಲಾಗಿರುವ ಜಾಮಿಯಾ ಮಸೀದಿ ಇದೆ.

**ಇರುಗಪ್ಪನ ಹಳ್ಳಿ:** (ಶಿಡ್ಲಘಟ್ಟ ತಾಲೂಕು: ಜನಸಂಖ್ಯೆ ೬೫೩) 'ಸಹದೇವಪುರ' ಅಥವಾ ಸಾದಲಿ ಎಂಬುದು ಹೋಬಳಿ ಕೇಂದ್ರ ಸಾದಲಿಯಿಂದ ಮೂರು ಕಿ.ಮೀ. ದೂರದಲ್ಲಿರುವ ಇರುಗಪ್ಪನಹಳ್ಳಿಯು ಸುಂದರವಾದ ಬೆಟ್ಟಗುಡ್ಡಗಳಿಂದ ಕೂಡಿರುವ ರಮ್ಯತಾಣವಾಗಿದೆ. ಈ ಪ್ರದೇಶದ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸಿದರೆ, ತಪೋನಿರತರ ಪಾವನಕ್ಷೇತ್ರವೆಂದು ಅರಿವಾಗುತ್ತದೆ. ಇದಕ್ಕೆ ಉತ್ತಮ ನಿದರ್ಶನವಾಗಿ ಸದೇಶ್ವರ ಶಿವಾಚಾರ್ಯರೆಂಬ ಮಹನೀಯರ ಸಲುವಾಗಿ ಮುಪ್ಪ ಭೂಪತಿಯೆಂಬ ವಿಜಯನಗರದ ಪಾಳೆಯಗಾರನು ೧೪ನೇ ಶತಮಾನದಲ್ಲಿ ಕಟ್ಟಿಸಿರುವ ಬಾವಿ, ಶಿವಾಲಯ ಮತ್ತು ಮಹಾನಂದಿ ಮಂಟಪ ಸಂಕೀರ್ಣವಾಗಿದೆ. ಇವುಗಳ ಪೈಕಿ ಶಿವಾಲಯ ಮಾತ್ರ ಉಳಿದಿಲ್ಲ. ನಂದಿಮಂಟಪ ಈ ಸ್ಥಳದ ಕೇಂದ್ರ ಬಿಂದುವೆನ್ನಬಹುದಾಗಿದೆ. ಎತ್ತರವಾದ ಸ್ಥಳದಲ್ಲಿ ಬೆಟ್ಟಗುಡ್ಡಗಳ ನೈಸರ್ಗಿಕ ಪರಿಸರದ ನಡುವೆ ಈ ನಂದಿಮಂಟಪವನ್ನು ನಿರ್ಮಿಸಲಾಗಿದೆ. ಉಬ್ಬು ಶಿಲ್ಪ ಕೆತ್ತನೆಗಳು ಶೈವ ಪುರಾಣದ ಕಥೆಗಳನ್ನು ಪ್ರತಿನಿಧಿಸುವ ಸುಂದರ ಅಲಂಕಾರವನ್ನು ಈ ಮಂಟಪದ ಸ್ತಂಭಗಳ ಮೇಲೆ ಕಾಣಬಹುದಾಗಿದೆ. ಈ ಮಂಟಪದ ಮಧ್ಯದಲ್ಲಿ ಬಸವನ ಆಕರ್ಷಕವಾದ ಏಕಶಿಲಾಕೃತಿಯಿದೆ. ಇದರ ಗಂಭೀರ ನಿಲುವು ಎಂತಹವರನ್ನೂ ಮೋಹಕಗೊಳಿಸುತ್ತದೆ. ಈ ನಂದಿಮಂಟಪದ ಎದುರಿಗೆ ಇನ್ನೊಂದು ಮಂಟಪದ ರಚನೆಯಿದ್ದು ಇದರೊಳಗಿರವುದು ಶಿವಾಲಯದ ಅವಶೇಷಗಳೆಂದು ಸ್ಥಳೀಯವಾಗಿ ಗುರುತಿಸಲ್ಪಡುತ್ತದೆ. ಇದೇ ನಂದಿಮಂಟಪದ ಬಳಿ ದೊರೆತಿರುವ ಕ್ರಿ. ಶ. ಸು. ೧೩೪೯ನೇ ಕಾಲದ ಲಕ್ಷಣವುಳ್ಳ ನಾಗರಿ ಶಾಸನವು ಸೋಮನರೇಶ್ವರನ ಮೊಮ್ಮಗ, ಮಾಧವನ ಜೇಷ್ಠ ಅಣ್ಣ ಮತ್ತು ರಾಮಾಂಬನ ಮಗನಾದ ಮಲ್ಲಭೂಪನು ಈ ಶಿವಾಲಯವನ್ನು ನಾಶಮಾಡುವ ಪಾಪವನ್ನು ಮಾಡಿದ ಬಳಿಕ ಈತನ ಉತ್ತರಾಧಿಕಾರಿಯಾದ ಮುಪ್ಪನವರಪಾಲನೆಂಬ ಅಧಿಕಾರಿಯು ಮಲ್ಲಿಕಾರ್ಜುನ ಶಿವಾಲಯವನ್ನು ಪುನರ್ ನಿರ್ಮಿಸಿದನೆಂದು ದಾಖಲಿಸುತ್ತದೆ. ಇದೇ ಊರಿನ ಬಸವಣ್ಣನ ಬಾವಿಯ ಬಳಿಯಿರುವ ಇನ್ನೊಂದು ಶಾಸನವು ಕ್ರಿ.ಶ. ೧೩೬೦ರ ಲಕ್ಷಣವನ್ನು ಹೊಂದಿದ್ದು, ರಾಮಾಂಬನ ಮಗನು ತನ್ನ

ಸ್ನೇಹಿತರಾದ ಸದೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಶಂಭುವಿನ ಅಭಿಷೇಕ ಕೈಂಕರ್ಯಕ್ಕೆ ಬಿಟ್ಟ ದತ್ತಿಯನ್ನು ದಾಖಲಿಸುತ್ತದೆ. ಈ ದೇವಾಲಯದ ನಿವೇಶನದಿಂದ ಅನತಿ ದೂರದಲ್ಲಿ ವಿಶಾಲವಾದ ಹೊಲದಲ್ಲಿ ಕಲ್ಲಿನಲ್ಲಿ ನಿರ್ಮಿಸಲಾಗಿರುವ ಬೃಹದಾಕಾರವಾದ ಕೊಳವಿದೆ. ಗಮನಾರ್ಹವಾದ ಕಲ್ಲಿನ ರಚನೆಯನ್ನು ಹೊಂದಿರುವ ಈ ಕೊಳವು ಒಂದು ಕಾಲಕ್ಕೆ ಸುಸ್ಥಿತಿಯಲ್ಲಿತ್ತೆಂದು ಹೇಳಲಾಗುತ್ತದೆ. ವಿಶಿಷ್ಟ ಕೆತ್ತನೆಯ ಸೋಪಾನದ ಸಾಲಿನಿಂದ ಕೂಡಿದ ಈ ಕೊಳವು ಗತಕಾಲದ ವೈಭವದ ಸಂಕೇತವಾಗಿದೆ. ಈ ನೆಲಬಾವಿಯ ಎರಡೂ ಕಡೆ ಕಲ್ಲಿನ ಕಂಬಗಳ ಮೇಲೆ ಕಂಬಳಿ ಕೋಲುಗಳನ್ನು ಹಿಡಿದ ಕಾವಲುಗಾರರನ್ನು ಕೆತ್ತಲಾಗಿದೆ. ಬಾವಿಯ ಒಳಭಾಗಕ್ಕೆ ಇಳಿಯುವಲ್ಲಿ ಕಲ್ಲಿನ ತೊಲೆಯ ಮೇಲೆ ಗಣಪತಿಯ ಉಬ್ಬು ಶಿಲ್ಪವನ್ನು ಬಿಡಿಸಲಾಗಿದೆ. ಅಕ್ಕಪಕ್ಕಗಳಲ್ಲಿನ ಕಲ್ಲುಗಳು ಬಿದ್ದು ಹೋಗಿವೆ. ಬಾವಿಯಲ್ಲಿ ಇಳಿಯಲು ಅನುಕೂಲವಾಗುವಂತೆ ನಿರ್ಮಿಸಲಾಗಿದ್ದ ಮೆಟ್ಟಲುಗಳು ಹಾಳಾಗಿವೆ. ಬಾವಿಯ ಒಳಸುತ್ತಿನ ಕಲ್ಲಿನ ನಿರ್ಮಾಣವು ಆಕರ್ಷಕವಾಗಿವೆ. ಕಟ್ಟಡದ ಮೇಲ್ಪಂಕ್ತಿಯ ಕಲ್ಲುಸಾಲಿನ ಮೇಲೆ ಬಗೆಬಗೆಯ ಪ್ರಾಣಿ, ಪಕ್ಷಿ, ಗಿಡ, ಮರಗಳ, ಮಂಗಗಳ, ಮಾನವರ ಉಬ್ಬು ಶಿಲ್ಪಾಲಂಕಾರಗಳು ಕಂಡುಬರುತ್ತವೆ. ಮರಗಳ ಕೊಂಬೆಗಳ ಮೇಲೆ ನರ್ತನ ಮಾಡುತ್ತಿರುವ ಮಯೂರಗಳೊಂದಿಗೆ ಹಾರುತ್ತಿರುವ ಮಂಗಗಳ ದೃಶ್ಯವು ಮನೋಜ್ಞವಾಗಿದೆ. ಇಲ್ಲಿರುವ ಕಾಳಿಂಗ ಮರ್ದನನ ಕೆತ್ತನೆಯೂ ವಿಶಿಷ್ಠವಾಗಿದೆ. ಜಲಚರಗಳಾದ ಮತ್ಸ್ಯಕೂರ್ಮಗಳನ್ನು ಕೆತ್ತಲಾಗಿದೆ. ಕಾಳಗದಲ್ಲಿ ನಿರತವಾಗಿರುವ ಮಾನವರಷ್ಟೇ ಅಲ್ಲದೆ, ವಿವಿಧ ರೀತಿಯ ತಪೋಮಾರ್ಗಗಳಲ್ಲಿ ಸಾಧನೆ ಮಾಡುತ್ತಿರುವ ಋಷಿ ಮುನಿಗಳನ್ನೂ ಸಹ ಈ ಬಾವಿಯ ಕಟ್ಟಡದ ಮೇಲ್ಪಂಕ್ತಿಗಳಲ್ಲಿ ಸುಂದರವಾಗಿ ಕೆತ್ತಲಾಗಿದೆ. ಭಗವಂತನ ಸಾಕ್ಷಾತ್ಕಾರಕ್ಕಾಗಿ ಸೇವೆ ಸಲ್ಲಿಸುತ್ತಿರುವ ಭಕ್ತ ವಿಗ್ರಹಗಳೂ ಕಂಡುಬರುತ್ತವೆ. "ಶಂಭೂ ಮಹಾಭಿಷೇಕ ವಿಧಾಯೆ ಪೂರ್ಣಮ್ ಇಮಮ್ ವಾಪಿಕಾಮ್" ಎಂಬ ಶಾಸನೋಕ್ತ ನುಡಿಗಳು ಇದನ್ನು ಕಟ್ಟಿಸಿದ ಘನೋದ್ದೇಶವನ್ನು ಸಾರುತ್ತಿವೆ.

**ಉತ್ತನೂರು:** (ಮುಳಬಾಗಿಲು ತಾಲೂಕು: ಜನಸಂಖ್ಯೆ: ೧,೫೬೭) ಮುಳಬಾಗಿಲಿನಿಂದ ೧೮ ಕಿ.ಮೀ. ದೂರದಲ್ಲಿರುವ ಉತ್ತನೂರು ಕ್ರಿಶ.೯೩೯ರ ನೊಳಂಬ ಶಾಸನದಲ್ಲಿ ಒಂದು ಜನಪ್ರಿಯ ಅಗ್ರಹಾರವಾಗಿತ್ತೆಂದು ಉಲ್ಲೇಖಗೊಂಡಿದೆ. ನಂತರದ ಕ್ರಿಶ. ೧೦೫೦ರ ಶಾಸನದಲ್ಲಿ 'ರಾಜೇಂದ್ರ ಚೋಳ ಚತುರ್ವೇದಿ ಮಂಗಳಂ' ಎಂದು ಈ ಸ್ಥಳವು ಉಲ್ಲೇಖಗೊಂಡಿರುವುದು ಇದರ ಪ್ರಾಚೀನತೆಯ ಬಗ್ಗೆ ಉತ್ತಮ ನಿದರ್ಶನವಾಗಿದೆ. ಬಾಣವಂಶದ ಕ್ರಿಶ. ೮೯೦ರ ಇನ್ನೊಂದು ಸ್ತಂಭ ಶಾಸನದಲ್ಲಿ ಬಾಣರಸನ ಕರಣಿಕನಾಗಿದ್ದ ವಾಲುಂಗವಮ್ಮನು ಇದೇ ಸ್ಥಳದಲ್ಲಿ ಆತ್ಮಬಲಿ ಮಾಡಿಕೊಂಡ ವಿಚಾರವನ್ನು ಉಲ್ಲೇಖಿಸುತ್ತದೆ. ಉತ್ತನೂರು ನೊಳಂಬರ ಕಾಲಕ್ಕೂ ಮೊದಲೇ ನಿರ್ಮಿತವಾಗಿರಬಹುದಾದ ವರದರಾಜಸ್ವಾಮಿ ಮತ್ತು ಸೋಮೇಶ್ವರ (ಶಾಸನೋಕ್ತ ಪರಮೇಶ್ವರ?) ದೇವಾಲಯಗಳಿಂದಾಗಿ ಇಂದಿಗೂ ಪ್ರಸಿದ್ಧಿ ಪಡೆದಿದೆ. ವರದರಾಜಸ್ವಾಮಿ ದೇವಾಲಯವನ್ನು ಸಂಪೂರ್ಣವಾಗಿ ಸ್ಥಳೀಯರೇ ಕೆಡವಿ ಮನಸೋಚ್ಛೇ ಇಟ್ಟಿಗೆ ಮತ್ತು ಸಿಮೆಂಟಿನಿಂದ ದುರಸ್ತಿಗೊಳಿಸಿರುತ್ತಾರೆ. ಉದಾಹರಣೆಗೆ, ಮೂಲ ದೇವಾಲಯದ ನವರಂಗದಲ್ಲಿದ್ದ ವೃತ್ತಾಕಾರವಾದ ಗಂಗರ ಶೈಲಿಯ ಸ್ತಂಭಗಳು ಎತ್ತರವಿರಲಿಲ್ಲವೆಂದು ತಾವೇ ಬಗೆದು ಒಂದರ ಮೇಲೊಂದು ನಿಲ್ಲಿಸಿ ಆಧುನಿಕ ಗೋಡೆಯಲ್ಲಿ ಸೇರಿಸಿ ಕಟ್ಟಿರುವುದು ದೇವಾಲಯ ವಾಸ್ತುಶಾಸ್ತ್ರಕ್ಕೆ ವಿರುದ್ಧವಾಗಿರುತ್ತದೆ. ವರದರಾಜಸ್ವಾಮಿ ದೇವಾಲಯದ ಗರ್ಭಗೃಹ ಮತ್ತು ಅರ್ಧಮಂಟಪಗಳು ಅಧಿಷ್ಠಾನದವರೆಗೆ ಮಾತ್ರ ತಮ್ಮ ಮೂಲರೂಪವನ್ನು ದುರಸ್ತಿಯ ಚಟುವಟಿಕೆಯಿಂದ ಉಳಿಸಿಕೊಂಡಿರುವುದು ಪರಮಾಶ್ಚರ್ಯವಾಗಿದೆ. ಗರ್ಭಗುಡಿಯು ಚೌರಸವಾಗಿದ್ದು, ಸಮಭಂಗಿಯಲ್ಲಿರುವ ಮೂಲವಿಗ್ರಹವು ನೊಳಂಬರಿಗೂ ಹಿಂದಿನ ಶೈಲಿಯ ನಾರಾಯಣನಾಗಿದ್ದು, ಶಂಖ, ಪ್ರಯೋಗ ಚಕ್ರ, ಕಟಿಹಸ್ತ ಮತ್ತು ವರದ ಹಸ್ತಗಳ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಅರ್ಧಮಂಟಪದ ಗೋಡೆಗಿರುವ ಮಾಡಿನಲ್ಲಿ ಪಲ್ಲವರ ಶೈಲಿಯ ವಿಷ್ಣು ಹಾಗೂ ನೊಳಂಬರ ಕಾಲದ ಆಳ್ವಾರ್ ಮೂರ್ತಿಗಳನ್ನು ಇಡಲಾಗಿದೆ. ಅರ್ಧಮಂಟಪದ ದ್ವಾರಬಂಧವು ಗಂಗ ಅಥವಾ ನೊಳಂಬರ ಕಾಲದ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು ಅದರ ಲಲಾಟದಲ್ಲಿ ಶೇಷಶಯನ ನಾರಾಯಣನ ಬಿಂಬವನ್ನು ಹೊಂದಿದೆ. ಅರ್ಧಮಂಟಪದ ಪ್ರವೇಶದ್ವಾರದ ಎರಡೂ ಕಡೆ ಆರು ಅಡಿ ಎತ್ತರವಾದ ಜಯವಿಜಯರ ಶಿಲಾಮೂರ್ತಿಗಳಿವೆ. ಗರ್ಭಗೃಹ ಮತ್ತು ಅರ್ಧಮಂಟಪಗಳು ಪ್ರಾಚೀನ ಅಧಿಷ್ಠಾನವನ್ನು ಹೊಂದಿದ್ದು, ಅದರ ಮೇಲ್ಭಾಗದಲ್ಲಿ ಗಂಗ-ಚೋಳರ ಶೈಲಿಯ ಆಧುನಿಕ ಕಿರುಸ್ತಂಭಗಳ ಅಲಂಕಾರವಿದೆ. ಹೊರಭಾಗದಲ್ಲಿ ಇವುಗಳ ಮಧ್ಯಭಾಗದಲ್ಲಿ ಶ್ರೀನಿವಾಸ ವೇಣುಗೋಪಾಲ, ಆಂಜನೇಯ, ಲಕ್ಷ್ಮೀನರಸಿಂಹ ಮತ್ತು ಶ್ರೀರಾಮ ಇವರುಗಳ ಆಧುನಿಕ ಸಿಮೆಂಟ್ ಶಿಲ್ಪಗಳು ಕಂಡುಬರುತ್ತವೆ. ಮುಂಭಾಗದಲ್ಲಿ ಆಧುನಿಕ ಶೈಲಿಯಲ್ಲಿ ನಿರ್ಮಿತವಾಗಿರುವ ವಿಶಾಲವಾದ ಪಡಸಾಲೆ ಇದೆ. ಗರ್ಭಗೃಹದ ಬಲಭಾಗದ ಈಶಾನ್ಯ ಮೂಲೆಯ ಗಾಜಿನಿಂದ ನಿರ್ಮಿತವಾಗಿರುವ ಚಿಕ್ಕ

ಕೋಣೆಯಿದ್ದು, ಅತ್ಯಾಕರ್ಷಕವಾದ ಹೂಬಳ್ಳಿಗಳನ್ನು ಪ್ರತಿನಿಧಿಸುವ ವರ್ಣಚಿತ್ರಗಳನ್ನು ಹೊಂದಿದೆ. ಇಲ್ಲಿ ದೇವರ ಶಯನೋತ್ಸವವನ್ನು ಆಚರಿಸಲಾಗುತ್ತದೆ. ಈ ದೇವಾಲಯದಲ್ಲಿ ವೈಖಾನಸ ಆಗಮದ ರೀತಿಯಲ್ಲಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗುತ್ತದೆ. ಇದರ ಗರ್ಭಗೃಹದ ಮೇಲ್ಭಾಗದಲ್ಲಿ ಆಧುನಿಕ ಶೈಲಿಯ ಶಿಖರವನ್ನು ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಮಾಘ ಶುದ್ಧ ಪೂರ್ಣಿಮೆಯಂದು ಏಳು ದಿನಗಳ ಪರ್ಯಂತ ವರದರಾಜಸ್ವಾಮಿಯ ಬ್ರಹ್ಮರಥೋತ್ಸವ ನಡೆದಾಗ ಸಹಸ್ರಾರು ಜನ ಸೇರುತ್ತಾರೆ. ಊರಿನಲ್ಲಿ ಸೋಮೇಶ್ವರ, ಚೌಡೇಶ್ವರಿ, ಮಡಿವಾಳೇಶ್ವರ ಮೊದಲಾದ ದೇವಾಲಯಗಳಿವೆ. ಕೆರೆಯ ಬಳಿಯಿರುವ ಮಡಿವಾಳೇಶ್ವರ ಆಲಯ ಶಿಥಿಲವಾಗಿದ್ದು, ಅದರ ಪರಿಸರದಲ್ಲಿ ಶಾಸನ ಸಹಿತ ವೀರಗಲ್ಲುಗಳು, ಭಿನ್ನವಾಗಿರುವ ಗಣೇಶ ಮೊದಲಾದ ಅವಶೇಷಗಳು ಇವೆ. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಜಮ್ಮಾ ಮಸೀದಿ ಇದೆ.

**ಎಲ್ಲೋಡು:** (ಬಾಗೇಪಲ್ಲಿ ತಾಲೂಕು) ಬಾಗೇಪಲ್ಲಿಯಿಂದ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಅತ್ಯಂತ ರಮಣೀಯ ನಿಸರ್ಗ ತಾಣವಾದ ಎಲ್ಲೋಡು ಬೆಟ್ಟವನ್ನು ಬಾಗೇಪಲ್ಲಿ ಅನಂತಪುರ ರಾಷ್ಟ್ರೀಯ ಹೆದ್ದಾರಿಯ ಮೂಲಕ ತಿರುಗು ರಸ್ತೆಯಲ್ಲಿ ಸು. ಹತ್ತು ಕಿ.ಮೀ. ದೂರ ಕ್ರಮಿಸಿ ತಲುಪಬಹುದಾಗಿದೆ. 'ಎಲ್ಲೋಡು' ಅಥವಾ 'ಕೂರ್ಮಗಿರಿ'ಯು ಆಕರ್ಷಕ ಪ್ರವಾಸಿ ತಾಣವಾಗಿದೆ. ಹಸಿರಾದ ಪರಿಸರದಲ್ಲಿ ಎತ್ತರವಾದ ಮರಗಿಡಗಳಿಂದ ಆವೃತವಾಗಿರುವ ಈ ಸ್ಥಳವು ಕಣ್ಮನ ಸೆಳೆಯುವ ನೈಸರ್ಗಿಕ ದೃಶ್ಯಗಳನ್ನು ಪ್ರವಾಸಿಗರಿಗೆ ಒದಗಿಸುತ್ತದೆ. ಪಾಳೆಯಗಾರರ ಕಾಲದಲ್ಲಿ ನಿರ್ಮಿಸಿರುವ ಪ್ರವೇಶದ್ವಾರದ ಮೂಲಕ ಬೆಟ್ಟದ ಮೇಲ್ಭಾಗವನ್ನು ತಲುಪಬಹುದಾಗಿದೆ. ಇಲ್ಲಿಂದ ಸ್ವಲ್ಪ ದೂರ ಹತ್ತಿಹೋದರೇ ಆಂಜನೇಯನ ಗುಡಿ ಹಾಗೂ ಹಲವು ನಾಗರ ಕಲ್ಲುಗಳು ಕಂಡುಬರುತ್ತವೆ. ಮೆಟ್ಟಿಲುಗಳ ಪಕ್ಕದಲ್ಲಿ ಸೂಕ್ತವಾದ ಸ್ಥಳಗಳಲ್ಲಿ ಕಲ್ಲಿನ ಬೆಂಚುಗಳನ್ನು ಅಳವಡಿಸಲಾಗಿದ್ದು, ಪ್ರವಾಸಿಗರಿಗೆ ವಿಶ್ರಾಂತಿ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಬೆಟ್ಟವನ್ನು ಹತ್ತುವ ದಾರಿಯುದ್ದಕ್ಕೂ ಎತ್ತರವಾದ ವಿಶಾಲ ನೆರಳು ನೀಡಬಲ್ಲ ಮರಗಿಡಗಳು ಇದ್ದು, ತಂಪಾದ ವಾತಾವರಣವನ್ನುಂಟು ಮಾಡಿವೆ. ಸುಮಾರು ೬೧೮ ಮೆಟ್ಟಿಲುಗಳನ್ನು ಹತ್ತಿದ ಮೇಲೆ ಬೆಟ್ಟದ ಸಮತಟ್ಟಾದ ಪ್ರದೇಶದಲ್ಲಿ ಸುಂದರವಾದ ಲಕ್ಷ್ಮೀಆದಿನಾರಾಯಣಸ್ವಾಮಿ ಗವಿ ದೇವಾಲಯವು ಕಂಡುಬರುತ್ತದೆ. ಬಂಡೆಗಳ ನಡುವೆ ನೈಸರ್ಗಿಕ ಗವಿಯು ಇದ್ದು, ಒಳಗೆ ಅಸ್ಪಷ್ಟವಾದ ವಿಗ್ರಹವಿದ್ದು, ಇದನ್ನು ಆದಿನಾರಾಯಣಸ್ವಾಮಿ ಎಂದು ಪೂಜಿಸಲಾಗುತ್ತಿದೆ. ಎರಡು ಅತ್ಯಂತ ಎತ್ತರವಾದ ಮೆಟ್ಟಿಲುಗಳನ್ನು ಅಲ್ಲೆ ತೂಗಿ ಹಾಕಿರುವ ಹಗ್ಗದ ಸಹಾಯದಿಂದ ಹತ್ತಿಹೋದರೆ ಗವಿಯ ದ್ವಾರವನ್ನು ತಲುಪಬಹುದಾಗಿದೆ. ಈ ವಿಗ್ರಹವು ಪ್ರಾಚೀನ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು, ಯಾವುದೇ ಆಭರಣಗಳ ಅಲಂಕಾರವಿಲ್ಲದೇ ಸಾಧಾರಣವಾಗಿದೆ. ಈ ಬೆಟ್ಟವು ತನ್ನ ಚೂಪಾದ ಕೋಡುಗಳಿಂದ ಪ್ರವಾಸಿಗರ ಗಮನವನ್ನು ಆಕರ್ಷಿಸುತ್ತದೆ.

**ಕಂದಾವರ:** (ಚಿಕ್ಕಬಳ್ಳಾಪುರ ತಾಲೂಕು: ಜನಸಂಖ್ಯೆ:೨೨): ಕಂದಾವರ ಒಂದು ಅತ್ಯಂತ ರಮಣಿಯ ತಾಣವಾಗಿದೆ. ಈ ಊರಿನ ದಕ್ಷಿಣಕ್ಕಿರುವ ವಿಶಾಲವಾದ ಕೆರೆಗೆ ಎರಡು ತೂಬುಗಳನ್ನು ಇರಿಸಲಾಗಿದ್ದು, ಇದರ ಮೇಲೆ ಆನೆ ಮತ್ತು ಸಿಂಹಗಳ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಗ್ರಾಮದಲ್ಲಿ ಜ್ವರಹರೇಶ್ವರ, ವರದರಾಜ, ಗ್ರಾಮದೇವತೆ ಮೊದಲಾದ ದೇವಾಲಯಗಳಿವೆ. ಜ್ವರಹರೇಶ್ವರ ದೇವಾಲಯದ ವಾಯುವ್ಯಕ್ಕೆ ಎತ್ತರವಾದ (ಸು. ೪೦ ಅಡಿಗಳು) ಗರುಡ ಸ್ತಂಭವಿದ್ದು, ಅತ್ಯಂತ ಆಕರ್ಷಕ ರಚನೆಯಾಗಿದೆ. ಈ ಗರುಡಸ್ತಂಭದ ಎದುರಿಗೆ ಪ್ರಾಚೀನ ಕಾಲದ ವರದರಾಜ ದೇವಾಲಯವಿದ್ದು, ಇತ್ತೀಚಿನವರೆಗೂ ಶಿಥಿಲಸ್ಥಿತಿಯಲ್ಲಿಯೇ ಇದ್ದಿತು. ಆದರೇ ಇತ್ತೀಚೆಗೆ ಈ ದೇವಾಲಯದ ಅವಶೇಷಗಳನ್ನು ಬಳಸಿ ಚಿತ್ರಾವತಿ ಪುಷ್ಕರಣಿ ಎಂಬ ಕೆರೆಯನ್ನು ನಿರ್ಮಿಸಿರುವರೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ಊರಿನಲ್ಲಿರುವ ಗರುಡಸ್ತಂಭದ ಪರಿಸರವನ್ನು ಉತ್ಖನನದ ಮೂಲಕ ಪರೀಕ್ಷಿಸಿದರೆ ಚೋಳರಿಗೂ ಹಿಂದಿನ ಕಾಲದ ಅವಶೇಷಗಳು ದೊರೆಯುವ ಸಾಧ್ಯತೆಯಿದೆ.

**ಕಮ್ಮಸಂದ್ರ (ಕೋಟಿಲಿಂಗೇಶ್ವರ):** (ಬಂಗಾರಪೇಟೆ ತಾಲೂಕು: ಜನಸಂಖ್ಯೆ:೧,೧೭೮) ಬೇತಮಂಗಲ ಹೋಬಳಿಯಲ್ಲಿರುವ ಕಮ್ಮಸಂದ್ರ ಗ್ರಾಮವು ಬಂಗಾರಪೇಟೆಯಿಂದ ೧೪ಕಿ.ಮೀ. ದೂರದಲ್ಲಿದ್ದು ಇಂದು ಕೋಟಿಲಿಂಗೇಶ್ವರ ಕ್ಷೇತ್ರವೆಂದು ಜನಪ್ರಿಯವಾಗಿದೆ. ಈ ಸ್ಥಳವು ಕೆ.ಜಿ.ಎಫ್‌ನಿಂದ ಬೇತಮಂಗಲಕ್ಕೆ ಹೋಗುವ ರಸ್ತೆಯಲ್ಲಿದೆ. ಕಮ್ಮಸಂದ್ರದ ಮೂಲದವರಾದ ಸಾಂಬಶಿವಮೂರ್ತಿ ಸ್ವಾಮಿಗಳ ಮಾರ್ಗದರ್ಶನದಲ್ಲಿ ನಿರ್ಮಿಸಲಾಗುತ್ತಿರುವ ಕೋಟಿಲಿಂಗೇಶ್ವರ ದೇವಾಲಯ ಸಮುಚ್ಛಯವು ಇತ್ತೀಚೆಗೆ ಕರ್ನಾಟಕದಲ್ಲಿ ಮಾತ್ರವಲ್ಲದೇ ತಮಿಳುನಾಡು ಮತ್ತು ಆಂಧ್ರಪ್ರದೇಶದಿಂದಲೂ ಭಕ್ತಾದಿಗಳನ್ನು ಆಕರ್ಷಿಸುತ್ತಿದೆ. ಈ ಸ್ಥಳದಲ್ಲಿ ಇವರೇ ಸ್ಥಾಪಿಸಿರುವ ಭೂ ಕೈಲಾಸ ವಾಲ್ಮೀಕಿ ಆಶ್ರಮವು ದೇವಾಲಯದ ಆಡಳಿತವನ್ನು ನಿರ್ವಹಿಸುತ್ತಿದೆ. ಇಲ್ಲಿರುವ ದೇವಾಲಯಗಳೆಂದರೇ

ಮಂಜುನಾಥ, ಬ್ರಹ್ಮ, ವಿಷ್ಣು, ಮಹೇಶ್ವರ, ಕೋಟಿಲಿಂಗ ಮತ್ತು ನವಗ್ರಹಗಳು. ವಿಶಾಲವಾದ ಪ್ರಾಕಾರವನ್ನು ಹೊಂದಿರುವ ಕೋಟಿಲಿಂಗೇಶ್ವರ ದೇವಾಲಯದ ಪ್ರಾಂಗಣದಲ್ಲಿ ಭಕ್ತಾದಿಗಳು ಪ್ರತಿಷ್ಠಾಪಿಸಿರುವ ಸಾವಿರಾರು ಶಿವಲಿಂಗಗಳು ಕಂಡುಬರುತ್ತವೆ. ಮಂಜುನಾಥ ದೇವಾಲಯವು ಆಧುನಿಕ ಕಟ್ಟಡವಾಗಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಪ್ರಾಚೀನ ಶೈಲಿಯ ಅನುಕರಣೆ ಮಾಡಿರುವ ಬಾಣಲಿಂಗವಿದೆ. ಮಂಜುನಾಥಸ್ವಾಮಿ ದೇವಾಲಯದ ಅರ್ಧಮಂಟಪದಲ್ಲಿ ಹಲವು ಉತ್ಸವಮೂರ್ತಿಗಳನ್ನು ಇಡಲಾಗಿದೆ. ನವರಂಗದ ಸ್ತಂಭಗಳು ಚೌಕಾಕಾರವಾಗಿದ್ದು ಮೇಲ್ಭಾಗದಲ್ಲಿ ಶೈವ ಸಂಪ್ರದಾಯಕ್ಕೆ ಸೇರಿದ ಉಬ್ಬು ಶಿಲ್ಪಗಳ ಅಲಂಕಾರವನ್ನು ಹೊಂದಿವೆ. ಈ ದೇವಾಲಯದ ಮುಖಮಂಟಪವು ತೆರೆದ ಆಧುನಿಕ ಸ್ತಂಭಗಳ ರಚನೆಯಾಗಿದ್ದು ಮಧ್ಯದಲ್ಲಿ ಏಕಶಿಲಾ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಸಿಮೆಂಟಿನಿಂದ ಕಟ್ಟಲಾಗಿರುವ ಚತುಷ್ಕೋನಾಕಾರದ ದ್ರಾವಿಡ ಶಿಖರವಿದ್ದು ತೈಲಬಣ್ಣಗಳಿಂದ ಶೃಂಗಾರಗೊಳಿಸಲಾಗಿದೆ. ಮಂಜುನಾಥ ದೇವಾಲಯದಲ್ಲಿ ಮಂಜುನಾಥ ಸ್ವಾಮಿಯ ಜೊತೆಗೆ ವಿಘ್ನೇಶ್ವರ, ಪಾರ್ವತಿದೇವಿ ಮತ್ತು ಬಸವೇಶ್ವರರ ಪ್ರತ್ಯೇಕ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಮುಂಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರತ್ಯೇಕ ದೇವಾಲಯವಿವೆ. ಇದರಲ್ಲಿ ಸಾಲಾಗಿ ಮೂರು ಗರ್ಭಗುಡಿಗಳಿದ್ದು ಮುಂಭಾಗದಲ್ಲಿ ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ಆಯತಾಕಾರವಾದ ಮೂರು ಗರ್ಭಗೃಹಗಳಲ್ಲಿ ಮಧ್ಯದಲ್ಲಿ ಮಹೇಶ್ವರಲಿಂಗ, ಎಡಗಡೆ ವಿಷ್ಣು ಮತ್ತು ಬಲಭಾಗದಲ್ಲಿ ಚತುರ್ಮುಖ ಬ್ರಹ್ಮ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಮೂರು ಗರ್ಭಗೃಹಗಳ ಮೇಲೆ ಚೌರಸವಾದ ಪ್ರತ್ಯೇಕ ದ್ರಾವಿಡ ಶೈಲಿಯ ಶಿಖರಗಳಿವೆ. ಈ ದೇವಾಲಯದ ನವರಂಗವು ಲಂಬಾಕಾರವಾಗಿದ್ದು ಚೌಕಾಕಾರವಾದ ದ್ರಾವಿಡ ಶೈಲಿಯ ಅನುಕರಣೆ ಮಾಡಿರುವ ಸ್ತಂಭಗಳಿವೆ. ಇದರ ಮುಂಭಾಗದಲ್ಲಿ ವಿಶಾಲವಾದ ತೆರೆದ ಮುಖಮಂಟಪವಿದೆ. ಈ ದೇವಾಲಯದ ಎದುರಿಗೆ ಪ್ರತ್ಯೇಕ ಕೊಠಡಿಗಳಲ್ಲಿ ಸುಬ್ರಹ್ಮಣ್ಯ ಹಾಗೂ ನವಗ್ರಹಗಳಿದ್ದು ಎಡಭಾಗದಲ್ಲಿ ಎತ್ತರವಾದ ಬಿಲ್ವತ್ರೆ ಮರವಿದ್ದು ಅದರ ಮೇಲ್ಭಾಗದಲ್ಲಿ ದೊಡ್ಡದಾದ ಮರದ ತೊಟ್ಟಿಲಿದ್ದು, ಈ ಮರದ ಕೊಂಬೆಗಳಿಗೆ ಅರಿಶಿನದ ದಾರಗಳಿಂದ ಚಿಕ್ಕ ತೊಟ್ಟಿಲುಗಳನ್ನು ಮಕ್ಕಳಾಗಬಯಸುವವರು ಕಟ್ಟಿದರೇ ಫಲಪ್ರದವಾಗುವುದೆಂಬ ನಂಬಿಕೆಯು ಇಲ್ಲಿಗೆ ಬರುವ ಭಕ್ತಾದಿಗಳಲ್ಲಿ ಬಲವಾಗಿದೆ. ಹೀಗಾಗಿ ಈ ಮರವನ್ನು ಸದಾ ಅರಿಶಿನದ ದಾರಗಳಿಂದ ಕಟ್ಟಿದ ತೊಟ್ಟಿಲುಗಳಿಂದ ಅಲಂಕರಿಸಿರುವುದು ಕಂಡುಬರುತ್ತದೆ. ದೇವಾಲಯದ ಹೊರಭಾಗದಲ್ಲಿ ಹೊರಗೋಡೆಗಳ ಸುತ್ತಲೂ ಹಾಗೂ ವಿಶೇಷ ಕಟ್ಟೆಗಳನ್ನು ನಿರ್ಮಿಸಿ ಚಿಕ್ಕಚಿಕ್ಕ ಶಿವಲಿಂಗಗಳನ್ನು ಧಾರ್ಮಿಕ ಶ್ರದ್ಧೆ ಭಕ್ತಿಗಳಿಂದ ಇಡಲಾಗಿದ್ದು ಬಂದ ಭಕ್ತಾದಿಗಳು ಅವರ ವೈಯಕ್ತಿಕ ಹೆಸರಿನಲ್ಲಿ ಅವರು ಬಯಸಿದಲ್ಲಿ ಪ್ರತಿಷ್ಠಾಪಿಸಲಾಗುವ ಏರ್ಪಾಟು ಮಾಡಲಾಗಿದೆ. ಇದೇರೀತಿ ದೇವಾಲಯದ ಪ್ರಾಂಗಣದಲ್ಲಿ ನಂದೀಶ್ವರ ಮತ್ತು ನಾಗರ ಪ್ರತಿಷ್ಠಾಪನೆಗಳಾಗಿದ್ದು ಬಂದ ಭಕ್ತಾದಿಗಳು ಬಯಸಿದ್ದಲ್ಲಿ ನಾಗರಪ್ರತಿಷ್ಠೆಗೂ ಅವಕಾಶ ಕಲ್ಪಿಸಲಾಗಿದೆ. ಪೂರ್ವ ಮಹಾದ್ವಾರದಲ್ಲಿ ಅತ್ಯಂತ ಭವ್ಯವಾದ ೧೨ ಅಡಿ ಎತ್ತರದ ವೃಷಭೇಶ್ವರ ಸ್ವಾಮಿಯನ್ನು ಪ್ರತಿಷ್ಠಾಪಿಸಲಾಗಿದೆ. ಬಳಿಯಲ್ಲೇ ಪಂಚಮುಖಿ ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಿದೆ. ಜೈ ಸಂತೋಷಿ ಮಾತೆ ಮತ್ತು ಕನ್ನಿಕಾಪರಮೇಶ್ವರಿ ವಿಗ್ರಹಗಳನ್ನೂ ಪ್ರತಿಷ್ಠಾಪಿಸಲಾಗಿದೆ. ಹಾಗೆಯೇ ಈ ದೇವಾಲಯದ ಹೊರಪ್ರಾಕಾರದ ಬಲಭಾಗದಲ್ಲಿ ಶಬರಿಗಿರೀಶಸ್ವಾಮಿ ಅಯ್ಯಪ್ಪನನ್ನೂ ಪ್ರತಿಷ್ಠಾಪಿಸಿದೆ. ಕೋಟಿಲಿಂಗೇಶ್ವರ ಕ್ಷೇತ್ರದ ಮಹಾದ್ವಾರದ ಬಲಭಾಗದಲ್ಲಿರುವ ಇನ್ನೊಂದು ಪ್ರಾಂಗಣದಲ್ಲಿ ವಿಶ್ವದಲ್ಲೇ ಅತಿ ಎತ್ತರವಾದ ೧೦೮ ಅಡಿ ಎತ್ತರದ ಆಧುನಿಕ ಶಿವಲಿಂಗವನ್ನು ಇತ್ತೀಚೆಗೆ ಪ್ರತಿಷ್ಠಾಪಿಸಲಾಗಿದೆ. ಬಂಗಾರಪೇಟೆಯಿಂದ ಕೆ.ಜಿ.ಎಫ್ ಕಡೆಗೆ ಹೋದರೆ ಸ್ವಲ್ಪ ದೂರಕ್ಕೆ ಈ ಬೃಹದಾಕಾರವಾದ ಶಿವಲಿಂಗವು ಗೋಚರಿಸುತ್ತದೆ. ಈ ಶಿವಲಿಂಗದ ಎದುರಿಗೆ ಸುಮಾರು ೩೫ ಅಡಿ ಎತ್ತರವಾದ ಬಸವಣ್ಣ (ನಂದಿ)ನನ್ನು ಪ್ರವೇಶದ್ವಾರದ ಮೇಲ್ಭಾಗದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇಲ್ಲಿಗೆ ಭೇಟಿಕೊಡುವ ಭಕ್ತಾದಿಗಳಿಗೆ ಅನ್ನಪೂರ್ಣೇಶ್ವರಿ ಭವನದಲ್ಲಿ ನಿತ್ಯ ಅನ್ನದಾನವನ್ನು ಮಾಡಲಾಗುತ್ತದೆ. ಈ ದೇವಾಲಯದ ಸಮಿತಿಯ ವತಿಯಿಂದ ಪ್ರತೀವರ್ಷವೂ ಚೈತ್ರಮಾಸದಲ್ಲಿ ೫೦೧ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಲಾಗುತ್ತಿದೆ. ಇತ್ತೀಚೆಗೆ ಕೋಟಿಲಿಂಗೇಶ್ವರ ಕ್ಷೇತ್ರವು ಭಕ್ತಾದಿಗಳನ್ನು ದಕ್ಷಿಣ ಭಾರತದಿಂದ ಮಾತ್ರವಲ್ಲದೇ ಉತ್ತರಭಾರತದಿಂದಲೂ ಆಕರ್ಷಿಸುತ್ತಿದೆ.

**ಕುರುಡುಮಲೆ:** (ಮುಳಬಾಗಿಲು ತಾಲೂಕು: ಜನಸಂಖ್ಯೆ ೨೦೯೭): ಮುಳಬಾಗಿಲಿನಿಂದ ಒಂಭತ್ತು ಕಿ.ಮೀ. ದೂರದಲ್ಲಿರುವ ಕುರುಡುಮಲೆ ಅಥವಾ ಶಾಸನೋಕ್ತ 'ಕುರುಡಿಮಲೈ', 'ಕೂಡುಮಲೆ' ಎಂದು ಕರೆಯಲಾಗುವ ಬೆಟ್ಟದ ತಪ್ಪಲಲ್ಲಿರುವ ಚೋಳರ ಆಳ್ವಿಕೆಯ ಪ್ರಾಚೀನ ಪುಣ್ಯಕ್ಷೇತ್ರವಾಗಿದೆ. ಈ ಸ್ಥಳದಲ್ಲಿರುವ ಪ್ರಮುಖ ದೇವಾಲಯಗಳೆಂದರೇ ವಿನಾಯಕ, ಚನ್ನರಾಯಸ್ವಾಮಿ,

ಸೋಮೇಶ್ವರ, ಕಾಶೀವಿಶ್ವೇಶ್ವರ, ನಗರೇಶ್ವರ ಮೊದಲಾದವುಗಳಾಗಿವೆ. ವಿನಾಯಕ ಅಥವಾ ಗಣೇಶನ ದೇವಾಲಯವು ಈ ಸ್ಥಳಕ್ಕೆ 'ಕೂಡುಮಲೈ' ಎಂಬ ಹೆಸರನ್ನು ನೀಡಿತೆಂದು ಪ್ರತೀತಿಯಿದೆ. ಸ್ಥಳ ಮಹಾತ್ಮೆಯ ಪ್ರಕಾರ ಎಲ್ಲಾ ದೇವತೆಗಳೂ ಗಣೇಶನನ್ನು ಆರಾಧಿಸಲು ಕೂಡಿದ ಬೆಟ್ಟದ ತಪ್ಪಲಿನ ಸ್ಥಳವೇ 'ಕೂಡುಮಲೈ' ಆಗಿ ಅನಂತರ 'ಕುರುಡುಮಲೆ' ಕಾಲಾನುಕಾಲಕ್ಕೆ ರೂಢಿಗೆ ಬಂದಿತೆಂದು ತಿಳಿದುಬರುತ್ತದೆ. ಆದರೇ ಪ್ರಾಚೀನ ಶಾಸನಗಳಲ್ಲಿ ಈ ಸ್ಥಳವನ್ನು ಪುದುನಾಡಿನ ನಿಗಿರಿಲಿ ಚೋಳ ಮಂಡಲದ ವ್ಯಾಪ್ತಿಯಲ್ಲಿರುವ 'ಕುರುಡಿಮಲೈ' ಎಂದು ಪದೇಪದೇ ಉಲ್ಲೇಖಿಸಲಾಗಿದೆ. ಇಲ್ಲಿರುವ ಬೆಟ್ಟಕ್ಕೆ ಪೌರಾಣಿಕವಾಗಿ 'ಕೌಂಡಿಣ್ಯಗಿರಿ' ಅಥವಾ 'ಕೌಂಡಿಣ್ಯಕ್ಷೇತ್ರ' ಎಂದು ಕರೆಯಲಾಗಿದೆ. ಕಾಂಡಿಣ್ಯ ನದಿ ಅಥವಾ ನಂಗ್ಲಿ ಹೊಳೆಯ ಉಗಮಸ್ಥಾನವೂ ಇದೇ ಬೆಟ್ಟದಲ್ಲಿದೆ ಎಂಬ ಪ್ರಬಲವಾದ ಐತಿಹ್ಯವಿದೆ. ತ್ರಿಪುರಾಸುರನೆಂಬ ರಾಕ್ಷಸನ ಸಂಹಾರಕ್ಕಾಗಿ ಕೃತಯುಗದಲ್ಲಿ ಈಶ್ವರನು ವಿನಾಯಕನ ವಿಗ್ರಹವನ್ನು ಕುರುಡುಮಲೆಯಲ್ಲಿ ಪ್ರತಿಷ್ಠಾಪಿಸಿದನೆಂದು ಪೌರಾಣಿಕ ನಂಬಿಕೆಯಿದೆ. ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿರುವ ವಿನಾಯಕನ ದೇವಾಲಯವು ಗರ್ಭಗೃಹ, ಎರಡು ಅರ್ಧಮಂಟಪಗಳು ಮತ್ತು ವಿಶಾಲವಾದ ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಒಳಗೆ ಆಸೀನನಾಗಿರುವ ವಿನಾಯಕನ ಭವ್ಯ ಕಪ್ಪುಶಿಲಾ ಮೂರ್ತಿಯು ಸುಮಾರು ಎಂಟೂವರೆ ಅಡಿ ಎತ್ತರವಿದ್ದು, ಅಂಡಾಕಾರವಾಗಿರುವ ಪೀಠವು ಸೇರಿದಂತೆ ಒಟ್ಟು ೧೪ ಅಡಿ ಎತ್ತರವಿದೆ. ಬಹುಶಃ ಕರ್ನಾಟಕದಲ್ಲಿರುವ ಅತಿ ಎತ್ತರವಾದ ಏಕಶಿಲಾ ಗಣಪತಿಯ ಶಿಲ್ಪ ಇದೆಂದು ಅಭಿಪ್ರಾಯವಿದೆ. ವಿನಾಯಕನಿಗೆ ನಾಲ್ಕು ಕೈಗಳಿದ್ದು ಶಂಖ, ಮೋದಕ, ಅಭಯ ಮತ್ತು ಗ್ರಂಥವನ್ನು ಹೊಂದಿರುವನು. ಈ ವಿನಾಯಕನನ್ನು ಕುರಿತು ಡಾ॥ ಡಿ.ವಿ.ಜಿ. ಅವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಉಲ್ಲೇಖಿಸಿದ್ದು, ಅವರು ಈ ದೇವರಲ್ಲಿ ಅಪಾರ ಭಕ್ತಿಯನ್ನು ಹೊಂದಿದ್ದರೆಂದು ಹೇಳಲಾಗುತ್ತದೆ. ಗರ್ಭಗೃಹದ ದ್ವಾರಬಂಧವು ಪ್ರಾಚೀನ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಎರಡು ಅರ್ಧಮಂಟಪಗಳ ಮುಂಭಾಗದಲ್ಲಿರುವ ನವರಂಗವು ಮೂರು ಪ್ರವೇಶದ್ವಾರಗಳನ್ನು ಹೊಂದಿದೆ. ನವರಂಗದ ಮಧ್ಯಭಾಗದಲ್ಲಿರುವ ನಾಲ್ಕು ಕೇಂದ್ರ ಸ್ತಂಭಗಳು ಚೌಕಾಕಾರವಾಗಿದ್ದು, ಅತ್ಯಂತ ಎತ್ತರವಾಗಿವೆ. ಈ ಸ್ತಂಭಗಳ ಮೇಲೆ ಶೈವ ಪುರಾಣದ ಕಥೆಗಳನ್ನು ಪ್ರತಿನಿಧಿಸುವ ಆಕರ್ಷಕವಾದ ಸುಂದರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಉದಾಹರಣೆಗೆ ನಾಟ್ಯಗಣಪತಿ, ಗಣಪತಿ ಸಹಿತ ಪಾರ್ವತಿ, ಚಾಮುಂಡೇಶ್ವರಿ, ಗಜಾಸುರಮರ್ಧನ, ಮತ್ಸೇಂದ್ರನಾಥ, ನಟರಾಜ, ವಿಷ್ಣು, ಕಾರ್ತಿಕೇಯ, ವರಾಹಲಕ್ಷ್ಮಿ, ಅಂಜನಾದ್ರಿ, ವಾಲಿಸುಗ್ರೀವ (ಕಾದಾಡುತ್ತಿರುವ), ರಾಮಲಕ್ಷ್ಮಣ, ಆಂಜನೇಯ, ಲಕ್ಷ್ಮೀನರಸಿಂಹ, ವೇಣುಗೋಪಾಲಕೃಷ್ಣ ಶಿವ–ಪಾರ್ವತಿ ಇನ್ನೂ ಮೊದಲಾದುವುಗಳನ್ನು ಕಾಣಬಹುದಾಗಿದೆ. ವಿನಾಯಕ ದೇವಾಲಯದ ಗರ್ಭಗೃಹದ ಅದಿಷ್ಠಾನವು ಪ್ರಾಚೀನ, ಅಂದರೇ ವಿಜಯನಗರ ಅಥವಾ ಮಧ್ಯಕಾಲದ ಅನೇಕ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಭಾದ್ರಪದ ಚೌತಿಗೆ ಉತ್ಸವಗಳು ಆರಂಭವಾಗಿ ಪಂಚಮಿಯಂದು ವಿನಾಯಕ ದೇವರ ಜಾತ್ರೆಯು ವಿಜೃಂಭಣೆಯಿಂದ ನಡೆಯುತ್ತದೆ.

ಈ ದೇವಾಲಯದ ಹಿಂಭಾಗದಲ್ಲಿ ಶಿಥಿಲಗೊಂಡ ಹೊಯ್ಸಳ ಶೈಲಿಯ ಚನ್ನರಾಯಸ್ವಾಮಿ ದೇವಾಲಯವಿದೆ. ಈ ದೇವಾಲಯದಲ್ಲಿದ್ದ ಅನೇಕ ಶಿಲಾಮೂರ್ತಿಗಳನ್ನು (ಮೂಲ ವಿಗ್ರಹವೂ ಸೇರಿದಂತೆ) ಸೋಮೇಶ್ವರ ದೇವಾಲಯದ ನವರಂಗದಲ್ಲಿಡಲಾಗಿದೆ. ಈ ದೇವಾಲಯದ ತಳಪಾಯದ ಮೇಲಿರುವ ಶಾಸನವು ಕ್ರಿ.ಶ. ೧೨೬೦ ರಲ್ಲಿ ಹೊಯ್ಸಳರ ಅಧಿಕಾರಿ ಶೆಟ್ಟಾಳ್ವರ್ ವಾಸುದೇವರ್ ಉರುಫ್ ಜಯಗೊಂಡ ಚೋಳ ಇಳವಂಜಿರಾಯನು ಕುರುಡಿಮಲೈನ ಕೂತ್ತಾಂಡುದೇವ ನಲ್ಲೂರ್ ಅಥವಾ ಶ್ರೀವಾಸುದೇವ ಪೆರುಮಾಳ ದೇವರಿಗೆ ಶಾಶ್ವತ ನಂದಾದೀಪ ದಾನವನ್ನೂ ಮತ್ತು ಇತರೆ ದೈನಂದಿನ ಕೈಂಕರ್ಯಗಳಿಗೆ ಅನುವಾಗುವ ದಾನಗಳನ್ನು ನೀಡಿದ ಬಗ್ಗೆ ದಾಖಲಿಸುತ್ತದೆ. ಈ ಶಾಸನದಲ್ಲಿ ಸೆಲ್ವ ಗೋಪಾಲದೇವರ ಬಗ್ಗೆ ಉಲ್ಲೇಖವಿದ್ದು ಕುರುಡಿಮಲೈ ನಿಗಿರಿಲಿ ಚೋಳ ಮಂಡಲದ ಪುದನಾಡು ವ್ಯಾಪ್ತಿಯಲ್ಲಿತ್ತು ಎಂಬ ಅಂಶವನ್ನು ದಾಖಲಿಸಲಾಗಿದೆ.

ವಿನಾಯಕನ ದೇವಾಲಯದ ಎದುರಿಗೆ ಸ್ವಲ್ಪ ದೂರದಲ್ಲಿರುವ ಸೋಮೇಶ್ವರ ಅಥವಾ ಶಾಸನೋಕ್ತ 'ಕೂತಾಂಡೇಶ್ವರ', 'ಕುತ್ತುಂಡ ದೇವರ್' ದೇವಾಲಯವು ವಿಶಾಲವಾದ ನಿವೇಶನದಲ್ಲಿದ್ದು, ಇತ್ತೀಚೆಗೆ ದುರಸ್ತಿಗೊಂಡಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಮೂಲತಃ ಹೊಯ್ಸಳೋತ್ತರ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು, ಗರ್ಭಗೃಹ, ಅರ್ಧಮಂಟಪ ಮತ್ತು ವಿಶಾಲವಾದ ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು, ಚೌಕಾಕಾರ ಪಾಣಿಪೀಠದ ಮೇಲೆ ಎತ್ತರವಾದ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ದ್ವಾರಬಂಧವು ಸರಳ ಅಲಂಕಾರವನ್ನು ಹೊಂದಿದ್ದು, ಲಲಾಟದಲ್ಲಿ

ಗಜಲಕ್ಷ್ಮಿಯ ಬಿಂಬವನ್ನೂ ಹಾಗೂ ದ್ವಾರಬಂಧದ ಇಕ್ಕೆಲಗಳಲ್ಲಿ ಎರಡು ಚೋಳರ ಕಾಲದ ಸ್ತಂಭಗಳನ್ನು ಹೊಂದಿದೆ. ಅರ್ಧಮಂಟಪದಲ್ಲಿ ದೇವಕೋಷ್ಠಗಳಿದ್ದು ಖಾಲಿ ಇವೆ. ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಶಿಖರವಿದೆ. ಈ ದೇವಾಲಯದ ಅಧಿಷ್ಠಾನದ ಮೇಲಿರುವ ಕ್ರಿ. ಶ. ೧೩೧೨ರ ಶಾಸನವು ಇಳವಂಜಿರಾಯ ಅಥವಾ ಕೂತ್ತುಂಡ ದೇವರ್ ಪುದುನಾಡಿನ ಕುರುಡಿಮಲೈನಲ್ಲಿರುವ ಪೆಂಗೀಶ್ವರ ಉದಯನಾಯನಾರ್ ದೇವರಿಗೆ ಆತನ ಪ್ರತಿನಿಧಿ ಗೌತಮಗೋತ್ರದ ಪರಮೇಶ್ವರ ಭಟ್ಟನ ಮೂಲಕ ನೀಡಿದ ಹಲವು ದತ್ತಿಗಳನ್ನು ದಾಖಲಿಸುತ್ತದೆ. ಈ ದೇವಾಲಯದ ಪ್ರಾಕಾರದಲ್ಲಿ ಲಭ್ಯವಿರುವ ಇತರೆ ಶಾಸನಗಳು ಇದೇ ರೀತಿಯ ದತ್ತಿ ನೀಡಿದ ವಿವರಗಳನ್ನು ದಾಖಲಿಸಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಅಲಂಕೃತ ಚೌಕಾಕಾರವಾದ ಸ್ತಂಭಗಳ ಮೇಲೆ ಆಕರ್ಷಕ ಉಬ್ಬು ಶಿಲ್ಪಗಳಿವೆ. ನವರಂಗದ ಉತ್ತರದ ಗೋಡೆಯ ಬದಿಯಲ್ಲಿ ಭೈರವ, ದಕ್ಷಿಣಾಮೂರ್ತಿ, ನಗರೇಶ್ವರ ಲಿಂಗ (ಹಿಂದೆ ಇದ್ದ ನಗರೇಶ್ವರ ಈಗ ಸಂಪೂರ್ಣವಾಗಿ ನಾಶವಾಗಿದೆ), ದಕ್ಷಿಣಾಮೂರ್ತಿ, ಆಳ್ವಾರ್ ಚನ್ನಕೇಶವ (ಚನ್ನರಾಯಸ್ವಾಮಿ ದೇವಾಲಯದಿಂದ ತಂದಿರುವುದು; ಇದು ಅಭಯ, ಚಕ್ರ, ಶಂಖ, ಕಟಿಹಸ್ತ ಭಾವಗಳನ್ನು ವ್ಯಕ್ತಪಡಿಸುತ್ತಿದೆ) ಆಂಜನೇಯ, ರಾಮಾನುಜಾಚಾರ್ಯ (ಚನ್ನರಾಯಸ್ವಾಮಿ ದೇವಾಲಯದ್ದು) ಇನ್ನೊಂದು ಚನ್ನಕೇಶವ, ನಂದಿ, ಇಳವಂಜಿ ವಾಸುದೇವರಾಯ ಮತ್ತು ಆತನ ರಾಣಿ ಮೊದಲಾದ ಬಿಡಿಶಿಲ್ಪಗಳನ್ನು ಇಡಲಾಗಿದೆ. ನವರಂಗದ ಉತ್ತರ ಪ್ರವೇಶದ್ವಾರದ ಮುಂಭಾಗದ ಮಂಟಪದಲ್ಲಿ ಆಕರ್ಷಕ ಕೆತ್ತನೆಗಳಿಂದ ಅಲಂಕೃತವಾಗಿರುವ ಎರಡು ಚತುಷ್ಕೋನಾಕಾರದ ಸ್ತಂಭಗಳಿವೆ. ಸೋಮೇಶ್ವರ ದೇವಾಲಯದ ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಶಿಖರವಿದೆ. ಮುಖ್ಯ ದೇವಾಲಯದ ಎಡಭಾಗದಲ್ಲಿ ಪಾರ್ವತಿ ಅಥವಾ ಕ್ಷಮಾದಾಂಬ ದೇವಿಯ ಪ್ರತ್ಯೇಕ ಗುಡಿಯಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಗರ್ಭಗೃಹದ ಮೇಲೆ ಚತುಷ್ಕೋನಾಕಾರದ ದ್ರಾವಿಡ ಶೈಲಿಯ ಶಿಖರವಿದೆ. ಈ ದೇವಾಲಯದಲ್ಲಿಯೂ ಭಾದ್ರಪದ ಶುದ್ಧ ಪಂಚಮಿಯೆಂದು ವಾರ್ಷಿಕವಾಗಿ ಜಾತ್ರೆ ಜರುಗುತ್ತದೆ. ಊರಿನಲ್ಲಿ ಕಾಶಿವಿಶ್ವೇಶ್ವರ ದೇವಾಲಯವು ಹಿಂದೆ ಇದ್ದು, ಈಗ ನಾಶಗೊಂಡಿದೆ. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಜುಮ್ಮಾ ಮಸೀದಿ ಇದೆ. ಈ ಊರಿನ ಸಮೀಪದ **ತಾವರೆಕೆರೆ** ಗ್ರಾಮದ ಹೊರಗೆ ಹೊಲದಲ್ಲಿ ನೊಳಂಬರ ಕಾಲದ ಆರು ಬೃಹದಾಕಾರದ ವೀರಗಲ್ಲುಗಳಿದ್ದು, ಮೂರರಲ್ಲಿ ಲಿಪಿ ಇದೆ. ಒಂದರ ಶಾಸನವು ಸು. ಕ್ರಿ. ಶ. ೯೫೦ರ ಕಾಲಕ್ಕೆ ಸೇರಿದ್ದು, ದಿಲೀಪ ನೊಳಂಬನು ಆಳುತ್ತಿದ್ದಾಗ ಮಾರ್ಗಯ್ಯನೆಂಬ ವೀರನು ದನಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿ ಮರಣಹೊಂದಿದ ಘಟನೆಯನ್ನು ದಾಖಲಿಸುತ್ತದೆ. ಉಳಿದ ಎರಡು ವೀರಗಲ್ಲುಗಳ ಮೇಲಿರುವ ಶಾಸನಗಳೂ ಸಹ ದಿಲೀಪ ನೊಳಂಬನ ಕಾಲದವುಗಳಾಗಿವೆ. ಕ್ರಿ. ಶ. ೯೫೦ರಲ್ಲಿ ಮಂಡಿಕಲ್ ಕಂಬಳದನೆಂಬ ವೀರನು ಹುಲಿ ಬೇಟೆಯಾಡಿ ದನಗಳನ್ನು ಸಂರಕ್ಷಿಸಿದ ವಿಚಾರವನ್ನು ದಾಖಲಿಸುತ್ತದೆ.

**ಕೂತಾಂಡಹಳ್ಳಿ:** (ಮುಳಬಾಗಿಲು ತಾಲೂಕು: ಜನಸಂಖ್ಯೆ ೯೪೩) ಮುಳಬಾಗಿಲು–ಶ್ರೀನಿವಾಸಪುರ ಮಾರ್ಗದಲ್ಲಿರುವ (ಮುಳಬಾಗಿಲಿನಿಂದ ೧೨ ಕಿ. ಮೀ.) ಕೂತಾಂಡಹಳ್ಳಿಯು ಕ್ರಿ ಶ. ೧೨೮೦ರ ಸುಮಾರಿಗೆ ನಿರ್ಮಿತವಾದ ಈಶ್ವರ ದೇವಾಲಯದಿಂದಾಗಿ ಜನಪ್ರಿಯವಾಗಿದೆ. ಈ ದೇವಾಲಯದ ಸುತ್ತಲೂ ಮುಳ್ಳಿನ ಗಿಡಗಳು ಬೆಳೆದುಕೊಂಡು ದೇವಾಲಯದ ಮುಖ್ಯ ಕಟ್ಟಡವು ಅಪಾಯದ ಸ್ಥಿತಿಯಲ್ಲಿದೆ. ಈ ದೇವಾಲಯದ ಉತ್ತರದ ಗೋಡೆಯಲ್ಲಿರುವ ಕ್ರಿ. ಶ. ೧೨೮೦ರ ಶಾಸನವು ಹೊಯ್ಸಳ ವೀರ ರಾಮನಾಥದೇವರ್‌ನ ಆಡಳಿತಾವಧಿಯಲ್ಲಿ ತಿರುಮಾಡ್ಯೆ ವಿಲಗಮ್ (ಕೂತಾಂಡಹಳ್ಳಿಯ)ನ ಪೆಂಗೀಶ್ವರ ನಾಯನಾರ್ ದೇವರಿಗೆ ದೈನಂದಿನ ಕೈಂಕರ್ಯ ಕೈಗೊಳ್ಳಲು ಹತ್ತು ಜನ ಸೇವಕರನ್ನು ನೇಮಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಇಲ್ಲೇ ಇರುವ ಇನ್ನೊಂದು ಕ್ರಿ.ಶ.೧೨೮೦ರ ಶಾಸನವು ಅಡ್ಡೆಯಪ್ಪನ್ ಅಳವಾಂಡಪಿಳ್ಳೈ ಎಂಬ ದೇವಾಲಯದ ಅಧಿಕಾರಿಯು ಪೆಂಗೀಶ್ವರ ನಾಯನಾರ್ ದೇವರಿಗೆ ನೀಡಿದ ಕೆಲವು ಭೂದಾನಗಳನ್ನು ದಾಖಲಿಸುತ್ತದೆ. ಕೂತ್ತಾಂಡಹಳ್ಳಿಯ ಪಶ್ಚಿಮಕ್ಕೆ ಇರುವ ಬೂರುಗ ಮರದ ಕೆಳಗೆ ಇರುವ ಬಂಡೆಯ ಮೇಲಿನ ಕ್ರಿ.ಶ.೧೪೨೭ರ ಅಸ್ಪಷ್ಟ ಶಾಸನವು ಮುಳವಾಯಿನ (ಮುಳಬಾಗಿಲ) ಸೋಮೇಶ್ವರ ದೇವಾಲಯಕ್ಕೆ ನೀಡಿದ ಹಲವು ದತ್ತಿಗಳ ಬಗ್ಗೆ ದಾಖಲಿಸುತ್ತದೆ. ಶಿಥಿಲವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಹೊಯ್ಸಳ ಮೂರನೇ ಬಲ್ಲಾಳನ ರಾಜ್ಯಪಾಲನಾಗಿದ್ದ ಜಯಗೊಂಡ ಚೋಳ ಇಳವಂಜಿ ವಾಸುದೇವರಾಯನ ಮಗನಾದ 'ಕೂತ್ತಾಂಡದೇವನ ಹೆಸರು ಶಾಸನಗಳಿಂದ ವ್ಯಕ್ತವಾಗುವುದರಿಂದ ಈ ದೇವಾಲಯವನ್ನು ಆತನೇ ನಿರ್ಮಿಸಿರಬೇಕೆಂಬ ಅಭಿಪ್ರಾಯವಿದೆ. ಕೂತ್ತಾಂಡದೇವ ಹಾಗೂ ಈತನ ಸಂತತಿಯವರು ಕುರುಡುಮಲೆ, ಬೇತಮಂಗಲ ಮತ್ತು ಮಡಿವಾಳಗಳನ್ನು ಒಳಗೊಂಡ ಸುಮಾರು ೪೦೦ ಚದರ ಮೈಲಿಗಳ ಪ್ರದೇಶದಲ್ಲಿ ಆಳ್ವಿಕೆ ನಡೆಸಿ ಅನೇಕ ದೇವಾಲಯಗಳನ್ನು ಕಟ್ಟಿಸಿರುವುದು

ಶಾಸನಗಳ ಆಧಾರದಿಂದ ತಿಳಿಯುತ್ತದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕೂತಾಂಡಹಳ್ಳಿಯ ಈಶ್ವರ ದೇವಾಲಯವು ಹೊಯ್ಸಳರ ಕೊನೆಯ ಭಾಗದ ವಾಸ್ತುರಚನೆಯಾಗಿದ್ದು, ಗೋಡೆಗಳಲ್ಲಿ ಚೋಳರ ಶೈಲಿಯ ಕಿರು ಸ್ತಂಭಗಳು ಕಂಡುಬರುತ್ತವೆ. ದೇವಾಲಯದ ಮುಖಮಂಟಪದ ಸ್ತಂಭಗಳು ವಿಜಯನಗರದ ಶೈಲಿಯಲ್ಲಿ ನಿರ್ಮಿತವಾಗಿವೆ.

**ಕೈವಾರ** (ಚಿಂತಾಮಣಿ ತಾಲೂಕು: ಜನಸಂಖ್ಯೆ: ೫,೪೮೮): ಚಿಂತಾಮಣಿ ತಾಲೂಕಿನ ಒಂದು ಗ್ರಾಮ, ಪವಿತ್ರ ಕ್ಷೇತ್ರ ಚಿಂತಾಮಣಿಯಿಂದ ನೈರುತ್ಯಕ್ಕೆ ಬೆಂಗಳೂರು ಮಾರ್ಗದಲ್ಲಿ ೧೩ ಕಿ.ಮೀ. ದೂರದಲ್ಲಿದೆ. ಇದು ಹೋಬಳಿ ಕೇಂದ್ರ ಕೈವಾರವನ್ನು ಮಹಾಭಾರತದಲ್ಲಿ ಬರುವ ಏಕಚಕ್ರಪುರವೆಂದು ಹೇಳುವರು. ಅರಗಿನ ಮನೆಯಿಂದ ತಪ್ಪಿಸಿಕೊಂಡ ಪಾಂಡವರು ಕೆಲವು ಕಾಲ ಇಲ್ಲಿದ್ದರೆಂದೂ ಈ ಗ್ರಾಮದ ಹತ್ತಿರವಿರುವ ಚಿದಂಬರಗಿರಿ ಅಥವಾ ಚಿಕ್ಕಬೆಟ್ಟದಲ್ಲಿ ಇದ್ದ ಬಕಾಸುರನನ್ನು ಭೀಮ ಕೊಂದು ಅವನ ಶವವನ್ನು ಬೆಟ್ಟದ ಗುಹೆಯೊಂದರಲ್ಲಿ ಮುಚ್ಚಿಟ್ಟನೆಂದು ಸ್ಥಳ ಪುರಾಣದಿಂದ ತಿಳಿದುಬರುತ್ತದೆ ಹಾಗೂ ಬೆಟ್ಟದಲ್ಲಿ ಬಕಾಸುರನಿದ್ದನೆಂದು ಹೇಳಲಾಗುವ ಒಂದು ಗವಿ ಇದೆ. ಕೆಲವೊಮ್ಮೆ ಮಳೆಯ ದಿನಗಳಲ್ಲಿ ಕೊರಕಲುಗಳಿಂದ ಕೆಂಪು ಅಥವಾ ಬಿಳಿಯ ಬಣ್ಣದ ಮಣ್ಣಿಯ ರಾಡಿಯ ನೀರು ಒಸರುತ್ತದೆ. ಇದು ಬಕಾಸುರನ ಕೀವು ಮತ್ತು ರಕ್ತ ಎಂದು ಸ್ಥಳೀಯರ ನಂಬಿಕೆಯಾಗಿದೆ. ಡಾ॥ ಪಿ.ವಿ. ಕೃಷ್ಣಮೂರ್ತಿ ಅವರ ಪ್ರಕಾರ "ಕೈವಾರ ಸ್ಥಳದ ಹೆಸರನ್ನು ಕಯ್ವರ, ಕಯಾವರ, ಕೈವರ, ಕಯವಾರ, ಕೈವಲ್ಯಪುರಿ ಎಂದು ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಗುರುತಿಸಿರುವುದು ಕಂಡುಬರುತ್ತದೆ. ಸಾಂಪ್ರದಾಯಿಕವಾಗಿ ಕೈವಲ್ಯಪುರ ಕೈವಾರವೆಂದು ಹ್ರಸ್ವೀಕರಣಗೊಂಡಿದೆ ಎಂದು ಹೇಳುವುದುಂಟು. ಆದರೆ ಜ್ಞಾತಿ ಭಾಷೆಗಳಲ್ಲಿರುವ ಇಂತಹ ರೂಪಗಳನ್ನು ಅವುಗಳಿಗೆ ಇರುವ ವಿಶಾಲ ಅರ್ಥವನ್ನು ಅವು ಇರುವ ಭೂ ಸನ್ನಿವೇಶವನ್ನು ಗಮನಿಸಿದರೆ ಕಯವೂರ–ಕಯವರ–ಕಯ್ವರ–ಕೈವಾರವಾಗಿರಬೇಕೆನಿಸುತ್ತದೆ. ಇಲ್ಲಿ ಕಯ/ಕಯಂ ಎಂಬ ಪದವು ಕೊಳ, ಜಲಾಶಯ ಇಲ್ಲವೇ ಜಲಸಂಬಂಧವುಳ್ಳ ಸ್ಥಳನಾಮವೆಂದು ನಿರ್ಧರಿಸಬಹುದಾಗಿದೆ. ಕೆಯ್ + ಊರು = ಕೆಯ್‌ವೂರು–ಕೈವಾರ ಆಗಿರಬೇಕೆಂಬ ಅಭಿಪ್ರಾಯವಿದ್ದು, ಇಲ್ಲಿ ಕೆಯ್‌ರು ಎಂಬುವ ಗದ್ದೆ, ಹೊಲ ಮೊದಲಾದ ಸಾಗುವಳಿ ಭೂಮಿಯನ್ನು ಪ್ರಧಾನವಾಗಿ ಪಡೆದಿರುವ ಊರು ಅಥವಾ ಸ್ಥಳವೆಂದು ಅರ್ಥೈಸಬಹುದಾಗಿದೆ". ಕೈವಾರ ಸ್ಥಳದ ಪರಿಸರವನ್ನು ಗಮನಿಸಿದರೆ ಈ ಅಭಿಪ್ರಾಯ ಹೆಚ್ಚು ಸರಿ ಎನಿಸುತ್ತದೆ. ಒಟ್ಟಾರೆ, ಕೈವಾರದ ಬೆಟ್ಟದ ಮೇಲೆ ಮೂರು ನೀರಿನ ಹೊಂಡಗಳು ಇರುವುದು ಗ್ರಾಮದ ಸಮೀಪದಲ್ಲಿನ ದೊಡ್ಡ ಕೆರೆಯ ಸನ್ನಿವೇಶವು "ಕೈವಾರ" ಎಂಬ ಸ್ಥಳನಾಮ ಮೂಲತಃ ಕೃಷಿ ಮತ್ತು ಜಲ ಸಂಬಂಧಿ ಎಂಬುದನ್ನೇ ಪ್ರತಿನಿಧಿಸುತ್ತದೆ ಎಂದು ಹೇಳಬೇಕಾಗಿದೆ.

ಕೈವಾರದಲ್ಲಿ ಅಮರನಾರಾಯಣ, ಧರ್ಮರಾಯ, ಭೀಮೇಶ್ವರ, ಅರ್ಜುನೇಶ್ವರ, ನಕುಲೇಶ್ವರ, ಸಹದೇವೇಶ್ವರ ದೇವಾಲಯಗಳಿವೆ. ಇವೆಲ್ಲಾ ೧೨೮೩ಕ್ಕೆ ಮುಂಚೆಯೇ ಇದ್ದುವೆಂದು ಇಲ್ಲಿ ದೊರಕಿರುವ ತಮಿಳು ಶಾಸನಗಳಿಂದ ತಿಳಿದುಬರುತ್ತದೆ. ಬಹುಶ: ಇವು ೧೨೮೦ರ ರಚನೆಗಳು. ಆದರೆ ಎಲ್ಲವೂ ಬಹುವಾಗಿ ನವೀಕೃತಗೊಂಡಿವೆ. ಅಮರನಾರಾಯಣ ದೇವಾಲಯ ಇಲ್ಲಿಯ ಪ್ರಧಾನ ಗುಡಿ ಹಾಗೂ ಮುಖ್ಯ ವಾಸ್ತುಶಿಲ್ಪವಾಗಿದೆ. ಇಟ್ಟಿಗೆಗಳಿಂದ ಕಟ್ಟಿದ ಶಿಖರವುಳ್ಳ ಗರ್ಭಗೃಹ, ಸಣ್ಣ ಶುಕನಾಸಿ, ನಾಲ್ಕು ಕಂಬಗಳಿರುವ ನವರಂಗ ಹಾಗೂ ಉತ್ತರ ಭಾಗದಲ್ಲಿ ಒಂದು ಚಿಕ್ಕ ಗುಡಿ ಮತ್ತು ಮುಖಮಂಟಪಗಳಿಂದ ಇದು ಕೂಡಿದೆ. ಮುಖಮಂಟಪ ಸುಂದರವಾಗಿದ್ದು ಮುಂದಿನ ಎರಡು ಕಂಬಗಳ ಮೇಲೆ ವಿಮಾನ, ಸಿಂಹ ಮತ್ತು ಇತರ ಪ್ರಾಣಿಗಳ ಚಿತ್ರಗಳನ್ನು ಕೆತ್ತಲಾಗಿದೆ. ಉತ್ತರ ಭಾಗದ ಕಂಬದ ಮೇಲೆ ಹಾರುತ್ತಿರುವ ಸಿಂಹ, ಮಕರ ಮತ್ತು ಗಂಧರ್ವರ ಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಮಹಾದ್ವಾರ ಉತ್ತಮ ಕೆತ್ತನೆಗಳಿಂದ ಕೂಡಿದೆ. ದಕ್ಷಿಣದ ದ್ವಾರಸ್ತಂಭದ ಮೇಲೆ ಹಂಸ, ನವಿಲು, ಸಿಂಹ, ಹುಲಿ ಮತ್ತು ಸವಾರಿ ಆನೆಗಳನ್ನು ಚಿತ್ರಿಸಿದೆ. ಉತ್ತರದ್ವಾರ, ಸ್ತಂಭ ಮತ್ತು ದ್ವಾರಬಂಧಗಳ ಮೇಲೆ ಗಂಧರ್ವರ ಶಿಲ್ಪಗಳಿವೆ. ನವರಂಗದ ದಕ್ಷಿಣ ಭಾಗದಲ್ಲಿ ಕಲ್ಲಿನ ಕಿಟಕಿಯ ಉತ್ತರಭಾಗದಲ್ಲಿ ವಿಜಯನಗರ ಸಾಮ್ರಾಜ್ಯಕಾಲದ ಸೀತಾರಾಮಲಕ್ಷ್ಮಣರ ಪ್ರತಿಮೆಗಳಿರುವ ಸಣ್ಣ ಗುಡಿಯೂ ಇವೆ. ನವರಂಗದ ಚಾವಣಿಯ ಮಧ್ಯದಲ್ಲಿ ಒಂಬತ್ತು ಫಲಕಗಳುಂಟು. ನಡುವೆ ಹಂಸವಾಹನ ತ್ರಿಮುಖ ಬ್ರಹ್ಮನನ್ನು ಸುತ್ತಲೂ ಅಷ್ಟದಿಕ್ಪಾಲಕರನ್ನೂ ಕಡೆಯಲಾಗಿದೆ. ಇಲ್ಲಿಯ ಕಂಬಗಳ ಮೇಲೆ ವಿವಿಧ ದೇವತೆಗಳ, ಗಂಧರ್ವರ ಮತ್ತು ಸಿಂಹಗಳ ಚಿತ್ರಗಳಿವೆ. ಶುಕನಾಸಿ ಚಿಕ್ಕದು. ಗರ್ಭಗುಡಿಯಲ್ಲಿ ಶ್ರೀದೇವಿ, ಭೂದೇವಿ ಸಹಿತ ಅಮರನಾರಾಯಣನ ಸುಂದರ ಪ್ರತಿಮೆ ಇದೆ. ಕೈವಾರದ ಅಮರನಾರಾಯಣ ದೇವಾಲಯದ ತಳಪಾಯದ ಮೇಲಿರುವ ಅನೇಕ ಶಾಸನಗಳು ಬಹಳ ಆಸಕ್ತಿಯುತವಾಗಿದೆ. ಮೊದಲನೆಯದು ಕ್ರಿ.ಶ.೧೨೫೮ರ ಶಾಸನವು ಉಲ್ಲೇಖಿಸಿರುವ ದುಷ್ಟಾದಿತ್ಯ ರಾಜನಾರಾಯಣ ಬ್ರಹ್ಮಾದಿರಾಯನಾದ ಗಂಗಪೆರುಮಾಳ ದೇವನಕಾಲಕ್ಕೆ

ಸೇರಿದೆ ಮತ್ತು ದೇವರ್ ಹಾಗೂ ಅಮರೇಶ್ವರ ದೇವರ್ ಎಂಬುದು ಕೈವಾರದ ಅಮರನಾರಾಯಣ ಎಂದು ಗುರುತಿಸಲಾಗಿದೆ. ಈ ಶಾಸನದಲ್ಲಿ ಕೈವಾರ ನಾಡಿನ ತಾನತ್ತೂರಿನ ದೇವದಾನದ ಭೂಮಿಯನ್ನು ತಿರುವಿಡೈಯಾಟ್ಟಂ (ವೈಷ್ಣವ ಸರ್ವಮಾನ್ಯ)ವೆಂದು ದತ್ತಿ ಬಿಟ್ಟಿರುವ ವಿಚಾರವನ್ನು ತಿಳಿಸುತ್ತದೆ. ಎರಡನೆಯ ಶಾಸನವು ಕ್ರಿ.ಶ.೧೨೬೫ರಲ್ಲಿ ರಾಜನಾರಾಯಣ ಬ್ರಹ್ಮಾದಿರಾಜನಾದ ಗಂಗಪೆರುಮಾಳನು ಶೆಲ್ವಾಂಡೈದೇವರ್ ಎಂಬ ಅಧಿಕಾರಿಯಿಂದ ಪ್ರತಿಷ್ಠಾಪಿಸಲ್ಪಟ್ಟ ಅಮರನಾರಾಯಣ ದೇವರಿಗೆ ನೀಡಿದ ತೊಂಡಿಕೆರೆ ಎಂಬ ಗ್ರಾಮದಲ್ಲಿ ನೀಡಲಾದ ಹಲವು ಭೂಮಿಯ ದಾನಗಳನ್ನು ದಾಖಲಿಸುತ್ತದೆ. ಕ್ರಿ. ಶ. ೧೨೮೬ರ ಶಾಸನದಲ್ಲಿ ಹೊಯ್ಸಳ ರಾಮನಾಥದೇವನ ಆಡಳಿತದಲ್ಲಿ ಹಿಂದೆ ಪೆರುಮಾಳ್ ಎಂಬ ಅಧಿಕಾರಿಯು ನೊಂಣ್ಬುಗುಡಿ (ನಂದಗುಡಿ)ಯಲ್ಲಿ ಅಮರನಾರಾಯಣ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ಹಾಗೂ ರಾಜನಾರಾಯಣ ಬ್ರಹ್ಮಾದಿರಾಜ ವಾಸುದೇವನು ಕೈವಾರದ ಇದೇ ದೇವರಿಗೆ ದತ್ತಿಬಿಟ್ಟ ಹಲವು ಭೂದಾನಗಳನ್ನು ದಾಖಲಿಸುತ್ತದೆ.

ಭೀಮೇಶ್ವರ ದೇವಾಲಯ ಅಮರನಾರಾಯಣ ದೇವಾಲಯಕ್ಕಿಂತ ದೊಡ್ಡದಾಗಿದ್ದು ಚೋಳ–ಹೊಯ್ಸಳರ ಕಾಲದ ವಾಸ್ತು ರಚನೆಯಾಗಿದೆ. ಇದರಲ್ಲಿ ಗರ್ಭಗುಡಿ, ಶುಖನಾಸಿ, ಅರ್ಧಮಂಟಪ ಮತ್ತು ರಂಗಮಂಟಪಗಳುಂಟು. ಇಲ್ಲಿರುವ ಹದಿನಾರು ಕೋನಗಳುಳ್ಳ ಕಂಬಗಳ ಮೇಲೆ ದೇವತೆಗಳ, ವೀರರ, ಹೂ ಬಳ್ಳಿಗಳ ಚಿತ್ರಗಳನ್ನು ಕೆತ್ತಲಾಗಿದೆ. ನವರಂಗದ ಮತ್ತು ಮುಂಭಾಗದ ಕಂಬಗಳು ವಿಜಯನಗರದ ಶೈಲಿಗೆ ಸೇರಿದವು. ಚಾವಣಿಯ ಕೆತ್ತನೆಗಳು ಮತ್ತು ಕೆಲವು ತಮಿಳು ಶಾಸನಗಳು ೧೩೪ರ ಸುಮಾರಿಗೆ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲಕ್ಕೆ ಸೇರುತ್ತವೆ. ಈ ದೇವಾಲಯವನ್ನು ಕೃಷ್ಣದೇವರಾಯ ಹಾಗೂ ಅಚ್ಚುತರಾಯರ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಭೀಮೇಶ್ವರ ದೇವಾಲಯದ ಭಿತ್ತಿಯ ಮೇಲಿರುವ ಕ್ರಿ.ಶ.೧೨೮೫ರ ಶಾಸನವು ಹೊಯ್ಸಳ ವೀರ ರಾಮನಾಥನ ಆಡಳಿತದಲ್ಲಿ ಆತನ ಪ್ರಧಾನಿ ಕಡೈಚೆಟ್ಟಿ ಎಂಬುವವನು ಕೈವಾರದಲ್ಲಿರುವ ಭೀಮೇಶ್ವರ ದೇವರಿಗೆ ಕೈವಾರ ನಾಡಿನ ವೈಯಿರಕ್ಕೂರ್ (ಭೈರಕೂರು) ಎಂಬಲ್ಲಿ ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ. ಇದೇ ದೇವಾಲಯದಲ್ಲಿ ಮಾಮನಂಕಾರ ದುಷ್ಟಾದಿತ್ಯ ರಾಜನಾರಾಯಣ ಬ್ರಹ್ಮಾದಿರಾಜನೆಂಬ ಗಂಗಪೆರುಮಾಳನ ಕ್ರಿ. ಶ. ೧೨೮೫ರ ಶಾಸನವಿದ್ದು ಕೈವಾರದ ದೇವರಿಗೆ ತ್ರಿಶೂಲ ಸ್ಥಾಪನೆ ಮಾಡಿ ಆತನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಶಾಸನದ ಉಳಿದ ಭಾಗ ಅಳಸಿಹೋಗಿದೆ. ಇಲ್ಲೇ ಇರುವ ಇನ್ನೊಂದು ಶಾಸನವು ೧೩೪ರಲ್ಲಿ ಹೊಯ್ಸಳ ವೀರರಾಮನಾಥನ ಆಳ್ವಿಕೆಯಲ್ಲಿ ಮಹಾಪ್ರಧಾನಿ ಮಾಂಡಲಿಕ ಯುವರಾಜನ್ ನಿರ್ಬಯನಾದನ್ ಮೊದಲಾದ ಬಿರುದುಗಳನ್ನು ಹೊತ್ತಿದ್ದ ಶಿಕ್ಕದೇವ ಅಣ್ಣಾಮಲೆದೇವ ಎಂಬ ಅಧಿಕಾರಿಯು ಕೈವಾರದ ಭೀಮೇಶ್ವರ ದೇವರಿಗೆ ರಾಜನ ಶರೀರಕ್ಕೆ ಒಳ್ಳೆಯದಾಗಲಿ ಎಂದು ಚೈತ್ರ ಮಾಸದ ರಾಜನ ತಿರುನಕ್ಷತ್ರ (ಜನ್ಮದಿನ) ದಂದು ದೇವಾಲಯದಲ್ಲಿ ತಿರುಪಣಿ ಸೇವೆಗಾಗಿ ಕೈವಾರ ನಾಡಿನ ಶೀಯನಹಳ್ಳಿಯಲ್ಲಿ ಬಿಟ್ಟ ಹಲವು ದಾನಗಳನ್ನು ದಾಖಲಿಸುತ್ತದೆ.

ಕೈವಾರದ ಚಿಕ್ಕಬೆಟ್ಟದ ಮೇಲಿರುವ ದುರ್ಗಾ ದೇವಾಲಯದ ಸಮೀಪದ ಬಂಡೆಯ ಮೇಲಿರುವ ಕ್ರಿ.ಶ. ೧೪೦೩ರ ಶಾಸನವು ವಿಜಯನಗರದ ಹರಿಹರರಾಯನ ಕಾಲದಲ್ಲಿ ರಾಜನ ಮನೆಯ ನಾಯಕನಾದ ಪ್ರಧಾನಿ ವರದಪ್ಪನಿಗೆ ಆಯುರಾರೋಗ್ಯ ಐಶ್ವರ್ಯಗಳು ಅಭಿವೃದ್ಧಿ ಆಗಬೇಕೆಂದು ಏಕಚಕ್ರಪುರವಾದ ಕೈವಾರದ ನದಿಯ ದುರ್ಗಾದೇವಿಯನ್ನು ಸುಮೂಹರ್ತದಲ್ಲಿ ಪ್ರತಿಷ್ಠೆ ಮಾಡಿ ಅಮೃತಪಡಿಗೆ ಕೈವಾರದ ಹಿರಿಯ ಕೆರೆಯ ಕೆಳಗಿನ ಗದ್ದೆ ಹಾಗೂ ಹೊಲಗಳನ್ನು ಆಚಂದ್ರಾರ್ಕವಾಗಿ ಸಲ್ಲುವಂತೆ ದತ್ತಿ ನೀಡಿರುವ ವಿಚಾರವನ್ನು ದಾಖಲಿಸುತ್ತದೆ. ಪ್ರಾಚೀನ ಗಂಗರ ಆಡಳಿತದಲ್ಲಿ ಕೈವಾರ ಒಂದು ಪ್ರಮುಖ ಆಡಳಿತ ಕೇಂದ್ರವಾಗಿದ್ದು, ಕ್ರಿಸ್ತ ಶಕದ ಆದಿಯಲ್ಲಿ ಪ್ರಚಲಿತವಿದ್ದ ಪೌರಾಣಿಕ ಪರಂಪರೆಗೆ ಪೂರಕವಾಗುವಂತೆ ಹಲವು ಆರಾಧನಾ ಸ್ಥಳಗಳು ಗುರುತಿಸಲ್ಪಟ್ಟವು. ದೇವಾಲಯಗಳು ನಿರ್ಮಾಣವಾದುವು. ಹೀಗೆ ಆಡಳಿತಾತ್ಮಕ ಮತ್ತು ಧಾರ್ಮಿಕ ಕೇಂದ್ರವಾಗಿದ್ದ ಕೈವಾರವು ಬಾಣ–ಗಂಗರ ಕಾಲದಲ್ಲಿ ಬೆಳೆಯ ತೊಡಗಿದಂತೆ, ಸಹಜವಾಗಿ ತತ್ಸಂಬಂಧ ವಾಣಿಜ್ಯ ಚಟುವಟಿಕೆಗಳು ಅಲ್ಲಿ ಆರಂಭಗೊಂಡು ಚೋಳ, ಹೊಯ್ಸಳ, ವಿಜಯನಗರದ ಅರಸರ ಕಾಲದಲ್ಲಿ ಮುಂದುವರೆದು, ನಗರೀಕರಣದತ್ತ ಪ್ರಗತಿ ಪಡೆದಿದ್ದನ್ನು ಗುರುತಿಸಲಾಗಿದೆ. ದೂರದ ತೊಂಡೆ ಮಂಡಲದ ತಿರುಪ್ಪಾಶೂರ್ ಮುಂತಾದ ಸ್ಥಳಗಳಿಗೆ ಸೇರಿದ ವೈಶ್ಯವಣಿಕ ನಾಗರೀಕರನ್ನು (ನಕರ ನರ್ತಕರನ್ನು) ಆಕರ್ಷಿಸುವಲ್ಲಿ ಕೈವಾರವು ಸಫಲವಾದ ವಿಚಾರಗಳು ಶಾಸನಗಳಿಂದ ಸ್ವಯಂವೇದ್ಯವಾಗುತ್ತದೆ.

ಸಹದೇವೇಶ್ವರ ಮತ್ತು ನಕುಲೇಶ್ವರ ಮಂದಿರಗಳು ಸಣ್ಣವು. ಸಹದೇವೇಶ್ವರ ಮಂದಿರದ ಗೋಡೆಗಳ ಮೇಲೆ ಅನೇಕ ತಮಿಳು ಶಾಸನಗಳುಂಟು. ಹೊಯ್ಸಳ ಸಾಮಂತನಾಗಿದ್ದ ಮತ್ತು ೧೨೮೦–೧೨೯೦ರ ಅವಧಿಯಲ್ಲಿ ಕೈವಾರ ನಾಡಿನ ರಾಜ್ಯಪಾಲನಾಗಿದ್ದ ಚೋಳ ದುಟ್ಟರಾದಿತ್ಯ ರಾಜನಾರಾಯಣನ ಉಲ್ಲೇಖ ಈ ಶಾಸನಗಳಲ್ಲಿವೆ. ಇಲ್ಲಿಯ ಶಿವ ದೇವಾಲಯಗಳನ್ನು ಈತ ಕಟ್ಟಿಸಿರಬಹುದು. ಪ್ರಾಚೀನ ಶೈಲಿಯಲ್ಲಿರುವ ನಕುಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೧೨೫೦ರ ಸುಮಾರಿನ ಒಂದು ಶಾಸನವು ತೊಂಡೈಮಂಡಲದ ತಿರುಪ್ಪಾಶೂರ್ ಎಂಬ ಸ್ಥಳಕ್ಕೆ ಸೇರಿದ ವೈಶಿಯವಾಣಿಗ ನಾಗರಿಕರಲ್ಲಿ ಒಬ್ಬನಾದ ಕುಮಾರಾಣ್ಡೈ ತಿರುವಾಳರ್ ಎಂಬುವನು ತಾನೇ ಸ್ಥಾಪಿಸಿದ ಪಿಳ್ಳೈಯಾರ್ (ವಿನಾಯಕ)ಗೆ ತ್ರೈಮಾಸದ ಪುಷ್ಯ ನಕ್ಷತ್ರದಲ್ಲಿ ನಡೆಯುವ ಉತ್ಸವಕ್ಕಾಗಿ ಬಿಟ್ಟ ಹಲವು ದಾನಗಳನ್ನು ವಿವರಿಸುತ್ತದೆ. ಇದೇ ದೇವಾಲಯದಲ್ಲಿರುವ ಕ್ರಿ.ಶ.೧೨೮೭ರ ಶಾಸನವೊಂದು ಅಯ್ಯನಂಕಾರ ದುಷ್ಟಾದಿತ್ಯ ರಾಜನಾರಾಯಣ ಬ್ರಹ್ಮಾದಿ ರಾಜನಾದ ವಾಸುದೇವನು ಕೈವಾರದಲ್ಲಿನ ಸುಬ್ರಹ್ಮಣ್ಯ ದೇವರಿಗೆ ತನ್ನುಪಳ್ಳಿ ಗ್ರಾಮದಲ್ಲಿ ಉಳಿದಿರುವ ನಂಜೈ (ನೀರಾರಂಭ) ಪುಂಜೈ (ಕಾಡಾರಂಭ) ಭೂಮಿ ಹಾಗೂ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಬಿಟ್ಟ ಹಲವು ದತ್ತಿಗಳನ್ನು ದಾಖಲಿಸುತ್ತದೆ. **ಕೈವಾರ ನಾರೇಯಣ ಯೋಗಿ ಆಶ್ರಮ:** ನಾರೇಯಣ ಯೋಗಿಗಳೆಂಬ ಪ್ರಸಿದ್ಧ ಸಂತರು ಈ ಊರಿನಲ್ಲಿ ನೆಲೆಸಿದ್ದರು. ಅವರ ಸಮಾಧಿ ಮತ್ತು ದೇವಾಲಯ ಪವಿತ್ರ ತಾಣವಾಗಿದೆ. ಕೈವಾರ ನಾರಾಣಪ್ಪ (೧೭೩೦–೧೮೪೦) ಎಂಬ ಪ್ರಸಿದ್ಧ ಸಂತರು. ಚಿಂತಾಮಣಿ ತಾಲೂಕು ಕೈವಾರ ಗ್ರಾಮದಲ್ಲಿ ಜನಿಸಿ ಅಲ್ಲಿಯೇ ಮುಕ್ತರಾದರು. ಇವರ ತಂದೆ ಕೊಂಡಪ್ಪ, ತಾಯಿ ಮುದ್ದಮ್ಮ, ಇವರು ತೆಲುಗು ಬಣಜಿಗರು. ವ್ಯವಸಾಯ ಮತ್ತು ಬಳೆ ಮಾರುವುದು ಇವರ ಮೂಲ ವೃತ್ತಿಯಾಗಿತ್ತು. ಇವರ ವಿಧ್ಯಾಭ್ಯಾಸ ಕೂಲಿ ಮಠದಲ್ಲಿ ನಡೆಯಿತು. ಇವರು ಮುನಿಯಮ್ಮ ಎಂಬ ಕನ್ಯೆಯನ್ನು ಮದುವೆಯಾದರು. ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು, ಒಬ್ಬ ಹೆಣ್ಣು ಮಗಳು ಜನಿಸಿದರು.

ನಾರಾಣಪ್ಪನವರಿಗೆ ಬಾಲ್ಯದಿಂದಲೇ ಆಸ್ತಿಕತೆ, ದೈವಭಕ್ತಿಗಳು. ಅಕಸ್ಮಾತ್ತಾಗಿ ವೆಂಕಟಗಿರಿ ಗುಡ್ಡದ ಮೊಗಿಲಿ ಕಣಿವೆಯಲ್ಲಿ ಪರದೇಶಸ್ವಾಮಿಗಳು ಎಂಬ ಸಿದ್ಧಪುರುಷರ ಸಂದರ್ಶನ ವಾಯಿತು. ಅವರು ನಾರಾಣಪ್ಪನವರಿಗೆ ಒಂದು ತಾರಕ ಮಂತ್ರವನ್ನು ಉಪದೇಶಿಸಿ ಬಾಯಲ್ಲಿ ಬೆಣಚು ಕಲ್ಲನ್ನಿಟ್ಟುಕೊಂಡು ಇದನ್ನು ಜಪಿಸುತ್ತಿರು, ಯಾವಾಗ ಬೆಣಚುಕಲ್ಲು ಸಕ್ಕರೆಯಂತೆ ಕರಗಿಹೋಗುವುದೋ ಆಗ ಮಂತ್ರ ಸಿದ್ಧಿಸಿತೆಂದು ತಿಳಿ ಎಂದು ಹೇಳಿದರು. ನಾರಾಣಪ್ಪನವರು ಅದೇ ಪ್ರಕಾರವಾಗಿ ಜಪಿಸಿ ಮಂತ್ರಸಿದ್ಧಿಯನ್ನು ಪಡೆದರೆಂದು ಪ್ರತೀತಿಯಿದೆ. ಇವರ ಭಕ್ತಿಗೆ ಮೆಚ್ಚಿ ಕೈವಾರದ ಅಮರನಾರಾಯಣ ಸ್ವಾಮಿ ಗೊಲ್ಲನ ವೇಷದಲ್ಲಿ ಬಂದು ತತ್ವಯತಿ ಎಂದು ಮಹಾಕಾವ್ಯವನ್ನು ಉಪದೇಶಿಸಿದನಂತೆ. ನಾರಾಣಪ್ಪನವರು ವಿರಕ್ತರಾಗಿ ಸಂನ್ಯಾಸವನ್ನು ಸ್ವೀಕರಿಸಿ ಯೋಗ ಸಾಧನೆಯಲ್ಲಿ ನಿರತರಾಗಿ ನಾರೇಯಣ ಯೋಗಿಗಳು, ನಾರೇಯಣ ಯತಿಗಳು, ಕೈವಾರ ತಾತನವರು ಎಂದು ವಿಖ್ಯಾತರಾದರು.

ಭಜನೆ, ಕೀರ್ತನೆಗಳನ್ನು ರಚಿಸಿ ತತ್ವವನ್ನು ಭೋಧಿಸುವುದು ನಾರೇಯಣಯೋಗಿಗಳ ಮುಖ್ಯಕಾರ್ಯಗಳಾಗಿದ್ದವು. ಕನ್ನಡ ಮತ್ತು ತೆಲುಗುಗಳಲ್ಲಿ ಇವರು ಕೃತಿಗಳನ್ನು ರಚಿಸಿದರು. ವೇದಾಂತ ಸಾರಾವಳಿ, ನಾರೇಯಣ ಕವಿ ಶತಕ, ಭೀಮಲಿಂಗ ಶತಕ, ತಾರಕ, ಬ್ರಹ್ಮಾನಂದ ಶತಕ, ಶ್ರೀಕೃಷ್ಣ ಚರಿತಾಮೃತ, ಯೋಗಸಾರ, ಕಾಲಜ್ಞಾನ ಮುಂತಾದವು ಇವರ ಕೃತಿಗಳು. ೧೮೪೦ರಲ್ಲಿ ಈ ಮಹಾತ್ಮರು ಮುಕ್ತರಾದರಂತೆ. ಕೈವಾರದ ನಾರೇಯಣ ಆಶ್ರಮದಲ್ಲಿ ಇವರ ಸಮಾಧಿ ಇದೆ. ಬಲಗಡೆ ನಾರಾಯಣ ಯೋಗಿಗಳ ಶಿಲಾಮೂರ್ತಿ ಇರುವ ಮಂದಿರವಿದೆ. ಎಡಗಡೆ ಅವರು ನೆಟ್ಟ ಅಶ್ವತ್ಥ ವೃಕ್ಷ ಮತ್ತು ತೋಡಿಸಿದ ಬಾವಿ ಇದೆ. ಪ್ರತೀವರ್ಷ ಜೇಷ್ಠ ಶುದ್ಧ ತದಿಗೆಯೆಂದು ಯೋಗಿಗಳ ಆರಾಧನೋತ್ಸವವು ಪಾಲ್ಗುಣ ಬಹುಳ ಪಾಡ್ಯದಲ್ಲಿ ರಥೋತ್ಸವವೂ ವೈಭವದಿಂದ ನಡೆಯುತ್ತವೆ. ನಾರೇಯಣ ಯೋಗಿಗಳ ಆಶ್ರಮ ಒಂದು ನಿರಂತರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದೆ. ಆಶ್ರಮದವತಿಯಿಂದ 'ಮಲ್ಲಾರ' ಎಂಬ ಬೌದ್ಧಿಕ ಮೌಲ್ಯವುಳ್ಳ ಸಂಶೋಧನಾ ಮಾಸ ಪತ್ರಿಕೆಯು ಪ್ರಕಟವಾಗುತ್ತಿದೆ.

**ಕೋಲಾರ:** (ಜಿಲ್ಲಾ ಕೇಂದ್ರ ಜನಸಂಖ್ಯೆ: ೧,೧೩,೯೦೭): ಕರ್ನಾಟಕ ರಾಜ್ಯದ ಪೂರ್ವದ ಅಂಚಿನಲ್ಲಿರುವ ಒಂದು ಜಿಲ್ಲಾ ಕೇಂದ್ರವಲ್ಲದೇ ಇದು ತಾಲೂಕು ಕೇಂದ್ರವೂ ಆಗಿದೆ. ಇದೊಂದು ಪ್ರಾಚೀನ ಪಟ್ಟಣ, ಕರ್ನಾಟಕದ ಗಂಗವಂಶದ ತವರೂರು. ಪಶ್ಚಿಮದಲ್ಲಿ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳು. ಉತ್ತರ ಮತ್ತು ಪೂರ್ವದಲ್ಲಿ ಅನುಕ್ರಮವಾಗಿ ಆಂಧ್ರಪ್ರದೇಶದ ಅನಂತಪುರ ಮತ್ತು ಚಿತ್ತೂರು ಜಿಲ್ಲೆಗಳು. ದಕ್ಷಿಣದಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಧರ್ಮಪುರಿ ಜಿಲ್ಲೆಗಳು ಇವು

ಕೋಲಾರ ಜಿಲ್ಲೆಯ ಮೇರೆಗಳು. ಬೆಂಗಳೂರಿನಿಂದ ೭೨ ಕಿ.ಮೀ. ಪೂರ್ವ ಈಶಾನ್ಯದಲ್ಲಿರುವ ಇದು ಹಳೆಯ ಬೆಂಗಳೂರು–ಮದರಾಸು ಹೆದ್ದಾರಿಯಲ್ಲಿದೆ. ೧೯೧೨–೧೬ರಲ್ಲಿ ಬಂಗಾರಪೇಟೆ–ಬೆಂಗಳೂರು, ಯಲಹಂಕ–ಚಿಕ್ಕಬಳ್ಳಾಪುರ ನ್ಯಾರೋಗೇಜ್ ರೈಲುಮಾರ್ಗ ನಿರ್ಮಾಣಗೊಂಡು ಈ ಪಟ್ಟಣದ ಮೂಲಕ ಹಾದು ಹೋಗಿತ್ತು. ನ್ಯಾರೋಗೇಜ್ ರೈಲುಮಾರ್ಗವನ್ನು ತೆಗೆದು ಬ್ರಾಡ್‌ಗೇಜ್‌ಗೆ ಪರಿವರ್ತಿಸಿದ ನಂತರ ಈಗ ಕೇವಲ ಬಂಗಾರಪೇಟೆ–ಕೋಲಾರ ಮಾರ್ಗದಲ್ಲಿ ಬ್ರಾಡ್‌ಗೇಜ್ ರೈಲು ಸಂಚರಿಸುತ್ತಿದೆ. ಕೋಲಾರ ಬಹು ಪ್ರಾಚೀನ ಆಡಳಿತ ಕೇಂದ್ರವಾಗಿದೆ. 'ಕೋಲಾಹಲಪುರ', 'ಕುವಲಾಲ', 'ಕೋಲಾಲ', 'ಕೋಳಾಲ', ಇವು ಇದರ ಪ್ರಾಚೀನ ಹೆಸರುಗಳು. ಸ್ಥಳೀಯವಾಗಿ ಬಲವಾಗಿರುವ ಸಾಂಪ್ರದಾಯಿಕ ನಂಬುಗೆಯ ಪ್ರಕಾರ ಕಾರ್ತವೀರ್ಯಾರ್ಜುನ ಹಿಂದೆ ಈ ಪ್ರದೇಶದಲ್ಲಿ ದೊರೆಯಾಗಿದ್ದಾಗ ಒಮ್ಮೆ ಜಮದಗ್ನಿ ಮಹರ್ಷಿ ಅವನನ್ನು ಸುರಭಿ ಎಂಬ ಗೋವಿನ ಸಹಾಯದಿಂದ ಸತ್ಕರಿಸಿದ. ಕಾರ್ತವೀರ್ಯ ಆ ಗೋವನ್ನು ತನಗೆ ಕೊಡಬೇಕೆಂದು ಜಮದಗ್ನಿಯನ್ನು ಪೀಡಿಸಿದ. ಜಮದಗ್ನಿ ಗೋವನ್ನು ಕೊಡಲು ನಿರಾಕರಿಸಲು ಅದನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಲು ಪ್ರಯತ್ನಿಸಿದ. ಆಗ ಜಮದಗ್ನಿಯ ಮಗ ಪರಶುರಾಮನಿಂದ ಕಾರ್ತವೀರ್ಯಾರ್ಜುನನು ಹತನಾದ ಅನಂತರ ಆತನ ಮಕ್ಕಳಿಂದ ಜಮದಗ್ನಿಯ ಹತ್ಯೆ ನಡೆಯಿತು. ಜಮದಗ್ನಿಯ ಪತ್ನಿ ರೇಣುಕೆ ಪತಿಯ ದೇಹದೊಡನೆ ಚಿತೆಯೇರಿದಳು. ಇದರಿಂದ ಕುಪಿತನಾದ ಪರಶುರಾಮ ಎಲ್ಲಾ ಕ್ಷತ್ರೀಯರನ್ನೂ ನಾಶಮಾಡುವುದಾಗಿ ಪಣತೊಟ್ಟು ಕಾರ್ತವೀರ್ಯಾರ್ಜುನನ ಎಲ್ಲ ಮಕ್ಕಳನ್ನೂ ಯುದ್ಧದಲ್ಲಿ ಕೊಂದು ಹಾಕಿದ. ಆ ಯುದ್ಧಗಳಿಂದ ಉಂಟಾದ ಕೋಲಾಹಲ ಸುತ್ತಲ ಬೆಟ್ಟಗಳಿಂದ ಮಾರ್ದನಿ ಕೊಟ್ಟು ಆ ಪ್ರದೇಶಕ್ಕೆ ಕೋಲಾಹಲವೆಂಬ ಹೆಸರು ಬಂದಿತೆಂಬ ಸಾಂಪ್ರದಾಯಿಕ ನಂಬಿಕೆಯಿದೆ. ರೇಣುಕೆಯ ನೆನಪಿಗಾಗಿ ಇಲ್ಲಿನ ಕೋಲಾರಮ್ಮನ ದೇವಾಲಯವನ್ನು ಕಟ್ಟಲಾಯಿತು. ಇದು ಇಲ್ಲಿಯ ಐತಿಹ್ಯ. ಈಗ ಕೋಲಾರ ಪಟ್ಟಣವಿರುವ ಜಾಗದಲ್ಲಿ ಕೋಲ ಎಂಬ ಗೊಲ್ಲ ನೇಗಿಲನಿಂದ ಭೂಮಿಯನ್ನು ಉಳುತ್ತಿರುವಾಗ ಬಚ್ಚಿಟ್ಟ ಹಣ ದೊರಕಿತೆಂದೂ ಚೋಳ ದೊರೆ ಉತ್ತಮ ಚೋಳ ಆ ಗೊಲ್ಲನನ್ನು ಕಂಚಿಗೆ ಬರುವಂತೆ ಹೇಳಿ ಕಳುಹಿಸಿದನೆಂದೂ ಆಗ ರೇಣುಕಾದೇವಿ ಕೋಲಾಹಲಮ್ಮನ ರೂಪದಲ್ಲಿ ಕಾಣಿಸಿಕೊಂಡು ಅವನಿಗೆ ಎಚ್ಚರಿಕೆ ಕೊಟ್ಟಿದ್ದರಿಂದ ದೊರೆ ಕೋಲಾರಮ್ಮನ ಹೆಸರಿನಲ್ಲಿ ದೇವಾಲಯವನ್ನೂ ಊರನ್ನೂ ಕಟ್ಟಿಸಿದನೆಂದೂ ಇನ್ನೊಂದು ಕಥೆ ಇದೆ. ಕೋಲನ ನೇಗಿಲು (ಹಲ) ಎಂಬುದರಿಂದ ಕೋಲಾಹಲ (ಕೋಲಾರ) ಬಂದಿರಬೇಕೆಂಬ ಊಹೆಯೂ ಇದೆ.

ಕ್ರಿ. ಶ. ನಾಲ್ಕನೇಯ ಶತಮಾನದಿಂದಲೂ ಈ ಊರು ಅಸ್ತಿತ್ವದಲ್ಲಿದ್ದಿರಬೇಕು. ತಲಕಾಡಿನ ಗಂಗ ವಂಶದ ಅರಸರು ಮೂಲತಃ ಕೋಲಾರದವರಾಗಿದ್ದು ತಮ್ಮನ್ನು ಕೋಳಾಲ ಅಥವಾ ಕುವಲಾಲ ಪುರವರಾಧೀಶ್ವರರೆಂದು ಕರೆದುಕೊಂಡಿದ್ದಾರೆ. ತಲಕಾಡಿಗೆ ಮುಂಚೆ ಕೋಲಾರ ಅವರ ರಾಜಧಾನಿಯಾಗಿತ್ತು. ಇಲ್ಲಿ ಚೋಳ, ಹೊಯ್ಸಳ, ವಿಜಯನಗರ ಮತ್ತು ಪಾಳೆಯಗಾರರ ಕಾಲದ ಶಾಸನಗಳು ದೊರಕಿವೆ. ಆ ಕಾಲಗಳಲ್ಲೂ ಇದೊಂದು ಮುಖ್ಯ ಪಟ್ಟಣವಾಗಿ ಮೆರೆದಿತ್ತು. ಕ್ರಿ.ಶ. ೧೫ನೇಯ ಶತಮಾನದಲ್ಲಿ ತಿಮ್ಮೇಗೌಡನೆಂಬ ಪಾಳೆಯಗಾರನ ವಶದಲ್ಲಿತ್ತು. ಆತ ಇಲ್ಲಿನ ಕೋಟೆಯನ್ನು ರಿಪೇರಿ ಮಾಡಿಸಿದ. ೧೬೩೯ರಲ್ಲಿ ಬಿಜಾಪುರದ ಸರದಾರ ಷಾಜಿಯ ವಶಕ್ಕೆ ಬಂತು. ಇಪ್ಪತ್ತು ವರ್ಷಗಳ ಅನಂತರ ಈ ಊರು ಮುಗಲರ ವಶವಾಯಿತು. ೧೭೨೦ರಲ್ಲಿ ಹೈದರನ ತಂದೆ ಫತೆ ಮಹಮ್ಮದ್ ಶಿರಾ ಸುಬೇದಾರರ ಅಧೀನದಲ್ಲಿ ಇದರ ಫೌಜುದಾರನಾದ. ೧೭೬೧ರಲ್ಲಿ ಪಟ್ಟಣ ಹೈದರನ ಅಧೀನಕ್ಕೆ ಬಂತು. ೧೭೬೮ರಲ್ಲಿ ಬ್ರಿಟಿಷ್ ಸೇನಾನಿ ಕ್ಯಾಂಪ್‌ಬೆಲ್ ವಶಪಡಿಸಿಕೊಂಡಿದ್ದ. ೧೭೭೦ರಲ್ಲಿ ಮರಾಠ ಸರದಾರ ಮಧುರಾವ್‌ನ ಕೈಸೇರಿತು. ೧೭೯೧ರಲ್ಲಿ ಕಾರ್ನವಾಲಿಸ್ ಈ ಪ್ರದೇಶವನ್ನು ಗೆದ್ದನು. ೧೭೯೨ರಲ್ಲಿ ಸಂಧಿಯ ಪ್ರಕಾರ ಮೈಸೂರು ಸಂಸ್ಥಾನಕ್ಕೆ ಸೇರಿತು. ೧೮೦೧ರಲ್ಲಿ ತಾನು ನೋಡಿದಾಗ ಇಲ್ಲಿ ಮಣ್ಣಿನ ಕೋಟೆ ಮತ್ತು ಸುತ್ತಣ ಕಂದಕ ಸುಸ್ಥಿತಿಯಲ್ಲಿತ್ತೆಂದು ಕರ್ನಲ್ ಮೆಕೆಂಜ್ಜಿ ಎಂಬ ಬ್ರಿಟಿಷ್ ಅಧಿಕಾರಿ ವರ್ಣಿಸಿದ್ದಾನೆ. ೧೯ನೇಯ ಶತಮಾನದ ಉತ್ತರಭಾಗದಲ್ಲಿ ಕೋಟೆಯನ್ನು ನೆಲಸಮ ಮಾಡಿ ಕಂದಕವನ್ನು ಮುಚ್ಚಲಾಯಿತು. ಕೋಲಾರದ ಪಶ್ಚಿಮಕ್ಕೆ ಕೋಲಾರ ಬೆಟ್ಟಗಳಿವೆ. ನಗರದ ಹಿಂಭಾಗದಲ್ಲಿರುವ ಈ ಬೆಟ್ಟಗಳಲ್ಲಿರುವುದೇ **'ಅಂತರಗಂಗೆ'** ಎಂಬ ಸುಂದರ ಆಹ್ಲಾದಕರವಾದ ತಾಣವಾಗಿದೆ. ಈ ಬೆಟ್ಟವು ದೂರದಿಂದ ವೀಕ್ಷಿಸಿದಾಗ ಕಲ್ಲು ಗುಂಡುಗಳಿಂದ ತುಂಬಿರುವ ಒಣಹವೆಯನ್ನು ಹೊಂದಿರುವ ಬರಡು ಪ್ರದೇಶವೆಂಬ ಕಲ್ಪನೆ ಬರುತ್ತದೆ. ಅಂತರಗಂಗೆ ಗಿರಿಶ್ರೇಣಿಗೆ 'ಶತಶೃಂಗ ಪರ್ವತ'ವೆಂದೂ ಕರೆಯಲಾಗುತ್ತದೆ. ಸಮುದ್ರ ಮಟ್ಟದಿಂದ ೪೦೨೬ ಅಡಿಗಳಷ್ಟು ಎತ್ತರದಲ್ಲಿರುವ ಪೂರ್ವಘಟ್ಟಗಳಿಗೆ ಸೇರಿದ ಈ ಬೆಟ್ಟಸಾಲಿನಲ್ಲಿ ಇತಿಹಾಸಪೂರ್ವಯುಗದ ಕುರುಹುಗಳು ಪತ್ತೆಯಾಗಿವೆ. ಅಂತರಗಂಗೆಯಲ್ಲಿ ಮುಚುಕುಂದ ಆಶ್ರಮವಿದ್ದು, ಮುಚುಕುಂದ ಮಹಾಮುನಿಗಳು ಈ ದೇವಾಲಯಕ್ಕೆ ಸದಾ ಬಂದು ಪೂಜೆ ಸಲ್ಲಿಸುತ್ತಿದ್ದರೆಂದು

ಪ್ರತೀತಿಯಿದೆ. ತೇರುಹಳ್ಳಿ, ಕುಪ್ಪಳ್ಳಿ, ಶಿವಗಂಗೆ, ಪಾಪರಾಜನಹಳ್ಳಿ, ಕೆಂಚೆಗೌಡನೂರು, ಹೊಸಳ್ಳಿ, ಹೂವಳ್ಳಿ (ಈಗ ಬೇಚಿರಾಕ್) ಎಂಬ ಏಳು ಗ್ರಾಮಗಳನ್ನು ಈ ಬೆಟ್ಟದ ಮೇಲ್ಭಾಗವು ಹೊಂದಿರುತ್ತದೆ. ಶತಶೃಂಗ ಗಿರಿಯ ಆಕರ್ಷಕ ತಾಣವೆಂದರೆ 'ಅಂತರಗಂಗೆ'. ಬೆಟ್ಟದಲ್ಲಿ ಗುಪ್ತಗಾಮಿನಿಯಾಗಿ ಹರಿದು ಬರುವ ಜಲ ಮೂಲವು ಉಬ್ಬು ಕೆತ್ತನೆಯಿಂದ ಕೂಡಿರುವ ವೆಂಕಟೇಶ್ವರನ ಪಾದಗಳ ಕೆಳಭಾಗದಲ್ಲಿ ಬಸವನ ಬಾಯಿಯ ಮುಖಾಂತರ ಸದಾ (ಕಠಿಣ ಬೇಸಗೆಯಲ್ಲಿಯೂ ಬತ್ತದೆ) ಹರಿದು ಬರುವ ಈ ಪವಿತ್ರ ಜಲಕ್ಕೆ 'ಅಂತರಗಂಗೆ' ಎಂದು ಕರೆದಿರುವುದು ಸೂಕ್ತವೇ ಆಗಿದೆ. ಸಾಹಸಿ ಯುವಕರಿಗೆ ಸ್ಥಳೀಯ ಸಂಸ್ಥೆಯಾದ ಅಗನಾಗ್ (AGNAG) ಈ ಗಿರಿ ಶ್ರೇಣಿಯಲ್ಲಿ ಶತಶೃಂಗ ಪರ್ವತವನ್ನು ಆಗಿಂದಾಗ್ಗೆ ಹತ್ತಿ ಪರ್ವತಾರೋಹಣ ತರಬೇತಿಯನ್ನು ನೀಡುವುದರ ಜೊತೆಗೆ ಹಲವು ಪ್ರಾಚ್ಯ ಅವಶೇಷಗಳನ್ನು ಪತ್ತೆಹಚ್ಚಿದೆ. ಪೂರ್ವೇತಿಹಾಸದ ಅವಶೇಷಗಳೂ ದೊರೆತಿವೆ. ಈ ಭವ್ಯ ಶಿಖರವನ್ನು ಸಮೀಪಿಸಿದರೆ ಸಿಂಬೆ ಸುತ್ತಿ ಹೆಡೆಯೆತ್ತಿದ ಸರ್ಪದಂತೆ ಕಾಣುತ್ತದೆ. ಸ್ಥಳೀಯರು ಈ ಬಂಡೆಯನ್ನು ಪೆಡಿಗುಂಡು (ಹೆಡೆಗುಂಡು) ಎಂದು ಕರೆಯುತ್ತಾರೆ. ಈ ಗಿರಿ ಶ್ರೇಣಿಯಲ್ಲಿ ಇಂಥ ಅನಾಮಿಕ ಬಂಡೆಗಳು ಅಥವಾ ಶಿಲೆಗಳು ಹೇರಳವಾಗಿವೆ. ಬ್ಯಾಲೆನ್ಸ್ ಬಂಡೆ, ಕಂಕಾಲಗುಹೆ, ಫ್ಲೈಯಿಂಗ್ ಸಾಸರ್, ಅಬ್ಬಿಗುಹೆ, ಬೆಳುದಿಂಗಳಬಂಡೆ, ರೋಶೊಮಾನ್‌ಗೇಟ್, ವಾಲಿಸುಗ್ರೀವ ಗುಹೆ, ದೀಪದಕಲ್ಲು, ಪಕ್ಷಿಧಾಮ, ಅಣ್ಣ–ತಮ್ಮ ಅಥವಾ ವಿಕ್ರಾಂತ್, ಶಿಲಾತಪಸ್ವಿನಿ, ಮೇಡನ್‌ಕೇವ್ ಮೊದಲಾದ ಹೆಸರುಗಳನ್ನು ಇಲ್ಲಿ ಪರ್ವತಾರೋಹಣ ಸಾಹಸ ಯಾತ್ರೆಯನ್ನು ಕೈಗೊಂಡ ಆಗನಾಗ್ ಗೆಳೆಯರ ಸಂಸ್ಥೆ ಇಟ್ಟಿರುವುದೆಂದು ಪ್ರೊ ಚಂದ್ರಶೇಖರ ನಂಗಲಿಯವರು ಅಭಿಪ್ರಾಯಪಡುತ್ತಾರೆ. ಇವರೇ ಮುಂದುವರೆದು, ಅಂತರಗಂಗೆಯನ್ನು 'ಸಸ್ಯಸುರಭಿ' ಎಂದು ಕರೆದು ಅಲ್ಲಿರುವ ವಿಶೇಷ ಸಸ್ಯಗಳ ಸಂಪತ್ತನ್ನು ದಾಖಲಿಸಿರುತ್ತಾರೆ. ಆದರೆ, ಸುಮಾರು ಬೆಟ್ಟವನ್ನು ಹತ್ತಿ ಹೋದರೆ ಮಧ್ಯಭಾಗದಲ್ಲಿ ಅಂತರಗಂಗೆಯ ತಾಣವು ಸಿಗುತ್ತದೆ. ಕೋಲಾರನಗರದ ನಿವಾಸಿಗರು ಬೆಟ್ಟವನ್ನು ಹತ್ತಿ ಅಂತರಗಂಗೆಯ ಸಿಹಿನೀರನ್ನು ಇಂದಿಗೂ ತಂದು ದಿನನಿತ್ಯ ಸೇವಿಸುವುದು ರೂಢಿಯಲ್ಲಿದೆ. ಬೆಟ್ಟಗಳಿಂದ ಹರಿಯುವ ಈ ಸಿಹಿನೀರಿನ ಪಾತ್ರವು ಬಂಡೆಗಳ ಸಂದಿನಿಂದ ಬಂದು ಬಸವನ ಮುಖದ ಮೂಲಕ ಚಿಕ್ಕ ಕಟ್ಟೆಗೆ (ಮೂರು ಅಡಿ ಆಳವುಳ್ಳ) ಬೀಳುತ್ತದೆ. ನಂತರ ಇಲ್ಲಿಂದ ತುಂಬುತ್ತಾ ಕೆಳಗಿರುವ ಇನ್ನೊಂದು (೫೦ ಅಡಿ ಉದ್ದ ಮತ್ತು ೩೫ ಅಡಿ ಅಗಲವಿರುವ ದೊಡ್ಡ ಪುಷ್ಕರಣಿಯೊಳಗೆ ಬಿದ್ದು ನಂತರ ಇಲ್ಲಿಂದ ಹರಿದು ಕೀಲುಕೋಟೆಯ ಕಡೆಗೆ ಪ್ರವೇಶಿಸುತ್ತದೆ. ಬಸವನ ಮುಖದ ಮೇಲ್ಭಾಗದಲ್ಲಿ ಒಂದು ಕಲ್ಲಿನಿಂದ ನಿರ್ಮಿತವಾಗಿರುವ ಬೃಂದಾವನವಿದ್ದು, ಅದರ ಸುತ್ತಲೂ ಮಂಟಪವಿದ್ದು, ಮೇಲ್ಭಾಗದಲ್ಲಿ ಗಾರೆ ಮತ್ತು ಇಟ್ಟಿಗೆಯ ಸಹಾಯದಿಂದ ನಿರ್ಮಿಸಿರುವ ಚೌಕಾಕಾರವಾದ ಶಿಖರವಿದೆ. ಇವುಗಳು ಪಾಳೆಯಗಾರರ ಕಾಲದ ರಚನೆಯಂದು ಪ್ರತೀತಿಯಿದೆ. ಕೆಳಗಿರುವ ದೊಡ್ಡ ಕಟ್ಟೆಯ (ಪುಷ್ಕರಿಣಿ) ಮಧ್ಯಭಾಗದಲ್ಲಿ ಕಲ್ಲಿನ ಮಂಟಪವಿದ್ದು, ಅದರೊಳಗೆ ಗಣೇಶನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಬೆಟ್ಟದ ತಪ್ಪಲಲ್ಲಿ ಕೋಲಾರ ಪ್ರಾಚೀನ ನಗರದ ವಸತಿಗಳು ಇದ್ದುವೆಂದು ಪ್ರತೀತಿಯಿದೆ. ಬೆಟ್ಟದ ಮೇಲ್ಭಾಗದ ಸಮತಟ್ಟಾದ ಪ್ರದೇಶದಲ್ಲಿ ಗ್ರಾಮೀಣ ಪ್ರದೇಶವಿದ್ದು, ವಸತಿಗೃಹಗಳನ್ನು ಇತ್ತೀಚೆಗೆ ಸ್ಥಾಪಿಸಿಕೊಳ್ಳಲಾಗಿದೆ. ಇಲ್ಲಿಗೆ ಹೋಗಲು ಬೆಟ್ಟದ ಇನ್ನೊಂದು ಮಾರ್ಗದಿಂದ ರಸ್ತೆ ಸೌಕರ್ಯವಿದೆ.

ಈ ಊರಿನಲ್ಲಿ ಕೋಲಾರಮ್ಮ ಸೋಮೇಶ್ವರ, ಅನೇಕ ಆಂಜನೇಯ, ವೆಂಕಟರಮಣ, ಕೋದಂಡರಾಮ, ಕನ್ನಿಕಾಪರಮೇಶ್ವರಿ, ವಿನಾಯಕ ಮತ್ತು ಶನಿದೇವರ ದೇವಾಲಯಗಳಿವೆ. ಕೋಲಾರಮ್ಮ ಊರಿನ ಗ್ರಾಮದೇವತೆಯಾಗಿದ್ದು ಹಾಗೂ ಮುಖ್ಯ ದೇವಾಲಯವಾಗಿದ್ದು, ಇಂದಿಗೂ ಪೂಜೆ ನಡೆಯುತ್ತಿರುವ ಪ್ರಮುಖ ದೇವಾಲಯವಾಗಿದೆ. ಈ ದೇವಾಲಯದ ಗರ್ಭಗೃಹದ ಮೇಲೆ ಶಿಖರವಿಲ್ಲ. ಮುಂದುಗಡೆ ಒಂದು ಮಹಾದ್ವಾರವಿದ್ದು, ಅದರ ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ. ಇಲ್ಲಿನ ಚೌಕ ಕಂಬಗಳ ಮೇಲೆ ಅನೇಕ ಶಿಲ್ಪಗಳಿವೆ. ಈ ಭಾಗ ವಿಜಯನಗರ ಕಾಲದ ವಾಸ್ತು ರಚನೆಯನ್ನು ವ್ಯಕ್ತಪಡಿಸುತ್ತದೆ. ಮುಂಭಾಗದಲ್ಲಿರುವ ಮಹಾದ್ವಾರದ ಮೇಲೆ ಗೋಪುರವಾಗಲಿ ಅಥವಾ ಅದಕ್ಕೆ ಹೊಂದಿಕೊಂಡಂತೆ ಪ್ರಾಕಾರವಾಗಲಿ ಇಲ್ಲ. ಮುಂದೆ ೧೪ ಕಂಬಗಳ ಮೇಲೆ ಎತ್ತರವಾದ ಮತ್ತೊಂದು ಮಹಾದ್ವಾರವಿದ್ದು, ಅದಕ್ಕೆ ಹೊಂದಿಕೊಂಡಂತೆ ಪ್ರಾಕಾರವಿದೆ. ಒಳಭಾಗದಲ್ಲಿ ನವರಂಗವಿದೆ. ಇದು ಪ್ರಾಯಶಃ ದಿಂಪಣ್ಣ ಒಡೆಯರ್ ಎಂಬ ಇಮ್ಮಡಿ ಹರಿಹರನ ಅಧಿಕಾರಿಯೊಬ್ಬನಿಂದ ನಿರ್ಮಿಸಲಾಗಿದೆ. ಪ್ರಾಕಾರದ ಒಳಗೆ ಮಧ್ಯದಲ್ಲಿ ಮುಖ್ಯ ದೇವಾಲಯವಿದೆ. ರಾಜರಾಜ ಚೋಳನು ಗಂಗವಾಡಿಯನ್ನು ತನ್ನ ಅಧಿಕಾರದ ೨೨ನೇ ವರ್ಷದಲ್ಲಿ ಕೋಲಾರವನ್ನು ಆಕ್ರಮಿಸಿಕೊಂಡ ಮೇಲೆ ಈ ದೇವಾಲಯದ ದಕ್ಷಿಣಭಾಗವನ್ನು ನಿರ್ಮಿಸಿರಬೇಕು. ಅಥವಾ ಆಗಲೇ ಇದ್ದ ದೇವಾಲಯಕ್ಕೆ ಅರೆಯೂರ ಅಥವಾ ಕೋಲಾರದ ಬಳಿ ಈಗ ಇರುವ ಅರೆಹಳ್ಳಿಯನ್ನು ದಾನ ನೀಡಿರಬೇಕು ಎಂದು

ದಾಖಲೆಗಳಿಂದ ವ್ಯಕ್ತವಾಗುತ್ತದೆ. ಈ ದೇವಾಲಯದ ಮೂಲ ಗರ್ಭಗೃಹದಲ್ಲಿ ಸಪ್ತಮಾತೃಕೆಯರ ಪೈಕಿ ಒಬ್ಬಳಾದ ಮಹಿಷಮರ್ಧಿನಿ ಅಥವಾ ಚಾಮುಂಡಿಯ ಶಿಲ್ಪವಿದ್ದು, ಇದು ಗಂಗರ ಕಾಲದ ಕೋಲಾರಮ್ಮನೆಂದು ಪ್ರತೀತಿಯಿದೆ. ವಿಜಯನಗರದ ರಾಜ ಅಚ್ಯುತರಾಯನ ಕೋಲರಮ್ಮ ದೇವಾಲಯದ ಹೊರಭಿತ್ತಿಯಲ್ಲಿರುವ ಕ್ರಿ.ಶ. ೧೫೩೭ರ ಶಾಸನವು ಮುಚುಕುಂದಾ ಶ್ರೀಮಕಾಲನೇಮೀದಹನ ಕೊಳಾಲಕ್ಕೆ ಇನ್ನೊಂದು ಹೆಸರಾದ ಕೋಳಾಲದ ಭಾರ್ಗವ ಪರಶುರಾಮನು ಪ್ರತಿಷ್ಠಾಪಿಸಿರುವ ಕೊಳಾಲದೇವಿಗೆ ಕೆಲವು ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಸಪ್ತ ಮಾತೃಕೆಯರ ಗಾರೆಶಿಲ್ಪಗಳ ಎಡಬದಿಗೆ ಗಾರೆಯ ವಿನಾಯಕ ಆಂಜನೇಯ, ದಕ್ಷಿಣಾಮೂರ್ತಿ (ಬಲಬದಿಗೆ) ಮತ್ತು ಗರುಡ ವಿಗ್ರಹಗಳಿವೆ. ಈ ದೇವಾಲಯದ ಉತ್ತರ ಭಾಗಗಳಾದ ಅರ್ಧಮಂಟಪ, ನವರಂಗಗಳು ರಾಜೇಂದ್ರ ಚೋಳನ ಕಾಲದಲ್ಲಿ ದುರಸ್ತಿಗೊಂಡಿವೆ. ನವರಂಗದಲ್ಲಿ ನಾಲ್ಕು ಅಷ್ಟಕೋನಾಕಾರವಾದ ಸ್ತಂಭಗಳಿವೆ. ಮಧ್ಯದ ಅಂಕಣದಲ್ಲಿ ಐದು ಅಡಿ ಎತ್ತರದ ಆಕರ್ಷಕ ಕಾಪಾಲಭೈರವಿಯ (ಚೇಳನಿಯಮ್ಮ) ಮೂರ್ತಿ ಇದೆ. ಈ ದೇವಿ ಚೇಳುಕಡಿತವನ್ನು ನಿವಾರಿಸುವಳೆಂಬ ನಂಬಿಕೆ ಇದೆ. ದಕ್ಷಿಣದ ಕಡೆಗೆ ನಾಲ್ಕು ಕುಬ್ಜ ಕಂಬಗಳಿರುವ ಇನ್ನೊಂದು ಗುಡಿ ಇದ್ದು, ಇದರಲ್ಲಿ ಸಪ್ತಮಾತೃಕೆಯರ ಸುದ್ದೆಮಣ್ಣಿನ ದೊಡ್ಡ ವಿಗ್ರಹಗಳೂ ಇವೆ. ಒಂದು ಅಭಿಪ್ರಾಯದ ಪ್ರಕಾರ ಈ ಮಣ್ಣಿನ ವಿಗ್ರಹಗಳು ಪಲ್ಲವರ ಶೈಲಿಯಲ್ಲಿದ್ದು, ಆಕಾಲದ ಶಿಲ್ಪಕಲಾ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ. ಅಲ್ಲದೇ ಕೋಲಾರಮ್ಮನ ಉತ್ಸವಮೂರ್ತಿಯೂ ಇದೆ. ಉತ್ತರಕ್ಕಿರುವ ನವರಂಗದ ಗೂಡುಗಳಲ್ಲಿ ಚಂಡಿಕೇಶ್ವರ ಮತ್ತು ಚೋಳರಾಜನ ವಿಗ್ರಹಗಳಿವೆ. ಈ ಭಾಗಗಳೆಲ್ಲವೂ ಬಹುಶಃ ಗಂಗರ ಕಾಲದಲ್ಲಿದ್ದಂತೆ ತೋರುತ್ತದೆ. ಇದರಿಂದ ದಕ್ಷಿಣಕ್ಕಿರುವ ಕಟ್ಟಡಗಳು ಚೋಳರ ಕಾಲದ ಸೇರ್ಪಡೆಗಳು. ದೇವಾಲಯದಲ್ಲಿ ರಾಜೇಂದ್ರ ಚೋಳ ಮೊದಲಾದ ಹಲವು ಚೋಳರಾಜರ ತಮಿಳು ಶಾಸನಗಳಿವೆ. ಕೋಲಾರಮ್ಮನ ದೇವಾಲಯದ ಹೊರಭಿತ್ತಿಯಲ್ಲಿರುವ ಕ್ರಿ.ಶ. ೧೦೫೭ರ ತಮಿಳು ಶಾಸನವು ರಾಜೇಂದ್ರ ಚೋಳನ ಆಳ್ವಿಕೆಯ ಅವಧಿಯಲ್ಲಿ ಶತ್ರುಗಳ ಸೈನ್ಯದೊಡನೆ ಹೋರಾಡಿ ಕೊಲ್ಲಾಪುರಮ್‌ನಲ್ಲಿ ವಿಜಯಸ್ತಂಭ ಸ್ಥಾಪಿಸಿದ್ದ ಬಗ್ಗೆ ದಾಖಲಿಸುತ್ತ ಕುಪ್ಪಂ ಯುದ್ಧದಲ್ಲಿ ಅಹವಮಲ್ಲನು ಪರಾಭವನಾಗಿ ಹಿಂದಿರುಗಿದ ಬಗ್ಗೆ ತಿಳಿಸುತ್ತದೆ. ಕ್ರಿ. ಶ. ೧೦೭೩ರ ತಮಿಳು ಶಾಸನವು ರಾಜೇಂದ್ರ ಚೋಳನು ಅಧಿಕಾರಕ್ಕೆ ಬಂದ ನಾಲ್ಕನೇ ವರ್ಷದ ಕಾಲದ್ದಾಗಿದ್ದು, ಆತನ ಪ್ರತಿನಿಧಿ ಅಮ್ಮಂಗೈ ಆಳ್ವಾರ್ ಎಂಬ ಅಧಿಕಾರಿಯು ನಿಗರಿಲಿ ಚೋಳ ಮಂಡಲಂ ವ್ಯಾಪ್ತಿಯಲ್ಲಿ ನೊಳಂಬಪಾಡಿಯ ಆಡಳಿತದಲ್ಲಿದ್ದ ಅಮ್ಮಂಗೈ ಆಳ್ವಾರ್ ತಿರುಮಡೈ ಪುಲ್ಲಿಪುರಮ್‌ನಲ್ಲಿದ್ದ ಈಶ್ವರ ಮಹಾದೇವರ್ ದೇವಾಲಯಕ್ಕೆ ನೀಡಿದ ಹಲವು ದಾನಗಳ ಬಗ್ಗೆ ದಾಖಲಿಸುತ್ತದೆ. ಮತ್ತು ಈ ದೇವಾಲಯಕ್ಕೆ ನೀಡಬೇಕಾದ ದವಸ ದಾನ್ಯಗಳನ್ನು ಈ ಗ್ರಾಮದ ರೈತರು ವಾರ್ಷಿಕವಾಗಿ ಅರುಮೋಳದೇವನ್ ಎಂಬ ಅಧಿಕಾರಿಯು ನಿಗದಿಪಡಿಸಿರುವ 'ಮಾರಕ್ಕಾಲ್' (ಒಂದು ಅಳತೆಯ ಮಾಪನ) ಅಳತೆಯಲ್ಲಿ ನೀಡಿ ದೇವಾಲಯದ ಭಂಡಾರವು ಖಾಲಿಯಾಗದಂತೆ ನೋಡಿಕೊಳ್ಳಬೇಕೆಂಬ ನಿರ್ಬಂಧಕ್ಕೆ ಒಳಪಡಿಸಿದ್ದ ವಿಷಯವನ್ನು ಈ ಶಾಸನದಲ್ಲಿ ದಾಖಲಿಸಲಾಗಿದೆ. ಇದೇ ದೇವಾಲಯದ ಒಳಬಾಗಿಲ ಎಡ ಗೋಡೆಯಲ್ಲಿರುವ ಶಾಸನವು ವಿಜಯನಗರದ ಕಾಲಕ್ಕೆ ಸೇರಿದ್ದು, ಕೋಳಾಲ (ಕೋಲಾರ) ನಾಡಪ್ರಭು ಮುತ್ತಣ್ಣಜೀಯರು ಪಟ್ಟಣಸ್ವಾಮಿ ಅಮರಾಂದಲಾಜೀಯರ್‌ನ ಮಗ ದೇವಪ್ಪಜೀಯರ್‌ಗೆ ಕೋಳಾಲದಲ್ಲಿರುವ ದೇವಿಯ ದೇವಾಲಯಕ್ಕೆ ದಿನನಿತ್ಯ ಕೈಂಕರ್ಯಗಳನ್ನು ಕೈಗೊಳ್ಳಲು ನೀಡಿದ ದಾನದ ಬಗ್ಗೆ ದಾಖಲಿಸುತ್ತದೆ. ಈ ದೇವಾಲಯವು ಕೇಂದ್ರ ಪುರಾತತ್ವ ಇಲಾಖೆಯ ವತಿಯಿಂದ ಸಂರಕ್ಷಿಸಲ್ಪಟ್ಟಿದೆ.

ಕೋಲಾರ ನಗರದಲ್ಲಿರುವ ಕೇಂದ್ರ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲಾಗಿರುವ ಸೋಮೇಶ್ವರ ದೇವಾಲಯ ಅತ್ಯಂತ ಸುಂದರ ವಾಸ್ತುಶಿಲ್ಪ ಸೌಂದರ್ಯವನ್ನು ಹೊಂದಿರುವ ದ್ರಾವಿಡ ಶೈಲಿಯ ವಿಜಯನಗರ ಪೂರ್ವ ಅಥವಾ ಚೋಳರ ಕಾಲದ ಉತ್ತಮ ಪ್ರತೀಕವಾಗಿದೆ. ದೇವಾಲಯದ ಎತ್ತರವಾದ ಪ್ರವೇಶದ್ವಾರದಲ್ಲಿರುವ ಎತ್ತರವಾದ ಗಾರೆ/ಮತ್ತು ಇಟ್ಟಿಗೆಯಿಂದ ನಿರ್ಮಿತವಾಗಿರುವ ರಾಯಗೋಪುರವಿದೆ. ಮುಖ್ಯ ದೇವಾಲಯದಲ್ಲಿ ಗರ್ಭಗೃಹ, ವಿಶಾಲವಾದ ಅರ್ಧಮಂಟಪ, ವಿಶಾಲವಾದ ನವರಂಗ ಹಾಗೂ ನೈರುತ್ಯದಲ್ಲಿ ವಿಶಾಲವಾದ ಮುಖಮಂಟಪಗಳನ್ನು ಹೊಂದಿದೆ. ಈ ದೇವಾಲಯದ ನಿರ್ಮಾಣದ ಬಗ್ಗೆ ಯಾವುದೇ ಶಾಸನಗಳೂ ಲಭ್ಯವಿಲ್ಲ. ಗರ್ಭಗೃಹವು ಚೌರಸವಾಗಿದ್ದು, ಹೆಚ್ಚು ಎತ್ತರವಿಲ್ಲದ ಪಾಣಿಪೀಠದ ಮೇಲೆ ಬಾಣಲಿಂಗವಿದೆ. ಇದರ ಮುಂಭಾಗದ ನವರಂಗದಲ್ಲಿರುವ ನಾಲ್ಕು ಕೇಂದ್ರ ಸ್ತಂಭಗಳು ಚೌಕಾಕಾರವಾಗಿದ್ದು, ಶೋಡಷ ಮುಖಗಳಿರುವ ಮಧ್ಯಭಾಗಗಳನ್ನು ಹೊಂದಿವೆ. ಇವುಗಳ ಮೇಲ್ಭಾಗದಲ್ಲಿ ವೀರಭದ್ರ, ಋಷಿಗಳು, ಮಾರ್ಕಂಡೇಯ, ವಿವಿಧ ಅವತಾರಗಳ ಶಿವ, ವ್ಯಾಘ್ರಪಾದ, ಕೋದಂಡರಾಮ, ನಾಟ್ಯಗಣಪತಿ, ಸೂರ್ಯನಾರಾಯಣ ಮೊದಲಾದ ಆಕರ್ಷಕ ಉಬ್ಬು ಶಿಲ್ಪಗಳನ್ನು ಹೊಂದಿವೆ.

ನವರಂಗದ ಛಾವಣಿಯು ಆರ್ಕಾಟ್ ಶ್ರೀನಿವಾಸಾಚಾರ್ಯರ ಕಾಲದಲ್ಲಿ ನವೀಕರಿಸಲಾಗಿದೆ ಎಂದು ಪುರಾತತ್ವ ಇಲಾಖೆಯ ವರದಿಯಿಂದ ವ್ಯಕ್ತವಾಗುತ್ತದೆ. ಆದರೆ, ಈ ನವೀಕರಣದ ಪರಿಣಾಮವಾಗಿ ಮೂಲತಃ ಕೆತ್ತಲಾಗಿದ್ದ ಹೂವು ಮತ್ತು ಬಳ್ಳಿಗಳ ಅಲಂಕಾರ ಹಾಗೂ ಅಷ್ಠದಿಕ್ಪಾಲಕರಿಂದ ಸುತ್ತುವರೆಯಲ್ಪಟ್ಟ ಸುಂದರ ಉಮಾಮಹೇಶ್ವರರ ಉಬ್ಬು ಶಿಲ್ಪಗಳ ನೈಜತೆಗೆ ಯಾವುದೇ ಕುಂದು ಉಂಟಾಗಿಲ್ಲ. ನವರಂಗದಲ್ಲಿ ಗಣೇಶ, ವೀರಭದ್ರ, ಶೈವ ದ್ವಾರಪಾಲಕರು, ನಾಗ ಮತ್ತು ನವಿಲಿನ ಮೇಲೆ ಕುಳಿತ ಷಣ್ಮುಖರ ಸುಂದರ ಶಿಲ್ಪಗಳನ್ನು ಇಡಲಾಗಿದೆ. ನವರಂಗದ್ವಾರಬಂಧವು ಹೂ ಬಳ್ಳಿಗಳ ಕೆತ್ತನೆಗಳಿಂದ ಕೂಡಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಸುಂದರ ಉಬ್ಬು ಶಿಲ್ಪವನ್ನು ಹೊಂದಿದೆ. ದ್ವಾರಬಂಧದ ಹೊರಭಾಗದಲ್ಲಿ ಯಕ್ಷರ ಶಿಲ್ಪಗಳಿವೆ. ಅರ್ಧಮಂಟಪದ ದ್ವಾರಬಂಧವು ವಿಜಯನಗರ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಆದರೆ, ಈ ದ್ವಾರದ ಇಕ್ಕೆಲಗಳಲ್ಲಿ ಜಾಲಂದ್ರಗಳಿರುವುದರಿಂದ ಇದರ ಪ್ರಾಚೀನತೆಯು ವಿಜಯನಗರ ಪೂರ್ವ ಅಥವಾ ಚೋಳರ ರಚನೆ ಇರಬೇಕೆಂಬ ಅನುಮಾನವಿದೆ. ಅರ್ಧಮಂಟಪದ ಮಧ್ಯಭಾಗದಲ್ಲಿರುವ ಏಕಶಿಲಾ ನಂದಿಯು ವಿಜಯನಗರದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಹಾಗೆಯೇ ಮಹಾದ್ವಾರದಲ್ಲಿರುವ ಕೆತ್ತನೆಗಳೂ ಸಹ ವಿಜಯನಗರದ ಶೈಲಿಯನ್ನೇ ಹೋಲುತ್ತವೆ. ಮುಖಮಂಟಪದಲ್ಲಿರುವ ಚೌಕಾಕಾರವಾದ ಸ್ತಂಭಗಳು ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದೆ. ಇದರ ಪಕ್ಕದಲ್ಲಿರುವ ಕಲ್ಯಾಣಮಂಟಪವು ಅಥವಾ ವಸಂತೋತ್ಸವ ಮಂಟಪವೂ ಒಂದು ಸುಂದರವಾದ ವಾಸ್ತುರಚನೆಯಾಗಿದೆ. ಈ ಮಂಟಪದ ಎರಡು ಸ್ತಂಭಗಳಲ್ಲಿ ಆಕರ್ಷಕವಾದ ವೇಣುಗೋಪಾಲ ಉಬ್ಬು ಶಿಲ್ಪಗಳಿವೆ. ಕೋಲಾರದಲ್ಲಿ ಒಟ್ಟು ಎಂಟು ಆಂಜನೇಯ ದೇವಾಲಯಗಳಿವೆ. ಅವುಗಳೆಂದರೆ ಕೋಟೆ ಬಾಗಿಲ ಆಂಜನೇಯ, ವಕ್ಕಲೇರಿ ಆಂಜನೇಯ, ಬಸ್‌ನಿಲ್ದಾಣದ ಬಳಿ ಇರುವ ಆಂಜನೇಯ, ಬ್ರಾಹ್ಮಣರ ಬೀದಿಯಲ್ಲಿರುವ ಚಿಕ್ಕ ಆಂಜನೇಯ, ಅಮ್ಮವಾರಪೇಟೆ ಆಂಜನೇಯ ದೊಡ್ಡ ಆಂಜನೇಯ (ದೇಶಮುಖಿ ಆಂಜನೇಯ) ಮತ್ತು ಗಾಣಿಗರಪೇಟೆಯಲ್ಲಿರುವ ಆಂಜನೇಯ. ಕೋಟೆ ಆಂಜನೇಯನ ಮೂಲ ವಿಗ್ರಹವನ್ನು ರಾಘವೇಂದ್ರಸ್ವಾಮಿ ಮಠದ ಪ್ರಸಿದ್ಧ ಯತಿಗಳಾದ ವಿಜಯೀಂದ್ರತೀರ್ಥರು ಪ್ರತಿಷ್ಠಾಪಿಸಿದರೆಂದು ಪ್ರತೀತಿಯಿದೆ. ದೇಶಮುಖಿ ಆಂಜನೇಯ ದೇವಾಲಯದ ಮುಖಮಂಟಪದ ಮಾಳಿಗೆಗೆ ಹಾಸಿರುವ ಕ್ರಿ.ಶ.೧೫೦೦ರ ಶಾಸನವು ಅಸ್ಪಷ್ಟವಾಗಿದ್ದು, ರಾಮಚಂದ್ರನೆಂಬ ಅಧಿಕಾರಿಯು ವಿಠಲೇಶ್ವರ ದೇವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ದೊಡ್ಡಪೇಟೆಯಲ್ಲಿರುವ ವೆಂಕಟರಮಣ ದೇವಾಲಯವು ವಿಜಯನಗರದ ಕಾಲದಲ್ಲಿ ನಿರ್ಮಿತವಾಗಿದೆ ಎಂಬ ಅಭಿಪ್ರಾಯವಿದ್ದು, ಒಂದು ಪುರಾತನ ದೇವಾಲಯವಾಗಿದೆ. ವೆಂಕಟರಮಣ ದೇವಾಲಯದ ಪಕ್ಕದಲ್ಲಿ ನಂಜುಡೇಶ್ವರ ದೇವಾಲಯವಿದೆ. ಈ ಎರಡೂ ದೇವಾಲಯಗಳಿಗೆ ಎದಿರು ಭಾಗದಲ್ಲಿ ನಾಗರಕುಂಟೆ ಎಂಬ ಪ್ರಾಚೀನ ಪುಷ್ಕರಣಿ ಇದ್ದು ಈಗ ಬತ್ತಿಹೋಗಿದೆ. ಹಳೆಯ ಊರಿನ ಭಾಗದಲ್ಲಿ ಕಾಶಿವಿಶ್ವೇಶ್ವರನ ದೇವಾಲಯವಿದೆ. ಕೋಲಾರ ನಗರದಲ್ಲಿ ಇತ್ತೀಚೆಗೆ ಜೈನಮಂದಿರ, ಶಿರಡಿ ಸಾಯಿಬಾಬಾ ಹಾಗೂ ಸತ್ಯಸಾಯಿಬಾಬಾ ಮಂದಿರಗಳು ನಿರ್ಮಾಣಗೊಂಡಿವೆ ಊರಿನಲ್ಲಿ ಧರ್ಮರಾಯನ ಎರಡು ದೇವಾಲಯವಿದ್ದು, ವಾರ್ಷಿಕವಾಗಿ ಚೈತ್ರ ಶುದ್ಧ ಪೂರ್ಣಿಮೆಗೆ ಭಾರಿ ಪ್ರಮಾಣದ ಕರಗ ಉತ್ಸವು ಜರುಗುತ್ತದೆ. ಇಲ್ಲಿರುವ ಇತರೆ ದೇವಾಲಯಗಳೆಂದರೇ ಕನ್ನಿಕಾಪರಮೇಶ್ವರಿ, ವಿನಾಯಕ ದೇವಾಲಯಗಳು (ಎಂಟು), ಗಂಗಮ್ಮನ ದೇವಾಲಯಗಳು, ಕಾರಿಪಾಳ್ಯದಲ್ಲಿರುವ ವೇಣುಗೋಪಾಲ, ಕುಂಭೀಶ್ವರ, ಬಸವೇಶ್ವರ, ಬಯಲು ಬಸವೇಶ್ವರ, ಕಾಳಿಕಾಂಬ ಕಮಟೇಶ್ವರ ಮೊದಲಾದುವುಗಳು. ಕಾರಿಪಾಳ್ಯದ ವೇಣುಗೋಪಾಲ ಹಾಗೂ ಕುಂಭೀಶ್ವರ ದೇವಾಲಯಗಳು ಸಾಕಷ್ಟು ಪ್ರಾಚೀನ ವಾಸ್ತುರಚನೆಗಳನ್ನು ಹೊಂದಿವೆ. ಕೋಲಾರದಲ್ಲಿ ಇತ್ತೀಚೆಗೆ ನಿರ್ಮಿಸಲ್ಪಟ್ಟ ರಾಘವೇಂದ್ರಸ್ವಾಮಿ ಮಠ ಮತ್ತು ಶೃಂಗೇರಿ ಶಂಕರ ಮಠಗಳೂ ಇದ್ದು, ಸಾಕಷ್ಟು ಸಂಖ್ಯೆಯಲ್ಲಿ ಅನುಯಾಯಿಗಳಿರುತ್ತಾರೆ. ೧೯೭೩ರಲ್ಲಿ ನಗರದ ಉದ್ಯಾನವನದಲ್ಲಿ ಸರ್ವಜ್ಞನ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

ಕೋಲಾರದ ಪ್ರಮುಖ ಮುಸಲ್ಮಾನರ ಸ್ಮಾರಕವೆಂದರೇ 'ಮಕ್‌ಬಾರಾ', ಮಕಬಾರಾದಲ್ಲಿ ಹೈದರ್‌ಅಲಿ ಕುಟುಂಬದ ಸಂಬಂಧಿಕರುಗಳ ಸಮಾದಿಗಳಿವೆ. ಇಲ್ಲಿ ವಾರ್ಷಿಕವಾಗಿ ಹೈದರ್ ಅಲಿಯ ತಂದೆ, ತಾಯಿ ಮತ್ತು ಆತನ ಮೊದಲ ಮಲತಾಯಿಗಳ ಗೌರವಾರ್ಥ ಮೂರು ಉರುಸ್‌ಗಳನ್ನು ನಡೆಸಲಾಗುತ್ತದೆ. ಮಕ್‌ಬಾರಾದ ಆವರಣದಲ್ಲಿ ಎರಡು ಬೃಹದಾಕಾರವಾದ ಕಟ್ಟಡಗಳಿವೆ. ಕೋಲಾರ ನಗರದಲ್ಲಿ ಹಲವಾರು ಮಸೀದಿಗಳಿದ್ದು, ಅವುಗಳಲ್ಲಿ ಮುಖ್ಯವಾದುವೆಂದರೇ ಸೈಯದಾನ ಬಿ ದರ್ಗಾ ಷಾಹಿ ಮಸೀದಿ, ಮತ್ತು ಲತೀಫಾ ಬಾನುಮಸೀದಿ, ನುಮತ್ ಬಿ ಮಸೀದಿ, ಮೊಹಮದ್ ನೂರಿ ಮಸೀದಿ, ಶಾಬಾ ಷಾ ಕಲಂದರ್ ಮಸೀದಿ, ಶರಿಯಮ್ ಮಸೀದಿ, ಬಾರ್‌ಲೈನ್ ಮಸೀದಿ, ಬಿಲಾಲ್ ಮಸೀದಿ ಮತ್ತು ಕೋಟೆ ಮಸೀದಿ ಕೋಲಾರದಲ್ಲಿ ಒಂದು ರೋಮನ್ ಕ್ಯಾಥೋಲಿಕ್ ಚರ್ಚ್ ಇದ್ದು, ಇಂಡೋ-ಯೂರೋಪಿಯನ್ ಶೈಲಿಯಲ್ಲಿ ನಿರ್ಮಿತವಾಗಿದೆ. ರೋಮನ್

ಕ್ಯಾಥೋಲಿಕ್ ಅಥವಾ ಸೈಂಟ್ ಮೇರಿ ಚರ್ಚನ್ನು ೧೮೬೫ರಲ್ಲಿ ನಿರ್ಮಿಸಲಾಯಿತು. ಆದರೆ, ಹಳೆಯ ಕಟ್ಟಡವು ಶಿಥಿಲವಾಗಿದ್ದ ಕಾರಣ ೨೧-೧೨-೧೯೬೫ರಲ್ಲಿ ಈಗಿರುವ ಯೂರೋಪಿಯನ್ ವಾಸ್ತುಶೈಲಿಯ ಅನುಕರಣೆಯ ಕಟ್ಟಡವನ್ನು ನಿರ್ಮಿಸಿ ಉದ್ಘಾಟಿಸಲಾಗಿದೆ. ಈ ಕಟ್ಟಡಕ್ಕೆ **ಸೆಂಟಿನೆರಿ** ಕಟ್ಟಡವೆಂದೂ ಕರೆಯಲಾಗುತ್ತದೆ. ಇತ್ತೀಚೆಗೆ ಈ ಚರ್ಚ್ ಸರ್ಕಲ್‌ನ ಮೂಲೆಯಲ್ಲಿ ಏಸುಕ್ರಿಸ್ತ ಮತ್ತು ಸೈಂಟ್ ಮೇರಿಯ ಆಧುನಿಕ ಶೈಲಿಯ ಗಾರೆಯ ಶಿಲ್ಪಗಳನ್ನು ಸ್ಥಾಪಿಸಲಾಗಿದೆ. ಇದರ ಸಮೀಪದಲ್ಲೆ ಅನತಿ ದೂರದಲ್ಲಿ ಹೊಸ ಮೆಥಾಡಿಸ್ಟ್ ಚರ್ಚನ್ನು ನಿರ್ಮಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಜರ್ಮನಿಯ ಹನ್ನಾ ಲೂಯಿ ಅನ್ಸ್‌ಟಲಿ ಎಂಬ ಮಹಿಳೆ ಪ್ರಥಮ ಕ್ರೈಸ್ತ ಸಾಂಸ್ಥಿಕ ಪ್ರತಿನಿಧಿಯಾಗಿ ೧೮೭೭ರಲ್ಲಿ ನೆಲೆಬಿಟ್ಟ ವಿಚಾರವು ಚರ್ಚಿನ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಆ ಸಮಯದಲ್ಲಿ ಕೋಲಾರ ಜಿಲ್ಲೆಯನ್ನು ಆವರಿಸಿದ್ದ ಧಾತು ಈಶ್ವರ ಕ್ಷಾಮವು ತೀವ್ರವಾದ ಸಾವುನೋವುಗಳನ್ನುಂಟು ಮಾಡಿತ್ತು. ಜಿಲ್ಲೆಯ ಅನಾಥ ಮಕ್ಕಳ ಬವಣೆಗೆ ಮರುಗಿದ ಈ ಕ್ರೈಸ್ತ ಮಹಿಳೆಯು ಅನಾಥ ಆಶ್ರಮವನ್ನು ಪ್ರಪ್ರಥಮ ಬಾರಿಗೆ ಆರಂಭಿಸಿ ಅತ್ಯಂತ ಶ್ಲಾಘನೀಯ ಸಾಮಾಜಿಕ ಸೇವೆಗೆ ತೊಡಗಿದರು. ಅನಂತರ ಇದೇ ಆವರಣದಲ್ಲಿ ರೆವೆರೆಂಡ್ ಡಬ್ಲು. ಎಚ್. ಹೊಲಿಸ್ಟರ್ ಎಂಬ ಪಾದ್ರಿಯು **ಮೆಥಾಡಿಸ್ಟ್ ಚರ್ಚ್** ಅನ್ನು ೧೯೦೨ರಲ್ಲಿ ಆರಂಭಿಸಿದರೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಈಗಿರುವ ಹೊಸ ಕಟ್ಟಡವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತದೆ. ಈ ಮೇಥಾಡಿಸ್ಟ್ ಚರ್ಚ್ ಪ್ರಾಟೆಸ್ಟೆಂಟ್ ಪಂಥೀಯರ ಶತಮಾನಕ್ಕೂ ಮೀರಿದ ಧಾರ್ಮಿಕ ಚಟುವಟಿಕೆಗಳ ಜೀವಂತ ಪ್ರತೀಕವಾಗಿದೆ. **ವಾನರಾಶಿ:** ಕೋಲಾರ ತಾಲೂಕಿನಲ್ಲಿರುವ ಈ ಗ್ರಾಮ, ಶ್ರೀನಿವಾಸಪುರ ರಸ್ತೆಯಲ್ಲಿ, ಮುದುವಾಡಿಗೆ ಸಮೀಪದಲ್ಲಿದ್ದು, ಅಲ್ಲಿ ನಡೆಯುವ ಈರ ಬಸಪ್ಪನ ಜಾತ್ರೆಯಿಂದಾಗಿ ಮಹತ್ವಪಡೆದಿದೆ. ಯುಗಾದಿಯ ನಂತರ ನಡೆಯುವ ಈ ಜಾತ್ರೆ ಸಂದರ್ಭದಲ್ಲಿ ಆಂಧ್ರ-ತಮಿಳುನಾಡುಗಳ ಕಡೆಯಿಂದ ಬರುವ ಉತ್ತಮ ದನಗಳು ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತವೆ. ಈರಬಸಪ್ಪನನ್ನು ಹಾಡು ಲಾವಣಿ ಹಾಗೂ ದೀಪ ನೈವೇದ್ಯಗಳ ಮೂಲಕ ಆ ಸಂದರ್ಭದಲ್ಲಿ ಪೂಜಿಸಲಾಗುತ್ತದೆ. ವೀರಬಸಪ್ಪನ ಗುಡಿಯಲ್ಲಿ ಆಳೆತ್ತರದ ವೀರನ ಶಿಲ್ಪವಿದ್ದು, ಮುಂದೆ ದೀಪಸ್ತಂಭವಿದೆ. ವೀರಕಂಪಣರಾಯನ ಕಾಲದ ಶಾಸನದಲ್ಲಿ ಹೊದೆನಾಡಿನ ವಾನರಾಸಿಯನ್ನು ಸರ್ವಮಾನ್ಯ ನೀಡಿರುವ ಪ್ರಸ್ತಾಪವಿದ್ದು, ಹಿಂದೆ ಇಲ್ಲಿ ಹಲವಾರು ದೇವಾಲಯಗಳಿದ್ದಿರಬಹುದಾದರೂ ಇಂದು ಕೇವಲ ಅವಶೇಷಗಳನ್ನಷ್ಟೇ ಇಲ್ಲಿ ಕಾಣಬಹುದಾಗಿದೆ

**ಕೋಲಾರ ಚಿನ್ನದಗಣಿ ಪ್ರದೇಶ: (ಕೆ.ಜಿ.ಎಫ್)** ಬಂಗಾರಪೇಟೆ ತಾಲೂಕು: ಜನಸಂಖ್ಯೆ: ೧,೫೭,೦೮೪*. ಕೋಲಾರ ಚಿನ್ನದ ಗಣಿ ಪ್ರದೇಶವು ಬಂಗಾರಪೇಟೆ ತಾಲೂಕಿನಲ್ಲಿದ್ದು, ಈಗ ರಾಬರ್ಟ್‌ಸನ್ ಪೇಟೆಯ ನಗರಸಭೆಯ ಭಾಗವಾಗಿದ್ದು ಬಂಗಾರಪೇಟೆಯಿಂದ ದಕ್ಷಿಣಕ್ಕಿದೆ. ಕೋಲಾರದಿಂದ ಸುಮಾರು ೩೦ ಕಿ.ಮೀ ಬೆಂಗಳೂರಿನಿಂದ ೯೬ಕಿ.ಮೀ ದೂರದಲ್ಲಿದೆ. ಬಂಗಾರ ಗಣಿಗಾರಿಕೆ ಉದ್ಯಮದಿಂದಾಗಿ ಸೃಷ್ಟಿಯಾದ ಪಟ್ಟಣವಿದಾಗಿದೆ. ಒಂದೇ ಸಮನೆ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಇದೊಂದು ಕಾರ್ಮಿಕರು ದೊಡ್ಡ ನೆಲೆಯಾಗಿದೆ. ೧೯೬೪ರಲ್ಲಿ ಆರಂಭವಾದ ರಾಬರ್ಟ್‌ಸನ್‌ಪೇಟೆ ಪುರಸಭೆಯು ರೂಪುಗೊಳ್ಳುವುದಕ್ಕಿಂತ ಮುಂಚೆ ಈ ಪಟ್ಟಣದಲ್ಲಿ ರಾಬರ್ಟ್‌ಸನ್‌ಪೇಟೆ, ಅಂಡರ್‌ಸನ್‌ಪೇಟೆ, ಸೊಣ್ಣೆ ಕೊಪ್ಪ, ನಾಚಕಪಲ್ಲಿ, ಉರಿಗಾಂ ಒಂದೆಡೆ, ಇನ್ನೊಂದೆಡೆ ಕಾರ್ಮಿಕ ವಸಾಹತುಗಳಾದ ಪಂಡಾರಂ ಲೈನ್ಸ್, ಕೃಷ್ಣಗಿರಿ ಲೈನ್ಸ್, ಸ್ಯಾನಿಟರಿ ಬೋರ್ಡ್‌ರೂರಲ್ ಪ್ರದೇಶ ಮುಂತಾದವನ್ನು ಒಳಗೊಂಡಿದ್ದವು. ಕೆ.ಜಿ.ಎಫ್. ನಿಂದ ರಾಬರ್ಟ್‌ಸನ್‌ಪೇಟೆ ಪ್ರತ್ಯೇಕಗೊಂಡ ಮೇಲೆ ಇದಕ್ಕೆ ಪ್ರತ್ಯೇಕವಾದ ಪುರಸಭೆಯನ್ನು ನೀಡಲಾಯಿತು. ಉರಗಾಂ (ಉರಿಗಾಂ) ಒಂದು ಪ್ರತ್ಯೇಕವಾದ ಗ್ರಾಮವಾಗಿದೆ, ಹೊಯ್ಸಳ ರಾಮನಾಥನ ೧೩ನೇಯ ಶತಮಾನದ ತಮಿಳು ಶಾಸನದಲ್ಲಿ ಇದನ್ನು 'ಉರಿಗೈಯಂ' ಎಂದು ಉಲ್ಲೇಖಿಸಲಾಗಿದೆ. ೧೮೭೫ರಲ್ಲಿ ಚಿನ್ನ ತೆಗೆಯುವ ಮೊದಲ ಕಾರ್ಯ ಇಲ್ಲಿ ಆರಂಭವಾಯಿತು. ೧೮೮೫ರಿಂದೀಚೆಗೆ ಚಿನ್ನದ ಗಣಿ ಉದ್ಯಮದಿಂದಾಗಿ ಹೊಸ ಪಟ್ಟಣ ಬೆಳೆದು ರಾಬರ್ಟ್‌ಸನ್‌ಪೇಟೆಯೆಂದು ಈಗ ಕರೆಯಲಾಗುತ್ತದೆ. ಈಗ ಪಟ್ಟಣವಾಗಿ ಬೆಳೆದಿದೆ. ಇದೀಗ ರಾಬರ್ಟ್‌ಸನ್‌ಪೇಟೆ ನಗರಸಭೆ ವ್ಯಾಪ್ತಿಗೆ ಒಳಪಡುತ್ತದೆ. ಇದರ ಸನಿಹದಲ್ಲಿ ಕೇಂದ್ರ ಸರ್ಕಾರವು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್‌ನ್ನು ಆರಂಭಿಸಿದೆ. ರಕ್ಷಣಾ ಇಲಾಖೆಯ ಕಕ್ಷೆಯಲ್ಲಿರುವ ಈ ಸಂಸ್ಥೆ, ಕ್ರಾಲರ್ ಟ್ರಾಕ್ಟರ್, ರೈಲ್ವೆ ಕೋಚು ಮತ್ತಿತರ ಬೃಹತ್ ಮಣ್ಣೆತ್ತುವ ಯಂತ್ರಗಳನ್ನು ತಯಾರಿಸುತ್ತಿದೆ. ಈ ಊರಿನಲ್ಲಿರುವ ಪ್ರಮುಖ ದೇವಾಲಯವೆಂದರೇ ಪ್ರಸನ್ನ ಲಕ್ಷ್ಮಿ-ವೆಂಕಟೇಶ್ವರ. ಇದು ರಾಬರ್ಟ್‌ಸನ್ ಪೇಟೆಯ ಭಾಗದಲ್ಲಿದ್ದು, ಸುಮಾರು ನೂರು ವರ್ಷಗಳ ಹಿಂದೆ ನಿರ್ಮಿತವಾಗಿದ್ದು ಗರ್ಭಗೃಹ, ಅರ್ಧಮಂಟಪ,

* ಈ ಜನಸಂಖ್ಯೆಯಲ್ಲಿ ಕೆ.ಜಿ.ಎಫ್, ಬೆಮೆಲ್ ನಗರ ಹಾಗೂ ಮಂಚೇನಹಳ್ಳಿ ನಗರಗಳನ್ನು ರಾಬರ್ಟ್‌ಸನ್ ಪೇಟೆಯ ನಗರಸಭೆ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ.

ನವರಂಗ ಹಾಗೂ ತೆರೆದ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು, ಒಳಗೆ ಲಕ್ಷ್ಮೀ ಸಹಿತ ವೆಂಕಟೇಶನ ಪ್ರತಿಮೆಯಿದ್ದು, ಶಂಖ, ಚಕ್ರ, ವರದ ಮತ್ತು ಕಟಿಹಸ್ತಗಳನ್ನು ಹೊಂದಿದೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಚೌಕಾಕಾರವಾದ ಕಂಬಗಳು ಮೈಸೂರು ಶೈಲಿಯಲ್ಲಿ ನಿರ್ಮಿತವಾಗಿವೆ. ನವರಂಗದಲ್ಲಿ ವೆಂಕಟೇಶನ ಉತ್ಸವಮೂರ್ತಿ, ನಾರಾಯಣ (ಶಂಖ, ಚಕ್ರ ಗದಾ ಹಾಗೂ ಅಭಯಹಸ್ತಗಳು) ಮತ್ತು ನಾಟ್ಯ ವೆಂಕಟೇಶನ ಆಕರ್ಷಕ ಬಿಡಿಶಿಲ್ಪಗಳಿವೆ. ತೆರೆದ ಮುಖಮಂಟಪವು ಸಾಧಾರಣವಾದ ಸ್ತಂಭಗಳನ್ನು ಹೊಂದಿದ್ದು ವಿಶಾಲವಾಗಿದೆ. ದೇವಾಲಯದ ಹೊರಭಾಗದಲ್ಲಿ ಪ್ರದಕ್ಷಿಣಾಪಥವಿದೆ. ಈ ದೇವಾಲಯದಲ್ಲಿ ವೈಖಾನಸ ಆಗಮದ ರೀತಿಯಲ್ಲಿ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳಲಾಗುತ್ತದೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಫಾಲ್ಗುಣ ಮಾಸದ ನವಮಿಯಂದು ಬ್ರಹ್ಮರಥೋತ್ಸವ ನಡೆಯುತ್ತದೆ. ಅಲ್ಲದೇ ಶ್ರಾವಣ ಮಾಸ ವೈಕುಂಠ ಏಕಾದಶಿ, ಗೋಕುಲಾಷ್ಟಮಿ, ವಿಜಯದಶಮಿ ಮತ್ತು ಪುರಟ್ಟಾಸಿ ಮಾಸ (ತಮಿಳರಿಗೆ) ಸಂದರ್ಭಗಳಲ್ಲಿ ಈ ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ನಡೆಸಲಾಗುತ್ತದೆ. ಈ ದೇವಾಲಯದ ಆವರಣದಲ್ಲಿ ಪ್ರತ್ಯೇಕ ಈಶ್ವರ ದೇವಾಲಯವಿದೆ. ಈ ಊರಿನ ಗಣಿಪ್ರದೇಶದಲ್ಲಿ ಉದ್ದಂಡಮ್ಮನ ದೇವಾಲಯ ಕನ್ನಿಕಾಪರಮೇಶ್ವರಿ ಹಾಗೂ ಆಂಡರ್‌ಸನ್‌ಪೇಟೆಯಲ್ಲಿ ಶ್ರೀರಾಮ ದೇವಾಲಯಗಳು ಇವೆ. ರಾಬರ್ಟ್‌ಸನ್‌ಪೇಟೆಯಲ್ಲಿ 'ಸನಾತನ ಧರ್ಮ ಸಭಾ' ಎಂಬ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಕಟ್ಟಡವಿದ್ದು, ಇಲ್ಲಿ ಅಪೂರ್ವವಾದ ಸಾಂಪ್ರದಾಯಿಕ ಮೈಸೂರು ಶೈಲಿಯ ತೈಲವರ್ಣದ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಈ ಊರಿನಲ್ಲಿ ವಿಕ್ಟೋರಿಯಾ ಕ್ಯಾಥೋಲಿಕ್ ಚರ್ಚ್, ಮಸ್ಕಂ ಬೌದ್ಧ ದೇವಾಲಯ ಮತ್ತು ನಾಲ್ಕು ಜಾಮಿಯಾ ಮಸೀದಿಗಳು ಇವೆ. ಈ ಊರಿಗೆ ಸಮೀಪದಲ್ಲಿರುವ ಉರಿಗಾಂಪೇಟೆಯಲ್ಲಿ ಬಾಲಸೋಮೇಶ್ವರ ಸ್ವಾಮಿ ದೇವಾಲಯವು ವಿಶಾಲವಾದ ನಿವೇಶನದಲ್ಲಿದೆ. ಈ ದೇವಾಲಯದಲ್ಲಿ ಸಾಲಾಗಿ ಮೂರು ಗರ್ಭಗೃಹಗಳಿದ್ದು ಮೊದಲನೇಯದಲ್ಲಿ ಸುಬ್ರಹ್ಮಣ್ಯ ಎರಡನೇಯದರಲ್ಲಿ ಬಾಲ ಸೋಮೇಶ್ವರ ಶಿವಲಿಂಗ ಮತ್ತು ಮೂರನೇಯದರಲ್ಲಿ ಶಂಖ, ಚಕ್ರ, ಅಭಯ ಹಾಗೂ ವರದ ಹಸ್ತಗಳನ್ನು ಹೊಂದಿರುವ ಪಾರ್ವತಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯವು ಶೃಂಗೇರಿ ಶಂಕರಮಠದ ಹತೋಟಿಯಲ್ಲಿದ್ದು ಆದಿ ಶಂಕರಾಚಾರ್ಯರು ಕೆ.ಜಿ.ಎಫ್.ಗೆ ಭೇಟಿಕೊಟ್ಟಿದ್ದಾಗ ಇಲ್ಲಿ ವಸತಿ ಹೂಡಿದ್ದರೆಂಬ ನಂಬಿಕೆಯಿದೆ. ಈ ದೇವಾಲಯದ ಬಾಲಸೋಮೇಶ್ವರ ಲಿಂಗವನ್ನು ಆದಿಗುರು ಶಂಕರ ಭಗವತ್ಪಾದರು ಪ್ರತಿಷ್ಠಾಪಿಸಿದರೆನ್ನಲಾಗಿದೆ. ಆಂಡರ್‌ಸನ್‌ಪೇಟೆಯ ಗೋಣಮಾಕನಹಳ್ಳಿ ಕೆರೆ ಏರಿಯ ಮೇಲಿರುವ ಅತ್ಯಂತ ಪುರಾತನವಾದ ಉದ್ದಂಡಮ್ಮ ದೇವಾಲಯದ ಪರಿಸರದಲ್ಲಿ ಹಲವಾರು ಗಂಗರ ಕಾಲದ ವೀರಗಲ್ಲುಗಳಿವೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಲಕ್ಷದೀಪೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗುತ್ತದೆ. ಚಾಂಪಿಯನ್‌ರೀಫ್ಸ್‌ನಲ್ಲಿ ಪುರಾತನ ಬೌದ್ಧ ಮಂದಿರವಿದ್ದು, ಈ ದೇವಾಲಯಕ್ಕೆ ಖ್ಯಾತ ಸಂವಿಧಾನ ಕರ್ತೃ ಡಾ॥ ಅಂಬೇಡ್ಕರ್ ಅವರು ಭೇಟಿ ನೀಡಿದ್ದರೆಂದು ಹೇಳಲಾಗುತ್ತದೆ. ಶ್ರೀಲಂಕಾ ಮಹೇಂದ್ರ ವಿಹಾರವು ಸಹ ಇದರ ಸಮೀಪವಿದ್ದು ಬುದ್ಧನ ೧೮ ಅಡಿ ಎತ್ತರವಿರುವ ಆಧುನಿಕ ಶೈಲಿಯ ವಿಗ್ರಹವಿದ್ದು ಆಕರ್ಷಣೀಯವಾಗಿದೆ.

**ಗನಿಬಂಡ:** (ಶ್ರೀನಿವಾಸಪುರ ತಾಲೂಕು) ಶ್ರೀನಿವಾಸಪುರ ತಾಲೂಕಿನ ರಾಯಲಪಾಡ್ ಹೋಬಳಿಯ 'ಗನಿಬಂಡ' ವಿಜಯನಗರ ಶೈಲಿಯ ವೆಂಕಟರಮಣ ದೇವಾಲಯದಿಂದಾಗಿ ಪ್ರಸಿದ್ಧಿಪಡೆದಿದೆ. ಇದೊಂದು ಬೇಚಿರಾಕ್ ಗ್ರಾಮವಾಗಿದ್ದು ಕೇವಲ ಈ ದೇವಾಲಯವನ್ನು ಮಾತ್ರ ಹೊಂದಿದೆ. ಊರಿನಲ್ಲಿ ಎತ್ತರವಾದ ನಿವೇಶನದ ಮೇಲೆ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಹೊರಪ್ರಾಕಾರವು ವಿಶಾಲವಾಗಿದ್ದು ಜಾತ್ರೆ, ವಿಶೇಷ ಉತ್ಸವಗಳ ಸಂದರ್ಭದಲ್ಲಿ ಭಕ್ತಾದಿಗಳು ವಸತಿ ಹೂಡಲು ಸೌಲಭ್ಯಗಳನ್ನು ಕಲ್ಪಿಸಲಾಗಿವೆ. ದೇವಾಲಯವು ಶಾಂತ ಪರಿಸರದಲ್ಲಿರುವುದರಿಂದ ಧ್ಯಾನಾಸಕ್ತ ಭಕ್ತಾದಿಗಳಿಗೆ ಉತ್ತಮ ತಾಣವಾಗಿದೆ. ದೇವಾಲಯದ ಪಕ್ಕದಲ್ಲಿ ಬಂಡೆಗಳಿಂದ ಆವೃತವಾದ ಪುಷ್ಕರಣಿಯಿದೆ. ದೇವಾಲಯದ ಮಹಾದ್ವಾರವು ವಿಜಯನಗರದ ಕಾಲದ ರಚನೆಯನ್ನು ಹೊಂದಿದೆ. ಸುಮಾರು ನಾಲ್ಕು ಅಡಿ ಎತ್ತರವಿರುವ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿರುವ ಶಂಖ, ಚಕ್ರ, ವರದ ಹಾಗೂ ಕಟೀಹಸ್ತಗಳನ್ನು ಹೊಂದಿರುವ ವೆಂಕಟರಮಣನ ವಿಗ್ರಹವು ಆಕರ್ಷಕವಾಗಿದೆ. ಗರ್ಭಗೃಹದ ಮುಂಭಾಗದಲ್ಲಿರುವ ಅರ್ಧಮಂಟಪವು ವಿಶಾಲವಾಗಿದ್ದು ಒಳಗೆ ವಿಷ್ವಕ್ಸೇನ ಹಾಗೂ ಆಳ್ವಾರರುಗಳ ಬಿಡಿಶಿಲ್ಪಗಳಿವೆ. ನವರಂಗದಲ್ಲಿ ಕಪ್ಪುಶಿಲೆಯ ಸ್ತಂಭಗಳಿದ್ದು, ಅವುಗಳ ಮೇಲೆ ವೈಷ್ಣವ ಪುರಾಣವನ್ನು ಪ್ರತಿನಿಧಿಸುವ ಉಬ್ಬುಶಿಲ್ಪಗಳಿವೆ. ಅರ್ಧಮಂಟಪದಿಂದ ಪ್ರವೇಶ ಮಾಡುವ ಬಾಗಿಲುವಾಡ (ಗರ್ಭಗೃಹಕ್ಕೂ ಮೊದಲು) ಲತಾ ಅಲಂಕಾರಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಹೊಂದಿದೆ. ಈ ದ್ವಾರದ ಎರಡೂ ಕಡೆ ಜಯ–ವಿಜಯರ ಸುಂದರ ಶಿಲ್ಪಗಳಿವೆ. ಮುಖಮಂಟಪವು ವಿಶಾಲವಾಗಿದ್ದು, ಇಲ್ಲಿರುವ ನಾಲ್ಕು ಕಂಬಗಳು

ಆಕರ್ಷಕ ರಚನೆಯನ್ನು ಹೊಂದಿದೆ. ಇವುಗಳ ಮೇಲೆ ನರಸಿಂಹಾವತಾರ, ರಾಮಾವತಾರದ ಉಬ್ಬುಶಿಲ್ಪಗಳು ಹಾಗೂ ಭಕ್ತರ ವಿಗ್ರಹಗಳು ಕಂಡುಬರುತ್ತವೆ. ಮುಖ್ಯ ದೇವಾಲಯದ ಎಡಭಾಗದಲ್ಲಿ ಪದ್ಮಾವತಿ ಅಥವಾ ಲಕ್ಷ್ಮಿಯ ಪ್ರತ್ಯೇಕ ಚಿಕ್ಕಗುಡಿ ಇದೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಚೈತ್ರಮಾಸದಲ್ಲಿ ಶ್ರೀರಾಮನವಮಿಯಂದು ಪ್ರಾರಂಭವಾಗಿ ಒಂಭತ್ತು ದಿನ ಪರ್ಯಂತ ಬ್ರಹ್ಮರಥೋತ್ಸವ ಹಾಗೂ ಬೃಹತ್ ಜಾತ್ರೆಯು ನಡೆದಾಗ ಸಹಸ್ರಾರು ಭಕ್ತರು ಸೇರುತ್ತಾರೆ.

**ಗರುಡನಹಳ್ಳಿ :** (ಕೋಲಾರ ತಾಲೂಕು) ಕೋಲಾರದಿಂದ ೧೫ ಕಿ.ಮೀ. ಮತ್ತು ನರಸಾಪುರದಿಂದ ಮೂರು ಕಿ.ಮೀ. ದೂರದಲ್ಲಿರುವ ಗರುಡನಹಳ್ಳಿಯು ಅತ್ಯಂತ ಪ್ರಮುಖವಾದ ಐತಿಹಾಸಿಕ ಮೌಲ್ಯವುಳ್ಳ ಪೂರ್ವೇತಿಹಾಸದ ತಾಣವಾಗಿದೆ. ಗರುಡನಹಳ್ಳಿಯ ದಕ್ಷಿಣಕ್ಕೆ ಕಗ್ಗಲ್ಲಿನ ಬೆಟ್ಟದ ಸಾಲುಗಳಿದ್ದು ಕೋಲಾರದ ಬೆಟ್ಟದ ಶ್ರೇಣಿಗಳೊಂದಿಗೆ ಬೆರೆತು ಮುಂದುವರೆಯುತ್ತದೆ. ಈ ಗ್ರಾಮದ ಬಳಿಯಿರುವ ಬೆಟ್ಟಕ್ಕೆ ಕೆಂದತ್ತಿ ಬೆಟ್ಟವೆಂದು ಕರೆಯಲಾಗುತ್ತದೆ. ಹಾಗೂ ಇಲ್ಲಿಂದ ಉತ್ತರಕ್ಕೆ ವಿಶಾಲವಾದ ಕಣಿವೆಯ ಪ್ರದೇಶವಿದ್ದು, ಮುಳ್ಳಿನ ಗಿಡಗಳಿಂದ ಹಾಗೂ ಇತರೆ ಕಾಡಿನ ಗಿಡಗಳಿಂದ ಆವೃತ್ತವಾಗಿದೆ. ಈ ಪ್ರದೇಶದಲ್ಲಿ ಸುಮಾರು ಒಂದುವರೆ ಕಿ.ಮೀ. ಪ್ರದೇಶದಲ್ಲಿ ಬೃಹದ್ ಶಿಲಾಯುಗದ ಸುಮಾರು ನೂರು ಶಿಲಾಗೋರಿಗಳು (Cromlechs/Dolmens) ಹಾಗೂ ವಿವಿಧ ಕಲ್ಲು ವೃತ್ತಗಳು ಕಂಡುಬರುತ್ತವೆ. ಇವುಗಳ ಪೈಕಿ ಅರ್ಧದಷ್ಟು ಶಿಲಾಗೋರಿಗಳನ್ನು ೧೯೧೪ರಲ್ಲಿ ಕೋಲಾರ ಚಿನ್ನದ ಗಣಿ ಪ್ರದೇಶದ ಅಧಿಕಾರಿಯಾಗಿದ್ದ ಕುಕ್ (Cooke) ಎಂಬುವವರು ತೆರೆದುನೋಡಿದ್ದೇ ಅಲ್ಲದೇ ಹಲವಾರು ಪೂರ್ವೇತಿಹಾಸ ಕಾಲದ ಶಿಲಾಗೋರಿಗಳ ಮತ್ತು ಕಲ್ಲುವೃತ್ತಗಳ ಛಾಯಾಗ್ರಹಣ ಚಿತ್ರಗಳನ್ನು ಇವರು ತೆಗೆದಿದ್ದರೆಂದು ಮೈಸೂರು ಪುರಾತತ್ವ ಇಲಾಖಾ ವರದಿಯಿಂದ ಸ್ಪಷ್ಟವಾಗುತ್ತದೆ. ಈ ಶಿಲಾಗೋರಿಗಳು ಒರಟಾದ ಕಗ್ಗಲ್ಲಿನಿಂದ ಕೂಡಿದ್ದು, ಅರ್ಧಚಂದ್ರಾಕಾರವಾದ ಕಿಂಡಿಯನ್ನು (Passage Chambers) ಹೊಂದಿವೆ ಹಾಗೂ ಸುಮಾರು ಎಂಟರಿಂದ ಹತ್ತು ಅಡಿ ಉದ್ದ ಮತ್ತು ಮೂರು ಅಡಿ ಅಗಲವಿರುವ ಮತ್ತು ಒಂದು ಅಡಿ ಗಾತ್ರವಿರುವ ಮೇಲು ಹೊದಿಕೆಯ ಕಲ್ಲುಗಳನ್ನು ಹೊಂದಿರುವುದು, ಬೆಳಗಾವಿ ಜಿಲ್ಲೆಯ ಗೋಕಾಕ್ ಬಳಿಯ ಕೊಣ್ಣೂರಿನ ಶಿಲಾಗೋರಿಗಳನ್ನು ಜ್ಞಾಪಿಸುತ್ತವೆ. ಕೆಲವು ಕಲ್ಲು ವೃತ್ತಗಳ ವ್ಯಾಸವು ೨೦ ಅಡಿಯಷ್ಟು ಇದ್ದು, ಅದರ ಕಲ್ಲುಗಂಡುಗಳು ಎರಡರಿಂದ ಮೂರು ಕ್ಯೂಬಿಕ್ ಅಡಿಗಳಷ್ಟು ಗಾತ್ರವಿದೆ. ಈ ಕಲ್ಲು ವೃತ್ತಗಳ ಮಧ್ಯಭಾಗದಲ್ಲಿ ಹೆಚ್ಚು ಕಡಿಮೆ ಭೂ ಮಟ್ಟಕ್ಕೆ ಸರಿಯಾಗಿ (೧೫' x ೧೫' x ೧೪ ಅಡಿಗಳು) ದೊಡ್ಡ ಕಲ್ಲು ಚಪ್ಪಡಿಯನ್ನು ಹೊದಿಸಲಾಗಿರುವುದು ಕಂಡುಬರುತ್ತದೆ. ಇದರ ಕೆಳಭಾಗದಲ್ಲಿ ಸುಟ್ಟಿರುವ ಮೃತ್‌ಪಾತ್ರೆಗಳಿದ್ದು, ಅವುಗಳು ಕುಂಬಾರನ ಚಕ್ರದಲ್ಲಿ ತಿರುಗಿಸಿರುವ ಲಕ್ಷಣಗಳು ವ್ಯಕ್ತವಾಗುತ್ತದೆ ಎಂದು ಕುಕ್ ಅಭಿಪ್ರಾಯಪಡುತ್ತಾರೆ. ಇವುಗಳ ಪೈಕಿ ಹಲವು ಬೆಂಗಳೂರಿನ ವಸ್ತು ಸಂಗ್ರಹಾಲಯದಲ್ಲಿರುವ ಬೃಹತ್ ಶಿಲಾಯುಗದ ಮೃತ್‌ಪಾತ್ರೆಗಳನ್ನು ಬಹಳಷ್ಟು ಮಟ್ಟಿಗೆ ಹೋಲುತ್ತವೆಂದು ಅವರೇ ತಿಳಿಸುತ್ತಾರೆ. (ಈ ಸ್ಥಳದ ಬಗ್ಗೆ ಹೆಚ್ಚಿನ ವಿವರಗಳಿಗೆ ಅಧ್ಯಾಯ–೨ ಇತಿಹಾಸ ಭಾಗವನ್ನು ನೋಡಿ)

**ಗುಡಿಪಲ್ಲಿ** (ಮುಳಬಾಗಿಲು ತಾಲೂಕು : ಜನಸಂಖ್ಯೆ : ೧,೫೦೨): ಮುಳಬಾಗಿಲಿನಿಂದ ೧೮ ಕಿ.ಮೀ. ದೂರದಲ್ಲಿರುವ ಗುಡಿಪಲ್ಲಿಯು ಶಾಸನಗಳಲ್ಲಿ 'ಗುಡಿಪಲ್ಲಿ' ಎಂದೇ ಉಲ್ಲೇಖಗೊಂಡಿದ್ದು, ವಿಜಯನಗರದ ಪ್ರತಾಪ ದೇವರಾಯನ ಆಡಳಿತಾವಧಿಯಲ್ಲಿ ಪ್ರಮುಖ ಸ್ಥಳವಾಗಿತ್ತೆಂದು ವ್ಯಕ್ತವಾಗುತ್ತದೆ. ಈ ಊರಿನಲ್ಲಿ ಕಂಡುಬರುವ ಹಲವು ಗುಡಿಗಳಿಂದಾಗಿ ಈ ಊರಿಗೆ ಈ ಹೆಸರು ಬಂದಿರುವುದೆಂಬ ಅಭಿಪ್ರಾಯವಿದೆ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೇ, ಸೋಮೇಶ್ವರ, ಕಾಶಿವಿಶ್ವೇಶ್ವರ, ಶ್ರೀರಾಮ, ಚೌಡೇಶ್ವರಿ, ಗಂಗಮ್ಮ, ಆಂಜನೇಯ ಮೊದಲಾದವು. ಸೋಮೇಶ್ವರ ಮತ್ತು ಶ್ರೀರಾಮ ದೇವಾಲಯಗಳು ವಿಜಯನಗರ ಕಾಲದ ರಚನೆಯನ್ನು ಹೊಂದಿವೆ. ಸೋಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಚೌರಸವಾದ ಗರ್ಭಗೃಹವನ್ನು ಹೊಂದಿದೆ. ಮುಂಭಾಗದಲ್ಲಿ ಅರ್ಧಮಂಟಪ ನವರಂಗ ಹಾಗೂ ಅಯತಾಕಾರವಾದ ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಚೌರಸ ಪಾಣಿಪೀಠದ ಮೇಲೆ ಎತ್ತರವಾದ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ತೆರೆದ ಮುಖಮಂಟಪದಿಂದ ಪ್ರವೇಶವಿರುವ ನವರಂಗದ ಮಧ್ಯದಲ್ಲಿ ನಾಲ್ಕು ವಿಜಯನಗರ ಶೈಲಿಯ ಸ್ತಂಭಗಳಿದ್ದು, ಮೇಲ್ಭಾಗದಲ್ಲಿ ಹಲವು ಆಕರ್ಷಕ ಉಬ್ಬುಶಿಲ್ಪಗಳಿವೆ. ಮುಖಮಂಟಪಕ್ಕೆ ಪ್ರವೇಶಿಸಲು ಯಾಳಿಗಳ ಸಹಿತ ಮೆಟ್ಟಿಲುಗಳಿವೆ. ದೇವಾಲಯದ ನೈರುತ್ಯಕ್ಕೆ ಗಣೇಶನ ಪ್ರತ್ಯೇಕ ಗುಡಿ ಇದೆ. ಇತ್ತೀಚೆಗೆ ವಿನಾಯಕನ ಪ್ರತಿಮೆಯನ್ನು ಇದರಲ್ಲಿ ಪುನರ್ ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯ ಸಂಕೀರ್ಣವು ವಿಶಾಲವಾದ ಹೊರ ಪ್ರಾಕಾರವನ್ನು ಹೊಂದಿದ್ದು, ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವನ್ನು ಹೊಂದಿದೆ. ಗರ್ಭಗೃಹದ ಹೊರಭಾಗದ

ಅಧಿಷ್ಠಾನದಲ್ಲಿ ವಿಜಯನಗರಕ್ಕೂ ಪೂರ್ವ ಕಾಲದ ಬಹುಶಃ ಹೊಯ್ಸಳರ ಕಾಲದ ಕಿರು ಸ್ತಂಭಗಳು ಕಂಡುಬರುತ್ತವೆ. ಗರ್ಭಗೃಹದ ಮೇಲ್ಭಾಗದ ಶಿಖರವು ಸಂಪೂರ್ಣವಾಗಿ ನಾಶಗೊಂಡಿದೆ. ದೇವಾಲಯದ ಹೊರಗೆ ಭಿನ್ನವಾದ ಭಿಕ್ಷಾಟನಾ ಶಿವ, ಗಣೇಶ ಮತ್ತು ಮುಖಭಗ್ನವಾಗಿರುವ ಸ್ತ್ರೀ ವಿಗ್ರಹಗಳು ಕಂಡುಬರುತ್ತವೆ. ಮುಖ್ಯ ದೇವಾಲಯದ ಉತ್ತರಕ್ಕೆ ಶಿಥಿಲವಾದ ಇನ್ನೊಂದು ಚಿಕ್ಕ ಗುಡಿ ಇದ್ದು, ಬಹುಶಃ ಪಾರ್ವತಿ ಅಮ್ಮನವರ ಗುಡಿಯಾಗಿರಬೇಕೆಂದು ಹೇಳಬಹುದಾಗಿದೆ. ಇದು ಒಂದು ಗರ್ಭಗೃಹ (ಖಾಲಿ) ಮತ್ತು ಒಂದು ಅಂತರಾಳ ಮಾತ್ರ ಉಳಿದಿದ್ದು, ಬಹಳಷ್ಟು ಶಿಥಿಲವಾಗಿದ್ದು, ವಿಜಯನಗರದ ರಚನೆಯಾಗಿದೆ. ಸೋಮೇಶ್ವರ ದೇವಾಲಯದ ಹೊರಭಾಗದ ತಳಪಾಯದ ಸುತ್ತಲೂ ಶಾಸನಗಳನ್ನು ಕೆತ್ತಲಾಗಿದೆ. ವಿಜಯನಗರದ ಪ್ರತಾಪ ದೇವರಾಯನ ಕ್ರಿ.ಶ. ೧೪೩೬ರ ಶಾಸನವು ಪ್ರತಾಪ ದೇವರಾಯಪುರ ಅಥವಾ ಗುಡಿಪಲ್ಲಿಯ ಬ್ರಾಹ್ಮಣರಿಗೆ ಮತ್ತು ಕೆರೆಯ ಕಟ್ಟುಗೋಡೆಗೆ ಬ್ರಮ್ಮಸಾಗಯ್ಯ ವಿಠಪ್ಪನ ಮಗ ಬಾವಪ್ಪನಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಈ ದೇವಾಲಯದ ಉತ್ತರಕ್ಕೆ ರಸ್ತೆಯಿಂದಾಚೆಗೆ ಅನತಿ ದೂರದಲ್ಲಿ ಖಾಸಗಿ ಜಮೀನಿನಲ್ಲಿ ಇನ್ನೊಂದು ಶಿಥಿಲವಾದ ಪ್ರಾಚೀನ ದೇವಾಲಯದ ಕಟ್ಟಡವಿದ್ದು, ಇದನ್ನು ಸ್ಥಳೀಯವಾಗಿ ಸಲ್ಲಮ್ಮ ಗುಡಿ ಎಂದು ಕರೆಯಲಾಗುತ್ತದೆ. ಇದೇ ಬಹುಶಃ ಶಾಸನೋಕ್ತ ಜನಾರ್ಧನಗುಡಿ ಇದ್ದಿರಬಹುದು. ಸೋಮೇಶ್ವರ ದೇವಾಲಯದ ಬಲಭಾಗದಲ್ಲಿ ರಸ್ತೆಯಿಂದಾಚೆಗೆ ಆಧುನಿಕ ಶೈಲಿಯ ಕಾಶೀವಿಶ್ವೇಶ್ವರ ದೇವಾಲಯವು (೧೮೭೪) ಎತ್ತರವಾದ ಭೂ ಪ್ರದೇಶದಲ್ಲಿದೆ. ಇದರಲ್ಲಿ ಆಯತಾಕಾರವಾದ ಮೂರು ಗರ್ಭಗೃಹಗಳು ಮತ್ತು ಮುಂಭಾಗದಲ್ಲಿ ವಿಶಾಲವಾದ ನಾಲ್ಕು ಚೌರಸ ಸ್ತಂಭಗಳಿಂದ ಕೂಡಿದ ನವರಂಗವಿದೆ. ಮೂರು ಗರ್ಭಗೃಹಗಳಲ್ಲಿ ಮೊದಲನೇಯದರಲ್ಲಿ ವಿನಾಯಕ, ಎರಡನೇಯದರಲ್ಲಿ ಕಾಶಿವಿಶ್ವೇಶ್ವರ ಲಿಂಗ ಮತ್ತು ಮೂರನೇಯದರಲ್ಲಿ ಪಾರ್ವತಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ವಿಷ್ಣು ಹಾಗೂ ಬ್ರಹ್ಮ ದೇವರುಗಳ ಬಿಡಿ ವಿಗ್ರಹಗಳಿವೆ. ಈ ದೇವಾಲಯದಲ್ಲಿರುವ ಭದ್ರತಾ ಕೊಠಡಿಯಲ್ಲಿ ಸುಮಾರು ಮೂರು ವರ್ಷಗಳ ಕೆಳಗೆ ಸೋಮೇಶ್ವರ ದೇವಾಲಯದ ಪ್ರಾಕಾರದ ಈಶಾನ್ಯ ಭಾಗದಲ್ಲಿ ಭೂಮಿ ಒಳಗೆ ದೊರೆತ ಐದು ಪಂಚಲೋಹದ ಸುಂದರ ವಿಗ್ರಹಗಳನ್ನು ಭದ್ರತಾ ಕೊಠಡಿಯಲ್ಲಿ ಸಂರಕ್ಷಿಸಲಾಗಿದೆ. ಇವುಗಳೆಂದರೇ ಸಮಭಂಗಿಯಲ್ಲಿರುವ ಗಣೇಶ, ಸುದರ್ಶನಚಕ್ರ, ಲಲಿತಾ ಅನ್ನಪೂರ್ಣೇಶ್ವರಿ, ಈಶ್ವರ–ಪಾರ್ವತಿ ಮತ್ತು ಲಕ್ಷ್ಮೀ. ಊರೊಳಗೆ ಕೋಟೆಯ ಭಾಗದಲ್ಲಿ ಶ್ರೀರಾಮ ದೇವಾಲಯವಿದ್ದು ಈಗ ಖಾಸಗಿ ಮನೆಯಾಗಿದೆ. ಈ ದೇವಾಲಯವು ವಿಜಯನಗರ ಕಾಲದ ರಚನೆಯಾಗಿದ್ದು, ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ಗರ್ಭಗೃಹ, ನವರಂಗ ಹಾಗೂ ಕಿರಿದಾದ ಮುಖಮಂಟಪಗಳನ್ನು ಹೊಂದಿದೆ. ಈ ದೇವಾಲಯದ ಮುಖಮಂಟಪದ ಗೋಡೆಯ ಮೇಲಿರುವ ಕ್ರಿ.ಶ. ೧೫೨೫ರ ಶಾಸನವು ಮುಳವಾಗಿಲ ರಾಜ್ಯದ ಹೊರನಾಡಿನಲ್ಲಿರುವ ಗುಡಪಲ್ಲಿ ಸರ್ವಮಾನ್ಯ ಅಗ್ರಹಾರ ಅಥವಾ ಪ್ರತಾಪ ದೇವರಾಯಪುರದಲ್ಲಿದ್ದ ಜನಾರ್ಧನ ದೇವಾಲಯದ ದಕ್ಷಿಣಕ್ಕೆ ಸೋಮಣ್ಣನೆಂಬ ಅಧಿಕಾರಿಯು ನಿರ್ಮಿಸಿದ ಇನ್ನೊಂದು ದೇವಾಲಯದಲ್ಲಿ ರಾಮಚಂದ್ರ ದೇವರನ್ನು ಪ್ರತಿಷ್ಠಾಪಿಸಿ ದೀಪಾಲಂಕಾರ ಮತ್ತು ದೈನಂದಿನ ಪೂಜಾ ಕೈಂಕರ್ಯಕ್ಕೆ ಊರಿನ ಕೆರೆಯ ತೂಬಿನ ಬಳಿಯಲ್ಲಿದ್ದ ಭೂಮಿಯನ್ನು ದತ್ತಿಬಿಟ್ಟ ವಿಚಾರಗಳನ್ನು ದಾಖಲಿಸುತ್ತದೆ. ಗುಡಿಪಲ್ಲಿಯಲ್ಲಿ ಇತ್ತೀಚೆಗೆ ನಿರ್ಮಿಸಲಾದ ಜುಮ್ಮಾ ಮಸೀದಿಯಿದೆ.

**ಗುಡಿಬಂಡೆ:** (ತಾಲೂಕು ಕೇಂದ್ರ ಜನಸಂಖ್ಯೆ: ೮,೮೦೭): ಕೋಲಾರ ಜಿಲ್ಲೆಯ (೮೮ ಕಿ.ಮೀ. ದೂರದಲ್ಲಿದೆ) ವಾಯುವ್ಯ ಭಾಗದಲ್ಲಿ ಚಿಕ್ಕಬಳ್ಳಾಪುರ ಉಪ ವಿಭಾಗಕ್ಕೆ ಸೇರಿದ ಒಂದು ತಾಲೂಕು. ಇದು ಜಿಲ್ಲೆಯ ಅತ್ಯಂತ ಚಿಕ್ಕ ತಾಲೂಕು. ಹಿಂದೆ ಬಾಗೇಪಲ್ಲಿಯ ತಾಲೂಕಿನ ಒಂದು ಹೋಬಳಿ ಕೇಂದ್ರವಾಗಿತ್ತು. ಗುಡಿಬಂಡೆ ತಾಲೂಕು ಕೇಂದ್ರವಾಗಿದ್ದು, ನಂದಿದುರ್ಗ ಬೆಟ್ಟಗಳ ಸಾಲಿನಲ್ಲಿ ಕೋಲಾರದ ವಾಯುವ್ಯಕ್ಕೆ ೯೫ ಕಿ.ಮೀ. ದೂರದಲ್ಲಿದೆ. ಗುಡಿಯಿಂದ ಕೂಡಿದ ಬಂಡೆಯೊಂದರ ದಕ್ಷಿಣ ಬುಡದಲ್ಲಿ ಈ ಪಟ್ಟಣವಿರುವುದರಿಂದ ಈ ಊರಿಗೆ 'ಗುಡಿಬಂಡೆ' ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಔರಂಗಜೇಬನ ಫೌಜುದಾರ ಖಾಸಿಂಖಾನನು ದೊಡ್ಡಬಳ್ಳಾಪುರವನ್ನು ವಶಪಡಿಸಿಕೊಂಡ ತರುವಾಯ ಗುಡಿಬಂಡೆ ಮತ್ತು ಸುತ್ತಮುತ್ತಲಿನ ಅರಣ್ಯ ಭಾಗಗಳನ್ನು ಹಾವಳಿ ಭೈರೇಗೌಡನಿಗೆ ನೀಡಿದನು. ಈತನು ಹಳೇ ಗುಡಿಬಂಡೆ ಕೋಟೆ ಹಾಗೂ ಈಗಿನ ಗುಡಿಬಂಡೆ ಪಾಳಯವನ್ನು ನಿರ್ಮಿಸಿದನು. ಗುಡಿಬಂಡೆ ಬೆಟ್ಟದ ಮೇಲಿರುವ ಪಾಳೆಯಗಾರರ ಕಾಲದ ಕೋಟೆ ಕೊತ್ತಲಗಳು ಈಗ ಶಿಥಿಲಾವಸ್ಥೆಯಲ್ಲಿವೆ. ಹಾವಳಿ ಭೈರೇಗೌಡನಿಗೆ ಸಂತಾನವಿಲ್ಲದೆ ಮೃತನಾದಾಗ ಅವನ ಮೈದುನ ರಾಮೇಗೌಡನು ಆಳ್ವಿಕೆ ನಡೆಸಿದನು. ೧೭೮೯ರಲ್ಲಿ ಮರಾಠೆಯವರ ಬಲವಂತದಿಂದ ಉಂಟಾದ ಆಕ್ರಮಣಕಾರೀ ಧೋರಣೆ ಕಾರಣದಿಂದ ಗುಡಿಬಂಡೆಯು ಚಿಕ್ಕಬಳ್ಳಾಪುರದ ಬೈಚೇಗೌಡನ ವಶವಾಯಿತು. ಈತನ ತರುವಾಯ ಎರಡು ವರ್ಷಗಳವರೆಗೆ ದೊಡ್ಡಭೈರೇಗೌಡನು ಆಳಿದನು.

ಈತನು ತನ್ನಮೇಲೆ ಎರಗಿದ ಮೈಸೂರು ಸೇನೆಯನ್ನು ಹಿಮ್ಮೆಟ್ಟಿಸಿದನು. ನಂತರ ೧೭೬೨ರಲ್ಲಿ ಚಿಕ್ಕಪ್ಪನಾಯಕನ ಕಾಲದಲ್ಲಿ ಈ ಪ್ರದೇಶವು ನವಾಬ್ ಹೈದರ್‌ಅಲಿಯ ವಶವಾಯಿತು. ಕೋಟೆಯ ಭಾಗದಲ್ಲಿ ಈಗಲೂ ಅನೇಕ ಬಂಡೆದ್ವಾರಗಳು, ಬಂಡೆಗಳಲ್ಲಿ ಬಿಡಿಸಲಾದ ಸೋಪಾನಗಳು, ಸಿಹಿನೀರಿನ ದೋಣೆಗಳು, ಗುಡಿಗಳು, ಹಗೇವುಗಳು ಹಾಗೂ ಮದ್ದಿನ ಉಗ್ರಾಣಗಳೂ ಕಂಡುಬರುತ್ತವೆ. ಕೋವಿಯ ಮದ್ದನ್ನು ತಯಾರಿಸಲು ಉಪಯೋಗಿಸುತ್ತಿದ್ದ ದೊಡ್ಡ ಆಕಾರದ ಬೀಸುವ ಕಲ್ಲೂ ಸಹ ಇದೆ. ದಕ್ಷಿಣದಲ್ಲಿ ಚಿಕ್ಕಬಳ್ಳಾಪುರ ಪೂರ್ವದಲ್ಲಿ ಶಿಡ್ಲಘಟ್ಟ ಮತ್ತು ಬಾಗೇಪಲ್ಲಿ, ಪಶ್ಚಿಮದಲ್ಲಿ ಗೌರಿಬಿದನೂರು ತಾಲೂಕುಗಳು ಉತ್ತರದಲ್ಲಿ ಸ್ವಲ್ಪ ದೂರದವೆಗೆ ಆಂಧ್ರಪ್ರದೇಶದ ಗಡಿ ಇವುಗಳಿಂದ ಸುತ್ತುವರಿದಿದೆ. ತಾಲೂಕಿನ ಹೆಚ್ಚು ಭಾಗವು ಕಣಶಿಲೆಯ ಬೆಟ್ಟಗಳಿಂದ ಕೂಡಿದ್ದು ಉತ್ತರಕ್ಕೆ, ಅನೇಕ ಏರು ತಗ್ಗುಗಳಿಂದ ಕೂಡಿದೆ. ನಂದಿಬೆಟ್ಟದ ಉತ್ತರದಲ್ಲಿ ಆವಲುಕೊಂಡ ಎಂಬಲ್ಲಿ ಹುಟ್ಟುವ ಕುಶಾವತಿ ಉಪ ನದಿಯು ಈ ತಾಲೂಕಿನ ಮೂಲಕ ಉತ್ತರಕ್ಕೆ ಹರಿದು ಮುಂದೆ ಚಿತ್ರಾವತಿ ನದಿಯನ್ನು ಸೇರಿಕೊಳ್ಳುತ್ತದೆ. ಕುಶಾವತಿಗೆ ಅಡ್ಡಲಾಗಿ ಕಟ್ಟಲಾಗಿರುವ ದೊಡ್ಡಕೆರೆಗೆ 'ಅಮಾನಿಭೈರಸಾಗರ' ಎಂದು ಹೆಸರು. ಕ್ರಿ.ಶ. ೧೬೮೭ರಲ್ಲಿ ಮೊಗಲ್ ದಂಡಾಧಿಕಾರಿ ಖಾಸಿಂಖಾನನು ದೊಡ್ಡಬಳ್ಳಾಪುರವನ್ನು ತನ್ನ ವಶಕ್ಕೆ ತೆಗೆದುಕೊಂಡಾಗ ಈ ಸ್ಥಳವನ್ನು ಹಾವಳಿ ಭೈರೇಗೌಡನಿಗೆ ಆಡಳಿತಾತ್ಮಕವಾಗಿ ವಹಿಸಿಕೊಟ್ಟನು. ಈತನ ಕಾಲದಲ್ಲಿ ಇಲ್ಲಿರುವ ಬೆಟ್ಟದ ಮೇಲೆ ಕೋಟೆಗಳನ್ನು ನಿರ್ಮಿಸಲಾಯಿತೆಂದು ಪ್ರತೀತಿಯಿದ್ದು, ಈಗಲೂ ಅವುಗಳ ಅವಶೇಷಗಳನ್ನು ಕಾಣಬಹುದಾಗಿದೆ. ನಂದಿದುರ್ಗ ಬೆಟ್ಟಗಳ ಸಾಲಿನಲ್ಲಿ ಮುಂದುವರೆದಂತೆ ಬೆಳೆದು ಬಂದಿರುವ ಬೆಟ್ಟಗಳ ತಪ್ಪಲಿನಲ್ಲಿ ಗುಡಿಬಂಡೆ ನಗರವು ಇದೆ. ಈ ಬೆಟ್ಟದ ಮೇಲ್ಭಾಗದಲ್ಲಿ ರಾಮೇಶ್ವರ ದೇವಾಲಯವಿದೆ. ಇದು ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿತವಾಗಿದ್ದು, ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪಗಳನ್ನು ಹೊಂದಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿರುವ ಶಿವಲಿಂಗವು ಸಾಧಾರಣವಾಗಿದೆ. ಮುಖಮಂಟಪದ ಛಾವಣಿಯಲ್ಲಿ ಕೆಳಮುಖವಾಗಿರುವ ಪದ್ಮದ ಅಲಂಕಾರವಿದೆ. ಇಲ್ಲಿರುವ ಸ್ತಂಭಗಳ ಮೇಲೆ ಗಣೇಶ, ನಂದಿ, ನವಿಲು, ಮಂಗಗಳು ಯಾಳಿ, ನಾಗಬಂಧ ಮೊದಲಾದ ಉಬ್ಬು ಶಿಲ್ಪಗಳಿವೆ. ದೇವಾಲಯದ ಮುಂಭಾಗದಲ್ಲಿರುವ ಚೌಕಾಕಾರವಾದ ಅಲಂಕೃತ ಎರಡು ಕಂಬಗಳು ಆಕರ್ಷಣೀಯವಾಗಿವೆ. ಇವುಗಳ ಮೇಲ್ಭಾಗದ ನಾಲ್ಕು ಮೂಲೆಗಳಲ್ಲಿ ಹಾರುತ್ತಿರುವ ಸಿಂಹಗಳಿವೆ. ಇದರ ಚೌಕಾಕಾರವಾದ ಪೀಠದ ಮೇಲೆ ಸೂರ್ಯನು ರಥದ ಮೇಲೆ ಕುಳಿತಿರುವ ಸುಂದರ ಕೆತ್ತನೆಯಿದ್ದು, ಏಳು ಕುದುರೆಗಳೂ ಇವೆ. ಹಾಗೂ ಇದರ ಜೊತೆಗೆ ನಂದಿ, ವೀರಭದ್ರ ಮತ್ತು ಬೇಡರಕಣ್ಣಪ್ಪ ಮತ್ತು ಕೀರ್ತಿಮುಖಗಳಿವೆ. ಈ ದೇವಾಲಯದ ಉತ್ತರಕ್ಕೆ ವಿಜಯನಗರದ ಕಾಲದ ಪಾರ್ವತಿ ದೇವಾಲಯವಿದೆ. ಊರಾಚೆಯ ಬಂಡೆಯ ಮೇಲೆ ಆಹೋಬಲ ನರಸಿಂಹಸ್ವಾಮಿಯ ದೇವಾಲಯ ಅತ್ಯಂತ ಕುತೂಹಲಕಾರಿಯಾದ ವಾಸ್ತು ರಚನೆಯನ್ನು ಹೊಂದಿದೆ. ಆಹೋಬಲ ಎಂದರೆ 'ಗುಹೆ'ಎಂಬ ಅರ್ಥವನ್ನು ಸೂಚಿಸುತ್ತದೆ ಮತ್ತು ಪುರಾಣಗಳಲ್ಲೂ ನರಸಿಂಹದೇವರನ್ನು ಗುಹೆಯಿಂದ ಮೂಡಿಬರುವ ದೈವವೆಂದು ಆರಾಧಿಸಲಾಗುತ್ತದೆ. ಈ ದೇವಾಲಯವು ವಾಸ್ತುಶಿಲ್ಪ ರಚನೆಯ ದೃಷ್ಟಿಯಿಂದ ಕ್ರಿ.ಶ. ೧೭ನೇ ಶತಮಾನದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ದಕ್ಷಿಣಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ನವರಂಗಗಳು ಮಾತ್ರ ಇದೆ. ಗರ್ಭಗೃಹದ ಸುತ್ತಲೂ ಸಾಂಧಾರ ಪ್ರದಕ್ಷಿಣಾಪಥವಿದೆ. ಇದರ ಮೇಲ್ಭಾಗದಲ್ಲಿ ಹೆಚ್ಚು ಎತ್ತರವಿಲ್ಲದ ವಿಜಯನಗರೋತ್ತರ ಶೈಲಿಯ ಶಿಖರವಿದೆ. ದೇವಾಲಯದ ಸನಿಹದಲ್ಲಿ ಎರಡು ಪುಷ್ಕರಣಿಗಳಿದ್ದು, ಇವುಗಳ ಪೈಕಿ ಒರಳುಕಲ್ಲು ತೀರ್ಥವೆಂಬ ಪುಷ್ಕರಣಿಯು ಎಂದೂ ಬತ್ತುವುದೇ ಇಲ್ಲವೆಂದು ಹೇಳಲಾಗುತ್ತದೆ. ಗುಡ್ಡದ ಮೇಲ್ಭಾಗದಲ್ಲಿರುವದರಿಂದ ದೇವಾಲಯದ ಪರಿಸರವು ಹೆಚ್ಚು ರಮಣೀಯವೂ ಆಕರ್ಷಣೀಯವೂ ಆಗಿದೆ. ಅಹೋಬಲ ನರಸಿಂಹನ ದೇವಾಲಯದಿಂದ ಅನತಿ ದೂರದಲ್ಲಿ ಶಿಥಿಲವಾಗಿರುವ ಗೋಪಾಲಕೃಷ್ಣ ದೇವಾಲಯವಿದ್ದು ಮೂಲವಿಗ್ರಹವು ಈಗ ಕಂಡುಬರುತ್ತಿಲ್ಲ. ಊರಿನಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯವು ಗರ್ಭಗೃಹ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ವೆಂಕಟರಮಣನು ಶಂಖ, ಚಕ್ರ, ವರದ ಮತ್ತು ಕಟೀ ಹಸ್ತಗಳನ್ನು ಹೊಂದಿರುತ್ತಾನೆ. ದೇವಾಲಯದ ಹೊರಗೋಡೆಯ ಮೇಲೆ ಅಲಂಕೃತ ವೈಷ್ಣವ ಶಿಲ್ಪಗಳಿರುವ ಶಿಲಾಪಟ್ಟಿಕೆಗಳು ಕಂಡುಬರುತ್ತವೆ. ದೇವಾಲಯದ ಎದುರಿಗೆ ಎತ್ತರವಾದ ಕಲಾತ್ಮಕ ಗರುಡ ಸ್ತಂಭವಿದೆ. ಮುಖ್ಯ ಕಟ್ಟಡದ ಮುಂಭಾಗದಲ್ಲಿ ಮಹಾದ್ವಾರದ ಇಕ್ಕೆಲಗಳಲ್ಲಿ ಪ್ರಾಣಿಗಳ ಮೇಲೆ ನಿಂತಿರುವ ಸ್ತ್ರೀ ಶಿಲಾಕೃತಿಗಳಿವೆ. ನವರಂಗದ ಸ್ತಂಭಗಳು ಚೌಕಾಕಾರವಾಗಿದ್ದು, ಮೇಲ್ಭಾಗದಲ್ಲಿ ಸುಂದರ ಉಬ್ಬು ಶಿಲ್ಪಗಳ ಅಲಂಕಾರವಿದೆ. ಗರ್ಭಗೃಹದ ದಕ್ಷಿಣ ಭಾಗದ ದೇವಕೋಷ್ಠದಲ್ಲಿ ಆದಿಶೇಷನ ಗಾರೆಯ ವಿಗ್ರಹವಿದ್ದು ಆಕರ್ಷಕವಾಗಿದೆ. ಇದಕ್ಕೆ ಹೊಂದಿಕೊಂಡಂತೆ ನೈಋತ್ಯಕ್ಕೆ ರಂಗನಾಥನ ಶಿಲ್ಪವಿದೆ. ನವರಂಗದಲ್ಲಿ ಆಳ್ವಾರರ ಮತ್ತು ವಿಶ್ವಕ್ಸೇನರ ವಿಗ್ರಹಗಳಿವೆ. ಈ ದೇವಾಲಯದಲ್ಲಿ ದಿನನಿತ್ಯವೂ ವೈಖಾನಾಸ ಆಗಮದ

ವಿಧಾನದಿಂದ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳಲಾಗುತ್ತದೆ. ತ್ರಿಮತಾಚಾರ್ಯರುಗಳಾದ ಶಂಕರಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯರು ಇರುವ ಗಾಯತ್ರಿ ದೇವಸ್ಥಾನವೂ ಇಲ್ಲಿದೆ. ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರದ ರೈಲುನಿಲ್ದಾಣಗಳೇ ಈ ತಾಲೂಕಿಗೆ ಹತ್ತಿರವಿರುವ ರೈಲು ಸಂಪರ್ಕ.

ಗುಡಿಬಂಡೆಯು ದಂಡಕಾರಾಣ್ಯ ಪ್ರದೇಶದಲ್ಲಿದ್ದುದರಿಂದ ಅನಾದಿಕಾಲದಿಂದಲೂ ಉತ್ತಮ ಆರ್ಥಿಕ ಪ್ರಗತಿ ಪಡೆದಿದೆ. ಅನೇಕ ಜೈನ ನಿರ್ಗಂಥರು ಮತ್ತು ಕ್ಷುಲ್ಲಕರು ಹಾಗೂ ಅರ್ಚಿಕೆಯರು ಇಲ್ಲಿ ತಪಸ್ಸು ಮಾಡಿ ನಿರ್ವಾಣ ಹೊಂದಿದ ಕುರುಹಾಗಿ ಶಿಲಾಪಾದಗಳ ಕೆತ್ತನೆಯಾಗಿ ಆ ಸ್ಥಳ 'ಪಾದಬೆಟ್ಟ'ವೆಂದೇ ಖ್ಯಾತಿ ಪಡೆದಿದೆ. ಪುರಾತನವಾದ ಗುಡಿಬಂಡೆಯ ಕೆರೆಯ ಏರಿಯ ಸಮೀಪದಲ್ಲಿರುವ ಪಾದಬೆಟ್ಟದ ಎದುರಿಗೆ 'ದೇವಕಣಗಿಲೆ' ಎಂದು ಸ್ಥಳೀಯವಾಗಿ ಕರೆಯಲಾಗುವ ವೃಕ್ಷವು ಶ್ರವಣಬೆಳಗೋಳದ ಚಂದ್ರಗಿರಿ ಬೆಟ್ಟದ ಮೇಲೂ ಇರುವುದು ಆಶ್ಚರ್ಯಕರವಾಗಿದೆ. ಈ ಊರಿನಲ್ಲಿ ಚಿಕ್ಕಬಸದಿ ಅಥವಾ ಚಂದ್ರನಾಥ ಬಸದಿ ಮತ್ತು ದೊಡ್ಡಬಸದಿ ಅಥವಾ ಪ್ರಾಚೀನ ಬಸದಿ ಇವೆ. ಚಂದ್ರನಾಥ ಬಸದಿ ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದ್ದು ಪಾತಾಳಾಂಕಣವನ್ನು ಹೊಂದಿದೆ. ಇದನ್ನು ಪ್ರವೇಶಿಸಲು ಆನೆಗಳು ಇಕ್ಕೆಲಗಳಲ್ಲಿರುವ ಮೆಟ್ಟಲುಗಳಿವೆ. ಚಂದ್ರನಾಥ ತೀರ್ಥಂಕರನ ಅಮೃತಶಿಲೆಯ ಪ್ರತಿಮೆಯು ಆಸೀನ ಭಂಗಿಯಲ್ಲಿದ್ದು ಸುಮಾರು ಒಂದುವರೆ ಅಡಿ ಎತ್ತರವಿದೆ. ಈ ಊರಿನ ಪಾದಬೆಟ್ಟದ ಮೇಲ್ಭಾಗದಲ್ಲಿರುವ ದೊಡ್ಡ ಬಸದಿಯು ಮುಖ್ಯವಾಗಿ ಪ್ರಾಚೀನಕಾಲದಿಂದಲೂ ಜೈನಮುನಿಗಳು ತಪಸ್ಸು ಮಾಡುತ್ತಿದ್ದ ಚೈತ್ರಮಂದಿರವೆಂದು ಪರಿಗಣಿಸಲ್ಪಡುತ್ತದೆ. ಇದನ್ನು ಹತ್ತಿಹೋಗಲು ಎತ್ತರವಾದ ಮೆಟ್ಟಲುಗಳಿವೆ. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾದ ಜುಮ್ಮಾಮಸೀದಿ ಇದೆ.

**ಗುಡುಮಾರಲಹಳ್ಳಿ** (ಚಿಂತಾಮಣಿ ತಾಲೂಕು: ಜನಸಂಖ್ಯೆ : ೬೧೮): ಚಿಂತಾಮಣಿಯಿಂದ ೧೬ ಕಿ.ಮೀ. ದೂರದಲ್ಲಿರುವ ಗುಡುಮಾರಲ ಹಳ್ಳಿಯಲ್ಲಿರುವ ಭೈರವದೇವರ ದೇವಾಲಯವು ಸೀತಿ ಬೆಟ್ಟದಂತೆಯೇ ಮೊರಸು ಒಕ್ಕಲಿಗರು ನಡೆದುಕೊಳ್ಳುವ ಯಾತ್ರಾ ಸ್ಥಳವಾಗಿದೆ. ಗರ್ಭಗೃಹದಲ್ಲಿರುವ ಭೈರವೇಶ್ವರ ವಿಗ್ರಹವು ಪ್ರಾಚೀನ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು, ಅತ್ಯಂತ ಆಕರ್ಷಕವಾಗಿದೆ. ಈ ದೇವಾಲಯದ ಸುತ್ತಲೂ ವಿಶಾಲವಾದ ಒಳ ಪ್ರಾಕಾರವಿದ್ದು ಹಲವು ಕಿರು ಗುಡಿಗಳನ್ನು ಹೊಂದಿದೆ. ಈ ದೇವಾಲಯದ ಸಮೀಪದಲ್ಲಿ'ಏರುಬಯ್ಯಮ್ಮ' ಎಂಬ ಕನ್ಯಾ ಪೂಜಾ ಗುಡಿ ಕಂಡುಬರುವುದು ಕುತೂಹಲಕಾರಿಯಾಗಿದೆ. ಇದನ್ನು ಶಕ್ತಿದೇವತೆಯಂದೂ ಆರಾಧಿಸಲಾಗುತ್ತದೆ. ಹಾಗೇಯೇ 'ಇರಗರರು' ಎಂಬ ಗಂಡು ಬಾಲಕನ ಗುಡಿಯೂ ಕಂಡುಬರುತ್ತದೆ. ಇದನ್ನು ಸಹ ಮಾನವಾತೀತ ವ್ಯಕ್ತಿಯ ಸಂಕೇತವೆಂದು ಆರಾಧಿಸಲಾಗುತ್ತದೆ.

**ಗುಮ್ಮನಾಯಕನ ಪಾಳ್ಯ** (ಬಾಗೇಪಲ್ಲಿ ತಾಲೂಕು): ಬಾಗೇಪಲ್ಲಿಯಿಂದ ೧೬ ಕಿ.ಮೀ ದೂರದಲ್ಲಿರುವ ಗುಮ್ಮನಾಯಕನ ಪಾಳ್ಯವು ದೇವರಜ್ಜಹಳ್ಳಿಯ ಮೂಲದವರಾದ ಹಾಗೂ ಪಾಳೆಯಗಾರರಾಗಿದ್ದ ಗುಮ್ಮನಾಯಕ ಮತ್ತು ಅವನ ತಮ್ಮ ಲಕ್ಕನಾಯಕರಿಂದ ಕ್ರಿ. ಶ. ೧೩೬೪ರಲ್ಲಿ ಸ್ಥಾಪಿಸಲ್ಪಟ್ಟ ಪ್ರಾಚೀನ ಸ್ಥಳವಾಗಿದ್ದು, ವಸಂತಪುರ ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿದೆ. ವಿಜಯನಗರಕ್ಕೆ ಮೊದಲು ಸುಮಾರು ನೂರು ವರ್ಷಗಳ ಹಿಂದೆ ಸ್ಥಾಪಿತವಾಗಿದ್ದ ಇಂದಿನ ಬಾಗೇಪಲ್ಲಿ ತಾಲೂಕು ಹಾಗೂ ಆಂಧ್ರಕ್ಕೆ ಸೇರಿರುವ ಕೋಡಿಕೊಂಡ, ಗೋರಂಟ್ಲ, ಕಂದಕೂರು ಮೊದಲಾದ ಪ್ರದೇಶಗಳು ಗುಮ್ಮನಾಯಕನ ಪಾಳೆಯಗಾರರಿಗೆ ಸೇರಿತ್ತು. ಈ ಪಾಳೆಯಪಟ್ಟು ಕೋಲಾರದ ಪೂರ್ವಭಾಗದಿಂದ ಹಿಡಿದು ಬಾಗೇಪಲ್ಲಿ ಉತ್ತರ ಭಾಗದ ಪ್ರದೇಶದವರೆಗೆ ಹರಡಿತ್ತೆಂದು ಹೇಳಲಾಗುತ್ತದೆ. ಗುಮ್ಮನಾಯಕನ ಪಾಳೆಯಪಟ್ಟಿನ ಪಾಳೇಗಾರ ಸಂತತಿಯವರೆಂದು ಹೇಳಿಕೊಳ್ಳುವ ಶ್ರೀನಗರ್ಲೆ (ನಲ್ಲಚೆರುವು) ರಾಜಣ್ಣನಾಯಕ ದೊರೆಯು ಈ ಪ್ರದೇಶದಲ್ಲಿ ಪ್ರಬಲನಾಗಿದ್ದನು. ಗುಮ್ಮನಾಯಕನ ಪಾಳೆಯಪಟ್ಟಿನ ನಾಯಕರು ಶ್ರೀಶೈಲದಿಂದ ಬಂದ "ವೇಕರಿ ಚುಂಚಲು" ಬುಡಕಟ್ಟು ಜನಾಂಗದವರಾಗಿದ್ದಾರೆ. ಇವರು ಈಶ್ವರ ಅಥವಾ ಶಿವಾರಾಧಕ 'ಇರೊಳ್ಲು' ಗುಂಪಿಗೆ ಸೇರಿದವರು, ಆದರೇ ಕದಿರಿ ನರಸಿಂಹಸ್ವಾಮಿಗೆ ನಡೆದುಕೊಳ್ಳುವ 'ಕಾಮೋಳ್ಳು' ಗುಂಪು ಇವರಲ್ಲಿದೆ. ಇವರ ಆರಂಭಕಾಲದ ನಾಯಕನೊಬ್ಬನ ಹೆಸರು 'ಹಿರೇ ನರಸಿಂಹನಾಯಕ' ಎಂದಿದೆ. ಗೂಳೂರಿನ ಶ್ರೀಶೈಲ ನಿಡುಮಾಮಿಡಿ ಮಹಾಸಂಸ್ಥಾನ ಪೀಠಕ್ಕೆ ನಡೆದುಕೊಂಡು ಬಂದವರೇ ಇವರಾಗಿದ್ದುದರಿಂದ ಗುಮ್ಮನಾಯಕನ ಪಾಳ್ಯದಲ್ಲಿ ಆ ಪೀಠದ ಶಾಖಾಮಠವೂ ಇತ್ತೆಂದು ತಿಳಿದುಬರುತ್ತದೆ. ಗುಮ್ಮನಾಯಕನು ಇಲ್ಲಿಯ ಕೋಟೆಯನ್ನು ನಿರ್ಮಿಸಿದನೆಂದು ಪ್ರತೀತಿಯಿದೆ. ನಂತರ ಮಾಸಲನಾಯಕನೆಂಬ ಪಾಳೆಯಗಾರನು ಈ ಕೋಟೆಯನ್ನು ವಶಪಡಿಸಿಕೊಂಡು ಕ್ರಿ.ಶ. ೧೫೦೦ರವರೆಗೂ ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದನೆಂದು ದಾಖಲೆಗಳು ತಿಳಿಸುತ್ತವೆ. ಈ ಕೋಟೆಯಲ್ಲಿದ್ದ ಎರಡನೇ ಲಕ್ಕನಾಯಕನು ಪೆನುಗೊಂಡದ ವಿಜಯನಗರದ ಅರಸನಿಗೆ

ಕಪ್ಪಕಾಣಿಕೆಯನ್ನು ನೀಡುತ್ತಿದ್ದನು. ಈತನು ಈ ಊರಿನ ಕೋಟೆಯನ್ನು ಭದ್ರಪಡಿಸಿದ್ದೆ ಅಲ್ಲದೇ ದೊಡ್ಡದಾದ ಕೆರೆಯನ್ನು ಕಟ್ಟಿಸಿ ಜನಜೀವನವನ್ನು ಉತ್ತಮಪಡಿಸಿದನು. ಈ ಪಾಳೆಯಗಾರರು ನಂತರ ಮರಾಠ ಮುಖ್ಯಸ್ಥರಾಗಿದ್ದ ಗುತ್ತಿಯ ಮುರಾರಿರಾವ್ ಅವರ ಆಕ್ರಮಣವನ್ನು ಎದುರಿಸಬೇಕಾಯಿತು. ನಂತರ ಹೈದರಾಲಿಯು ಗುಮ್ಮನಾಯಕನ ಪಾಳ್ಯದ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಪಾಳೆಯಗಾರ ಹಾಗೂ ಆತನ ಪತ್ನಿ ಸೇರಿದಂತೆ ಹಲವರನ್ನು ಸೆರೆಹಿಡಿದನು. ಗುಮ್ಮನಾಯಕನ ಪಾಳೆಯಪಟ್ಟಿನ ಬಗ್ಗೆ ಹಲವಾರು ಶಾಸನಗಳು ಲಭ್ಯವಿದೆ. ಕೊಂಡವಾರಪಲ್ಲಿಯಲ್ಲಿಯ ಶಾಸನವು ಕ್ರಿ.ಶ. ೧೪೧೮ರಲ್ಲಿ ಶ್ರೀಮನ್ ಮಹಾನಾಯಕಾಚಾರ್ಯ ಬೊಮ್ಮನಾಯಕ, ಸಂಗಮನಾಯಕ ಹಾಗೂ ಹಿರೇಚಿಂನಮನಾಯಕರು ಸೇರಿ ಗುಡಿಚೋಟ ಗಂಗಸಮುದ್ರ ಕೆರೆಯನ್ನು ಕಟ್ಟಿಸಿಕೊಟ್ಟ ವಿಚಾರವನ್ನು ದಾಖಲಿಸುತ್ತದೆ. ಕ್ರಿ.ಶ. ೧೫೭೧ರ ಬೀಚಗಾನಹಳ್ಳಿಯ ಶಾಸನವು ಮಹಾನಾಯಕಾಚಾರ್ಯ ಇನಗಬಿ ನಾಯಕನ ಮಗ ಬಸವನಾಯಕನು ಬೀಚಗಾನಹಳ್ಳಿಯ ಗರುಡದೇವರಿಗೆ ಮಂಡೆ ಚನ್ನರಾಯ (ಚನ್ನಕೇಶವ) ದೇವರಿಗೆ ಅಮೃತಪಡಿಗಾಗಿ ಬೀಚಗಾನಹಳ್ಳಿಗೆ ಚನ್ನಸಮುದ್ರ ಪ್ರತಿಮಾದೇವಿಯು ದಾನಕೊಟ್ಟ ವಿಚಾರವನ್ನು ದಾಖಲಿಸುತ್ತದೆ. ಕ್ರಿ.ಶ. ೧೬೫೩ರ ಗೂಳೂರು ಶಾಸನವು ಮಹಾನಾಯಕಾಚಾರ್ಯ ಗುಮ್ಮನಾಯಕ ಕರಿದಪ್ಪನಾಯಕ ಮತ್ತು ವಸಂತನಾಯಕರು, ಗುಯಲೂರಿನ ನಾರಪ, ಚಿನಪ ಎಂಬುವರಿಗೆ, ಗಯಲೂರಿನ ಎರಡು ಗ್ರಾಮಗಳನ್ನು ದಾನ ನೀಡಿದ ಬಗ್ಗೆ ದಾಖಲಿಸುತ್ತದೆ. ಬಾಲಿರೆಡ್ಡಿ ಗ್ರಾಮದ ಕ್ರಿ.ಶ. ೧೭೩೬ರ ಶಾಸನವು ಸ್ಥಾನವಾಸರದಲ್ಲಿದ್ದ ಮಹಾನಾಯಕಾಚಾರ್ಯ ಗುರುಮ್ಮನಾಯಕ ಕದಿರಪ್ಪನಾಯಕ ಮತ್ತು ನಾರಸಿಂಹ ನಾಯಕರು ಲಾಯಮಂಟಪ, ತಟಾಕ ನಿರ್ಮಿಸಿದ ವಿಷಯ ಹೇಳಿ ಅಚ್ಚುಕಟ್ಟು ನಿರ್ಮಿಸಿದ ಸಂಗತಿಯನ್ನು ತಿಳಿಸುವಲ್ಲಿ ಸ್ಥಿರನಿವಾಸದಲ್ಲಿ ಗುರುಮನಾಯಕನ ಹೆಸರಿನಲ್ಲಿ ಗುರಮ್ಮನ ಕೆರೆ ಕಟ್ಟಿಸಿ ಕೃಷಿಗೆ ಸೌಕರ್ಯ ಕಲ್ಪಿಸಿದ ಮಹತ್ವವಾದ ವಿಚಾರವನ್ನು ದಾಖಲಿಸುತ್ತದೆ. ೧೮೮೨ರವರೆಗೂ ಗುಮ್ಮನಾಯಕನ ಪಾಳ್ಯವು ತಾಲೂಕು ಕೇಂದ್ರವಾಗಿತ್ತು. ನಂತರ ಬಾಗೇಪಲ್ಲಿ ತಾಲೂಕಿಗೆ ವರ್ಗಾಯಿಸಲ್ಪಟ್ಟಿತು. ಬಾಗೇಪಲ್ಲಿಯಿಂದ ಸುಲಭವಾಗಿ ತಲುಪಬಲ್ಲ ಗುಮ್ಮನಾಯಕನ ಪಾಳ್ಯದ ಕೋಟೆಯು ಹಸಿರು ಪರಿಸರದ ನಡುವೆ ಕಂಗೊಳಿಸುತ್ತಿರುವ ಉತ್ತಮ ಯಾತ್ರಾಸ್ಥಳವಾಗಿದೆ. ಈ ಕೋಟೆಯ ಗೋಡೆಗಳು ಭೂ ಮಟ್ಟದಿಂದ ಸುಮಾರು ೫೦ ಮೀಟರ್ ಎತ್ತರವಾಗಿವೆ.

**ಗೂಳೂರು**: (ಬಾಗೇಪಲ್ಲಿ ತಾಲೂಕು: ಜನಸಂಖ್ಯೆ: ೭೩೧): ಬಾಗೇಪಲ್ಲಿಯಿಂದ ಎಂಟು ಕಿ.ಮೀ. ದೂರದಲ್ಲಿರುವ ಗೂಳೂರು ವೀರಶೈವರ ಪ್ರಸಿದ್ಧ ತೀರ್ಥಕ್ಷೇತ್ರವಾಗಿದೆ. ಇದೇ ಊರಿನಲ್ಲಿ ದೊರೆತ ಕ್ರಿ.ಶ. ೧೬೩೩ರ ಶಾಸನದಲ್ಲಿ ಈ ಸ್ಥಳವನ್ನು 'ಗುಯಳೂರು' ಎಂದು ಉಲ್ಲೇಖಿಸಲಾಗಿದೆ. ಗೂಳೂರಿನ ವೀರಭದ್ರ ದೇವಾಲಯದ ಬಳಿಯಿರುವ ಕ್ರಿ. ಶ. ೧೫೫೭ರ ಶಾಸನವು ಅಸ್ಪಷ್ಟವಾಗಿದ್ದು, ವಿಜಯನಗರದ ಆಳ್ವಿಕೆಯ ಅವಧಿಯಲ್ಲಿ ಮೆಲುಕು ವೊಡೆಯರಸು ಯಮಾಡವರಿ ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಖಾಸಗಿ ಮನೆಯ ಬಳಿ ಇರುವ ಕ್ರಿ. ಶ. ೧೬೩೩ರ ಶಾಸನವು ಮಹಾನಾಯಂಕಾಚಾರ್ಯನು ಗುಯಲೂರಿನ ಸಮಸ್ತರೆದುರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ಗ್ರಾಮದ ರಡ್ಡಿಕುಂಟೆಯ ಕೆಳಭಾಗದಲ್ಲಿರುವ ಬಂಡೆ ಶಾಸನವು ಅಸ್ಪಷ್ಟವಾಗಿದ್ದು, ಕೆರೆಯ ಕೋಡಿಯ ಕಟ್ಟೆ ಕೆಳಗೆ ಇದ್ದ ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಪಶ್ಚಿಮಕ್ಕೆ ಖಾಸಗಿ ಜಮೀನಿನಲ್ಲಿರುವ ಶಾಸನವು ಕ್ರಿ.ಶ. ೧೫೪೪ರಲ್ಲಿ ವಿಜಯನಗರದ ವೀರ ಪ್ರತಾಪ ಸದಾಶಿವರಾಯನ ಆಳ್ವಿಕೆಯಲ್ಲಿ ದೇವಮಹಾ ಅರಸು ಈ ಊರಿನ ಬಡಗಿಗಳ ವೃತ್ತಿ ತೆರಿಗೆಗಳನ್ನು ಮನ್ನಾ ಮಾಡಿದ ವಿಚಾರವನ್ನು ದಾಖಲಿಸುತ್ತದೆ. ಇದೇ ಊರಿನ ಖಾಸಗಿ ಮನೆಯೊಂದರ ಮುಂಭಾಗದಲ್ಲಿರುವ ಅಸ್ಪಷ್ಟವಾದ ಶಾಸನವು ಕ್ರಿ.ಶ. ೧೫೯೭ರಲ್ಲಿ ಕೆಲವು ಸರ್ವಮಾನ್ಯ ದಾನಗಳನ್ನು ನೀಡಿರುವ ವಿಚಾರವು ಮಾತ್ರ ದಾಖಲಿಸಿರುವುದು ವೇದ್ಯವಾಗುತ್ತದೆ. ಗೂಳೂರಿನಲ್ಲಿರುವ ಶ್ರೀಶೈಲ ನಿಡುಮಾಮಿಡಿ ಪೀಠವು ಹೊಂದಿರುವ ಕಟ್ಟಡವು ಪ್ರಸಿದ್ಧಿ ಪಡೆದಿದೆ. ಇದರ ಅರ್ಧಮಂಟಪ ಮತ್ತು ಮುಖಮಂಟಪಗಳಲ್ಲಿ ಇರುವ ಚತುಷ್ಕೋನಾಕಾರದ ಸ್ತಂಭಗಳ ಮೇಲೆ ಕಂಡುಬರುವ ಉಬ್ಬು ಶಿಲ್ಪಗಳು ಆಕರ್ಷಕವಾಗಿ ಮೂಡಿಬಂದಿವೆ. ಇವುಗಳ ಪೈಕಿ ಶ್ರೀಶೈಲ ಕ್ಷೇತ್ರಕ್ಕೆ ಸೇರಿದ ಜಗದ್ಗುರುಗಳ ಚಿತ್ರಗಳನ್ನೂ ಕೆತ್ತಿರುವರು. ಪ್ರಾಯಶಃ ದಕ್ಷಿಣ ಭಾರತದ ಯಾವುದೇ ಮಠದಲ್ಲಿಯೂ ಈ ಬಗೆಯ ವ್ಯಕ್ತಿ ಚಿತ್ರಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಗೂಳೂರು ಮಠದಲ್ಲಿರುವ ಜಗದ್ಗುರು ಪಂಡಿತಾಚಾರ್ಯರ ಮತ್ತು ಇತರೆ ಜಗದ್ಗುರುಗಳ ಸ್ತಂಭಶಿಲ್ಪಗಳು ಪುರಾತನವಾದುವೆಂದು ಹೇಳಲಾಗುತ್ತದೆ. ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ದಂಡ ಹಿಡಿದು ಮೂರನೇ ಕಣ್ಣಿನಂಥ ಲಲಾಟ ಲಾಂಛನವನ್ನು ಧರಿಸಿರುವ ಈ ಮೂರ್ತಿಯು ನಿಲುವಂಗಿ, ಕಂಕಣ ನೂಪುರಗಳನ್ನು ಧರಿಸಿರುವ ಮೂರ್ತಿಯು ಶಿಲ್ಪದ ಪ್ರಾಚೀನತೆಯ ಪ್ರತೀಕವಾಗಿದೆ. ಈ

ಮೂರ್ತಿಯು ಪ್ರಮಾಣಬದ್ಧವಾಗಿದ್ದು, ಶಿರೋಪಟ್ಟ, ಪದಾವಿನ್ಯಾಸ, ನಿರೂಪಣೆಯಲ್ಲಿ ಸರಳತೆ ಇವು ಇದರ ಪ್ರಾಚೀನತೆಯ ಲಕ್ಷಣಗಳಾಗಿವೆ. ಈ ಪ್ರದೇಶದಲ್ಲಿ ಪ್ರಚಲಿತವಾಗಿದ್ದ ಏಳು–ಎಂಟನೇ ಶತಮಾನದ ಚೋಳ ಶಿಲ್ಪದಲ್ಲಿ ಈ ರೀತಿಯ ಲಕ್ಷಣಗಳು ಕಂಡುಬರುತ್ತವೆ. ಒಂಬತ್ತನೇ ಶತಮಾನದಲ್ಲಿ ಇದ್ದರೆನ್ನಲಾದ ಸಿದ್ಧಮಲ್ಲ ಶಿವಾಚಾರ್ಯರ ಆಸೀನ ಮೂರ್ತಿಯೂ ಪುರಾತನವಾದುದು. ಹೀಗೆಯೇ ೧೦–೧೧ನೇ ಶತಮಾನದವರೆಗೆ ಈ ಮಠದ ಪೀಠದಲ್ಲಿದ್ದ ಆರು ವಿವಿಧ ಸ್ವಾಮಿಗಳ ಉಬ್ಬುಶಿಲ್ಪಗಳೂ ಇಲ್ಲಿಯ ಕಂಬಗಳ ಮೇಲೆ ಮೂಡಿಬಂದಿರುವುದು ವ್ಯಕ್ತವಾಗುತ್ತದೆ. ಈ ಮಠವು ಚಂದ್ರಗುಂಡ ಶಿವಾಚಾರ್ಯರ ಕಾಲದಲ್ಲಿ (ಕ್ರಿ.ಶ.೧೦೦೦–೧೦೪೮) ಚೋಳರಾಜನಿಂದ ನಿರ್ಮಿತವಾಯಿತೆಂಬ ಐತಿಹ್ಯವಿದೆ. ಮುಖಮಂಟಪದ ಸ್ತಂಭಗಳ ಮತ್ತೊಂದು ವೈಶಿಷ್ಟ್ಯವೆಂದರೇ ಚೌಕಟ್ಟಿಲ್ಲದ ಶಿಲ್ಪಗಳು. ಸಾಮಾನ್ಯವಾಗಿ ಚತುಷ್ಕೋನಾಕಾರದ ಸ್ತಂಭಗಳ ನಾಲ್ಕು ಮುಖಗಳಲ್ಲಿ ಆಕರ್ಷಕ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಆದರೇ, ಗೂಳೂರು ಮಠದ ಸ್ತಂಭ ಶಿಲ್ಪಗಳಿಗೆ ಈ ಮಾದರಿಯ ಚೌಕಟ್ಟಿಲ್ಲದಿರುವುದು ಗಮನೀಯವಾಗಿದೆ. ಇಲ್ಲಿಯ ಇತರೆ ದೇವತಾ ಮೂರ್ತಿಗಳ ಪೈಕಿ ನಟರಾಜನ ಶಿಲ್ಪವು ಪ್ರಾಚೀನ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಈತನು ಆಕುಂಚಿತವಾಮ ಭಂಗಿಯಲ್ಲಿದ್ದು ತ್ರಿಶೂಲ, ಡಮರು, ಅಗ್ನಿ, ಪ್ರಸಾರಿತಬಾಹು, ಅಭಯಮುದ್ರೆಗಳನ್ನು ಹೊಂದಿರುವನು. ನಟರಾಜನ ಜಟಾವಿನ್ಯಾಸವು ಆಕರ್ಷಕವಾಗಿದೆ. ಜಟೆಯಲ್ಲಿ ಚಂದ್ರನಾಗಲಿ, ಗಂಗೆಯಾಗಲಿ, ಸರ್ಪಗಳಾಗಲಿ ಇಲ್ಲದಿರುವುದೂ ಹಳೆಯ ಚೋಳ ಶೈಲಿಯನ್ನು ಸೂಚಿಸುತ್ತದೆ. ಕಾಲಕೆಳಗೆ ಅಪಸ್ಮಾರ ಪುರುಷನೂ ಇಲ್ಲದಿರುವುದು ಕೂಡ ಈ ಶಿಲಾಮೂರ್ತಿಯ ಪ್ರಾಚೀನತೆಯ ದ್ಯೋತಕವಾಗಿದೆ. ಇಲ್ಲಿರುವ ಇನ್ನೊಂದು ಪ್ರತಿಮೆ ಎಂದರೇ ಸುಖಾಸೀನರಾದ ಉಮಾಮಹೇಶ್ವರನದು. ಇಬ್ಬರ ಬಲಗೈಗಳಲ್ಲಿಯೂ ಅಭಯಮುದ್ರೆಯಿದೆ. ಶಿವನ ಎಡಗೈ ದೇವಿಯನ್ನು ಆಲಂಗಿಸಿದೆ, ಡಮರು, ತ್ರಿಶೂಲಗಳೂ ಶಿವನ ಉಳಿದ ಕೈಗಳಲ್ಲಿವೆ. ಇಬ್ಬರಿಗೂ ಕರಂಡಮುಕುಟದ ಕಿರೀಟವಿರುವುದು ಸ್ವಾರಸ್ಯಕರವಾಗಿದೆ. ಶಿವನ ಕರಂಡಮುಕುಟದ ಎರಡೂ ಪಕ್ಕಗಳಲ್ಲಿ ಜಟಾವಿನ್ಯಾಸವಿದೆ. ಇದೇ ರೀತಿ ಇಲ್ಲಿರುವ ವೃಷಭಾರೂಢ ಉಮಾಮಹೇಶ್ವರರು ಅತ್ಯಂತ ಅಲಂಕೃತವಾಗಿದ್ದು, ಆಕರ್ಷಕವಾಗಿ ಮೂಡಿಬಂದಿರುವುದು ಶಿಲ್ಪಿಯ ಕಲಾ ಪ್ರಾವೀಣ್ಯತೆಯನ್ನು ವ್ಯಕ್ತಪಡಿಸುತ್ತದೆ. ದೇವಾಲಯದ ಹಿಂಬದಿಯಲ್ಲಿರುವ ಬೊರಬಂಡೆಯ ಮೇಲೆ ಭಕ್ತನೊಬ್ಬನು ಶಿವಲಿಂಗವನ್ನು ಪೂಜಿಸುತ್ತಿರುವ ದೃಶ್ಯ, ಉಮಾಮಹೇಶ್ವರನು ಆತನ ಮುಂದೆ ಪ್ರತ್ಯಕ್ಷನಾಗಿರುವ ದೃಶ್ಯ, ಇದರಿಂದ ಪುಲಕಿತನಾದ ಭಕ್ತನು ಸಂಭ್ರಮನಾಗಿರುವ ದೃಶ್ಯ ಮೊದಲಾದುವುಗಳು ಉಬ್ಬು ಶಿಲ್ಪಗಳ ರೀತಿಯಲ್ಲಿ ಮೂಡಿಬಂದಿವೆ. ಇದೇ ಬಂಡೆಯ ಮೇಲೆ ವೃಷಭಾರೂಢ ಉಮಾಮಹೇಶ್ವರನ ಚಿತ್ರವೂ ಇದೆ. ಇದರ ಕೆಳಗೆ ಪ್ರಭಾವಳಿಯ ನಡುವೆ ಶಿವಲಿಂಗ, ಬಲಪಕ್ಕದಲ್ಲಿ ಧನುರ್ಧಾರಿಯಾದ ಭಕ್ತ (ಕಣ್ಣಪ್ಪನಿರಬಹುದು ಅಥವಾ ಕಿರಾತಾರ್ಜುನ ಪ್ರಸಂಗ) ಎಡಪಕ್ಕದಲ್ಲಿ ಇಬ್ಬರು ದಂಡಧಾರಿಗಳು ಎಲ್ಲವೂ ಪರಿಪೂರ್ಣ ಕಲಾ ಪ್ರತೀಕಗಳಾಗಿವೆ.

ಮಠದ ಹಿಂದೆ ಬೃಹದಾಕಾರವಾದ ಕಲ್ಲಾಸರೆಯ ಕೆಳಗೆ ನಿರ್ಮಿಸಿರುವ ಗವಿಯ ಗರ್ಭಗೃಹದಲ್ಲಿ ಬೋರು ಬಂಡೆಯ ಮೇಲೆ ಅಸ್ಪಷ್ಟವಾಗಿ ಅಪೂರ್ಣವಾದ ವೀರಭದ್ರನ ಮೂರ್ತಿಯನ್ನು ಕೆತ್ತಲಾಗಿದೆ. ಮಠದವರು ಇದನ್ನು ಗುಂಡು ವೀರಭದ್ರನೆಂದು ಕರೆಯುತ್ತಾರೆ. ದ್ವಿಬಾಹುಗಳನ್ನು ಹೊಂದಿರುವ ಈ ನಿರಾಲಂಕೃತ ಮೂರ್ತಿಯು ನಿರ್ವಿವಾದವಾಗಿಯೂ ಪ್ರಾಚೀನವಾದ ಶಿಲ್ಪವಾಗಿದೆ. ಆಂಧ್ರಪ್ರದೇಶದ ಮೊಗಲರಾಜಪುರ ಎಂಬ ಗುಹೆಯೊಂದರಲ್ಲಿ ಕಡೆದಿರುವ ಅರ್ಧನಾರೀಶ್ವರ ಮೂರ್ತಿಗೂ ಇದಕ್ಕೂ ಸಾದೃಶ್ಯಗಳಿವೆ ಎಂದು ಖ್ಯಾತ ವಿದ್ವಾಂಸರಾದ ಪ್ರೊ॥ ಎಸ್. ಕೆ. ರಾಮಚಂದ್ರರಾಯರು ಅಭಿಪ್ರಾಯಪಡುತ್ತಾರೆ. ಎರಡೂ ಕೈಗಳಲ್ಲಿ ವೀರಭದ್ರನು ಕತ್ತಿ ಹಾಗೂ ಮತ್ತೊಂದರಲ್ಲಿ ಅಲಗನ್ನು ಹಿಡಿದು ನಿಂತಿರುವ ಭಂಗಿಯು ಆಕರ್ಷಕವಾಗಿದೆ. ಸರಳವಾದ ಅಲಂಕರಣವನ್ನು ಹೊಂದಿರುವ ಈ ದ್ವಿಬಾಹು ಮೂರ್ತಿಯು ಕಿರೀಟವಿಲ್ಲದೇ ಸಾಮಾನ್ಯವಾದ ಶಿರೋಪಟ್ಟವನ್ನು ಹೊಂದಿದೆ. ಹಣೆಯ ಮೇಲೆ ರಕ್ತಗಂಧ ಲಾಂಛನವಿದೆ. ಇಲ್ಲಿರುವ ಇನ್ನೊಂದು ಸುಂದರ ಪ್ರತಿಮೆಯೆಂದರೇ ಭದ್ರಕಾಳಿ. ವೀರಭದ್ರನ ದೇವಿಯಾದ ಭದ್ರಕಾಳಿಯನ್ನು ವೀರಭದ್ರನ ಭಂಗಿಯಲ್ಲೇ ರಚಿಸಲಾಗಿದೆ. ಇಲ್ಲಿರುವ ಭಕ್ತವಿಗ್ರಹಗಳ ಪೈಕಿ ಮಠದ ವೀರಭದ್ರ ದೇವಾಲಯವನ್ನು ನಿರ್ಮಿಸಿರಬಹುದಾದ ಚೋಳರಾಜ ಮತ್ತು ರಾಣಿಯದೆಂದು ಹೇಳಲಾಗುತ್ತದೆ. ಇದೇ ರೀತಿ ಬೇಡರ ಕಣ್ಣಪ್ಪ ಭಿಕ್ಷಾಟಣಾ ಶಿವ ಮೊದಲಾದುವುಗಳು ಕಂಡುಬರುತ್ತವೆ. ಈ ಮಠದ ಅತ್ಯಂತ ಪ್ರಭಾವಿ ಪೀಠಾಧಿಪತಿಗಳಾಗಿದ್ದ ಡಾ॥ ಜಚನಿಯವರು ಸ್ವತಃ ವಿದ್ವಾಂಸರಾಗಿದ್ದು ನೂರಾರು ಕೃತಿಗಳನ್ನು ರಚಿಸಿರುವರು. ನಿಡುಮಾಮಿಡಿ ಮಠದ ಪೀಠವು ಅನೇಕ ಪರಿಣಾಮಕಾರಿ ಸಮಾಜೋಧಾರ್ಮಿಕ ಕಾರ್ಯಗಳನ್ನು ಧಾರ್ಮಿಕ ಚಟುವಟಿಕೆಗಳ ಜೊತೆಗೆ ಹಿಂದಿನಿಂದಲೂ ನಡೆಸಿಕೊಂಡು

ಬರುತ್ತಿದೆ ಹಾಗೂ ಅನೇಕ ಉತ್ತಮ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಗ್ರಂಥಗಳ ಪ್ರಕಟಣೆಯಲ್ಲೂ ತೊಡಗಿದೆ. ಈಗಿನ ಪೀಠಾಧಿಪತಿಗಳಾದ ವೀರಮಲ್ಲ ಚನ್ನಬಸವ ದೇಶಿಕೇಂದ್ರರು ಗೂಳೂರಿನಲ್ಲಿ ಹಲವು ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ.

**ಗೌರಿಬಿದನೂರು:** (ತಾಲೂಕು ಕೇಂದ್ರ: ಜನಸಂಖ್ಯೆ:೩೦,೫೩೭) ಜಿಲ್ಲೆಯ ವಾಯುವ್ಯದಲ್ಲಿ ಕೋಲಾರಕ್ಕೆ ೯೫ ಕಿ.ಮೀ ದೂರದಲ್ಲಿ ಉತ್ತರ ಪಿನಾಕಿನಿ ನದಿ ಎಡದಂತೆಯ ಮೇಲಿರುವ ಪಟ್ಟಣ. ಈ ತಾಲೂಕನ್ನು ಪಶ್ಚಿಮದಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ಮತ್ತು ಮಧುಗಿರಿ ತಾಲೂಕುಗಳು, ಉತ್ತರದಲ್ಲಿ ಆಂಧ್ರಪ್ರದೇಶದ ಅನಂತರಪುರ ಜಿಲ್ಲೆಯ ಹಿಂದೂಪುರ ತಾಲೂಕು ಪೂರ್ವದಲ್ಲಿ ಗುಡಿಬಂಡೆ ಮತ್ತು ಚಿಕ್ಕಬಳ್ಳಾಪುರ ತಾಲೂಕು ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕು ಸುತ್ತುವರೆದಿವೆ. ಬೆಂಗಳೂರು–ಗುಂತಕಲ್ ರೈಲುಮಾರ್ಗ ತಾಲೂಕಿನ ಮಧ್ಯಭಾಗದಲ್ಲಿ ದಕ್ಷಿಣೋತ್ತರವಾಗಿ ತೊಂಡೆಬಾವಿ. ಗೌರಿಬಿದನೂರು ಮತ್ತು ದೊಡ್ಡಕುರುಗೋಡು ಮೂಲಕ ಹಾದುಹೋಗುತ್ತದೆ. ಗೌರಿಬಿದನೂರು ಪಟ್ಟಣದಿಂದ ಬೆಂಗಳೂರು, ದೊಡ್ಡಬಳ್ಳಾಪುರ, ಗುಡಿಬಂಡೆ, ಚಿಕ್ಕಬಳ್ಳಾಪುರ, ಹಿಂದೂಪುರ ಮುಂತಾದ ಸ್ಥಳಗಳಿಗೂ ತೊಂಡೆ ಬಾವಿಯಿಂದ ಮಧುಗಿರಿಗೂ ರಸ್ತೆಗಳುಂಟು. ತಾಲೂಕಿನಲ್ಲಿ ಸಕ್ಕರೆ ಕಾರ್ಖಾನೆ, ಸಿಮೆಂಟ್ ಕೊಳವೆಗಳ ತಯಾರಿಕೆ, ಮರ ಕೊಯ್ಯುವ ಕಾರ್ಖಾನೆಗಳ ಜೊತೆಗೆ ಕೈಮಗ್ಗದ ಬಟ್ಟೆ ತಯಾರಿಕೆಗೆ ಜನಪ್ರಿಯವಾಗಿದೆ.

ಹಿಂದೆ ವಿದುರನ ವಾಸಸ್ಥಳವಾಗಿದ್ದು ಇದಕ್ಕೆ **'ವಿದುರೂರು'** ಎಂಬ ಹೆಸರಿತ್ತೆಂದೂ ಹೇಳಲಾಗಿದೆ. ಹಿಂದೆ ಗೌರಿಬಿದನೂರು ಪಟ್ಟಣ ದಾರಿನಾಯ್ಕನಪಾಳ್ಯದ ಒಡೆಯನ ವಶದಲ್ಲಿತ್ತು. ಆತ ತನ್ನ ಮಗಳಾದ ಗೌರಿಗೆ ಇದನ್ನು ಬಳುವಳಿಯಾಗಿ ಕೊಟ್ಟ ವಿದುರೂರು ಎಂಬ ಹೆಸರಿಗೆ ಆಕೆಯ ಹೆಸರೂ ಸೇರಿಕೊಂಡು ಇದು ಗೌರಿವಿದುರೂರು ಎನಿಸಿಕೊಂಡಿತು. ಅನಂತರ ಮುಸ್ಲಿಮರು ಇದನ್ನು ಗೋರಿಬಿದನೂರು ಎಂದು ಕರೆದರು. ಇದರ ಬಳಿಯಲ್ಲಿ ನಿರ್ಮಿಸಿಸಲಾಗಿದ್ದ ಗೋರಿಗಳಿಂದಾಗಿ ಇದಕ್ಕೆ ಈ ಹೆಸರು ಬಂತು. ಉತ್ತರಪಿನಾಕಿನಿ ನದಿಯ ಆಚೆಯ ದಡದಲ್ಲಿ, ಹಿರೇಬಿದನೂರಿನಲ್ಲಿ ಬಿಜಾಪುರದ ಒಬ್ಬ ಶ್ರೀಮಂತನಾಗಿದ್ದ ಹುಸೇನ್ ಷಾ ಮರ್ಜಾನ ಮತ್ತು ಕುಟುಂಬದವರ ಗೋರಿಗಳಿವೆ. ಗೌರಿಬಿದನೂರಿನಲ್ಲಿ ಅದೇ ಕಾಲದ ಜಲಾಲ್ ಬುಖಾರಿ ವಲಿಯ ದರ್ಗಾ ಇದೆ.

ಗೌರಿಬಿದನೂರಿನಲ್ಲಿ ನವಗ್ರಹ ಮತ್ತು ವೆಂಕಟರಮಣ ದೇವಾಲಯಗಳಿದ್ದು, ವೆಂಕಟರಮಣ ದೇವಸ್ಥಾನದ ಮೂಲ ವಿಗ್ರಹವು ಸು. ನಾಲ್ಕು ಅಡಿ ಎತ್ತರವಿದೆ. ರೈಲುಮಾರ್ಗ ನಿರ್ಮಾಣವಾದಂದಿನಿಂದ ಗೌರಿಬಿದನೂರು ಪ್ರವರ್ಧಮಾನವಾಗಿ ವ್ಯಾಪಾರ ವಾಣಿಜ್ಯ ಕೇಂದ್ರವಾಗಿದೆ. ಗೌರಿಬಿದನೂರಿನ ಸಮೀಪ ಬಾಬಾ ಪರಮಾಣು ಶಕ್ತಿ ಸಂಶೋಧನ ಸಂಸ್ಥೆಗೆ ಸೇರಿದ ಭೂಕಂಪಮಾಪನ ಕೇಂದ್ರವಿದೆ. ರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ, ಅಂಚೆ ತಂತಿ, ವಿದ್ಯುತ್, ಪಶುವೈದ್ಯಾಲಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಔಷಧಾಲಯ ಮುಂತಾದ ನಾಗರಿಕ ಸೌಲಭ್ಯಗಳನ್ನು ಹೊಂದಿ ಪುರಸಭಾಡಳಿತವನ್ನು ಹೊಂದಿದೆ. ಗೌರಿಬಿದನೂರು ತಾಲೂಕಿನಲ್ಲಿ (ಗೌರಿಬಿದನೂರಿನಿಂದ ೨೫ ಕಿ.ಮೀ.)ರುವ **ಆಲ್ಲೀಪುರ** ದಲ್ಲಿ ವಜ್ರ ಹಾಗೂ ಇತರೆ ಅಮೂಲ್ಯ ಕಲ್ಲುಗಳನ್ನು ಕತ್ತರಿಸುವ ಕಲಾಗಾರಿಕೆಯು ಇಂದಿಗೂ ಜಾರಿಯಲ್ಲಿದ್ದು ಮಹತ್ವದ ವಿಚಾರವಾಗಿದೆ. ಹಿರೇಬಿದನೂರಿನಲ್ಲಿ ಒಂದು ದರ್ಗಾ ಇದ್ದು, ವಾರ್ಷಿಕವಾಗಿ ಉರುಸ್ ನಡೆಯುತ್ತದೆ. ಗೌರಿಬಿದನೂರು ತಾಲೂಕಿನಲ್ಲಿರುವ **ವಾಟದ ಹೊಸಹಳ್ಳಿ** (ಗೌರಿಬಿದನೂರಿನಿಂದ ೧೧ ಕಿ.ಮೀ)ಯಲ್ಲಿ ಸುಂದರವಾದ ವಿಶಾಲವಾದ ಕೆರೆಯಿದ್ದು, ಪ್ರವಾಸಿತಾಣವನ್ನಾಗಿ ಅಭಿವೃದ್ಧಿಗೊಳಿಸಲು ಸಾಧ್ಯತೆಯಿದೆ. ಇದರ ಸಮೀಪದಲ್ಲಿಯೇ ಇರುವ ಚನ್ನರಾಯನ ಬೆಟ್ಟದ ತಪ್ಪಲಿನಲ್ಲಿ ಚನ್ನಕೇಶವಸ್ವಾಮಿ ದೇವಾಲಯವಿದೆ. ಅನೇಕ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತಿರುವ ಈ ದೇವಾಲಯದಲ್ಲಿ ಪ್ರತೀವರ್ಷ ವಿಜೃಂಭಣೆಯಿಂದ ಉತ್ಸವ ನಡೆಯುತ್ತದೆ. ಆಂಧ್ರಪ್ರದೇಶದ ಹಿಂದೂಪುರ ರಸ್ತೆಯಲ್ಲಿರುವ **ಸಂತೆಬಿದನೂರಿ** ನಲ್ಲಿ (ಗೌರಿಬಿದನೂರಿನಿಂದ ೧೨ ಕಿ.ಮೀ.) ಉತ್ತರಾಧಿಮಠದ ಯತಿಗಳಾದ ಸತ್ಯವರತೀರ್ಥ ಮತ್ತು ಸತ್ಯಪಾರಾಯಣತೀರ್ಥರ ಬೃಂದಾವನಗಳು ಹಾಗೂ ಪ್ರಸಿದ್ಧ ಆಂಜನೇಯನ ದೇವಾಲಯಗಳೂ ಇವೆ. ಸಂತೆಬಿದನೂರಿಗೆ ಕರ್ನಾಟಕದ ವಿವಿಧ ಭಾಗಗಳಿಂದ ಭಕ್ತಾದಿಗಳು ವರ್ಷವಿಡೀ ಭೇಟಿ ಕೊಡುವುದು ರೂಢಿಯಲ್ಲಿದೆ. **ಮುದ್ದಗಾನಕುಂಟೆ** (ಗೌರಿಬಿದನೂರು ತಾಲೂಕು): ಗೌರಿಬಿದನೂರು–ಮಂಚೇನಹಳ್ಳಿ ರಸ್ತೆಯಲ್ಲಿ (ಗೌರಿಬಿದನೂರಿನಿಂದ ಮೂರು ಕಿ.ಮೀ.)ರುವ ಮುದ್ದಗಾನಕುಂಟೆಯು ಆಕರ್ಷಕ ಬೆಟ್ಟಗುಡ್ಡಗಳನ್ನು ಹೊಂದಿರುವ ತಾಣವಾಗಿದೆ. ಈ ಸ್ಥಳದಲ್ಲಿರುವ ಪ್ರಮುಖ ದೇವಾಲಯಗಳೆಂದರೇ ಗಂಗಾ–ಭಾಗೀರಥಿ, ವೆಂಕಟರಮಣ ಹಾಗೂ ಆಂಜನೇಯ ಮೊದಲಾದುವು. ಗಂಗಾ–ಭಾಗೀರಥಿ ದೇವಾಲಯವು ವಿಶಾಲವಾದ ಆವರಣವನ್ನು ಹೊಂದಿದ್ದು ಆಕರ್ಷಕ ಕೊಳವನ್ನು ಹೊಂದಿದೆ. ಇದರ ಬಳಿಯೇ ಚಿಕ್ಕ ಗರ್ಭಗೃಹ ಹಾಗೂ ಮುಖಮಂಟಪವನ್ನು

ಹೊಂದಿರುವ ಕಟ್ಟಡವಿದ್ದು, ಗಂಗಾ–ಭಾಗೀರಥಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿದೆ. ಈ ದೇವಾಲಯಕ್ಕೆ ಹೆಚ್ಚಾಗಿ ಹೆಂಗಸರು ಭೇಟಿ ನೀಡುತ್ತಾರೆ. ಈ ಕೊಳದಲ್ಲಿ ಮಿಂದು ಗಂಗಾ–ಭಾಗೀರಥಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ, ದಿನವಿಡೀ ಇಲ್ಲೇ ತಂಗುವುದು ರೂಢಿಯಲ್ಲಿದೆ. ಈ ದೇವಾಲಯವು ವಿಶೇಷ ಜಾಗೃತ ಸ್ಥಳವಾಗಿದ್ದು ಪ್ರತಿ ಸೋಮವಾರದಂದು ಜಾತ್ರೆ ನಡೆಯುವ ಸಂಪ್ರದಾಯವಿದೆ.

**ದಾರಿನಾಯಕನ ಪಾಳ್ಯ** (ಗೌರಿಬಿದನೂರು ತಾಲೂಕು:ಜನಸಂಖ್ಯೆ:೪,೨೯೭): ಗೌರಿಬಿದನೂರಿನಿಂದ ಸುಮಾರು ೧೩ ಕಿ.ಮೀ. ದೂರದಲ್ಲಿರುವ ದಾರಿನಾಯಕನ ಪಾಳ್ಯವು ಹೋಬಳಿ ಕೇಂದ್ರವಾಗಿದ್ದು, 'ಡಿ' ಪಾಳ್ಯ ಎಂಬ ಹೆಸರುಗಳಿಂದಲೂ ಜನಪ್ರಿಯವಾಗಿದೆ. ಈ ಊರಿನ ಸ್ಥಳನಾಮವು ಸ್ಥಳೀಯ ಪಾಳೆಯಗಾರರುಗಳ ಆಳ್ವಿಕೆಯನ್ನು ನೆನಪಿಸುತ್ತದೆ. ಈ ಊರಿನ ಪಾಳೆಯ ಪಟ್ಟು ಚಿತ್ರದುರ್ಗದ ಪಾಳೆಯಗಾರರ ಹತೋಟಿಯಲ್ಲಿತ್ತೆಂದು ಪ್ರತೀತಿಯಿದೆ. ಈ ಗ್ರಾಮದ ಸುತ್ತಲೂ ಕೋಟೆಯ ಅವಶೇಷಗಳು ಇಂದಿಗೂ ಕಂಡು ಬರುತ್ತವೆ. ಅತ್ಯಂತ ರಮಣೀಯವಾದ ಬೆಟ್ಟಗುಡ್ಡಗಳಿಂದ ಕೂಡಿದ್ದು ಅಲ್ಪಸ್ವಲ್ಪ ಅರಣ್ಯವನ್ನು ಹೊಂದಿರುವುದರಿಂದ ದಾರಿನಾಯಕನ ಪಾಳ್ಯವು ಆಕರ್ಷಣೀಯ ತಾಣವಾಗಿದೆ. ಈ ಊರಿನ ಪ್ರಮುಖವಾದ ವೆಂಕಟರಮಣ ದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿದ್ದು ವಿಶಾಲವಾದ ಒಳ ಮತ್ತು ಹೊರ ಪ್ರಾಕಾರಗಳನ್ನು ಹೊಂದಿದೆ. ದೇವಾಲಯದ ಹೊರಭಾಗದಲ್ಲಿ ನಾಲ್ಕಾರು ರಥಕ್ಕೆ ಒಳಸಲಾಗುತ್ತಿದ್ದ ಕಲ್ಲಿನ ಚಕ್ರಗಳು ಕಂಡುಬರುತ್ತವೆ. ಈ ದೇವಾಲಯದ ಪ್ರವೇಶ ದ್ವಾರದ ಬಳಿಯೇ ರಂಗನಾಥಸ್ವಾಮಿಯ ಸಣ್ಣ ದೇವಾಲಯವಿದೆ. ಈ ಗುಡಿಯಲ್ಲಿರುವ ಶೇಷಶಯನನಾಗಿರುವ ರಂಗನಾಥಸ್ವಾಮಿಯು ಸುಮಾರು ಮೂರು ಅಡಿ ಎತ್ತರ ಹಾಗೂ ನಾಲ್ಕು ಅಡಿ ಅಗಲವಿದ್ದು ಪಾದಗಳ ಬಳಿ ಶ್ರೀದೇವಿ–ಭೂದೇವಿಯರ ಕಿರುಶಿಲ್ಪಗಳನ್ನು ಹೊಂದಿದೆ. ವೆಂಕಟರಮಣ ದೇವಾಲಯವು ಗರ್ಭಗೃಹ, ಅರ್ಧಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಶ್ರೀದೇವಿ ಮತ್ತು ಭೂದೇವಿಯರಿಂದ ಕೂಡಿರುವ ವೆಂಕಟರಮಣ ವಿಗ್ರಹವನ್ನು ಹೊಂದಿದೆ. ಈ ವಿಗ್ರಹವು ಚತುರ್ಭುಜಗಳನ್ನು ಹೊಂದಿದ್ದು ಶಂಖ, ಚಕ್ರ, ವರದ ಮತ್ತು ಕಟೀ ಹಸ್ತಗಳನ್ನು ಹೊಂದಿದೆ. ಮುಖಮಂಟಪದಲ್ಲಿರುವ ಸ್ತಂಭಗಳ ಮೇಲೆ ವಿಷ್ಣುಪುರಾಣಕ್ಕೆ ಸಂಬಂಧಿಸಿದ ಹಲವು ಆಕರ್ಷಕ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಅರ್ಧಮಂಟಪದಲ್ಲಿ ವಿಶ್ವಕ್‌ಸೇನ ಹಾಗೂ ಆಳ್ವಾರರುಗಳ ಬಿಡಿ ಶಿಲ್ಪಗಳು ಕಂಡುಬರುತ್ತವೆ. ದೇವಾಲಯದ ಸುತ್ತಲೂ ಒಳಪ್ರಕಾರವಿದ್ದು, ಪ್ರದಕ್ಷಿಣಾ ಪಥವನ್ನು ಹೊಂದಿದೆ. ಮುಖ್ಯ ದೇವಾಲಯದ ಸುತ್ತಲೂ ಹಲವಾರು ಚಿಕ್ಕಚಿಕ್ಕ ಮಂಟಪಗಳು ಕಂಡುಬರುತ್ತವೆ. ಗರ್ಭಗೃಹದ ಮೇಲಿರುವ ದ್ರಾವಿಡ ಶೈಲಿಯ ಶಿಖರವು ಸುಸ್ಥಿತಿಯಲ್ಲಿದೆ. ಮುಖಮಂಟಪದ ಛಾವಣಿಯಲ್ಲಿ ಭುವನೇಶ್ವರಿ ಇದ್ದು ಮಧ್ಯದಲ್ಲಿ ಕಲ್ಲಿನಿಂದ ಕೆತ್ತಲಾಗಿರುವ ಮೊಗ್ಗಿನ ಅಲಂಕಾರವಿದೆ. ಪಾಳ್ಯದ ವೆಂಕಟರಮಣ ದೇವಾಲಯವು ವರ್ಷವಿಡೀ ಸಹಸ್ರಾರು ಭಕ್ತರನ್ನು ಆಕರ್ಷಿಸುತ್ತಿದೆ.

**ಚಿಂತಾಮಣಿ:** (ತಾಲೂಕು ಕೇಂದ್ರ: ಜನಸಂಖ್ಯೆ:೬೫, ೪೯೩) ಕೋಲಾರ ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ ಉಪ ವಿಭಾಗಕ್ಕೆ ಸೇರಿದೆ. ಈ ತಾಲೂಕನ್ನು ಉತ್ತರದಲ್ಲಿ ಬಾಗೇಪಲ್ಲಿ ತಾಲೂಕು ಮತ್ತು ಆಂಧ್ರಪ್ರದೇಶ, ಪಶ್ಚಿಮದಲ್ಲಿ ಶಿಡ್ಲಘಟ್ಟ ತಾಲೂಕು, ದಕ್ಷಿಣದಲ್ಲಿ ಕೋಲಾರ ತಾಲೂಕು ಮತ್ತು ಪೂರ್ವದಲ್ಲಿ ಶ್ರೀನಿವಾಸಪುರ ತಾಲೂಕು ಸುತ್ತುವರೆದಿವೆ. ತಾಲೂಕಿನಲ್ಲಿ ಎರಡು ಸ್ಪಷ್ಟ ಭೌಗೋಳಿಕ ವಿಭಾಗಗಳಿವೆ. ಚಿಂತಾಮಣಿ–ಬಾಗೇಪಲ್ಲಿ ರಸ್ತೆಯ ಉತ್ತರಭಾಗ ಕಲ್ಲುಸೀಮೆ, ಸಣ್ಣಪುಟ್ಟ ಬೆಟ್ಟಗಳು ಮತ್ತು ಕಲ್ಲುಮಿಶ್ರಿತ ಭೂಮಿಯಿದ್ದು, ಉತ್ತರಕ್ಕೆ ಇಳಿಜಾರಾಗಿದೆ. ದಕ್ಷಿಣ ಭಾಗ ಕೆಂಪು ಮಣ್ಣಿನ ಬಯಲುಸೀಮೆ. ಅಲ್ಲಲ್ಲಿ ಸಣ್ಣಪುಟ್ಟ ಕಣಶಿಲೆಯ ಬೆಟ್ಟಗಳೂ ವಿಶಾಲವಾದ ಕೆಂಪು ಜಂಬುಮಣ್ಣಿನ ಬಯಲೂ ಇದ್ದು ಸುಮಾರು ನೈಋತ್ಯದೆಡೆಗೆ ಇಳಿಜಾರಾಗಿದೆ. ಮುರುಗಮಲೆ, ಅಂಬಾಜಿದುರ್ಗ (ಎತ್ತರ ಸು. ೧೩೪೧ ಮೀ) ಮತ್ತು ರಹಮಾನ್‌ಘರ್ (೧೩೦೪ ಮೀ) ಮುಖ್ಯವಾದ ಬೆಟ್ಟಗಳು. ತಾಲೂಕಿನ ವಾಯವ್ಯದಲ್ಲಿ ಕೆಲವೇ ಕಿಮೀ ದೂರ ಪಾಪಾಘ್ನಿ ನದಿ ಹರಿದು ಆಂಧ್ರಪ್ರದೇಶವನ್ನು ಪ್ರವೇಶಿಸುತ್ತದೆ. ತಾಲೂಕಿನ ವಾಯುಗುಣ ಹಿತಕರವಾಗಿದ್ದು, ವಾರ್ಷಿಕ ಸರಾಸರಿ ಮಳೆ ೭೧೬.೫೫ ಮಿಮೀ. ಚಿಂತಾಮಣಿಯಲ್ಲಿ ದೊರಕುವ ಬಿಳಿಯ ಜೇಡಿಮಣ್ಣು ಪಿಂಗಾಣಿ ಉಪಕರಣಗಳ ತಯಾರಿಕೆಗೆ ಉಪಯುಕ್ತವಾಗಿದ್ದು ತಾಲೂಕಿನ ಆಡಳಿತಕೇಂದ್ರವಾದ ಚಿಂತಾಮಣಿ ಕೋಲಾರಕ್ಕೆ ವಾಯವ್ಯದಲ್ಲಿ ೩೨ ಕಿ.ಮೀ. ದೂರದಲ್ಲಿದೆ. ಬೆಂಗಳೂರು–ಬಂಗಾರಪೇಟೆ ನ್ಯಾರೋಗೇಜ್ ರೈಲು ಮಾರ್ಗ ಇದರ ಮುಖಾಂತರ ಹಾದುಹೋಗುತ್ತಿತ್ತು.

ಚಿಂತಾಮಣಿ ಈಗ ನಗರಸಭೆ ಆಗಿದೆ. ಪಟ್ಟಣಕ್ಕೆ ಕನ್ನಂಪಲ್ಲಿ ಕೆರೆ ಮತ್ತು ಕೊಳವೆಬಾವಿಗಳಿಂದ ನೀರು ಸರಬರಾಜು ಆಗುತ್ತದೆ. ಅಗರಬತ್ತಿ ತಯಾರಿಕೆ, ಚಿನ್ನ–ಬೆಳ್ಳಿ ಕೆಲಸಗಳಿಗೆ ಚಿಂತಾಮಣಿ ಪ್ರಸಿದ್ಧವಾಗಿದೆ. ಜಿಲ್ಲೆಯ ಪ್ರಥಮ ನಿಯಂತ್ರಿತ ಮಾರುಕಟ್ಟೆ ಆರಂಭವಾದದ್ದು ಚಿಂತಾಮಣಿಯಲ್ಲೇ. ಇದರ ಮೂಲಕ ಬೆಲ್ಲ, ಹುಣಸೆ, ಮೆಣಸಿನಕಾಯಿಯ ವ್ಯಾಪಾರ ಹೇರಳವಾಗಿ ಜರಗುತ್ತದೆ. ಚಿಂತಾಮಣಿಯಿಂದ ತಾಲೂಕಿನ ಮತ್ತು ಹೊರಗಿನ ಮುಖ್ಯ ಸ್ಥಳಗಳಿಗೆ ರಸ್ತೆಗಳಿವೆ.

ಚಿಂತಾಮಣಿರಾವ್ ಎಂಬ ಮರಾಠ ನಾಯಕ ಈ ಪಟ್ಟಣವನ್ನು ಸ್ಥಾಪಿಸಿದನೆಂದೂ, ಆದ್ದರಿಂದ ಇದಕ್ಕೆ ಆತನ ಹೆಸರು ಬಂದಿದೆಯೆಂದೂ ಹೇಳಲಾಗಿದೆ. ನಗರದ ಹೊರವಲಯದ ಬೂರಗಮಾಕಲ ಹಳ್ಳಿಯಲ್ಲಿ ದೊರಶೆಟ್ಟಿ ಏಕ್ಕೇರಿ ಆಂಜನೇಯ ದೇವಾಲಯವಿದ್ದು, ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ನಗರದಲ್ಲಿ ಅಂಜನಾದ್ರಿ ಬೆಟ್ಟ, ಹರಿಹರೇಶ್ವರ, ನಗರೇಶ್ವರ ನಾಗನಾಥೇಶ್ವರ, ವರದಾಂಜನೇಯ (ಅಂಜನಾದ್ರಿ ಬೆಟ್ಟದ ಮೇಲೆ), ಸಹನೇಶ್ವರ, ಕನ್ನಿಕಾಪರಮೇಶ್ವರಿ, ಗಣಪತಿ (ಹೊಸದು), ಕಾಳಿಕಾಂಬ, ಮೊದಲಾದ ದೇವಾಲಯಗಳಿವೆ. ಚಿಂತಾಮಣಿಯ ಆಜಾದ್‌ಚೌಕದ ಹರಿಹರೇಶ್ವರ ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿತವಾಗಿದೆ. ದೇವಾಲಯದಲ್ಲಿ ಆಯತಾಕಾರದ ಮೂರು ಗರ್ಭಗೃಹಗಳಿದ್ದು, ಮಧ್ಯದ ಗರ್ಭಗೃಹ ಚೌರಸವಾಗಿದ್ದು, ಶ್ರೀದೇವಿ ಭೂದೇವಿ ಸಮೇತನಾದ ವೆಂಕಟೇಶ್ವರನ ವಿಗ್ರಹವಿದೆ. ಬಲಭಾಗದ ಗರ್ಭಗೃಹದಲ್ಲಿ ಆಂಜನೇಯ ಹಾಗೂ ಎಡಭಾಗದ ಗರ್ಭಗೃಹದಲ್ಲಿ ಮಹಾಲಕ್ಷ್ಮಿಯ ಪ್ರತ್ಯೇಕ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಗರ್ಭಗೃಹಗಳ ಮುಂಭಾಗದಲ್ಲಿ ವಿಶಾಲವಾದ ಆಯತಾಕಾರವಾದ ನವರಂಗವಿದೆ. ಇದರಲ್ಲಿರುವ ಸ್ತಂಭಗಳು ಚೌರಸವಾಗಿದ್ದು, ಅವುಗಳ ಮೇಲೆ ಹಲವು ಉಬ್ಬು ಶಿಲ್ಪಗಳಿವೆ. ಹರಿಹರೇಶ್ವರ ದೇವಾಲಯದ ಬಲಭಾಗದಲ್ಲಿ ಪ್ರತ್ಯೇಕವಾದ ಶಿವದೇವಾಲಯವಿದೆ. ಇದನ್ನು ಹರಿಹರೇಶ್ವರ ಲಿಂಗವೆಂದು ಕರೆಯಲಾಗಿದ್ದು, ಗರ್ಭಗೃಹ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ನವರಂಗವು ವಿಶಾಲವಾಗಿದ್ದು, ಮಧ್ಯಭಾಗದಲ್ಲಿ ನಾಲ್ಕು ಸ್ತಂಭಗಳಿದ್ದು, ಮುಖಮಂಟಪವು ಎರಡು ಪ್ರವೇಶದ್ವಾರಗಳನ್ನು ಹೊಂದಿದೆ. ನವರಂಗದ ಬಲಭಾಗದಲ್ಲಿ ನವಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟಪದ ಎದುರಿಗೆ ಪ್ರತ್ಯೇಕವಾದ ನಂದಿಮಂಟಪವಿದೆ ಹಾಗೂ ಇದರ ಎದುರು ಭಾಗದಲ್ಲಿ ಧ್ವಜಸ್ತಂಭ ಹಾಗೂ ಗರುಡ ಕಂಬಗಳಿವೆ. ದೇವಾಲಯದ ಪ್ರಾಕಾರದ ಬಲಭಾಗದಲ್ಲಿ ವಿಶಾಲವಾದ ಕಲ್ಯಾಣಮಂಟಪವಿದ್ದು, ಎದುರು ಭಾಗದಲ್ಲಿ ಸತ್ಯನಾರಾಯಣಸ್ವಾಮಿಯ ಕಿರು ಗರ್ಭಗೃಹವಿದೆ. ಮುಖ್ಯದೇವಾಲಯದ ಬಲಭಾಗದಲ್ಲಿ ಪಾರ್ವತಿ ಅಮ್ಮನವರ ಪ್ರತ್ಯೇಕ ಗುಡಿಯಿದೆ. ಮುಖ್ಯ ಗರ್ಭಗೃಹದ ಮೇಲ್ಭಾಗದಲ್ಲಿ ದ್ರಾವಿಡಶೈಲಿಯ ಶಿಖರವಿದೆ ಹಾಗೂ ಒಳಪ್ರಾಕಾರದಲ್ಲಿ ಪ್ರದಕ್ಷಿಣಾಪಥವಿದೆ. ನವರಂಗದ ಮುಂಭಾಗದಲ್ಲಿ ತೆರೆದ ಮುಖಮಂಟಪ. ಎದುರಿಗೆ ಎತ್ತರವಾದ ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ನಿರ್ಮಿಸಲಾಗಿರುವ ರಾಯಗೋಪುರವಿದೆ. ಹರಿಹರೇಶ್ವರ ದೇವಾಲಯವು ಸದಾ ಧಾರ್ಮಿಕ ಚಟುವಟಿಕೆಗಳ ಹಾಗೂ ಉಪನ್ಯಾಸ ಕೇಂದ್ರವಾಗಿರುತ್ತದೆ. ದೇವಾಲಯವು ಒಂದೇ ಸಮುದಾಯ ಕಟ್ಟಡಗಳನ್ನು ಹೊಂದಿದ್ದು, ಈಶ್ವರ, ವೆಂಕಟರಮಣ, ಗಣೇಶ, ಆಂಜನೇಯ, ಮಹಾಲಕ್ಷ್ಮಿ ವಿವಿಧ ದೇವ ದೇವತೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಆದುದರಿಂದ ಈ ದೇವಾಲಯಕ್ಕೆ ಹರಿಹರೇಶ್ವರ ದೇವಾಲಯವೆಂದು ಕರೆದು ಇದೊಂದು ಧಾರ್ಮಿಕ ಸೌಹಾರ್ದಯುತ ಸಂಘಟನೆಯ ಕೇಂದ್ರವಾಗಿದೆ. ಈ ದೇವಾಲಯದಲ್ಲಿ ವೈಶಾಖ ಶುದ್ಧ ಪೂರ್ಣಿಮೆಯಂದು ರಥೋತ್ಸವ ಹಾಗೂ ವಿಶೇಷ ಉತ್ಸವಗಳು ಜರುಗಿದಾಗ ಸಹಸ್ರಾರು ಭಕ್ತರುಗಳು ಸೇರುತ್ತಾರೆ. ಈ ದೇವಾಲಯದ ಎದುರಿಗೆ ಸ್ವಲ್ಪ ದೂರದಲ್ಲಿ ಅತ್ಯಂತ ಆಕರ್ಷಕ ಶಿಲ್ಪಾಲಂಕಾರಗಳನ್ನು ಹೊಂದಿರುವ ಕನ್ನಿಕಾಪರಮೇಶ್ವರಿ ದೇವಾಲಯವಿದೆ. ಮೈಸೂರು ಅರಸರ ಕಾಲದಲ್ಲಿ ನಿರ್ಮಿತವಾಗಿರುವ ಮೂಲತಃ ಶ್ರೀದೇವಿ–ಭೂದೇವಿ ಸಮೇತನಾದ ಜನಾರ್ಧನನ ವಿಗ್ರಹವು ಮಧ್ಯದ ಗರ್ಭಗೃಹದಲ್ಲಿದ್ದು, ಅಕ್ಕಪಕ್ಕದಲ್ಲಿರುವ ಎರಡು ಕಿರು ಗರ್ಭಗೃಹಗಳಲ್ಲಿ ಬಲಭಾಗಕ್ಕೆ ಕನ್ನಿಕಾಪರಮೇಶ್ವರಿ ಹಾಗೂ ಎಡಭಾಗಕ್ಕೆ ನಗರೇಶ್ವರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಗರ್ಭಗೃಹದ ಸುತ್ತಲೂ ಹೊರಗೋಡೆಗಳ ಮೇಲೆ ಹಿರಣ್ಯಕಶ್ಯಪುವನ್ನು ಸಂಹಾರ ಮಾಡುತ್ತಿರುವ ಉಗ್ರನರಸಿಂಹ, ಹೂವಿನ ಅಲಂಕಾರಗಳು, ನಾಲ್ಕು ಸಾಲುಗಳಲ್ಲಿ ಅಶ್ವಸೇನೆ, ಶ್ರೀರಾಮಪಟ್ಟಾಭಿಷೇಕ, ನಾಗಬಂಧ, ಮಿಥುನ ಶಿಲ್ಪಗಳು ಹಾಗೂ ಇತರೆ ಚಿತ್ತಾಕರ್ಷಕ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಇದೇ ಶಿಲ್ಪಗಳ ಸಾಲಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಸಿಂಹಾಸನದ ಮೇಲೆ ಕುಳಿತಿರುವ ಶಿಲ್ಪ, ಬೆಣ್ಣೆ ಕಡೆಯುತ್ತಿರುವ ಸ್ತ್ರೀಯರು. ಚಿಂತಾಮಣಿಯ ಊರಿನ ಹಿಂಭಾಗದಲ್ಲಿ ತಲೆ ಎತ್ತಿರುವ ನೈಸರ್ಗಿಕವಾದ ಅಂಜಾನಾದ್ರಿ ಬೆಟ್ಟದ ಮೇಲೆ ಸುಂದರ ವಾಸ್ತುರಚನೆ ಹೊಂದಿರುವ ವರದಾಂಜನೇಯ ಸ್ವಾಮಿ ದೇವಾಲಯವು ಇಲ್ಲಿಯ ಪ್ರಮುಖ ಪ್ರವಾಸಿ ಆಕರ್ಷಣೆಯಾಗಿದೆ. ಬೆಟ್ಟವನ್ನು ಹತ್ತಲು ವ್ಯವಸ್ಥಿತವಾದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಊರಿನ ಪ್ರಮುಖ ದೇವಾಲಯ/

ತಾಣವಾಗಿರುವ ಈ ಬೆಟ್ಟ ಹಾಗೂ ದೇವಾಲಯವು ವರ್ಷದಲ್ಲಿ ಒಮ್ಮೆ ನಡೆಯುವ ರಥೋತ್ಸವದಲ್ಲಿ ಸಹಸ್ರಾರು ಜನ ಭಕ್ತಾದಿಗಳನ್ನು ಆಕರ್ಷಿಸುತ್ತದೆ. ಊರಿನಲ್ಲಿ ದೇವಾಲಯಗಳೇ ಅಲ್ಲದೇ ರಾಘವೇಂದ್ರಸ್ವಾಮಿ ಮಠ, ಯಾಜ್ಞವಲ್ಕ್ಯ ಆಶ್ರಮ ಬ್ರಹ್ಮಚೈತನ್ಯಮಂದಿರ, ಶಂಕರಮಠ, ಶ್ರೀರಾಮಮಂದಿರ ಹಾಗೂ ಇತರೆ ಧಾರ್ಮಿಕ ಕೇಂದ್ರಗಳೂ ಕಂಡುಬರುತ್ತದೆ. ಊರಿನಲ್ಲಿರುವ ಎನ್.ಆರ್.ಬಡಾವಣೆಯಲ್ಲಿ ಪ್ರಾಟೆಸ್ಟೆಂಟ್ ಚರ್ಚ್ ಹಾಗೂ ಚಿಕ್ಕಬಳ್ಳಾಪುರ ರಸ್ತೆಯಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚ್‌ಗಳಿವೆ. ಬಸ್‌ನಿಲ್ದಾಣದ ಬಳಿ ಒಂದು ಜಾಮಿಯಾ ಮಸೀದಿ ಇದೆ. ಇದೇ ತಾಲೂಕಿನ ಬರಡುಗುಂಟೆಯಲ್ಲಿ ಆಕರ್ಷಕವಾದ ವೆಂಕಟರಮಣ ದೇವಾಲಯವಿದೆ. ಚಿಂತಾಮಣಿಗೆ ಸೇರಿದಂತೆ ಇರುವ **ನೆಕ್ಕುಂದಿ** (ಬೇಚರಾಕ್) ಗ್ರಾಮದಲ್ಲಿ ಗಂಗರ ಕಾಲದ ವೀರಗಲ್ಲುಗಳು, ಶಾಸನಗಳು ಹಾಗೂ ಅವಶೇಷಗಳಿವೆ. ನೆಕ್ಕುಂದಿ ಗ್ರಾಮದಲ್ಲಿರುವ ಶಿಥಿಲವಾದ ಸೋಮೇಶ್ವರ ದೇವಾಲಯದ ತಳಪಾದಿಯ ಮೇಲಿರುವ ಸು.ಕ್ರಿ.ಶ. ೯೫೫ರ ಗೌವುಂಡ ಸೋಮಿದೇವನು ಸ್ಥಳೀಯ ದೇವರಿಗೆ ನೀಡಿದ ಹಲವು ದೀಪದಾನಗಳನ್ನು ಹಾಗೂ ಇತರೆ ದತ್ತಿಗಳನ್ನು ದಾಖಲಿಸುತ್ತಾ ಸು.ಕ್ರಿ.ಶ. ೮೮೫ರ ಲಕ್ಷಣಗಳನ್ನು ಹೊಂದಿದ್ದು, ಪಲ್ಲವಕುಲದ ನೊಳಂಬಾದಿರಾಜನು ಕುಂಡಯ್ಯನು ಕೋವರೇಯ ಗಾವುಂಡನ ಮಗನಾದ ಕೊಂಗೆರೇಯನು ಯುದ್ಧದಲ್ಲಿ ಮಡಿದ ಸ್ಮಾರಕವಾಗಿ ಈ ವೀರಗಲ್ಲು ಶಾಸನವನ್ನು ಹಾಕಿಸಿದ ವಿವರಗಳನ್ನು ದಾಖಲಿಸುತ್ತದೆ. ಇದರ ಬಳಿಯೇ ಇರುವ ಇನ್ನೊಂದು ವೀರಗಲ್ಲು ಅಸ್ಪಷ್ಟ ಶಾಸನವು ಇದೇ ಕಾಲಕ್ಕೆ ಸೇರಿದ್ದು ಖಂಡೇರಾಯರನು ವೀರಸ್ವರ್ಗ ಸೇರಿದ ವಿಚಾರವನ್ನು ದಾಖಲಿಸುತ್ತದೆ. ಇದರ ಸಮೀಪವೇ ಇರುವ ನೆಕ್ಕುಂದಿ ಅಗ್ರಹಾರದ ಹುಣಸೇ ಮರಗಳ ಬಳಿಯಿರುವ ಇನ್ನೊಂದು ನೊಳಂಬರ ಕಾಲದ ವೀರಗಲ್ಲು ಶಾಸನವು ಮದನಕೆಯೊಳ ವರದೇವನು ಪೆಮ್ಮಾಡಿಯ ನೊಳಂಬನು ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ಗ್ರಾಮದ ನಾಗೇಶ್ವರ ದೇವಾಲಯದ ಉತ್ತರಕ್ಕಿರುವ ಶಾಸನವು ಚೋಳ ಮಹಾರಾಜರ ಮನೆ ಮಗ ಮೂರೆಟ್ಟಿಗಾಳನ ಮಗನಾದ ಧೋಳವನನು ವೀರಸ್ವರ್ಗ ಸೇರಿದ ಸ್ಮಾರಕ ಎಂದು ದಾಖಲಿಸುತ್ತದೆ. ಚಿಂತಾಮಣಿಯ ಬಳಿಯಿರುವ ಚಿಲುಮೆಕೋಟೆಯಲ್ಲಿ ಪ್ರಸಿದ್ಧ ಈಶ್ವರ ದೇವಾಲಯವಿದ್ದು, ಸಮೀಪವೇ ಮುಕ್ತಗಿರಿ ಮಠ ಇದೆ. ಚಿಂತಾಮಣಿಯು ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳಿಂದಾಗಿ ಇತ್ತೀಚೆಗೆ ಪ್ರಸಿದ್ಧವಾಗಿದೆ. **ಕೋನಗುಂಟ್ಲ**(ಚಿಂತಾಮಣಿ ತಾಲೂಕು): ಚಿಂತಾಮಣಿ ತಾಲೂಕಿನಲ್ಲಿ ಕೊನಗುಂಟ್ಲು ಅಥವಾ ಕೊನಕುಂಟೆ ಗ್ರಾಮವು ಬಟ್ಲಹಳ್ಳಿಗೆ ಸಮೀಪವಾಗಿದ್ದು, ಆಕರ್ಷಕ ಬೆಟ್ಟಗುಡ್ಡಗಳಿಂದ ಕೂಡಿರುವ ರಮ್ಯತಾಣವಾಗಿದೆ ಹಾಗೂ ಜಿಲ್ಲೆಯಲ್ಲಿರುವ ಹಲವು ಪುಣ್ಯ ಕ್ಷೇತ್ರಗಳಲ್ಲಿ ಒಂದೆನಿಸಿದೆ. ಇಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳಿವೆ. ಗರ್ಭಗೃಹವು ಚೌರಸವಾಗಿದ್ದು, ಒಳಗೆ ಗುಂಡುಕಲ್ಲಿನಾಕಾರಲ್ಲಿರುವ ಅಸ್ಪಷ್ಟವಾದ ವೆಂಕಟರಮಣ ಅಥವಾ ನರಸಿಂಹನೆಂದು ಕರೆಯಲಾಗುವ ಧಾರ್ಮಿಕ ಸಂಕೇತ (ಹುತ್ತದಾಕಾರ)ವನ್ನು ಪ್ರತಿಷ್ಠಾಪಿಸಲಾಗಿದೆ. ಇದೇ ರೀತಿಯ ಅಸ್ಪಷ್ಟ ಸ್ವರೂಪವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾವನದುರ್ಗ ಮತ್ತು ತುಮಕೂರು ಜಿಲ್ಲೆಯ ಸೀಬಿ ನರಸಿಂಹಸ್ವಾಮಿ ದೇವಾಲಯಗಳಲ್ಲಿ ಆರಾಧಿಸುವ ಪದ್ಧತಿಯು ಜಾರಿಯಲ್ಲಿದೆ. ಇಲ್ಲಿ ನಡೆಯುವ ಪಾಂಚರಾತ್ರ ಆಗಮದ ರೀತಿಯ ಪೂಜಾ ಕೈಂಕರ್ಯಗಳು ಹಾಗೂ ಉತ್ಸವಗಳು ವೆಂಕಟರಮಣಸ್ವಾಮಿಯ ಹೆಸರಿನಲ್ಲೇ ನಡೆಯುತ್ತವೆ. ಸ್ಥಳೀಯ ಐತಿಹ್ಯದ ಪ್ರಕಾರ ಸುಮಾರು ೩೦೦ ವರ್ಷಗಳ ಹಿಂದೆ ಈ ದೇವಾಲಯಕ್ಕೆ ಸಮೀಪದಲ್ಲಿರುವ ಗ್ರಾಮದಲ್ಲಿ ಪ್ರತಿಷ್ಠಿತ ಕುಟುಂಬವಿತ್ತು. ಇವರ ಮನೆಯಲ್ಲಿ ಗೋವುಗಳು ಪ್ರತಿನಿತ್ಯವೂ ಸಮೀಪದ ಅರಣ್ಯದಲ್ಲಿದ್ದ ಹುತ್ತವೊಂದರ ಮೇಲೆ ಹಾಲನ್ನು ಸುರಿಸುತ್ತಿದ್ದವೆಂದು ಪ್ರತೀತಿಯಿದೆ. ಗೋಪಾಲಕನು ಈ ವಿಷಯವನ್ನು ಊರಿನ ಪ್ರಮುಖರಿಗೆ ತಿಳಿಸಿದಾಗ ಹೋಗಿನೋಡಲು ಅಲ್ಲಿ ಇದ್ದ ಹುತ್ತವು ಹಾವಿನ ಹೆಡೆಯ ಆಕಾರದಲ್ಲಿ ಉದ್ಭವಿಸಿದ್ದನ್ನು ಗಮನಿಸಿ ಇದೇ ವೆಂಕಟರಮಣ ಅಥವಾ ನರಸಿಂಹಸ್ವಾಮಿಯ ಸ್ವರೂಪವೆಂದು ಭಾವಿಸಿ ದೇವಾಲಯವನ್ನು ನಿರ್ಮಿಸಿ ಆರಾಧಿಸಲಾಗುತ್ತಿದೆ ಎಂದು ತಿಳಿದುಬರುತ್ತದೆ. ಹಿಂದೆ ಚಿಕ್ಕಪ್ರಮಾಣದ ದೇವಾಲಯವು ಅಸ್ತಿತ್ವದಲ್ಲಿದ್ದು, ಇತ್ತೀಚೆಗೆ ವಿಶಾಲವಾದ ದೇವಾಲಯ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಗರ್ಭಗೃಹದ ಮೇಲಿರುವ ಆಧುನಿಕ ಶಿಖರವು ಬಹಳ ದೂರದಿಂದಲೇ ಗೋಚರಿಸುತ್ತದೆ. ನವರಂಗದ ಮುಂಭಾಗದಲ್ಲಿರುವ ಪ್ರವೇಶದ್ವಾರದ ಬಳಿ ಎತ್ತರವಾದ ದ್ವಾರಪಾಲಕರನ್ನು ಪ್ರತ್ಯೇಕ ಕಿರುಮಂಟಪಗಳಲ್ಲಿ ಪ್ರತಿಷ್ಠಾಪಿಸಲಾಗಿದೆ. ನವರಂಗವು ವಿಶಾಲವಾಗಿದ್ದು, ಆಧುನಿಕ ಶೈಲಿಯಲ್ಲಿ ನವೀಕರಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಒಳಪ್ರಾಕಾರವಿದ್ದು, ಬಾವಿ ಹಾಗೂ ಅಕ್ಕಪಕ್ಕದಲ್ಲಿ ಅರ್ಚಕರ ವಸತಿಗಳಿವೆ. ಈ ದೇವಾಲಯದಲ್ಲಿ ವಿವಾಹ, ಉಪನಯನ ಮೊದಲಾದ ಶುಭ ಕಾರ್ಯಕ್ರಮಗಳನ್ನು ನಡೆಸಲು ಸೌಲಭ್ಯಗಳಿವೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಚೈತ್ರ ಬಹುಳ ಸಪ್ತಮಿಯಂದು ವೆಂಕಟರಮಣಸ್ವಾಮಿಯ ಬ್ರಹ್ಮರಥೋತ್ಸವವು ನಡೆಯುವಾಗ ಸಹಸ್ರಾರು ಜನ ಭಕ್ತಾದಿಗಳು ಸೇರುತ್ತಾರೆ.

**ಚಿಕ್ಕಬಳ್ಳಾಪುರ:** (ತಾಲೂಕು ಕೇಂದ್ರ: ಜನಸಂಖ್ಯೆ: ೫೪,೯೬೩) ಇದು ಉಪ ವಿಭಾಗವಾಗಿದ್ದು, ಪೂರ್ವದಲ್ಲಿ ಶಿಡ್ಲಘಟ್ಟ, ಪಶ್ಚಿಮದಲ್ಲಿ ಗೌರಿಬಿದನೂರು, ಉತ್ತರದಲ್ಲಿ ಗುಡಿಬಂಡೆ ತಾಲೂಕುಗಳೂ ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯೂ ಇದರ ಮೇರೆಗಳು. ಕೋಲಾರಕ್ಕೆ ೬೦ ಕಿ.ಮೀ. ದೂರದಲ್ಲಿ ವಾಯುವ್ಯ ದಿಕ್ಕಿನಲ್ಲಿದೆ. ಚಿಕ್ಕಬಳ್ಳಾಪುರವು ಇತ್ತೀಚೆಗೆ ಪ್ರಮುಖ ನಗರವಾಗಿ ಅಭಿವೃದ್ಧಿ ಹೊಂದಿದ್ದು, ಪ್ರಸಿದ್ಧ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರವೂ ಆಗಿದೆ. ಚಿಕ್ಕಬಳ್ಳಾಪುರವು ಪ್ರಸಿದ್ಧ ವಿದ್ಯಾಕೇಂದ್ರವಾಗಿದ್ದು, ಜಗದ್ಗುರು ಚಂದ್ರಶೇಖರನಾಥ ತಾಂತ್ರಿಕ ಕಾಲೇಜು, ಬಿಎಡ್ ಕಾಲೇಜುಗಳು, ದೈಹಿಕ ಶಿಕ್ಷಣ ಕಾಲೇಜು, ಪಾಲಿಟೆಕ್ನಿಕ್, ಕೈಗಾರಿಕಾ ತರಬೇತಿ ಕೇಂದ್ರಗಳೂ ಇವೆ. ಸಿ. ವಿ. ಕ್ಯಾಂಪಸ್ ಹಲವು ವಿದ್ಯಾಸಂಸ್ಥೆಗಳನ್ನು ಹೊಂದಿರುವ ಸಂಕೀರ್ಣವಾಗಿದೆ. ಈ ಊರಿನಲ್ಲಿ ಆದಿ ಚುಂಚನಗಿರಿಯ ಶಾಖಾ ಮಠವೂ ಇದೆ.

ಈ ಪಟ್ಟಣ ರೇಷ್ಮೆ ಉದ್ಯಮಕ್ಕೆ ಕಲ್ಲುಸಕ್ಕರೆ ತಯಾರಿಕೆಗೆ ಪ್ರಸಿದ್ಧ. ಸಣ್ಣ ಕೈಗಾರಿಕೆಗಳ ಬೆಳವಣಿಗೆಗಾಗಿ ಇಲ್ಲಿ ಕೈಗಾರಿಕಾ ಪ್ರಾಂಗಣವೊಂದು ಸ್ಥಾಪಿತವಾಗಿದೆ. ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೂ ಜಿಲ್ಲೆಯ ಪ್ರಮುಖ ಸ್ಥಳಗಳಿಗೂ ರಸ್ತೆಗಳುಂಟು. ಬೆಂಗಳೂರಿಗೆ ರೈಲ್ವೆ ಸಂಪರ್ಕವಿದೆ. ಈಗ ಚಿಕ್ಕಬಳ್ಳಾಪುರ ಯಲಹಂಕ ನಡುವೆ ಬ್ರಾಡ್‌ಗೇಜ್ ರೈಲು ಮಾರ್ಗವಿದೆ. ಚಿಕ್ಕಬಳ್ಳಾಪುರ ಹಿಂದೆ ಒಂದು ಪಾಳೆಯಗಾರರ ಸಂತತಿಯ ಆಡಳಿತದಲ್ಲಿತ್ತು. ಈ ಊರಿನ ದೇವಾಲಯಗಳಲ್ಲಿ ಚೆನ್ನಕೇಶವ ದೇವಾಲಯ ಅತ್ಯಂತ ಹಳೆಯದು. ವೀರಭದ್ರ ದೇವಾಲಯ ಇತ್ತೀಚಿನದು. ಇಲ್ಲಿ ಉತ್ತಮ ಸುದ್ದೆ ವಿಗ್ರಹಗಳಿವೆ. ಪಟ್ಟಣಕ್ಕೆ ೪ ಕಿ.ಮೀ. ದೂರದಲ್ಲಿ ಚಿತ್ರಾವತಿಯಲ್ಲಿ ಸುಬ್ರಹ್ಮಣ್ಯ ದೇವಾಲಯವಿದೆ. ಪಕ್ಕದಲ್ಲಿ ಆಕರ್ಷಕವಾದ ಚಿತ್ರಾಕಾರದ ಕಲ್ಯಾಣಿಯಿದೆ. ಇದರ ಸುತ್ತಲ ಹಂತಗಳನ್ನು ದಿವಾನ್ ಪೂರ್ಣಯ್ಯನವರು ಕಟ್ಟಿಸಿದರೆಂದು ಹೇಳಲಾಗಿದೆ. ಈ ಕೊಳಕ್ಕೆ ಹುಲಸಮ್ಮನ ಬಾವಿ ಎಂದೂ ಹೆಸರುಂಟು. ಹುಲಸಮ್ಮ ಪಾಳೆಯಗಾರನೊಬ್ಬನ ಕುಮಾರಿ ಎಂದು ಪ್ರತೀತಿಯಿದೆ. ಇದರ ಹತ್ತಿರ ಮಲ್ಲಿಕಾರ್ಜುನ ಚೆನ್ನಪ್ಪನ ಗದ್ದುಗೆಯಿದೆ. ಈ ತಾಲೂಕಿನ **ಮಂಚನಬೆಲೆ** ಗ್ರಾಮದಲ್ಲಿ ಸುಮಾರು ೧೪೦ ವರ್ಷಗಳ ಹಿಂದಿನ ಆಂಜನೇಯ ದೇವಾಲಯವಿದೆ. ಪಟ್ರೇನಹಳ್ಳಿಯ ಗೋಪಾಲಕೃಷ್ಣ ದೇವಾಲಯವು ಆಕರ್ಷಕ ವಾಸ್ತುಶಿಲ್ಪ ಶೈಲಿಗೆ ಒಂದು ಉತ್ತಮ ನಿದರ್ಶನವಾಗಿದೆ. ದ್ರಾವಿಡ ಶೈಲಿಯ ವಾಸ್ತುರಚನೆಯನ್ನು ಹೊಂದಿರುವ ಈ ದೇವಾಲಯವು ಎತ್ತರವಾದ ರಾಯಗೋಪುರ ಸಮೇತವಾದ ಪ್ರವೇಶದ್ವಾರವನ್ನು ಹೊಂದಿದೆ. ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದ್ದು ವಿಶಾಲವಾದ ಒಳಪ್ರಾಕಾರವನ್ನೂ ಹೊಂದಿದೆ. ನವರಂಗದ ಛತ್ತಿನಲ್ಲಿ ಕೆಳಮುಖ ಮಾಡಿರುವ ಕಮಲದ ಹೂವಿನ ಕೆತ್ತನೆ ಇದೆ. ಇಲ್ಲಿರುವ ಛಾವಣಿಯ ಕಲ್ಲಿನ ತೊಲೆಗಳ ಮೇಲೆ ಸುಂದರ ವೈಷ್ಣವ ಪುರಾಣದ ಉಬ್ಬು ಶಿಲ್ಪಗಳ ಅಲಂಕಾರವಿದೆ. ಹೆಚ್ಚಾಗಿ ರಾಮಾಯಣದ ಕತೆಯನ್ನು ಪ್ರತಿನಿಧಿಸುವ ಶಿಲ್ಪಗಳೂ ಕಂಡುಬರುತ್ತವೆ. ಗೋಪಾಲಕೃಷ್ಣನ ಮೂಲ ವಿಗ್ರಹವು ನಾಲ್ಕು ಕೈಗಳಲ್ಲಿ ಶಂಖ, ಚಕ್ರ ಹಾಗೂ ಕೊಳಲನ್ನು ನುಡಿಸುತ್ತಿರುವ ಸಮಭಂಗಿಯು ಆಕರ್ಷಕವಾಗಿದೆ ಈ ತಾಲೂಕಿನಲ್ಲಿ ನಡೆಯುವ ನಂದಿಯ ಭೋಗನಂದೀಶ್ವರಸ್ವಾಮಿ ಜಾತ್ರೆ, ಚಿತ್ರಾವತಿಯ ಸುಬ್ರಹ್ಮಣ್ಯಸ್ವಾಮಿ ಜಾತ್ರೆ ಪ್ರಸಿದ್ಧವಾದುವು. ಜಾತ್ರೆ ದಿನಗಳಲ್ಲಿ ದನಗಳ ವ್ಯಾಪಾರವೂ ನಡೆಯುತ್ತದೆ.

**ಚಿಕ್ಕ ತಿರುಪತಿ:** (ಮಾಲೂರು ತಾಲೂಕು: ಜನಸಂಖ್ಯೆ: ೧,೮೩೧) ಮಾಲೂರಿಗೆ ನೈಋತ್ಯದಲ್ಲಿ ಸರ್ಜಾಪುರ ರಸ್ತೆಯಲ್ಲಿ ಎಂಟು ಕಿ.ಮೀ. ದೂರದಲ್ಲಿರುವ ಒಂದು ಯಾತ್ರಾಸ್ಥಳ. ಇಲ್ಲಿರುವ ಶ್ರೀನಿವಾಸ ದೇವರ ಭವ್ಯಗುಡಿ ವಿಶಾಲವಾದ ಪ್ರಾಂಗಣ ಮತ್ತು ಪ್ರಾಕಾರಗಳನ್ನೊಳಗೊಂಡಿದೆ. ಶ್ರೀನಿವಾಸ ಎಂದು ಕರೆಯುವ ಇಲ್ಲಿರುವ ವರದರಾಜ ಮೂರ್ತಿ ಆಕರ್ಷಕವಾಗಿದೆ. ನವರಂಗದಲ್ಲಿ ರಾಮಾನುಜಾಚಾರ್ಯ ಮತ್ತು ವೇದಾಂತದೇಶಿಕರ ವಿಗ್ರಹಗಳಿವೆ. ಸ್ಥಳಪುರಾಣದ ಪ್ರಕಾರ ಯಜ್ಞೇಶ್ವರನಿಂದ ಸ್ಥಾಪಿತವಾದ ಈ ದೇವಾಲಯವನ್ನು ಜನಮೇಜಯನ ಕಾಲದಲ್ಲಿ ಪುನರ್ನಿರ್ಮಾಣ ಮಾಡಲಾಯಿತು.

ಚಿಕ್ಕತಿರುಪತಿ ಧಾರ್ಮಿಕ ಕ್ಷೇತ್ರವಾಗಿದ್ದು ಇದು ದೊಡ್ಡ ತಿರುಪತಿಯಷ್ಟೇ ಪವಿತ್ರವೆಂದು ಜನರ ನಂಬಿಕೆ. ಇಲ್ಲಿ ಪ್ರತಿವರ್ಷ ಚೈತ್ರಮಾಸದಲ್ಲಿ ಏಳು ದಿನಗಳ ಪರ್ಯಂತ ದೊಡ್ಡ ಪ್ರಮಾಣದಲ್ಲಿ ಪ್ರಸನ್ನವೆಂಕಟರಮಣಸ್ವಾಮಿ ಹಾಗೂ ದನಗಳ ಜಾತ್ರೆ ನಡೆಯುವುದು. ಇಲ್ಲಿ ಯಾತ್ರಿಕರಿಗಾಗಿ ಅನೇಕ ಮಂಟಪಗಳನ್ನೂ ಛತ್ರಗಳನ್ನೂ ನಿರ್ಮಿಸಲಾಗಿದೆ.

**ಚಿತ್ರಾವತಿ:** ಬಾಗೇಪಲ್ಲಿ ತಾಲೂಕಿನ ಒಂದು ನಿಸರ್ಗ ರಮಣೀಯ ಸಣ್ಣನದಿ. ಉತ್ತರ ಪಿನಾಕಿನಿಯ ಉಪನದಿ. ನಂದಿಬೆಟ್ಟದ ಬಳಿ ಹುಟ್ಟಿ ಈಶಾನ್ಯಾಭಿಮುಖವಾಗಿ ವರಲಕೊಂಡ ಬೆಟ್ಟದ ಪಕ್ಕದಲ್ಲಿ ಸಾಗಿ ಬಾಗೇಪಲ್ಲಿ ತಾಲೂಕಿನ ಪಶ್ಚಿಮ ಭಾಗದಲ್ಲಿ ಹರಿದು

ಅನಂತರ ಆಂಧ್ರಪ್ರದೇಶವನ್ನು ಪ್ರವೇಶಿಸಿ ಅನಂತಪುರ ಜಿಲ್ಲೆಯ ಹಿಂದೂಪುರ ತಾಲೂಕಿನಲ್ಲಿ ಹರಿದು ಮುಂದೆ ಸಾಗಿ ಕಡಪ ಜಿಲ್ಲೆಯ ಗುಂಡಲೂರಿನ ಬಳಿ ಉತ್ತರ ಪಿನಾಕಿನಿಯಲ್ಲಿ ಸೇರುವುದು. ಈ ನದಿ ಕರ್ನಾಟಕ ಭಾಗದಲ್ಲಿ ಸುಮಾರು ೫೦ ಕಿ.ಮೀ. ದೂರ ಹರಿಯುತ್ತದೆ. ನದಿಯ ಪಾತ್ರದ ಉದ್ದಕ್ಕೂ ಸುಮಾರು ೫೯ ಚ.ಕಿ.ಮೀ. ಪ್ರದೇಶ ಈ ನದಿಯಿಂದ ನೀರಾವರಿ ಸೌಕರ್ಯ ಪಡೆದಿದೆ. ಚಿತ್ರಾವತಿ ನದಿಯ ಉಪಯೋಗ ಬಾಗೇಪಲ್ಲಿ ತಾಲೂಕಿನಲ್ಲಿ ಹೆಚ್ಚು. ನದಿಯ ಎರಡು ದಂಡೆಗಳ ಮೇಲೂ ಉದ್ದಕ್ಕೂ ಅನೇಕ ಪಂಪ್‌ಹೌಸ್‌ಗಳು ನಿರ್ಮಿತವಾಗಿದ್ದು ಅವುಗಳ ಸಹಾಯದಿಂದ ನದಿ ನೀರನ್ನು ಜಮೀನುಗಳಿಗೆ ಒದಗಿಸಿ ವ್ಯವಸಾಯ ಮಾಡುವರು. ಕೆಲವು ಕಡೆ ಚಿತ್ರಾವತಿ ನದಿಗೆ ಅಡ್ಡಗಟ್ಟೆಯನ್ನು ಕಟ್ಟಿ ಕಾಲುವೆಗಳ ಮೂಲಕ ಕೆರೆಗಳಿಗೆ ನೀರು ಬರುವಂತೆ ಮಾಡಲಾಗಿದೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ಬಾಗೇಪಲ್ಲಿ ತಾಲೂಕಿನ ರಾಮಸಮುದ್ರ ಮತ್ತು ರೆಡ್ಡಿಹಳ್ಳಿಯ ಕೆರೆಗಳು. ತಿರುಮಣಿ, ಬಾಗೇಪಲ್ಲಿ ಮತ್ತು ಸೋಮೇನಹಳ್ಳಿ ಈ ನದಿಯ ದಡದಲ್ಲಿರುವ ಮುಖ್ಯ ಗ್ರಾಮಗಳು. ಇತ್ತೀಚೆಗೆ ಈ ನದಿಗೆ ಅಡ್ಡಲಾಗಿ ಪರಗೋಡು ಗ್ರಾಮದ ಬಳಿ (ಬಾಗೇಪಲ್ಲಿ, ಗುಡಿಬಂಡೆ ಪಟ್ಟಣದ ಕುಡಿಯುವ ನೀರಿಗಾಗಿ) ಆಣೆಕಟ್ಟನ್ನು ನಿರ್ಮಿಸಲಾಗಿದೆ.

**ಟೇಕಲ್** (ಮಾಲೂರು ತಾಲೂಕು: ಜನಸಂಖ್ಯೆ: ೧,೬೭೦) ಮಾಲೂರು ಮತ್ತು ಬಂಗಾರಪೇಟೆಗಳ ನಡುವೆ ಕೋಲಾರಕ್ಕೆ ೨೫ ಕಿ.ಮೀ. ದೂರದಲ್ಲಿರುವ ಟೇಕಲ್ ಶಾಸನಗಳಲ್ಲಿ 'ತೇಕಲ್ಲು ನಾಡು' ಎಂದು ಉಲ್ಲೇಖಗೊಂಡಿದೆ. ಟೇಕಲ್ ಬೆಟ್ಟವು ವಿವಿಧ ಆಕಾರದ ಶಿಲೆಗಳಿಗೆ ಹೆಸರುವಾಸಿಯಾಗಿದೆ. ಇದು ಪ್ರಾಚೀನ ಸ್ಥಳವೆಂಬುದು ೯ನೇಯ ಶತಮಾನದ ಶಾಸನಗಳಿಂದ ತಿಳಿಯುತ್ತದೆ. ಇಲ್ಲಿರುವ ವಿಶಾಲವಾದ ವರದರಾಜ ದೇವಾಲಯವು ದ್ರಾವಿಡ ಶೈಲಿಗೆ ಸೇರಿದ್ದು, ಎತ್ತರವಾದ ಮಹಾದ್ವಾರವನ್ನು ಹೊಂದಿದೆ. ವರದರಾಜ ದೇವಾಲಯವು ಚೌರಸವಾದ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ತೆರೆದ ಮುಖ ಮಂಟಪಗಳನ್ನು ಹೊಂದಿದೆ. ಈ ದೇವಾಲಯದ ಗರ್ಭಗೃಹದಲ್ಲಿರುವ ವರದರಾಜಸ್ವಾಮಿ ಪ್ರತಿಮೆಯು (ಸು. ೪ ಅಡಿ ಎತ್ತರವಿದ್ದು) ಸಮಭಂಗಿಯಲ್ಲಿದ್ದು, ಶಂಖ, ಚಕ್ರ, ಗದಾ ಮತ್ತು ಅಭಯ ಹಸ್ತಗಳನ್ನು ಹೊಂದಿದೆ. ನವರಂಗದಲ್ಲಿರುವ ನಾಲ್ಕು ಕೇಂದ್ರ ಸ್ತಂಭಗಳು ಚೌಕಾಕಾರವಾಗಿದ್ದು, ವೈಷ್ಣವ ಪುರಾಣಕ್ಕೆ ಸಂಬಂಧಿಸಿದಂತೆ ಉಬ್ಬು ಶಿಲ್ಪಗಳನ್ನು ಹೊಂದಿವೆ. ಇದರ ಮುಂಭಾಗದಲ್ಲಿರುವ ಕಿರು ಮುಖಮಂಟಪವು ಚೋಳರ ಶೈಲಿಯ ಕಿರು ಸ್ತಂಭಗಳನ್ನು ಇಕ್ಕೆಲಗಳಲ್ಲಿ ಹೊಂದಿದೆ. ಮುಖಮಂಟಪದ ಎದುರಿಗೆ ಎತ್ತರವಾದ ಪ್ರವೇಶದ್ವಾರವಿದ್ದು, ಎರಡೂ ಕಡೆ ನಗಾರಿಖಾನೆಗಳನ್ನು ಹೊಂದಿದೆ. ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗದ ಹೊರಗೋಡೆಗಳಲ್ಲಿ ಚೋಳರ ಶೈಲಿಯ ಕಿರು ಸ್ತಂಭಗಳಿವೆ. ಅರ್ಧಮಂಟಪ ಮತ್ತು ಗರ್ಭಗೃಹದ ಅಧಿಷ್ಠಾನದ ತಳಪಾದಿಯ ಮೇಲೆ ತಮಿಳು ಶಾಸನಗಳಿವೆ. ಮೊದಲನೇ ಶಾಸನವು ಕ್ರಿ.ಶ. ೧೩೩೬ರಲ್ಲಿ ಚೋಳ ಪೆರುಮಾಳ್ ತಮಿಳುನಾಡಿನ ಪುಲಿಕ್ಕರುಚ್ಚಿ ಗ್ರಾಮವನ್ನು ತೇಕಲ್ಲಿನ ಅರುಳಾಲ ನಾಡಾರ್ (ವರದರಾಜಸ್ವಾಮಿಗೆ) ದೇವರಿಗೆ ದೈನಂದಿನ ಪೂಜಾ ಕೈಂಕರ್ಯ ಮತ್ತು ಅನ್ನಸಂತರ್ಪಣೆಗಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇಲ್ಲಿರುವ ಎರಡನೆಯ ಶಾಸನವು ಕ್ರಿ.ಶ. ೧೩೫೯ರಲ್ಲಿ ಧಾತಿ ಶಿಂಗೆ ದಣಾಯಕನ ತಮ್ಮ ಕೋಣೈ ಪೆಮ್ಮೆನಾಯಕನು ಪುತ್ತೂರು ಗ್ರಾಮವನ್ನು ಈ ದೇವರಿಗೆ ಸರ್ವಮಾನ್ಯವಾಗಿ ನೀಡಿದ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದಲ್ಲಿರುವ ಮೂರನೇ ಶಾಸನವು ಕ್ರಿ.ಶ. ೧೩೧೦ರಲ್ಲಿ ತೇಕಲ್ಲಿನ ವರದರಾಜ ದೇವಾಲಯದ ವ್ಯವಸ್ಥಾಪಕನಾಗಿದ್ದ ಚೊಕ್ಕ ಪೆರುಮಾಳ್‌ದಾಸರ್ ಈ ದೇವಾಲಯದ ಪೂಜಾರಿಗಳಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದಲ್ಲಿರುವ ಇನ್ನೊಂದು ೧೩೭೮ರ ಶಾಸನವು ಮೇಲಿನ ಶಾಸನದಲ್ಲಿ ಉಲ್ಲೇಖಿತವಾಗಿರುವ ವಲ್ಲಪ್ಪದಣ್ಣಾಯಕನು ಇದೇ ದೇವರಿಗೆ ಕೈವಾರನಾಡಿನ ವ್ಯಾಪ್ತಿಯಲ್ಲಿರುವ ಕಾರಪಲ್ಲಿ ಎಂಬ ಗ್ರಾಮವನ್ನು ದೇವಾಲಯದ ವಿವಿಧ ಕೈಂಕರ್ಯಗಳಿಗೆ ಅನುಕೂಲವಾಗುವಂತೆ ಸರ್ವಮಾನ್ಯ ನೀಡಿದ ವಿವರಗಳನ್ನು ದಾಖಲಿಸುತ್ತದೆ. ಇಲ್ಲಿರುವ ನಾಲ್ಕನೇ ಶಾಸನವು ಕ್ರಿ.ಶ. ೧೩೩೬ರಲ್ಲಿ ಅತ್ಯಂತ ಕುತೂಹಲಕಾರಿ ವಿಚಾರಗಳನ್ನು ನೀಡುತ್ತದೆ. ಇದರ ಪ್ರಕಾರ ನಂದಿಗಿರಿಯ ಮತ್ತು ಕುವಲಾಲನಗರದ ಒಡೆಯನಾದ ಉತ್ತಮ ಚೋಳಗಂಗ ಅರಸನು ತಮಿಳುನಾಡಿನ ಸಾಮಂದರಪಳ್ಳಿಯನ್ನು ಸರ್ವಮಾನ್ಯ ಗ್ರಾಮವನ್ನಾಗಿ ತೇಕಲ್ಲಿನ ಅರುಳನಾಡನ್ ದೇವರ್ (ವರದರಾಜ)ಗೆ ದತ್ತಿಬಿಟ್ಟ ವಿಚಾರವು ತಿಳಿದುಬರುತ್ತದೆ. ಈಗ ಜೀರ್ಣಾವಸ್ಥೆಯಲ್ಲಿರುವ ಶಿಂಗಪೆರುಮಾಳ್ ದೇವಾಲಯವು ಅಲಂಕೃತ ಕಂಬಗಳಿಂದ ಕೂಡಿದ ಸುಂದರ ಕಟ್ಟಡವಾಗಿದೆ. ಈ ದೇವಾಲಯದ ಭಿತ್ತಿಯಲ್ಲಿರುವ ಕ್ರಿ.ಶ. ೧೩೩೩ರ ಶಾಸನವು ತೇಕಲ್ಲು ನಾಡಿನ ನಿವಾಸಿಗರು ಮಲೈನಾಡಿನ ಪರಿವೀಕ್ಷಕರಾಗಿದ್ದ ವೈಯಾನ್ ಮತ್ತು ಮಾರಕುಳಿ ತೇಕಲ್ಲಿನ ಕೇಶುರಾಮ ದೇವರಿಗೆ (ಶಿಂಗ ಪೆರುಮಾಳ್) ನೀಡಿದ ದಾನಗಳ ಬಗ್ಗೆ ದಾಖಲಿಸುತ್ತದೆ. ಇಲ್ಲೇ ಇರುವ ಕ್ರಿ. ಶ. ೧೩೭೮ರ ಎರಡನೇ ಶಾಸನವು ಶಿಮಗೀಶ್ವರಮ್ ದೇವರಿಗೆ ಬಿಟ್ಟ ಭೂದಾನಗಳನ್ನು ದಾಖಲಿಸುತ್ತದೆ. ಇಲ್ಲೇ ಇರುವ ಕ್ರಿ.ಶ. ೧೩೩೩ರ ಶಾಸನವು ಹೊಯ್ಸಳ ವೀರ ಬಲ್ಲಾಳರಾಜನ ಆಡಳಿತದಲ್ಲಿ

ಈ ಸ್ಥಳದ ವಲ್ಲಪ್ಪದಣ್ಣಾಯಕನೆಂಬ ಅಧಿಕಾರಿಯು ಶಿಂಗೇಶ್ವರ ದೇವರಿಗೆ ಪೂಜಾ ಕೈಂಕರ್ಯವನ್ನು ಕೈಗೊಳ್ಳಲು ದೇವಾಲಯದ ಪಾಲಭಟ್ಟರಿಗೆ ನೀಡಿದ ದಾನಗಳ ಬಗ್ಗೆ ದಾಖಲಿಸುತ್ತದೆ. ಇಲ್ಲಿನ ಆಂಜನೇಯ ದೇವಾಲಯದಲ್ಲಿ ಏಳು ಅಡಿ ಎತ್ತರದ ಆಂಜನೇಯ ಶಿಲ್ಪವಿದೆ. ಇದಲ್ಲದೆ ಇಲ್ಲಿ ಅನೇಕ ಜೀರ್ಣಾವಸ್ಥೆಯ ದೇವಾಲಯಗಳಿವೆ. ಪೌರಾಣಿಕ ಕಥೆಗಳ ಪ್ರಕಾರ ಇಲ್ಲಿ ನೂರೊಂದು ದೇವಾಲಯಗಳು, ನೂರೊಂದು ಕಲ್ಯಾಣಿಗಳು ಇದ್ದುವಂತೆ. ಭೀಮನ ಗರಡಿ ಎಂದು ಖ್ಯಾತವಾಗಿರುವ ೧೫೦ ಅಡಿ ಉದ್ದ ಮತ್ತು ೭೦ ಅಡಿ ಅಗಲವಿರುವ ಗುಹೆಯು ಇಲ್ಲಿನ ಬೆಟ್ಟದ ಮೇಲಿದೆ. ಟೇಕಲ್ಲಿನ ಉತ್ತರಕ್ಕಿರುವ ಬೆಟ್ಟಕ್ಕೆ ಭೂಪತಿಯಮ್ಮನ ಬೆಟ್ಟ ಎಂದು ಹೆಸರು. ಬೆಟ್ಟದ ಮೇಲೆ ಕಿರಿದಾದ ಗವಿ ಇದ್ದು, ಇದರ ಒಳಭಾಗದಲ್ಲಿ ಗಾರೆಯಿಂದ ನುಣುಪು ಮಾಡಲಾಗಿದೆ. ಹಿಂದಿನ ಸ್ಥಳೀಯ ನಾಯಕರ ಐಶ್ವರ್ಯವನ್ನು ಇಲ್ಲಿ ಇಡಲಾಗಿತ್ತೆಂಬ ಪ್ರತೀತಿಯಿಂದ ಇದಕ್ಕೆ ರೊಕ್ಕದ ಗವಿ ಎಂದು ಹೆಸರಾಗಿದೆ. ಈ ಸ್ಥಳವು ಚೌಳು ಮಣ್ಣಿಗೆ ಪ್ರಖ್ಯಾತವಾಗಿದೆ.

ಟೇಕಲ್‌ನ ಸೋಮೇಶ್ವರ ದೇವಾಲಯವು ಗರ್ಭಗೃಹ ಅರ್ಧಮಂಟಪ ನವರಂಗ ಮತ್ತು ತೆರೆದ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಚೌಕಾಕಾರವಾದ ಸ್ತಂಭಗಳಿವೆ. ಮುಖಮಂಟಪವು ನಾಲ್ಕು ಕೇಂದ್ರ ಸ್ತಂಭಗಳನ್ನು ಹೊಂದಿದ್ದು, ಮಧ್ಯದಲ್ಲಿ ಏಕಶಿಲಾ ನಂದಿಯನ್ನು ಹೊಂದಿದೆ. ಪ್ರವೇಶ ದ್ವಾರದ ಎರಡೂಕಡೆ ಇರುವ ಮಾಡುಗಳಲ್ಲಿ ಗಣೇಶ, ವೀರಭದ್ರ, ಭೈರವ ಹಾಗು ಪಾರ್ವತಿ (ಬಲಗಡೆ)ಯ ಬಿಡಿ ಶಿಲ್ಪಗಳನ್ನು ಇಡಲಾಗಿದೆ. ಊರಿನಲ್ಲಿ ಜಾಮೀಯಾ ಮಸೀದಿ ಹಾಗೂ ಮೆಹಬೂಬ್ ಸುಬಾನಿ ದರ್ಗಾ ಇವೆ. ಟೇಕಲ್ ಬೆಂಗಳೂರು–ಚನ್ನೈ ರೈಲು ಮಾರ್ಗದಲ್ಲಿರುವ ಮುಖ್ಯ ನಿಲ್ದಾಣವಾಗಿದೆ.

**ತಂಬಿಹಳ್ಳಿ** (ಕೋಲಾರ ತಾಲೂಕು:ಜನಸಂಖ್ಯೆ:೬೫೫): ಕೋಲಾರ ಮುಳಬಾಗಿಲು ನಡುವೆ ರಾಷ್ಟ್ರೀಯ ಹೆದ್ದಾರಿಯಲ್ಲಿ (ಕೋಲಾರದಿಂದ ೧೫ ಕಿ.ಮೀ ದೂರದಲ್ಲಿರುವ) ಪಾಲಾರ್ ನದಿಯ ದಡದಲ್ಲಿರುವ ತಂಬಿಹಳ್ಳಿಯು ಮಾಧವಪುರ ಅಥವಾ 'ಮಾಧವತೀರ್ಥರ ಸಂಸ್ಥಾನ'ವೆಂದು ಪ್ರಸಿದ್ಧವಾಗಿರುವ ಪ್ರಾಚೀನ ವೈಷ್ಣವ ಕ್ಷೇತ್ರವಾಗಿದೆ. ಸಂಸ್ಕೃತ ಭಾಷೆಯಲ್ಲಿ ಪಾಲಾರ್ ನದಿಯನ್ನು 'ಕ್ಷೀರಸಾಗರವೆಂದು' ವರ್ಣಿಸಲಾಗುತ್ತದೆ. ಮಾಧವತೀರ್ಥ (ಕ್ರಿ.ಶ. ೧೨೫೮–೧೩೫೦)ರನ್ನು ದ್ವೈತ ಮತದ ಪ್ರತಿಪಾದಕರಾದ ಮಧ್ವಾಚಾರ್ಯ (ಕ್ರಿ.ಶ. ೧೨೦೦–೧೨೮೦) ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಇವರು ನಾಲ್ಕು ವೇದಗಳಿಗೂ ಸಹ ಮಧ್ವಭಾಷ್ಯವನ್ನು ಅನುಸರಿಸಿದ ನಿವೃತ್ತಿಯನ್ನು ರಚಿಸಿರುವರೆಂದು ದಾಖಲೆಗಳಿಂದ ತಿಳಿದು ಬರುತ್ತದೆ. ಅದರೊಂದಿಗೆ 'ಮಾಧವತೀರ್ಥ ಸ್ಮೃತಿ' ಎಂಬ ಧರ್ಮಶಾಸ್ತ್ರ ಗ್ರಂಥವೊಂದನ್ನು ರಚಿಸಿರುವರು. ಅನೇಕ ದಿನಗಳ ಕಾಲ ವಿಜಯನಗರದಲ್ಲಿ ನೆಲೆಸಿದ್ದ ಇವರು, ನರಹರಿತೀರ್ಥರ ನಂತರ ಪೀಠಾಧೀಶರಾದರು. ಅಫ್ಜಲ್‌ಪುರ ತಾಲೂಕಿನಲ್ಲಿ ಭೀಮಾ ನದಿಯ ತೀರದಲ್ಲಿರುವ ಮಣ್ಣೂರಿನಲ್ಲಿ ಮಾಧವತೀರ್ಥರ ಮೂಲಬೃಂದಾವನವಿದೆ. ಇವರು ಅಲ್ಲಿ ಸಂಸ್ಕೃತ ಅಧ್ಯಯನ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ಮಧ್ವಾಚಾರ್ಯರ ತತ್ವಸಿದ್ಧಾಂತವನ್ನು ಪ್ರಚಾರ ಮಾಡುತ್ತಿದ್ದರೆಂದು ಪ್ರತೀತಿಯಿದೆ. ಆಚಾರ್ಯರ ಆದೇಶದನ್ವಯ ಮಾಧವತೀರ್ಥರು ಧರ್ಮಪ್ರಚಾರಕ್ಕಾಗಿ ತಮ್ಮ ಶಿಷ್ಯರಾಗಿದ್ದ ಹಾಗೂ ಇದೇ ಮಠದ ಪರಂಪರೆಯ ಮಧುಹರತೀರ್ಥರಿಗೆ ಸನ್ಯಾಸ ದೀಕ್ಷೆಯನ್ನು ನೀಡಿ ದಕ್ಷಿಣ ಭಾರತದಾದ್ಯಂತ ಸಂಚರಿಸಿ ತತ್ವಜ್ಞಾನ ಪ್ರಚಾರ ಕಾರ್ಯ ಕೈಗೊಳ್ಳುವಂತೆ ನಿರ್ದೇಶಿಸಿದರು. ಮಧುಹರತೀರ್ಥರು ಆಂಧ್ರಪ್ರದೇಶದ ವಿವಿಧ ಭಾಗಗಳಾದ ಸಿಂಹಾಚಲ, ಧರ್ಮಶಯನ, ಶ್ರೀಸೇದಿಲಂಗನೂರು ಮತ್ತು ಕರ್ನಾಟಕದ ಭದ್ರಾವತಿ, ಸಕರಾಯಪಟ್ಟಣ, ಗುಡಿಬಂಡೆ, ಮುಳಬಾಗಿಲು ಹಾಗೂ ತಂಬಿಹಳ್ಳಿಯಲ್ಲಿ ಸಂಚರಿಸಿ ನಂತರ ಮಾಧವಪುರದಲ್ಲಿ ಬೃಂದಾವನಸ್ಥರಾದರೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಸುಮಾರು ನೂರುವರ್ಷಗಳ ಹಿಂದೆ ಮುಳಬಾಗಿಲು ತಾಲೂಕಿನ ಪಾಲಾರ್ ನದಿ ದಡದಲ್ಲಿರುವ ಕಮ್ಮದಟ್ಟಿ ಗ್ರಾಮಕ್ಕೆ ಆಗಮಿಸಿ ಅಲ್ಲಿರುವ ವೇಣುಗೋಪಾಲಸ್ವಾಮಿಯ ದೇವಾಲಯದಲ್ಲಿ ಮಧುಹರತೀರ್ಥರು ನೆಲೆಸಿದ್ದರೆಂದು ಪ್ರತೀತಿಯಿದೆ. ನಂತರದ ದಿನಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ದಿವಾನರಾಗಿದ್ದ ಪೂರ್ಣಯ್ಯನವರ ಸೂಚನೆಯ ಮೇರೆಗೆ ದೇವರಾಯಸಮುದ್ರದ ಕಾಶಿಪತಯ್ಯರ್ ಅವರ ಕುಟುಂಬದವರ ಸುಪರ್ದಿನಲ್ಲಿದ್ದ ಕಮ್ಮದಟ್ಟಿ, ಕಾಮನೂರು, ತಂಬಿಹಳ್ಳಿ ಮತ್ತು ಹುತ್ತೂರು ಗ್ರಾಮಗಳನ್ನು ಉಂಬಳಿಯಾಗಿ ನೀಡಲಾಯಿತೆಂದು ಮಠದ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಭದ್ರಾವತಿಯ ಬಳಿಯಿರುವ ಮೊಸರಹಳ್ಳಿಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಈ ಮಠದ ಯತಿಗಳಾಗಿದ್ದ ಕೇಶವ ಮಾಧವತೀರ್ಥರಿಗೆ (ಇವರ ಬೃಂದಾವನವು ಇಲ್ಲಿದೆ) ಉಂಬಳಿಯಾಗಿ ನೀಡಿರುವ ಕಾರಣ ಈ ಮಠಕ್ಕೆ 'ಮಜ್ಜಿಗೆಹಳ್ಳಿ ಮಠ'ವೆಂಬ ಹೆಸರೂ ರೂಢಿಯಲ್ಲಿದೆ. ಇತ್ತೀಚೆಗೆ ಮಾಧವ ತೀರ್ಥ ಸಂಸ್ಥಾನದ ೨೪ನೇ ಯತಿಗಳಾದ

ಪ್ರಸನ್ನಪೂರ ಮಾಧವತೀರ್ಥರ ಮಾರ್ಗದರ್ಶನದಲ್ಲಿ ಈ ಮಠವು ಹಲವಾರು ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ನಡೆಸುತ್ತಿದೆ. ಈ ಮಠದ ಶಾಖಾಮಠಗಳು ತಮಿಳುನಾಡಿನ ಶ್ರೀ ಪೆರಂಬೂರಿನಲ್ಲಿ ಮತ್ತು ಬೆಂಗಳೂರಿನ ವಿಭೂತಿಪುರದಲ್ಲಿದೆ.

**ತಲಕಾಯಲ ಬೆಟ್ಟ** (ಶಿಡ್ಲಘಟ್ಟ ತಾಲೂಕು: ಜನಸಂಖ್ಯೆ ೧,೧೮೯) ಶಿಡ್ಲಘಟ್ಟ ತಾಲೂಕಿನ ಸಾದಲಿ ಹೋಬಳಿಗೆ ಸೇರಿರುವ ತಲಕಾಯ ಬೆಟ್ಟವನ್ನು ದಿಬ್ಬೂರ ಹಳ್ಳಿಯಿಂದ ನಾಲ್ಕು ಕಿ. ಮೀ. ದೂರ ಕ್ರಮಿಸಿ ತಲುಪಬಹುದಾಗಿದೆ. ಈ ಸ್ಥಳಕ್ಕೆ ಚಿಂತಾಮಣಿ–ಶಿಡ್ಲಘಟ್ಟ ಹಾಗೂ ಬಾಗೇಪಲ್ಲಿಗಳಿಂದಲೂ ವಾಹನಗಳ ಮೂಲಕ ತಲುಪಬಹುದು. ತಲಕಾಯಬೆಟ್ಟವು ಈ ಜಿಲ್ಲೆಯ ಗುಮ್ಮನಾಯಕನ ಪಾಳ್ಯ, ಅಂಬಾಜಿದುರ್ಗ ಮತ್ತು ಮುರುಗಮಲೆಗಳ ಮೂಲಕ ಹಾಯ್ದು ಹೋಗುವ ಬೆಟ್ಟಗಳ ಶ್ರೇಣಿಯಲ್ಲಿರುವ ರಮಣೀಯ ಬೆಟ್ಟವಾಗಿದೆ. ಇದರ ಸಮೀಪವೇ ಪಾಪಾಘ್ನಿ ನದಿಯು ಹರಿಯುತ್ತಿದೆ. ಸುತ್ತಲೂ ಕಾಡು, ಬೆಟ್ಟದ ಸಮೀಪವಿರುವ ವೆಂಕಟರಮಣ ದೇವಾಲಯವು ಸಹಜವಾಗಿಯೇ ಜನಪ್ರಿಯವಾಗಿದೆ. ಶಿಡ್ಲಘಟ್ಟ ಪಾಳೆಯಪಟ್ಟನ್ನು ನೋಡಿಕೊಳ್ಳುತ್ತಿದ್ದ ತಿಮ್ಮರಾಜು ಮತ್ತು ಬೊಮ್ಮರಾಜು ಇಬ್ಬರ ನಡುವೆ ವೈಷಮ್ಯದ ಸೆಣಸಾಟ ನಡೆದು ಬೊಮ್ಮರಾಜನು ಮಡಿದನು. ಆಗ ಈ ಪ್ರದೇಶಕ್ಕೆ ವೆಂಕಟೇಶ ಸಾಗರವೆಂದು ಕರೆಯುತ್ತಿದ್ದರು. ನಂತರ ತಿಮ್ಮರಾಜುಗೆ ಕನಸು ಬಿದ್ದಂತೆ ಇಲ್ಲಿಯ ಪೊದೆಗಳಲ್ಲಿ ಹುದುಗಿದ್ದ ವೆಂಕಟೇಶನ ದೇವಾಲಯವನ್ನು ತನ್ನ ಸೇನೆಯ ಸಹಾಯದಿಂದ ಶೋಧಿಸಿ ಬೆಳಕಿಗೆ ತಂದು ಪ್ರತಿಷ್ಠಾಪಿಸಿದನೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ದಟ್ಟವಾದ ಅರಣ್ಯಗಳ ಮಧ್ಯದಲ್ಲಿದ್ದ ಈ ಸ್ಥಳವನ್ನು ತಲುಪುವುದು ಹಿಂದಿನ ಕಾಲದಲ್ಲಿ ದುಸ್ಸಾಧ್ಯವಾಗಿತ್ತು. ಇಲ್ಲಿ ವಾಸಿಸುತ್ತಿದ್ದ ಒಬ್ಬ ಬೇಡನು ಭಕ್ತಾದಿಗಳನ್ನು ಹಿಂಸಿಸಿ ಕಳ್ಳತನ ಮಾಡುತ್ತಿದ್ದ ಕಾರಣ ಈ ಬೆಟ್ಟಕ್ಕೆ ತಲಕಾಯಿ ಬೆಟ್ಟವೆಂದು ಕರೆಯಲಾಯಿತೆಂದು ಪ್ರತೀತಿಯಿದೆ. ಇನ್ನೊಂದು ನಂಬುಗೆಯ ಪ್ರಕಾರ ನಾರದರು, ಆ ಬೇಡನಿಗೆ ಉಪದೇಶ ನೀಡಿದ ಕಾರಣ ಈ ಬೆಟ್ಟಕ್ಕೆ 'ತಲೆಕಾಯ್ದ ಬೆಟ್ಟ'ವೆಂಬ ಹೆಸರು ರೂಢಿಗೆ ಬಂದಿತೆಂಬ ಅಭಿಪ್ರಾಯವೂ ಇದೆ. ತೆಲುಗು ಭಾಷೆಯಲ್ಲಿ ಈ ಬೆಟ್ಟಕ್ಕೆ ತಲಕಾಯಲಕೊಂಡವೆಂಬ ಹೆಸರೂ ರೂಢಿಯಲ್ಲಿದೆ. ಬೆಟ್ಟದ ಮೇಲೊಂದು ವೆಂಕಟೇಶನ ದೇವಾಲಯವಿದ್ದು, ಇದನ್ನು ಸುಮಾರು ೫೦–೬೦ ವರ್ಷಗಳಿಂದೀಚೆಗೆ ಕಟ್ಟಿರಬಹುದೆಂದು ಪ್ರೊ॥ ಕೆ. ಆರ್. ನರಸಿಂಹನ್ ಅವರು ಅಭಿಪ್ರಾಯಪಡುತ್ತಾರೆ. ಬೆಟ್ಟದಲ್ಲಿ ಖಾಲಿ ಗುಹೆಯೊಂದಿತ್ತು. ಅಲ್ಲಿ ಇತ್ತೀಚೆಗೆ ಹುತ್ತದ ಅಥವಾ ಗುಂಡಿನ ರೂಪದಲ್ಲಿರುವ ವೆಂಕಟೇಶನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಬೆಟ್ಟಕ್ಕೆ ಹತ್ತಲು ಕಡಿದಾದ ಮೆಟ್ಟಲುಗಳಿವೆ. ಇಲ್ಲಿ ನಡೆಯುವ ರಥೋತ್ಸವದಂದು ಸಹಸ್ರಾರು ಭಕ್ತರು ಮೇಲೆ ಹೋಗಿ ಸ್ವಾಮಿಯ ದರ್ಶನ ಮಾಡುವುದು ರೂಢಿಯಲ್ಲಿದೆ. ಬೆಟ್ಟದ ಕೆಳಗೆ ವೆಂಕಟಾಪುರವೆಂಬ ಗ್ರಾಮವಿದ್ದು, ಇನ್ನೊಂದು ವಿಜಯನಗರೋತ್ತರ ಕಾಲದ ವೆಂಕಟೇಶನ ದೇವಾಲಯವನ್ನು ವಿಶಾಲವಾದ ನಿವೇಶನದಲ್ಲಿ ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಪ್ರಾಚೀನ ಲಕ್ಷಣವುಳ್ಳ ಕಲ್ಯಾಣಿ ಇದ್ದು, ಇತ್ತೀಚಿಗೆ ದುರಸ್ತಿಗೊಳಿಸಲಾಗಿದೆ. ಕಲ್ಯಾಣಿಯ ಮಧ್ಯದಲ್ಲಿರುವ ಕಲ್ಲಿನ ಮಂಟಪವನ್ನು ಪಾಳೆಯಗಾರರ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತದೆ. ದೇವಾಲಯದ ಪ್ರಾಕಾರವನ್ನು ಪ್ರವೇಶಿಸಲು ಎರಡು ಪ್ರವೇಶ ದ್ವಾರಗಳಿವೆ. ಮುಖ್ಯ ದ್ವಾರದಲ್ಲಿರುವ ಎಡಬದಿಯ ಗೋಡೆಯಲ್ಲಿ ವರಾಹ, ಮತ್ಸ್ಯ, ಕೂರ್ಮ, ಚಂದ್ರ ಹಾಗೂ ಸೂರ್ಯರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಮುಖ್ಯ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ನರಸಿಂಹ, ವಾಮನ, ಪರಶುರಾಮ, ಕೋದಂಡರಾಮ ಮೊದಲಾದ ಅಲಂಕಾರಿಕ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ನವರಂಗದ ಮುಂದಕ್ಕೆ ಪಕ್ಕದಲ್ಲಿ ಇನ್ನೊಂದು ಕೋಣೆಯಿದ್ದು, ಒಳಗೆ ಪದ್ಮಾವತಿಯ ಶಿಲ್ಪವಿದೆ. ಗರ್ಭಗೃಹವು ಚೌರಸವಾಗಿದ್ದು, ಒಳಗೆ ಗರುಡಪೀಠದ ಮೇಲೆ ಅಸ್ಪಷ್ಟ ಆಕಾರದ ಮೂರ್ತಿಯಿದ್ದು, ಇದನ್ನೇ ವೆಂಕಟೇಶನೆಂದು ಕರೆಯಲಾಗುತ್ತದೆ. ಇದರ ಹಿಂದೆ ಸ್ವಲ್ಪ ಎತ್ತರದಲ್ಲಿ ಪಾಣಿಪೀಠದ ಮೇಲೆ ಸುಮಾರು ನಾಲ್ಕು ಅಡಿ ಎತ್ತರದ ವೆಂಕಟೇಶನ ಶ್ರೀದೇವಿ–ಭೂದೇವಿ ಸಮೇತನಾದ ವಿಗ್ರಹವಿದೆ. ಈ ದೇವಾಲಯದ ಬ್ರಹ್ಮ ರಥೋತ್ಸವವು ಮಾಘ ಮಾಸದ ಹುಣ್ಣಿಮೆಯೆಂದು ನಡೆಯುತ್ತದೆ.

**ತೇರುಹಳ್ಳಿ** (ಕೋಲಾರ ತಾಲೂಕು): ಕೋಲಾರ ನಗರಕ್ಕೆ ಕಂಠಹಾರದಂತಿರುವ ಬೆಟ್ಟಗಳ ಮೇಲೆ ಇರುವ ತೇರುಹಳ್ಳಿಯು ಪಾಪರಾಜನ ಹಳ್ಳಿಯ ಉಪಗ್ರಾಮವಾಗಿದ್ದು, ಜಿಲ್ಲೆಯ ಅತ್ಯಂತ ಪ್ರಾಚೀನ ಸ್ಥಳಗಳಲ್ಲಿ ಒಂದೆನಿಸಿ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಈ ಸ್ಥಳಕ್ಕೆ ವೀರಗಂಗರಸನ ಶಾಸನಗಳಲ್ಲಿ ಕುವಲಾಲನಾಡಿನ ಕುವಲಾಲರ್ಮನ ಮುಚುಕುಂದ ಗಿರಿಯ ಮೇಲಿರುವ 'ವೀರಗಂಗಪುರ' ಅಥವಾ 'ವೀರಗಂಗನಲ್ಲೂರು' ಎಂದು ಪದೇಪದೇ ಕರೆಯಲಾಗಿದೆ. ಈ ಸ್ಥಳದಲ್ಲಿರುವ ಗಂಗಾಧರೇಶ್ವರ

(ಶಾಸನೋಕ್ತ ವೀರ ಗಂಗೀಶ್ವರಮ್–ಉಡಯ್ ನಾಯನಾರ್) ದೇವಾಲಯವು ಶಿಥಿಲವಾಗಿದ್ದು ಗರ್ಭಗೃಹ, ಅರ್ಧಮಂಟಪ, ವಿಶಾಲವಾದ ನವರಂಗ ಹಾಗೂ ಅಪೂರ್ಣವಾದ ಮುಖಮಂಟಪ ಅಥವಾ ಕಲ್ಯಾಣಮಂಟಗಳನ್ನು ಹೊಂದಿದೆ. ಈ ದೇವಾಲಯದ ಪಕ್ಕದಲ್ಲಿ ವಿಶಾಲವಾದ ಪುಷ್ಕರಣಿ ಇದೆ. ಮುಖ್ಯ ದೇವಾಲಯದ ಎಡಭಾಗದಲ್ಲಿ ಅಮ್ಮನವರ ಪ್ರತ್ಯೇಕ ದೇವಾಲಯವಿದ್ದು ಶಿಥಿಲವಾಗಿದೆ. ದೇವಾಲಯದ ಮಹಾದ್ವಾರವು ಕೋಲಾರಮ್ಮ ದೇವಾಲಯದ ಶೈಲಿಯನ್ನೇ ಹೋಲುತ್ತದೆ. ದೇವಾಲಯದಲ್ಲಿ ಸಪ್ತಮಾತೃಕೆ, ಭೈರವ, ಗಣಪತಿ ಮೊದಲಾದ ಗಂಗರ ಶೈಲಿಯ ಶಿಲ್ಪಗಳು ಕಂಡುಬರುತ್ತವೆ. ಈ ದೇವಾಲಯದಲ್ಲಿ ಹಲವಾರು ಶಾಸನಗಳಿದ್ದು, ಮೊದಲನೇ ಶಾಸನವು ಗಂಗಾಧರೇಶ್ವರ ದೇವಾಲಯದ ತಳಪಾಯದಲ್ಲಿದ್ದು, ಕ್ರಿ. ಶ. ೧೨೧೬ರಲ್ಲಿ ವೀರಗಂಗ ಅಥವಾ ಉತ್ತಮ ಚೋಳ ಗಂಗನು ಕುವಲಾಲನಾಡಿನ ಕುವಲಾಲಮ್ ಬಳಿ ಮುಚುಕುಂದ ಗಿರಿಯಲ್ಲಿ ವೀರಗಂಗನಲ್ಲೂರನ್ನು ಸ್ಥಾಪಿಸಿ, ವೀರಗಂಗೀಶ್ವರ ದೇವಾಲಯವನ್ನು ನಿರ್ಮಿಸಿದ ವಿವರಗಳನ್ನು ದಾಖಲಿಸುತ್ತದೆ. ಈ ದೇವಾಲಯಕ್ಕೆ ವೀರಗಂಗನು ೧೦,೦೦೦ ಕುಳಿ ತರಿ ಭೂಮಿಯನ್ನು ಹಾಗೂ ಹಲವು ಖಂಡುಗ ಧಾನ್ಯಗಳನ್ನು ದೇವಾಲಯದ ದೈನಂದಿನ ಕೈಂಕರ್ಯಕ್ಕೆ ಉಪಯೋಗಿಸಲು ನೀಡಿದ ವಿವರಗಳನ್ನೂ ಈ ಶಾಸನದಲ್ಲಿ ದಾಖಲಿಸಲಾಗಿದೆ. ಇಲ್ಲೇ ಇರುವ ಎರಡನೇ ಶಾಸನವು ಕ್ರಿ. ಶ. ೧೨೧೮ರಲ್ಲಿ ಪೋಳಲ್ ದಣ್ಣಾಯಕನ (ಈತನು ವೀರಗಂಗನ ಮಾವನೆಂದೂ) ಚಿಕ್ಕ ತಮ್ಮನಾದ ಚಿಕ್ಕ ದಣ್ಣಾಯಕನ ಮಗನಾದ ವಳ್ಳಾಲದೇವನ್ ಎಂಬ ಅಧಿಕಾರಿಯು ಈ ದೇವಾಲಯಕ್ಕೆ ಭೂಮಿಯನ್ನು ದತ್ತಿಬಿಟ್ಟು ಅದನ್ನು ಹೂ ತೋಟವಾಗಿ ಪರಿವರ್ತಿಸಿ, ನಿರಂತರವಾಗಿ ದೇವಾಲಯದ ಪೂಜಾ ಕೈಂಕರ್ಯಕ್ಕೆ ಕೊಡಬೇಕೆಂಬ ನಿಯಮ ಮಾಡಿದ ವಿವರಗಳನ್ನು ದಾಖಲಿಸುತ್ತದೆ. ಇಲ್ಲೇ ಇರುವ ಮೂರನೇ ಶಾಸನವು ಕ್ರಿ. ಶ. ೧೨೧೯ರಲ್ಲಿ (ಚಿತ್ತಾರಯ್) ಚೈತ್ರಮಾಸದ ಕೇತ್ತಯ್ ಅಥವಾ ಜೇಷ್ಠಾ ನಕ್ಷತ್ರದ ಮಹಾ ಉತ್ಸವಕ್ಕಾಗಿ ದೇವಾಲಯದ ಸೇವಕರು ಉಪಯೋಗಿಸಲು ಹಲವು ನಿಧಿಯನ್ನು ಸ್ಥಾಪಿಸಿ, ಮಹೇಶ್ವರರುಗಳೆಂಬ ದೇವಾಲಯದ ರಕ್ಷಕರ ಹತೋಟಿಗೆ ನೀಡಿದ ವಿಚಾರವನ್ನು ದಾಖಲಿಸುತ್ತದೆ. ಇಲ್ಲೇ ಇರುವ ನಾಲ್ಕನೇ ಶಾಸನವು ಕ್ರಿ. ಶ. ೧೨೨೫ರಲ್ಲಿ ವೀರಗಂಗನು ದೇವಾಲಯಕ್ಕೆ ಬಿಟ್ಟ ದತ್ತಿಗಳ ವಿಚಾರವನ್ನು ದಾಖಲಿಸುತ್ತದೆ. ಇಲ್ಲೇ ಇರುವ ಐದನೇ ಶಾಸನವು ಕ್ರಿ. ಶ. ೧೨೮೦ರಲ್ಲಿ ದೇವಾಲಯಕ್ಕೆ ನೀಡಿದ ಹಲವಾರು ದಾನಗಳ ವಿವರಗಳನ್ನು ದಾಖಲಿಸಿದೆ. ಇಲ್ಲೇ ಇರುವ ಆರನೇ ಶಾಸನವು ಕ್ರಿ. ಶ. ೧೨೮೦ ರಲ್ಲಿ ವೆಟ್ಟುಮಾರ ಬಾಣನು (ಬಾಣವಂಶ) ನೀಡಿದ ದತ್ತಿ ಎಂದು ಮಾತ್ರ ದಾಖಲಿಸುತ್ತದೆ. ಇಲ್ಲೇ ಇರುವ ಕ್ರಿ. ಶ. ೧೩೨೧ರ ಶಾಸನವು ಕರಿಯ ಇರಮಯ್ಯ ನಾಯಕನೆಂಬ ವೀರ ಬಲ್ಲಾಳದೇವನ ಮಂತ್ರಿಯು ಕುವಲಾಲಮ್‌ನಲ್ಲಿರುವ ವೀರ ಗಂಗೀಶ್ವರ ದೇವರಿಗೆ ವಾರ್ಷಿಕವಾಗಿ ನಡೆಯುವ ಉತ್ಸವಗಳಿಗೆ ಇರುಗು ಶೆಟ್ಟಿಯಾರ್ ಎಂಬ ದೇವಾಲಯದ ಮುಖ್ಯಸ್ಥನ ವಶಕ್ಕೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಗಂಗಾಧರೇಶ್ವರ ದೇವಾಲಯದ ಪಕ್ಕದಲ್ಲಿರುವ ಪಾರ್ವತಿಯ ದೇವಾಲಯದ ತಳಪಾದಿಯ ಮೇಲಿರುವ ಶಾಸನವು ಕ್ರಿ. ಶ. ೧೨೮೦ರಲ್ಲಿ ವೀರಗಂಗನ ಮಗಳಾದ ಸೋಮಳಾದೇವಿಯು ಪದುಮೀಶ್ವರಮ್ ದೇವಾಲಯದಲ್ಲಿ ನಿರಂತರ ಪೂಜಾ ಕೈಂಕರ್ಯಕ್ಕೆ ಹಾಗೂ ದೀಪಮಾಲೆ ಸೇವೆಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಹೀಗೆ ಇನ್ನೂ ಅನೇಕ ದಾನ ಶಾಸನಗಳಿದ್ದು, ವೀರಗಂಗೀಶ್ವರ ಅಥವಾ ಈಗಿನ ಗಂಗಾಧರೇಶ್ವರ ದೇವಾಲಯವು ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳವೆಂದು ಪರಿಗಣಿಸಲಾಗಿದೆ. ಇತ್ತೀಚೆಗೆ ತೇರುಹಳ್ಳಿಗೆ ಕೋಲಾರದಿಂದ ರಸ್ತೆ ನಿರ್ಮಿಸಲಾಗಿದೆ.

**ನಂಗಲಿ:** (ಮುಳಬಾಗಿಲು ತಾಲೂಕು:ಜನಸಂಖ್ಯೆ:೫,೯೭೩) ನಂಗಲಿ ಅಥವಾ 'ನಂಗ್ಲಿ'ಯು ಕೌಂಡಿಣ್ಯ ನದಿ ತೀರದಲ್ಲಿ ಮುಳಬಾಗಿಲಿನಿಂದ ೧೫ ಕಿ.ಮೀ ದೂರದಲ್ಲಿರುವ ಪ್ರಾಚೀನ ಗ್ರಾಮವಾಗಿದೆ. ಮುಳಬಾಗಿಲು ತಾಲೂಕಿನ ಕುರುಡುಮಲೆ ಬೆಟ್ಟಗಳಲ್ಲಿ ಹುಟ್ಟುವ ಕೌಂಡಿಣ್ಯ ನದಿಯು ಪೂರ್ವಾಭಿಮುಖವಾಗಿ ಹರಿಯುತ್ತಾ ನಂಗಲಿ ಗ್ರಾಮದಲ್ಲಿ 'ನಂಗ್ಲಿ ಹೊಳೆ' ಯಾಗಿದ್ದು ಮುಂದೆ ಚಿತ್ತೂರು ಜಿಲ್ಲೆಯ ಪಲಮನೇರ್ ವಲಯಕ್ಕೆ ಸೇರಿದ ಕೌಂಡಿಣ್ಯ ವನ್ಯಜೀವಿ ಧಾಮದ ಕಣಿವೆಯತ್ತ ಸಾಗುತ್ತದೆ. ನಂಗಲಿ ಗ್ರಾಮದ ಬಳಿ ಈ ಹೊಳೆಗೆ ಹಿಂದೆ ನಿರ್ಮಿಸಿದ್ದ ಒಡ್ಡು ಶಿಥಿಲವಾಗಿದೆ (ಈಗಲೂ ಇದರ ಅವಶೇಷಗಳನ್ನು ಕಾಣಬಹುದಾಗಿದೆ). ನಂತರ ಮೈಸೂರು ಮಹಾರಾಜರ ಕಾಲದಲ್ಲಿ ನಂಗ್ಲಿ ಹೊಳೆಗೆ ಸುಭದ್ರವಾದ ಒಡ್ಡನ್ನು ಹಾಗೂ ಏರಿಯನ್ನೂ ನಿರ್ಮಿಸಲಾಗಿದೆ. "ಈ ಕೆರೆಯು ನಯಾಗರಾ ಜಲಪಾತದ ಚಿಕಣಿ ಜಲಪಾತದ (ಮಿನಿಯೇಚರ್) ರೀತಿಯಲ್ಲಿ ಕಾಣುತ್ತದೆ" ಎಂದು ಪ್ರೊ ಚಂದ್ರಶೇಖರ್ ನಂಗಲಿ ಅಭಿಪ್ರಾಯಪಡುತ್ತಾರೆ. ನಂಗಲಿ ಕೆರೆಗೆ ಸೇರಿಕೊಂಡಂತೆ ಪೂರ್ವಕ್ಕೆ ವ್ಯಾಪಿಸಿರುವ ಸಾವಿರಾರು ಎಕರೆ ಹಸಿರು ಗದ್ದೆಗಳು ವ್ಯಾಪಿಸಿವೆ. ನಮ್ಮ ಪೂರ್ವಿಕರು ದೀರ್ಘದೃಷ್ಟಿಯಿಂದ ರೂಪಿಸಿದ್ದ 'ಮಳೆ ನೀರು ಕೊಯ್ಲು' ಮತ್ತು ವಿದ್ಯುತ್ ರಹಿತ ನೀರಾವರಿ ಯೋಜನೆಗೆ ಜಿಲ್ಲೆಯಲ್ಲಿರುವ ಅಧಿಕ ಸಂಖ್ಯೆಯ ಕೆರೆಗಳು ಅತ್ಯುತ್ತಮ ಉದಾಹರಣೆಯಾಗಿವೆ. ಸ್ಥಳೀಯ ಹೇಳಿಕೆಯ ಪ್ರಕಾರ

"ಚೆರುವು ನಿಂಡಿತೆ ನಂಗಲಿ ಲಾಕಾಪೋತೆ ಎಂಗಿಲಿ" (ಕೆರೆ ತುಂಬಿದರೆ ನಂಗಲಿ, ಇಲ್ಲದಿದ್ದರೇ ಎಂಜಲು ಬಾಳು) ಎಂಬ ಮಾತು ಇಂದಿಗೂ ಅಕ್ಷರಶ: ಸತ್ಯವಾಗಿರುತ್ತದೆ. ನಂಗಲಿಯಲ್ಲಿರುವ ಪ್ರಮುಖ ದೇವಾಲಯಗಳೆಂದರೆ ವೇಣುಗೋಪಾಲಸ್ವಾಮಿ, ಧರ್ಮರಾಯಸ್ವಾಮಿ, ಶ್ರೀರಾಮ, ಇತ್ತೀಚೆಗೆ ಜೀರ್ಣೋದ್ಧಾರವಾಗಿರುವ ಗಣಪತಿ ಮೊದಲಾದುವುಗಳು. ಇಲ್ಲಿನ ಸಪ್ತಮಾತೃಕೆಯರ ದೇವಾಲಯದ ಬಗ್ಗೆ ವಿದ್ವಾಂಸರ ಗಮನ ಸೆಳೆದಿರುವ ಪ್ರೊ|| ಕೆ.ಆರ್.ನರಸಿಂಹನ್ ಅವರು "ಈ ಸಪ್ತಮಾತೃಕೆಯರ ಶಿಲ್ಪಗಳು ಗಂಗರ ಕಾಲದ ಲಕ್ಷಣವನ್ನು ವ್ಯಕ್ತಪಡಿಸುತ್ತವೆಂದು" ಅಭಿಪ್ರಾಯಪಡುತ್ತಾರೆ. ಈ ದೇವಾಲಯವನ್ನು ಸ್ಥಳೀಯರು ಜೀರ್ಣೋದ್ಧಾರ ಮಾಡುವ ಕಾರ್ಯವನ್ನು ಆರಂಭಿಸಿರುತ್ತಾರೆ.

ನಂಗಲಿ ಗ್ರಾಮದಲ್ಲಿರುವ ಪ್ರಮುಖ ಶಿಥಿಲವಾದ ಗೋಪಾಲಕೃಷ್ಣ ಅಥವಾ ವೇಣುಗೋಪಾಲ ದೇವಾಲಯದ ಮೇಲಿರುವ ಮೊದಲನೇ ಶಾಸನವು ಸುಮಾರು ಕ್ರಿ.ಶ.೧೨೮೦ರಲ್ಲಿ ಉತ್ತಮ ಚೋಳಗಂಗನ ಮಗನಾದ ವೆಟ್ಟುಮಾರ ಬಾಣನೆಂಬ ಅಧಿಕಾರಿಯು ತೇನುಪುಲಿ ನಾಡಿನಲ್ಲಿದ್ದ ವೀರ್ರೀರುಂಡ ಪೆರುಮಾಳ (ವೇಣುಗೋಪಾಲ) ದೇವರಿಗೆ ನೀಡಿದ ಕೆಲವು ದಾನಗಳ ಬಗ್ಗೆ ದಾಖಲಿಸುತ್ತದೆ. ಇದೇ ದೇವಾಲಯದಲ್ಲಿರುವ ಎರಡನೇ ಶಾಸನವು ಕ್ರಿ.ಶ.೧೨೦೦ರಲ್ಲಿ ಈ ಊರಿನಲ್ಲಿದ್ದ ಮದವೇರಿದ ಆನೆಗಳನ್ನು ಹತೋಟಿಗೆ ತರಲು ಸಾಲು ಮರಕ್ಕೆ ಕಟ್ಟಿ ಹಾಕಿದ ವಿಷಯವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಈಶ್ವರ ದೇವಾಲಯದ ಬಳಿಯಿರುವ ಮೂರನೇ ಶಾಸನವು ಸುಮಾರು ೧೨೫೦ರ ಹೊಯ್ಸಳರ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಆದರೆ ಈ ಶಾಸನದ ಐದನೇ ಸಾಲಿನಲ್ಲಿ "ಗಂಗರು ಆರಾಧಿಸಿದ" ಎಂದು ಉಲ್ಲೇಖವಿರುವುದರಿಂದ ಈ ದೇವಾಲಯವು ಗಂಗರ ಕಾಲದ್ದೆಂದು ಊಹಿಸಬಹುದಾಗಿದೆ. ಇದೇ ಗ್ರಾಮದ ಚಟ್ಟು ಬಂಡೆಯ ಮೇಲಿರುವ ನಾಲ್ಕನೇ ಶಾಸನವು ಕ್ರಿ.ಶ.೧೫೨೫ರಲ್ಲಿ ಈ ಪ್ರಾಂತ್ಯದ ಮಹಾಮಂಡಳೇಶ್ವರನಾಗಿದ್ದ ರಾಮಪ್ಪರಾಜ ತಮ್ಮಯ್ಯನು ನಂಗಲಿಯ ವೆಂಕಟೇಶ್ವರ ದೇವರಿಗೆ ಹಲವು ಭೂಮಿಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಈಶಾನ್ಯಕ್ಕಿರುವ ಹೊಲದಲ್ಲಿರುವ ಶಾಸನವು ಕ್ರಿ.ಶ.೧೫೫೬ರಲ್ಲಿ ಮಲ್ಲಗೌಡನೆಂಬ ಅಧಿಕಾರಿಯ ಮಗ ಚಾವಗೌಡನು ಕೃಷ್ಣಮಂಗಲದ ಪದುಮಯ್ಯನಿಗೆ ಹಲವು ಭೂಮಿಯನ್ನು ದಾನವಾಗಿ ನೀಡಿ ಅವುಗಳನ್ನು ಬಾಡಿಗೆ/ಕರಗಳಿಂದ ಮುಕ್ತ ಮಾಡಿದ ವಿಚಾರವನ್ನು ತಿಳಿಸುತ್ತದೆ. ಇದರ ಬಳಿಯಲ್ಲೇ ಇರುವ ಎರಡನೇ ಕಲ್ಲಿನ ಮೇಲಿರುವ ಕ್ರಿ.ಶ.೧೬೦೦ರ ಶಾಸನವು ಅಸ್ಪಷ್ಟವಾಗಿದ್ದು ನಂಗಲಿಯ ಕೈಲಾಸಮ್ ದೇವರಿಗೆ ಪೂಜಾ ಕೈಂಕರ್ಯಕ್ಕಾಗಿ ಮಡವಾಳ ಕೆರೆಯ ಬಳಿಯ ಜಮೀನಿನ ಉತ್ಪತ್ತಿಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ದಕ್ಷಿಣಕ್ಕಿರುವ ಹುಟ್ಟು ಬಂಡೆಯ ಶಾಸನವು ಕ್ರಿ.ಶ.೧೫೩೫ರಲ್ಲಿ ಶ್ರೀರಾಮನ ದೇವಾಲಯದ ಪೂಜಾರಿಗಳಾಗಿದ್ದ ಹಲವು ಬ್ರಾಹ್ಮಣರಿಗೆ ಸ್ಥಳೀಯವಾಗಿ ಜನಬಲದಿಂದ ಕೆರೆಯನ್ನು ದುರಸ್ತಿಗೊಳಿಸುವ ಸಲುವಾಗಿ ಕಟ್ಟು ಕೊಡಿಗೆಗಳನ್ನು ನೀಡಿದ ಮಹತ್ವವಾದ ವಿಚಾರವನ್ನು ದಾಖಲಿಸುತ್ತದೆ. ಇದೇ ಸ್ಥಳದ ಗೋಪಾಲಕೃಷ್ಣ ದೇವಾಲಯದಲ್ಲಿರುವ ಇನ್ನೊಂದು ತಮಿಳು ಭಾಷೆಯ ಅಸ್ಪಷ್ಟ ಶಾಸನವು ವಿಡುಕಾಡಲಳ ಪೆರುಮಾಳ ದೇವರಿಗೆ ನೀಡಿದ ಹಲವು ದಾನಗಳನ್ನು ಉಲ್ಲೇಖಿಸುತ್ತಾ 'ಗಂಗಾಪತಿ' ಎಂಬ ರಾಜನ ಬಗ್ಗೆ ದಾಖಲಿಸಿರುವುದು ಮಾತ್ರ ವ್ಯಕ್ತವಾಗುತ್ತದೆ. ನಂಗಲಿಯು ಇತ್ತೀಚೆಗೆ ಅಂತರ ರಾಜ್ಯ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರವೆನಿಸಿದೆ.

**ನಂದಿಬೆಟ್ಟಗಳು:** (ಕೋಲಾರ ಜಿಲ್ಲೆ: ಚಿಕ್ಕಬಳ್ಳಾಪುರ ತಾಲೂಕು:ಜನಸಂಖ್ಯೆ: ೭೮) ಬೆಂಗಳೂರಿನಿಂದ ೬೫ ಕಿ.ಮೀ. ದೂರದಲ್ಲಿ ನಂದಿಬೆಟ್ಟ ಅಥವಾ ನಂದಿದುರ್ಗ. ರಾಜ್ಯದ ಪ್ರಖ್ಯಾತ ಗಿರಿಧಾಮಗಳಲ್ಲೊಂದು. ಸಮುದ್ರಮಟ್ಟದಿಂದ ಇದರ ಗರಿಷ್ಠ ಎತ್ತರ ೪,೮೫೦ ಅಡಿಗಳು. ಉತ್ತರಪಾಲಾರ್ ದಕ್ಷಿಣ ಪೆನ್ನಾರ್, ಚಿತ್ರಾವತಿ, ಆರ್ಕಾವತಿ ಮತ್ತು ಪಾಪಾಘ್ನಿ ನದಿಗಳು ನಂದಿಬೆಟ್ಟ ಶ್ರೇಣಿಗಳಲ್ಲಿ ಹುಟ್ಟುತ್ತವೆ. ಇದನ್ನು ಶಾಸನಗಳಲ್ಲಿ **'ನಂದಿಗಿರಿ'** ಎಂದು ಕರೆಯಲಾಗಿದೆ. ಕೂಷ್ಮಾಂಡ ಋಷಿಯು ಇಲ್ಲಿ ತಪಸ್ಸು ಮಾಡುತ್ತಿದ್ದುದರಿಂದ ಈ ಬೆಟ್ಟಕ್ಕೆ 'ಕೂಷ್ಮಾಂಡ ಗಿರಿ' ಎಂಬ ಹೆಸರು ಬಂದಿತೆಂಬ ನಂಬಿಕೆಯಿದೆ. ಇದರ ಸಮೀಪವಿರುವ ಗೋಪಿನಾಥ ಬೆಟ್ಟದಲ್ಲಿರುವ ಜೈನ ಶಾಸನದಲ್ಲಿ ಈ ಬೆಟ್ಟವನ್ನು 'ನಂದಿಗಿರಿ' ಎಂದು ಉಲ್ಲೇಖಿಸಲಾಗಿದೆ. ಗಂಗರು ತಮ್ಮನ್ನು ತಾವು 'ನಂದಿಗಿರಿ ಒಡೆಯರು', 'ನಂದಿಗಿರಿನಾಥ' ಎಂದು ಕರೆದುಕೊಂಡಿರುತ್ತಾರೆ. ಕ್ರಿ. ಶ. ೧೧ನೇ ಶತಮಾನದ ಚೋಳರ ಶಾಸನದಲ್ಲಿ ಸಹ ಈ ಬೆಟ್ಟವನ್ನು 'ನಂದಿಗಿರಿ' ಅಥವಾ 'ನಂದಗಿರಿ' ಮೊದಲಾಗಿ ಹೆಸರಿಸಲಾಗಿದೆ. ನಂದಿಬೆಟ್ಟದಿಂದ ನಡೆದುಹೋಗಿ ನೋಡಬಹುದಾದ ಸ್ಥಳಗಳೆಂದರೆ, ವಾಯುವ್ಯದಲ್ಲಿ ಚೆನ್ನಕೇಶವ ಬೆಟ್ಟ (ಎತ್ತರ ೪,೭೬೨ ಅಡಿಗಳು); ನೈಋತ್ಯದಲ್ಲಿ ಬ್ರಹ್ಮಗಿರಿ (ಎತ್ತರ ೪,೬೫೭ ಅಡಿಗಳು); ಮತ್ತು ಉತ್ತರದಲ್ಲಿ ಸ್ಕಂಧಗಿರಿ (ಎತ್ತರ ೪, ೭೪೯ ಅಡಿಗಳು). ದಕ್ಷಿಣ ಪ್ರಪಾತದ ತುದಿಯಲ್ಲಿರುವ

ದುರ್ಗಮ ಭಾಗದ ಪಾಳುಬಿದ್ದಿರುವ ಬಾವಿಗೆ 'ಶ್ರವಣತೀರ್ಥ' ಎಂಬ ಹೆಸರಿತ್ತು. ಗೋಪಿನಾಥ ಬೆಟ್ಟದ ಈಶಾನ್ಯದಲ್ಲಿ ಪ್ರಾಚೀನ ಜೈನಶಾಸನವೊಂದಿದೆ. ಈ ಪರಿಸರದ ಗೋಪಿನಾಥ ದೇವಾಲಯದ ಬಳಿ ಬಂಡೆಯ ಮೇಲಿರುವ ಕ್ರಿಶ. ೭೫೦ರ ಜೈನ ಶಾಸನವು ದಾಖಲಿಸಿರುವಂತೆ ಇಲ್ಲಿದ್ದ ಚೈತ್ಯಭವನವು ಅತ್ಯಂತ ಅಲಂಕಾರಿಕಾವಾಗಿತ್ತು ಹಾಗೂ ಉನ್ನತ ಶಿಖರವನ್ನು ಹೊಂದಿತ್ತು. ಇದೇ ಶಾಸನದಲ್ಲಿ ಧರಣೇಂದ್ರ ಪರ್ವತ, ಜಿನೇಂದ್ರ ಚೈತ್ಯ (ಗುಹಾಂತರ ದೇವಾಲಯಗಳು)ಗಳು ಇದ್ದುದರ ಬಗ್ಗೆ ಉಲ್ಲೇಖವಿದೆ. ಅನೇಕ ತಪಸ್ವಿಗಳು ಗುಂಪುಗಳು ಈ ಪರಿಸರದಲ್ಲಿ ವಾಸಿಸುತ್ತಿದ್ದುದರ ಬಗ್ಗೆ ಮತ್ತು ಶ್ರೀಕಂಠದ ಪರ್ವತ (ನಂದಿಗಿರಿ ?)ದಲ್ಲಿ ತಪಸ್ಸು ಮಾಡುತ್ತಿದ್ದ ವಿಚಾರಗಳನ್ನು ಮನೋಜ್ಞವಾಗಿ ಈ ಶಾಸನವು ದಾಖಲಿಸಿರುತ್ತವೆ. ಈಗ ಈ ಗವಿಯಲ್ಲಿ ವಿಷ್ಣು (ಗೋಪಿನಾಥ) ದೇವಾಲಯವಿದೆ. ಇದರ ಬಳಿಯೇ ಇನ್ನೊಂದು ಸಣ್ಣ ಬೆಟ್ಟದಲ್ಲಿ ನರಸಿಂಹನ ದೇವಾಲಯವಿದ್ದು ಒಂದು ಗುಂಡು ಕಲ್ಲಿಗೆ ಪೂಜೆ ಮಾಡಲಾಗುತ್ತದೆ. ಪ್ರಾಯಶಃ ಈ ಬೆಟ್ಟದ ಮೇಲೆ ಮೊಟ್ಟ ಮೊದಲು ಚಿಕ್ಕಬಳ್ಳಾಪುರದ ಪಾಳೆಯಗಾರರು, ಅನಂತರ ಹೈದರ್ ಮತ್ತು ಟಿಪ್ಪು ಕೋಟೆಯನ್ನು ಕಟ್ಟಿದರು. ಸ್ವಲ್ಪ ಕಾಲದವರೆಗೆ ಇದು ಮರಾಠರ ಅಧೀನದಲ್ಲಿತ್ತು. ನೈಋತ್ಯದಲ್ಲಿರುವ ಪ್ರಪಾತಕ್ಕೆ 'ಟಿಪ್ಪುಡ್ರಾಪ್' ಎಂಬ ಹೆಸರಿದೆ. ಏಕೆಂದರೆ ಟಿಪ್ಪು ಕಾಲದಲ್ಲಿ ಮರಣ ಶಿಕ್ಷೆಗೊಳಗಾದ ಕೈದಿಗಳನ್ನು ಈ ಪ್ರಪಾತದ ತುದಿಯಿಂದ ಕೆಳಕ್ಕೆ ತಳ್ಳಿಸಲಾಗುತ್ತಿತ್ತೆಂದು ಅನೇಕ ಇತಿಹಾಸಕಾರರು ದಾಖಲಿಸಿರುತ್ತಾರೆ. ಇದಕ್ಕೆ ಸ್ವಲ್ಪ ಸಣ್ಣದಾಗಿರುವ ಉತ್ತರ ಭಾಗದ ಮತ್ತು ನಂದಿಗೆ ಹತ್ತಿರದಲ್ಲಿ ಉತ್ತರಕ್ಕಿರುವ ಬೆಟ್ಟದಲ್ಲಿ 'ಹೈದರ್‌ಡ್ರಾಪ್' ಎಂದು ಹೇಳಲಾಗುವ ಪ್ರಪಾತವೂ ಇದೆ. ೧೭೯೧ರಲ್ಲಿ ದುರ್ಗಮವಾದ ಈ ಕೋಟೆಯನ್ನು ಲಾರ್ಡ್ ಕಾರ್ನ್‌ವಾಲೀಸ್‌ನ ನೇತೃತ್ವದಲ್ಲಿ ಬ್ರಿಟಿಷರು ಆಕ್ರಮಿಸಿಕೊಂಡರು. ಇದನ್ನು ಬೇಸಿಗೆಯ ತಂಗುದಾಣವಾಗಿ ಬೆಂಗಳೂರಿನ ಬ್ರಿಟಿಷ್ ಅಧಿಕಾರಿಗಳು ಉಪಯೋಗಿಸಿದರು. ಅದಕ್ಕೆ ಮುಂಚೆ ನಂದಿಯು ಮಿಲಿಟರಿ ನೆಲೆಯಾಗಿತ್ತು. ದೊಡ್ಡ ಕೊಳದ ಸಮೀಪದಲ್ಲಿ ಕರ್ನಲ್ ಕಪ್ಪೆಜ್ ಎಂಬುವನಿಂದ ಮೊದಲನೇಯ ಉದ್ಯಾನವು ಬೆಳೆಸಲ್ಪಟ್ಟಿತೆಂದು ಹೇಳುತ್ತಾರೆ. ಅನಂತರ ಕರ್ನಲ್ ಹಿಲ್, ಸರ್ ಮಾರ್ಕ್ ಕಬ್ಬನ್ ಮತ್ತು ಕ್ಯಾಪ್ಟನ್ ಕನ್ನಿಂಗ್‌ಹ್ಯಾಂ ಅವರುಗಳು ಬೆಟ್ಟದ ಮೇಲೆ ವಸತಿಗೃಹಗಳನ್ನು ನಿರ್ಮಿಸಿದರು. ಗಾಂಧೀಜಿಯವರು ನಂದಿಬೆಟ್ಟದಲ್ಲಿ ತಂಗಿದ್ದುದರ ಜ್ಞಾಪಕಾರ್ಥವಾಗಿ ಕನ್ನಿಂಗ್‌ಹ್ಯಾಂ ಲಾಡ್ಜಿಗೆ 'ಗಾಂಧಿನಿಲಯ' ಎಂಬ ಹೆಸರನ್ನು ಕೊಡಲಾಯಿತು. ಪಶ್ಚಿಮಕ್ಕೆ ಇಳಿಜಾರಾಗಿರುವ ಪ್ರಸ್ಥಭೂಮಿಯ ಮಧ್ಯದಲ್ಲಿ ನಿರ್ಮಿಸಲಾಗಿರುವ ಕೊಳಕ್ಕೆ ಅಮೃತ ಸರೋವರವೆಂದು ಕರೆಯಲಾಗಿದ್ದು, ಇಲ್ಲಿಂದ ಸುಮಾರು ೫೦ ಗಜ ದೂರದಲ್ಲಿರುವ ಜಗಲಿಯ ಮೇಲೆ ಟಿಪ್ಪುಸುಲ್ತಾನನು ನಮಾಜ್ ಮಾಡುತ್ತಿದ್ದನೆಂದು ಹೇಳಲಾಗುತ್ತದೆ. ಅವನು ಇಲ್ಲಿ ತಂಗುತ್ತಿದ್ದ ಕಟ್ಟಡವನ್ನು ಟಿಪ್ಪು ಲಾಡ್ಜ್ ಎಂದು ಸಂರಕ್ಷಿಸಲಾಗಿದೆ. ಇಲ್ಲಿರುವ ಯೋಗನಂದೀಶ್ವರ ದೇವಾಲಯವೂ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿರುವ ಚೋಳರ ಕಾಲದ ವಾಸ್ತುರಚನೆಯನ್ನು ಹೊಂದಿದೆ. ಇದರ ಗರ್ಭಗೃಹದ ಪ್ರವೇಶದ್ವಾರವು ಅಲಂಕೃತ ಹಿತ್ತಾಳೆಯ ತಗಡನ್ನು ಹೊದಿಸಿರುವ ಬಾಗಿಲುಗಳನ್ನು ಹೊಂದಿದ್ದು, ಇಕ್ಕೆಲಗಳಲ್ಲಿ ಎತ್ತರವಾದ ದ್ವಾರಪಾಲಕರನ್ನು ಹೊಂದಿದೆ. ಈ ದ್ವಾರಪಾಲಕರ ಪ್ರತಿಮೆಗಳನ್ನು ವಿಜಯನಗರದ ಅರಸು ಕೃಷ್ಣದೇವರಾಯನು ನೀಡಿದನೆಂದು ಪ್ರತೀತಿಯಿದೆ. ಗರ್ಭಗೃಹದ ಮುಂಭಾಗದಲ್ಲಿ ಅರ್ಧಮಂಟಪ, ನವರಂಗ, ಮತ್ತು ಕಲ್ಯಾಣಮಂಟಪಗಳಿವೆ. ನವರಂಗಕ್ಕೆ ಎರಡು ಪ್ರವೇಶದ್ವಾರಗಳಿದ್ದು, ಉತ್ತರದ ದ್ವಾರದಿಂದ ಕಲ್ಯಾಣಮಂಟಪಕ್ಕೆ ಹೋಗಬಹುದಾಗಿದೆ. ನವರಂಗದ ಮಧ್ಯಭಾಗದಲ್ಲಿರುವ ನಾಲ್ಕು ಕಪ್ಪು ಶಿಲೆಯ ಸ್ತಂಭಗಳು ಚೌಕಾಕಾರವಾಗಿದ್ದು, ಅವುಗಳ ಮೇಲೆ ಗಜಾಸುರ ಮರ್ದನ, ಲಿಂಗೋದ್ಭವಮೂರ್ತಿ, ಧ್ಯಾನಾಸಕ್ತ ವಿಷ್ಣು, ನಾಟ್ಯಗಣಪತಿ ಮುಂತಾದ ಉಬ್ಬು ಶಿಲ್ಪಗಳಿವೆ. ನವರಂಗದ ಬಲಭಾಗದಲ್ಲಿ ಸೂರ್ಯ, ಚಂದ್ರ, ಭೈರವ, ಗಣಪತಿ ಮತ್ತು ಕೂಷ್ಮಾಂಡ ಋಷಿಗಳ ಬಿಡಿ ಪ್ರತಿಮೆಗಳನ್ನು ಇಡಲಾಗಿದೆ. ಕಲ್ಯಾಣ ಮಂಟಪದ ಬಲಭಾಗದಲ್ಲಿರುವ ಪಾರ್ವತಿಯ ದೇವಾಲಯದ ಬಲಭಾಗದಲ್ಲಿ 'ದೊಡ್ಡಮ್ಮನ ದೊಣೆ'ಎಂದು ಕರೆಯಲಾಗುವ ಒಂದು ಪುಷ್ಕರಣಿ ಇದೆ. ಪಾರ್ವತಿ ಗುಡಿಯ ಬಳಿಯೇ ಆಂಜನೇಯಸ್ವಾಮಿ ದೇವಾಲಯವಿದೆ. ಈ ದೇವಾಲಯದ ಪರಿಸರದಲ್ಲಿ ದೊರೆತಿರುವ ಇನ್ನೊಂದು ಸ್ತ್ರೀ ವಿಗ್ರಹದ ಪೀಠದ ಮೇಲೆ ಹೊನ್ನಮ್ಮ ಎಂದು ಕೆತ್ತಲಾಗಿದ್ದು, ಸ್ಥಳೀಯ ಪಾಳೆಯಗಾರರ ಕುಟುಂಬಕ್ಕೆ ಸೇರಿದವಳೆಂದು ಗುರುತಿಸಲಾಗಿದೆ. ಈ ದೇವಾಲಯದ ಹೊರಭಾಗದ ಗೋಡೆಯಲ್ಲಿರುವ ನಾಗರಿ ಶಾಸನವು ಛತ್ರಪತಿ ಶಿವಾಜಿಯ ಮಗನಾದ ಸಂಬಾಜಿಯು ಈ ಬೆಟ್ಟವನ್ನು ಮೊಗಲರಿಂದ ವಶಪಡಿಸಿಕೊಂಡು ತನ್ನ ಹತೋಟಿಗೆ ತೆಗೆದುಕೊಂಡು ಸಂರಕ್ಷಣೆ ನೀಡಿದನೆಂದು ದಾಖಲಿಸುತ್ತದೆ. ಈ ಬೆಟ್ಟವನ್ನು ಏರಿ ಹೋಗಲು ೧,೪೦೦ ಮೆಟ್ಟಿಲುಗಳು ಇದ್ದು, ಇದರ ಉತ್ತರಕ್ಕಿರುವ (೪೦ ಅಡಿ ಉದ್ದ ೩೦ ಅಡಿ ಅಗಲ ಮತ್ತು ೭ ಅಡಿ ಎತ್ತರ) ಗುಹೆಯಲ್ಲಿ ಎರಡು ಕೊಠಡಿಗಳು ಕಂಡುಬರುತ್ತವೆ. ಒಳಗಿರುವ ಕೊಠಡಿಯಲ್ಲಿ ನಾಲ್ಕು ಅಡಿ ಎತ್ತರವಿರುವ ಕಪ್ಪುಶಿಲೆಯ ವೀರಭದ್ರನ ಪ್ರತಿಮೆಯಿದೆ. ಈ

ಪ್ರತಿಮೆಯು ಕ್ರಿ. ಶ. ೧೪ನೇ ಶತಮಾನ ಹೊಯ್ಸಳೋತ್ತರ ಶೈಲಿಯಲ್ಲಿದ್ದು, ನಾಲ್ಕು ಕೈಗಳಲ್ಲಿ ಕತ್ತಿ, ಬಿಲ್ಲು, ಬಾಣ ಮತ್ತು ಗುರಾಣಿಗಳನ್ನು ಹೊಂದಿದೆ. ವೀರಭದ್ರನ ಬಲಭಾಗದಲ್ಲಿ ದಕ್ಷಬ್ರಹ್ಮನ ಕಿರುಶಿಲ್ಪವಿದೆ. ಈ ಗುಹೆಯ ಪ್ರವೇಶದ್ವಾರದ ಮೇಲ್ಭಾಗದಲ್ಲಿರುವ ಕ್ರಿ. ಶ. ೧೩೯೦ರ ಶಾಸನವು ಕಣ್ಣಪ್ಪರಾಯನ ಮಗ ದೇವರಾಯನು ಈ ದೇವಾಲಯದ ಕಟ್ಟಡವನ್ನು ಹಾಗೂ ಬಾಗಿಲ ದ್ವಾರಬಂಧವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಈ ಗಿರಿಧಾಮದಲ್ಲಿ ವರ್ಷಪೂರ್ತಿ ಹಿತಕರವಾದ ವಾತಾವರಣವಿರುತ್ತದೆ. ಬೇಸಿಗೆ ಕಾಲ ಮತ್ತು ಚಳಿಗಾಲದಲ್ಲಿ ಇಲ್ಲಿನ ಗರಿಷ್ಠ ಮತ್ತು ಕನಿಷ್ಠ ಕ್ರಮವಾಗಿ ಉಷ್ಣಾಂಶವು ೨೯ಲಿ ರಿಂದ ೨೩ಲಿ ಸೆಂ. ಗ್ರೇ . ಮತ್ತು ೨೧ಲಿ ರಿಂದ ೧೧ಲಿ ಸೆಂ. ಗ್ರೇ. ಗಳಾಗಿರುತ್ತವೆ. ಈ ಬೆಟ್ಟದ ಮೇಲಿನ ತುದಿಯಿಂದ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ವಿಶಾಲ ದೃಶ್ಯಗಳು ಕಾಣಿಸುತ್ತದೆ. ಈ ಬೆಟ್ಟಗಳ ಸುತ್ತಮುತ್ತ ಇರುವ ರಕ್ಷಿತ ಅರಣ್ಯದಲ್ಲಿ ಅನೇಕ ವನ್ಯಮೃಗಗಳಿವೆ. ತೋಟಗಾರಿಕೆ ಮತ್ತು ಪ್ರವಾಸೋದ್ಯಮ ಇಲಾಖೆಗಳ ಆಶ್ರಯದಲ್ಲಿ ಅನೇಕ ವಸತಿಗೃಹಗಳಿವೆ.

**ನಂದೀ ಗ್ರಾಮ:** (ಚಿಕ್ಕಬಳ್ಳಾಪುರ ತಾಲೂಕು: ಜನಸಂಖ್ಯೆ ೨,೬೮೬) ಚಿಕ್ಕಬಳ್ಳಾಪುರದಿಂದ ಏಳು ಕಿ.ಮೀ. ದೂರದಲ್ಲಿ ನಂದೀದುರ್ಗದ ಈಶಾನ್ಯ ಭಾಗದಲ್ಲಿರುವ ನಂದೀಗ್ರಾಮವು ಅದೇ ಹೆಸರಿನ ಹೋಬಳಿಯ ಕೇಂದ್ರವೂ ಆಗಿದೆ. ಈ ಪಟ್ಟಣವು ಆವತಿ ಪ್ರಭುಗಳಿಂದ ಸ್ಥಾಪಿಸಲ್ಪಟ್ಟಿತಾದರೂ, ಇಲ್ಲಿರುವ ಭೋಗನಂದೀಶ್ವರ ದೇವಾಲಯದ ಅಂಗಳದಲ್ಲಿ ಕಾಣಸಿಗುವ ಚೋಳ ಮತ್ತು ಪಲ್ಲವ ಶಾಸನಗಳಿಂದ ಇದು ಪ್ರಾಚೀನವಾದುದೆಂದು ಗೊತ್ತಾಗುತ್ತದೆ. ಇಲ್ಲಿರುವ ದೇವಾಲಯಗಳಲ್ಲಿ ಒಂದಾದ ಭೋಗನಂದೀಶ್ವರ ದೇವಾಲಯವನ್ನು ಬಾಣವಂಶದ ದೊರೆ ಬಾಣ ವಿದ್ಯಾಧರನ ಪತ್ನಿ ರಾಣಿ ರತ್ನಾವಳಿಯು ಕ್ರಿ. ಶ. ೮೦೬ರಲ್ಲಿ ಕಟ್ಟಿಸಿದಳು. ಕ್ರಿ. ಶ. ೧೭೯೯ ರಿಂದ ೧೮೦೮ರ ವರೆಗೆ ಬ್ರಿಟಿಷರು ಇಲ್ಲಿ ಸೇನಾ ತುಕಡಿಯನ್ನು ಇಟ್ಟಿದ್ದರು. ಇಡೀ ರಾಜ್ಯದಲ್ಲಿ ಅತ್ಯಂತ ಮುಖ್ಯವಾದ ದ್ರಾವಿಡ ಶೈಲಿಯ ದೇವಾಲಯಗಳಲ್ಲಿ ಒಂದಾದ ಭೋಗನಂದೀಶ್ವರ ದೇವಾಲಯದಿಂದ ನಂದಿ ಗ್ರಾಮವು ಪ್ರಖ್ಯಾತಿಹೊಂದಿದೆ. ಮೂಲ ದೇವಾಲಯವು ಒಂಭತ್ತನೇಯ ಶತಮಾನಕ್ಕಿಂತ ಪ್ರಾಚೀನವಾಗಿದ್ದು, ಅನಂತರ ಸೇರಿಸಲಾದ ಭಾಗಗಳು ಚೋಳ, ಹೊಯ್ಸಳ ಮತ್ತು ವಿಜಯನಗರ ಕಾಲಕ್ಕೆ ಸೇರುತ್ತವೆ. ಭೋಗನಂದೀಶ್ವರ ದೇವಾಲಯ ಸಂಕೀರ್ಣದಲ್ಲಿ ಎರಡು ಪ್ರತ್ಯೇಕ ಗರ್ಭಗೃಹಗಳು ಒಂದೇ ಸಾಲಿನಲ್ಲಿದ್ದು, ಅವುಗಳ ಮುಂದೆ ಎರಡು ನಂದಿಮಂಟಪಗಳು ಇವೆ. ಅವುಗಳಲ್ಲಿ ಒಂದರ ಮುಂದೆ ಒಂದು ಸಣ್ಣ ಗರ್ಭಗೃಹವೂ ಇವೆ. ಉತ್ತರ ಭಾಗದ ದೇವಾಲಯವೂ ಭೋಗನಂದೀಶ್ವರನಿಗಾಗಿಯೂ ದಕ್ಷಿಣದ ದೇವಾಲಯವು ಅರುಣಾಚಲೇಶ್ವರನಿಗೂ ಸಮರ್ಪಿತವಾಗಿವೆ. ಇವುಗಳಲ್ಲಿರುವ ಜಾಲಂದ್ರಗಳು ಉತ್ತಮ ಕಲಾತ್ಮಕತೆಯನ್ನು ಪ್ರದರ್ಶಿಸುತ್ತವೆ. ಬೆಟ್ಟದ ತಪ್ಪಲಲ್ಲಿ ಭೋಗನಂದೀಶ್ವರ ದೇವಾಲಯವು ವಿಶಾಲವಾದ ನಿವೇಶನದಲ್ಲಿ ರಚಿತವಾಗಿದೆ. ಇದರ ಪೂರ್ವದ ಸಂರಕ್ಷಣಾ ಗೋಡೆಯ ಬಳಿ ಶೃಂಗಿತೀರ್ಥವೆಂದು ಕರೆಯಲಾಗುವ ಕಲ್ಲಿನ ಪುಷ್ಕರಣಿಯೊಂದು ಕಂಡುಬರುತ್ತದೆ ಹಾಗೂ ಅದರ ಪಶ್ಚಿಮಕ್ಕೆ ಕಲ್ಲಿನ ಮಹಾದ್ವಾರದ ಮೇಲೆ ಎತ್ತರವಾದ ರಾಯಗೋಪುರವಿದ್ದು, ಈಗ ಶಿಥಿಲವಾಗಿದೆ. ಈ ದೇವಾಲಯದ ಆವರಣದ ಮಧ್ಯಭಾಗದಲ್ಲಿ ವಿಶಾಲವಾದ ವಸಂತಮಂಟಪವಿದ್ದು, ಇದರ ದಕ್ಷಿಣಭಾಗಕ್ಕೆ ಚಿಕ್ಕಚಿಕ್ಕ ಬಿಡಿ ಗುಡಿಗಳಿವೆ. ಈ ಗುಂಪು ದೇವಾಲಯಗಳ ಪೈಕಿ ಭೋಗ ನಂದೀಶ್ವರ ದೇವಾಲಯವು ಮೂಲವಾಗಿ ಕ್ರಿ. ಶ. ಒಂಭತ್ತನೇ ಶತಮಾನಕ್ಕೂ ಮೊದಲೇ ನಿರ್ಮಿತವಾಗಿರುವ ಸಾಧ್ಯತೆಯಿದೆ. ಈ ದೇವಾಲಯದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿರುವ ಬಾಣಲಿಂಗವು ಚೌರಸವಾದ ಗರ್ಭಗೃಹದಲ್ಲಿ ಕಂಡುಬರುತ್ತದೆ. ಇದರ ಮುಂಭಾಗದಲ್ಲಿ ಅರ್ಧಮಂಟಪ ಹಾಗೂ ನವರಂಗಳಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳು ವೃತ್ತಾಕಾರವಾಗಿದ್ದು, ಗಂಗರ ಶೈಲಿಯಲ್ಲಿ ನಿರ್ಮಿತವಾಗಿವೆ. ನಾಲ್ಕು ಕಂಬಗಳ ಮಧ್ಯದಲ್ಲಿ ನಂದಿಯ ಏಕಶಿಲಾಮೂರ್ತಿಯಿದೆ. ನವರಂಗದ ಪಶ್ಚಿಮಕ್ಕೆ ಅಲಂಕೃತ ಸ್ತಂಭಗಳಿಂದ ಕೂಡಿರುವ ವಿಶಾಲವಾದ ಕಲ್ಯಾಣಮಂಟಪವಿದೆ. ಇಲ್ಲಿ ಮೂಲ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳು ಗಂಗರ ಶೈಲಿಯಲ್ಲಿದ್ದು ಇತರೆ ಭಾಗಗಳನ್ನು ಚೋಳ ಹೊಯ್ಸಳ ಮತ್ತು ವಿಜಯನಗರದ ಆಳ್ವಿಕೆಯ ಅವಧಿಗಳಲ್ಲಿ ವಿಸ್ತರಿಸಿರುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತವೆ. ಭೋಗನಂದೀಶ್ವರ ದೇವಾಲಯದ ೧೨ ಸ್ತಂಭಗಳಿಂದ ಕೂಡಿರುವ ಮುಖಮಂಟಪವು ವಿಶಾಲವಾಗಿದ್ದು, ಮುಂಭಾಗದಲ್ಲಿ ಪ್ರವೇಶದ್ವಾರದ ಬಳಿ ಜಗಲಿಗಳನ್ನು ಹೊಂದಿದೆ. ಈ ದೇವಾಲಯದ ಹಿಂಭಾಗದಲ್ಲಿ ಪ್ರಾಕಾರದೊಳಗೆ ಮೂರು ಚಿಕ್ಕ ಚಿಕ್ಕ ಗುಡಿಗಳಿದ್ದು, ಕಮಲೇಶ್ವರ ಮತ್ತು ದೇವಿಯರಾದ ಅಪೀತಾ, ಕುಚಾಂಬ ಮತ್ತು ಗಿರಿಜಾಂಬರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಪ್ರಾಚೀನತೆಯ ಬಗ್ಗೆ ಹಲವಾರು ಜಿಜ್ಞಾಸೆಗಳಿದ್ದರೂ ಈ ವಾಸ್ತುರಚನೆಯ ಲಕ್ಷಣವನ್ನು ಗಮನಿಸಿದರೇ ಕ್ರಿ.ಶ.೮೦೦ರ ಸುಮಾರಿಗೆ ನಿರ್ಮಾಣವಾಗಿರುವ ಸಾಧ್ಯತೆಯಿದೆ. ಏಕೆಂದರೆ, ರಾಷ್ಟ್ರಕೂಟ ಮುರನೇ ಗೋವಿಂದನು

ಅಧಿಕಾರದ ೧೭ನೇ ವರ್ಷದ ತಾಮ್ರಪಟದಲ್ಲಿ (ಸ. ಕ್ರಿ. ಶ. ೮೦೬) ಮಹಾನಂದೀಶ್ವರ ದೇವಾಲಯದ ಅಸ್ತಿತ್ವದ ಬಗ್ಗೆ ಪ್ರಸ್ತಾಪವಿದೆ. ಗಂಗ ಅರಸ ಜಯತೇಜನ ಆಳ್ವಿಕೆಯ ಕಾಲದಲ್ಲಿ ಬಾಣ ಅರಸ ವಿದ್ಯಾಧರನ ರಾಣಿ ರತ್ನಾವಳಿಯ ಕ್ರಿ. ಶ. ೮೧೦ರ ಇನ್ನೊಂದು ತಾಮ್ರ ಶಾಸನದಲ್ಲಿ ನಂದಿಯಲ್ಲಿ ತಾನು ಕಟ್ಟಿಸಿದ ಶಿವಾಲಯದ ಬಗ್ಗೆ ಉಲ್ಲೇಖಿಸಲಾಗಿದೆ. ಶಾಸನ ತಜ್ಞ ಆರ್. ನರಸಿಂಹಾಚಾರ್ಯರು ರತ್ನಾವಳಿಯೇ ಮಾರಿಕಬ್ಬೆ ಇರಬಹುದು ಮತ್ತು ಈಕೆಯ ತಂದೆ ಇಂದ್ರ ಮೂರನೇ ಗೋವಿಂದನ ಅಣ್ಣನೆಂದು ಅಭಿಪ್ರಾಯಪಡುತ್ತಾರೆ. ಏನೇ ಆದರೂ ಈ ಶಾಸನದಿಂದಾಗಿ ನಂದೀ ಗ್ರಾಮದಲ್ಲಿ ಭೋಗನಂದೀಶ್ವರನ ದೇವಾಲಯವನ್ನು ಸರಿಸುಮಾರು ಕ್ರಿ. ಶ. ೮೦೦ರ ಕಾಲಕ್ಕೆ ರಾಣಿ ರತ್ನಾವಳಿಯು ನಿರ್ಮಿಸಿದಳೆಂಬ ಖಚಿತ ಅಭಿಪ್ರಾಯವು ಹೊರಹೊಮ್ಮುತ್ತದೆ. ಈ ದೇವಾಲಯದ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳು ಏಕಕಾಲಕ್ಕೆ ಗಂಗರ ಶೈಲಿಯಲ್ಲಿ ನಿರ್ಮಿತವಾಗಿರುವುದು ವ್ಯಕ್ತವಾಗುತ್ತದೆ. ದೇವಾಲಯದಲ್ಲಿರುವ ಕಮಾನುಗಳು, ಸಂಗೀತ ನುಡಿಸುತ್ತಿರುವ ಯಕ್ಷರು, ಚತುಷ್ಕೋನಾಕಾರದ ಶಿಖರ ಮುಂತಾದವುಗಳು ಗಂಗರ ಪರಿಪಕ್ವವಾದ ಕಲಾಶೈಲಿಗೆ ಉತ್ತಮ ನಿದರ್ಶನಗಳಾಗಿವೆ. ಇಲ್ಲಿರುವ ಕಲ್ಲಿನಛತ್ರಿ, ಸಿಂಹಮುಖ ಹಾಗೂ ಗಣಪತಿ ನೋಡುಗರ ಗಮನ ಸೆಳೆಯುತ್ತದೆ.

ಇದರ ಬಳಿಯಿರುವ ಅರುಣಾಚಲೇಶ್ವರ ದೇವಾಲಯವು ಭೋಗನಂದೀಶ್ವರ ಶೈಲಿಯಲ್ಲೇ ಹೆಚ್ಚು ಕಡಿಮೆ ಅದೇ ಕಾಲಕ್ಕೆ ನಿರ್ಮಿತವಾಗಿದೆ. ಈ ದೇವಾಲಯದ ನಿರ್ಮಾಣಕ್ಕೆ ಸಂಬಂಧಿಸಿದ ಏಕೈಕ ಕ್ರಿ.ಶ. ೮೮೦ರ ಶಾಸನವು ನೊಳಂಬ ರಾಜನು ಆಳುತ್ತಿರುವಾಗ ಐನೂರಾಚಾರಿಯ ಮಗ ಪುಲಿಯಣ್ಣನೆಂಬ ಅಧಿಕಾರಿಯು ಅರುಣಾಚಲೇಶ್ವರ ದೇವಾಲಯದಲ್ಲಿದ್ದ ನಂದೀಮಂಟಪ ಹಾಗೂ ಮೇಲಿರುವ ಶಿಖರಗಳನ್ನು ನಿರ್ಮಿಸಿದನೆಂಬ ವಿಚಾರವನ್ನು ತಿಳಿಸುತ್ತದೆ. ಈ ದೇವಾಲಯದ ಮಧ್ಯಭಾಗವು ವಿಜಯನಗರ ಕಾಲದಲ್ಲಿ ದುರಸ್ತಿಗೊಂಡಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿದ್ದು ಗರ್ಭಗೃಹದ ಮೇಲೆ ಚತುಷ್ಕೋನಾಕಾರದ ಶಿಖರವಿದೆ. ಈ ದೇವಾಲಯದಲ್ಲಿರುವ ತಾಂಡವೇಶ್ವರ ವಿಗ್ರಹದ ಪಾದದ ಮೇಲಿರುವ ಶಾಸನವು ಲಿಪಿಶಾಸ್ತ್ರದ ಆಧಾರದ ಮೇಲೆ ನೊಳಂಬರ ಕಾಲಕ್ಕೆ ಸೇರಿದ್ದು, ಈ ದೇವಾಲಯದ ಮುಂಭಾಗದಲ್ಲಿರುವ ಮುಖಮಂಟಪವು ವಿಜಯನಗರದ ಪೂರ್ವ ಅಥವಾ ಹೊಯ್ಸಳರ ನಂತರ ಕಾಲದ ರಚನೆ ಎಂದು ಖಚಿತವಾಗಿ ತಿಳಿದುಬರುತ್ತದೆ. ಏಕೆಂದರೇ, ಇದರಲ್ಲಿ ಬಳಪದ ಕಲ್ಲಿನ ಬಳಕೆಯಾಗಿದೆ. ಈ ಮುಖಮಂಟಪವನ್ನು ಹೊಯ್ಸಳ ಮೂರನೇ ಬಲ್ಲಾಳನ ರಾಜ್ಯಪಾಲನಾಗಿದ್ದ ಇಳವಂಜಿ ವಾಸುದೇವರಾಯನು ನಿರ್ಮಿಸಿರಬೇಕೆಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿರುತ್ತಾರೆ ಹಾಗೂ ಗೋಡೆಯಲ್ಲಿರುವ ಜಾಲಂಧ್ರಗಳಲ್ಲಿ ಆಕರ್ಷಕ ಕಿರುಶಿಲ್ಪಗಳ ಅಲಂಕಾರವಿದೆ.

**ಪಾಪರಾಜನ ಹಳ್ಳಿ** (ಕೋಲಾರ ತಾಲೂಕು:ಜನಸಂಖ್ಯೆ:೮೮೫) ಕೋಲಾರ ನಗರದಲ್ಲಿ ಬೆಟ್ಟದ ಮೇಲೆ ಅಂತರಗಂಗೆಯ ಸಮೀಪವಿರುವ ಪಾಪರಾಜನ ಹಳ್ಳಿಯು ಅತ್ಯಂತ ರಮಣೀಯ ನೈಸರ್ಗಿಕ ದೃಶ್ಯಗಳನ್ನು ಹೊಂದಿರುವ ತಾಣವಾಗಿದೆ. ಇಲ್ಲಿರುವ ಶಿವದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿತವಾಗಿದೆ. ಸುಂದರವಾದ ನರಸಿಂಹನ ವಿಗ್ರಹವು ಶಿವದೇವಾಲಯದಲ್ಲಿ ಕಂಡುಬರುತ್ತದೆ. ಇದರ ಎದುರಿಗೆ ಸುಮಾರು ಆರು ಅಡಿ ಎತ್ತರ ಮತ್ತು ಐದು ಅಡಿ ವ್ಯಾಸವಿರುವ ಸುಂದರ ಶಿಲಾ ಛತ್ರಿ ಆಕಾರದ ರಚನೆ ಇದೆ. ಇದು ಒಂದು ಹುಟ್ಟು ಬಂಡೆಯ ಮೇಲೆ ಒಂದು ಅಡಿ ಎತ್ತರವಾದ ಪೀಠದ ಮೇಲೆ ಇದ್ದು, ಬಂಡೆಯ ಮೇಲೆ ಅಳಿಸಿಹೋಗಿರುವ ತಮಿಳು ಶಾಸನವಿದ್ದು, ಯಾವುದೇ ವಿವರಗಳೂ ತಿಳಿಯುವುದಿಲ್ಲ. ಇದರ ಬಳಿ ಒಂದು ಜಮೀನಿನಲ್ಲಿ ಆನೆಯನ್ನು ಸುತ್ತುವರೆದಿರುವ ನಾಯಿಗಳ ಶಿಲ್ಪದ ಕೆತ್ತನೆಯಿರುವ ಒಂದು ಕಲ್ಲು ಚಪ್ಪಡಿಯು ಕಂಡುಬರುತ್ತದೆ. ಇದು, ಈ ಭಾಗದಿಂದ ಗಂಗ ಸಾಮ್ರಾಜ್ಯವನ್ನು ಪತನಗೊಳಿಸಲಾದ ಸಂಕೇತವೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಇದರ ಸಮೀಪವೇ ಕೋತಿ ಕಲ್ಲೆಂದು ಕರೆಯುವ ಬಂಡೆಗಳ ನಡುವೆ ಭೂತಗೌಡನ ಗವಿ ಕಂಡುಬರುತ್ತದೆ. ಇತ್ತೀಚಿನವರೆಗೂ ಇದು ವೀರಶೈವ ಜಂಗಮರ ವಾಸಸ್ಥಳವಾಗಿತ್ತೆಂಬ ಅಭಿಪ್ರಾಯವಿದೆ. ಈ ಗವಿಯಿಂದ ಪೂರ್ವಕ್ಕೆ ಸ್ವಲ್ಪ ದೂರದಲ್ಲಿ ಭದ್ರವಾದ ಕೋಟೆಯನ್ನು ಮೊಗಲ್ ಸುಬೇದಾರನಾದ ಕಾಸಿಂಖಾನ್ ನಿರ್ಮಿಸಿದನೆಂದು ಹೇಳುತ್ತಾರೆ. ಇದರ ಬಳಿಯೇ ಪೀರ್ ಉಸ್ಮಾನ್ ಅಲಿ ಎಂದು ಕರೆಯಲಾಗುವ ದರ್ಗಾ ಇದ್ದು ವಾರ್ಷಿಕ ಉರುಸ್ ನಡೆಯುತ್ತದೆ.

**ಬಂಗಾರು ತಿರುಪತಿ** (ಗುಟ್ಟಹಳ್ಳಿ): ಬಂಗಾರಪೇಟೆ ತಾಲೂಕಿನ ಒಂದು ಗ್ರಾಮ. ಕೋಲಾರದ ಆಗ್ನೇಯಕ್ಕೆ ಸುಮಾರು ೨೯ ಕಿ.ಮೀ. ದೂರದಲ್ಲಿ ಕೋಲಾರ ಗೋಲ್ಡ್ ಫೀಲ್ಡ್ ಮುಳಬಾಗಿಲು ಮಾರ್ಗದ ಬಳಿ ಇದೆ. ಇದು ಭೃಗುಮಹರ್ಷಿಗಳ ಕಾಲದಲ್ಲಿ 'ಬಂಗಾರಗಿರಿ' ಎಂದು ತಪೋಭೂಮಿಯಾಗಿತ್ತೆಂದು ಪ್ರತೀತಿಯಿದೆ. ಗ್ರಾಮದ ಬಳಿಯಲ್ಲಿ ಸು. ೪೦ಮೀ ಎತ್ತರದ ಒಂದು ಚಿಕ್ಕ

ಗುಡ್ಡವಿದೆ. ಇದರ ಕೆಳಗಿರುವ ದೊಡ್ಡ ಪುಷ್ಕರಣಿಯಲ್ಲಿ ಸ್ನಾನಮಾಡಿ ಭಕ್ತಾದಿಗಳು ಪವಿತ್ರವೆಂದು ಪರಿಗಣಿಸಲಾದ ಮೆಟ್ಟಿಲುಗಳನ್ನು ಹತ್ತುವುದೇ ಒಂದು ಅನುಭಾವವಾದ ಧಾರ್ಮಿಕ ಆಚರಣೆ ಎನಿಸಿದೆ. ಭಕ್ತರು ವೆಂಕಟೇಶನ ನಾಮ ಸ್ಮರಣೆ ಮಾಡುತ್ತಾ ಭಕ್ತಿ ಪರವಶತೆಯಿಂದ ದೇವಾಲಯದ ಕಡೆಗೆ ನಡೆಯುತ್ತಾ ಹೋಗುತ್ತಾರೆ. ಬೆಟ್ಟದ ಮೇಲೆ ವೆಂಕಟರಮಣಸ್ವಾಮಿ ದೇವಾಲಯವಿದೆ. ಈ ಸ್ಥಳ ಬಂಗಾರು ತಿರುಪತಿ, ಚಿನ್ನ ತಿರುಪತಿ ಎಂದೂ ಪ್ರಸಿದ್ಧವಾಗಿದೆ. ಮಾರ್ಗದಲ್ಲಿ ವರಾಹಸ್ವಾಮಿ, ಲಕ್ಷ್ಮಿ, ವಿಘ್ನೇಶ್ವರ ಮತ್ತು ವೀರ ಆಂಜನೇಯ ದೇವಾಲಯಗಳಿವೆ. ಬೆಟ್ಟದ ಮೇಲೆ ಹತ್ತಿ ಹೋಗಿ ಪೂರ್ವಭಾಗದ ಆರು ಕಿಂಡಿಗಳ ಕಿಟಕಿಯ ಮೂಲಕ ದೇವರ ದರ್ಶನ ಮಾಡಬೇಕು. ವೆಂಕಟರಮಣನ ಮೂರ್ತಿ ಚಿಕ್ಕದಿದ್ದರೂ ಆಕರ್ಷಕವಾಗಿದೆ.

ಇದರ ಸಮೀಪದಲ್ಲಿ ಆಗ್ನೇಯಕ್ಕಿರುವ ಮತ್ತೊಂದು ಕಿರು ಗುಡ್ಡದ ಮೇಲೆ ಪದ್ಮಾವತಿ ಅಥವಾ ಅಲಮೇಲುಮಂಗಮ್ಮನವರ ದೇವಾಲಯವಿದ್ದು, ಆಧುನಿಕ ವಾಸ್ತು ರಚನೆಯನ್ನು ಹೊಂದಿದ್ದು ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದೆ. ಪ್ರತಿವರ್ಷ ಮಾಘ ಶುದ್ಧ ಪೌರ್ಣಿಮೆಯಂದು ಒಂದು ವಾರ ಕಾಲ ವಿಶೇಷ ಪೂಜೆ ಮತ್ತು ಜಾತ್ರೆ ನಡೆಯುತ್ತದೆ. ಈ ಸಂದರ್ಭದಲ್ಲಿ ನಡೆಯುವ ಬ್ರಹ್ಮೋತ್ಸವ ವಿಶೇಷ ಆಕರ್ಷಣೆಯಾಗಿದೆ. ದಿನನಿತ್ಯ ಹಾಗೂ ಶ್ರಾವಣ ಶನಿವಾರಗಳು ಮತ್ತು ಶಿವರಾತ್ರಿ ಮತ್ತು ತೆಪ್ಪೋತ್ಸವಗಳಲ್ಲಿ ವಿಶೇಷ ಪೂಜೆಗಳು ವೈಖಾನಸ ಆಗಮದ ರೀತಿಯಲ್ಲಿ ನಡೆಯುತ್ತವೆ. ಇತರ ದಿನಗಳಿಗಿಂತ ಶನಿವಾರಗಳಲ್ಲಿ ಭಕ್ತರು ಹೆಚ್ಚು ಸೇರುತ್ತಾರೆ. ಈ ಕ್ಷೇತ್ರದಲ್ಲಿ ಆರು ಕಲ್ಯಾಣಮಂಟಪಗಳಿದ್ದು, ವಿವಾಹ ಮುಂತಾದ ಶುಭ ಕಾರ್ಯಗಳಿಗೆ ಅನುಕೂಲವಾಗಿವೆ. ಭಕ್ತಾದಿಗಳು ಭಾರತದ ಎಲ್ಲಾ ಕಡೆಗಳಿಂದಲೂ, ವಿಶೇಷವಾಗಿ ನೆರೆ ರಾಜ್ಯಗಳಾದ ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕೇರಳಗಳಿಂದ ಹೆಚ್ಚಾಗಿ ಬಂದು ಇಲ್ಲಿಯ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಬೆಟ್ಟದ ಕೆಳಗೆ ವಿಷ್ಣುಪಾದಗಳು, ಪಾಪನಾಶಿನಿ, ಪುಷ್ಕರಣಿ, ನವಿಲುತೀರ್ಥ, ಮಹಾಗಣಪತಿ, ನವಗ್ರಹಗಳು ಮತ್ತು ಗವಿ ಆಂಜನೇಯಸ್ವಾಮಿ ದೇವಾಲಯಗಳೂ ಇದ್ದು, ಭಕ್ತಾದಿಗಳನ್ನು ವಿಶೇಷವಾಗಿ ಆಕರ್ಷಿಸುತ್ತವೆ.

**ಬಂಗಾರಪೇಟೆ** (ತಾಲೂಕು ಕೇಂದ್ರ ಜನಸಂಖ್ಯೆ ೩೮,೭೦೩) ಕೋಲಾರದ ದಕ್ಷಿಣಕ್ಕೆ ೧೮ ಕಿ.ಮೀ. ದೂರದಲ್ಲಿ ಹಾಗೂ ಬೆಂಗಳೂರಿನಿಂದ ೭೮ ಕಿ.ಮೀ. ದೂರದಲ್ಲಿರುವ ಬಂಗಾರಪೇಟೆಯನ್ನು ೧೮೬೪ರಲ್ಲಿ ಹೊಸ ರೈಲು ಮಾರ್ಗ ಆರಂಭಿಸಿದಾಗ ಸ್ಥಾಪಿಸಲಾಯಿತು. ಮೈಸೂರಿನ ಚೀಫ್ ಕಮೀಷನರ್ ಆಗಿದ್ದ ಬೌರಿಂಗ್ ಅವರ ಹೆಸರಿನಲ್ಲಿ ಇದನ್ನು ಬೌರಿಂಗ್‌ಪೇಟೆ ಎಂದೂ ಕರೆಯಲಾಗಿತ್ತು. ಅದಕ್ಕೂ ಮುಂಚೆ ಇದನ್ನು ಮರಮಟ್ಲು ಗ್ರಾಮ ಎಂದು ಕರೆಯಲಾಗುತ್ತಿತ್ತು. ೧೯೪೮ರಲ್ಲಿ ಇದನ್ನು ಬಂಗಾರಪೇಟೆ ಎಂದು ಬದಲಾಯಿಸಲಾಯಿತು. ಈ ಊರು ಬೆಂಗಳೂರು–ಚನ್ನೈ ರೈಲು ಮಾರ್ಗದಲ್ಲಿರುವ ಮುಖ್ಯವಾದ ನಿಲ್ದಾಣ ಹಾಗೂ ರೈಲ್ವೆ ಜಂಕ್ಷನ್ ಆಗಿದೆ. ಧಾನ್ಯಗಳ ಸಗಟು ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದು ಈ ಊರು ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಇಲ್ಲಿರುವ ಹೆಚ್ಚಿನ ದೇಗುಲಗಳು ಆಧುನಿಕ ಕಾಲದವು. ಇಲ್ಲೊಂದು ಇತ್ತೀಚೆಗೆ ನಿರ್ಮಿಸಲಾದ ಜಾಮಿಯ ಮಸೀದಿಯೂ ಇದೆ.

**ಬಾಗೇಪಲ್ಲಿ:** (ತಾಲೂಕು ಕೇಂದ್ರ: ಜನಸಂಖ್ಯೆ ೨೦,೧೧೯) ಇದನ್ನು ಬಾಗೇನಪಲ್ಲಿ ಎಂದೂ ಕರೆಯಲಾಗುತ್ತದೆ. ಕೋಲಾರದಿಂದ ಸುಮಾರು ೧೧೦ ಕಿ.ಮೀ. ಮತ್ತು ಬೆಂಗಳೂರಿನಿಂದ ಸುಮಾರು ೧೨೦ ಕಿ.ಮೀ ದೂರದಲ್ಲಿ ಆಂಧ್ರಪ್ರದೇಶದ ಸೆರಗಿನಲ್ಲಿ ಚಿತ್ರಾವತಿ ನದಿಯ ಬಲ ದಂಡೆಯ ಮೇಲಿರುವ ತಾಲೂಕು ಕೇಂದ್ರವಾಗಿದೆ. ಈ ಪುರಸಭಾ ಪಟ್ಟಣವು ಆಂಧ್ರಪ್ರದೇಶಕ್ಕೆ ತುಂಬ ಸಮೀಪದಲ್ಲಿದೆ. ಇದೊಂದು ವಾಣಿಜ್ಯ ಕೇಂದ್ರವಾಗಿದ್ದು, ನೆಲಗಡಲೆ, ಮೆಣಸಿನಕಾಯಿ, ರೇಷ್ಮೆಕೃಷಿ ಮುಂತಾದ ವಾಣಿಜ್ಯ ಬೆಳೆಗಳಿಗಾಗಿ ಖ್ಯಾತಿ ಪಡೆದಿದೆ. ಈ ಊರಿನಲ್ಲಿ ವೆಂಕಟರಮಣಸ್ವಾಮಿ, ಲಕ್ಷ್ಮೀನರಸಿಂಹಸ್ವಾಮಿ ಆಂಜನೇಯ, ಜಡಲೇಶ್ವರ ದೇವಾಲಯಗಳು ಗಮನಾರ್ಹವಾಗಿವೆ. ಊರಿನಲ್ಲಿ ರಾಘವೇಂದ್ರ ಆಶ್ರಮವನ್ನು ಖಾಸಗಿ ದಾನಿಗಳ ಸಹಾಯದಿಂದ ೧೯೫೮ರಲ್ಲಿ ವೈಶಾಖ ಶುದ್ಧ ಸಪ್ತಮಿಯಂದು ರಾಘವೇಂದ್ರಸ್ವಾಮಿಗಳ ಮಠ ಸ್ಥಾಪನೆಗೊಂಡಿದೆ. ಆಧುನಿಕ ಕಟ್ಟಡವನ್ನು ನಿರ್ಮಿಸಿ ಗರ್ಭಗೃಹದಲ್ಲಿ ರಾಘವೇಂದ್ರ ಬೃಂದಾವನ, ಹನುಮಂತದೇವರ ಮತ್ತು ಸೀತಾ ರಾಮ ಲಕ್ಷ್ಮಣರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಚಿತ್ರಾವತಿ ನದಿಯ ತೀರದಲ್ಲಿರುವ ಭೈರವೇಶ್ವರ ದೇವಾಲಯವು ಸ್ವಯಂಭೂ ಶಿವಲಿಂಗವೆಂದು ಪ್ರತೀತಿಯಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಬಂಗಾಳದ ಪ್ರಮುಖ ನಾಯಕರಾಗಿದ್ದ ಚಿತ್ತರಂಜನ್‌ದಾಸ್ ಅವರ ಒಡನಾಡಿಯಾದ್ದ ಹಾಗೂ ಅವರ ಜೊತೆಗೆ ಸೆರೆಮನೆ ವಾಸ ಅನುಭವಿಸಿದ್ದರೆಂದು ಹೇಳಲಾಗುವ ಮತ್ತು ಸ್ವಾತಂತ್ರಪೂರ್ವದಲ್ಲಿ (೧೯೪೫–೪೯) ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಸೂರ್ಯನಾರಾಯಣ ಜೋಶಿಯವರು ಈ ಊರಿನವರು. ಶಿರಡಿಸಾಯಿಬಾಬಾಮಂದಿರ ಮತ್ತು ಪುಟ್ಟಪರ್ತಿಗೆ

ಹೋಗುವ ಯಾತ್ರಿಕರ ಅನುಕೂಲಕ್ಕಾಗಿ ಪುಟ್ಟಪರ್ತಿ ಸಾಯಿಬಾಬಾ ಆಶ್ರಮವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಈ ಆಶ್ರಮದ ಆಶ್ರಯದಲ್ಲಿ ಏಳನೇ ತರಗತಿಯವರೆಗೆ ಶಾಲೆ ಮತ್ತು ವೃದ್ಧಾಶ್ರಮವನ್ನು ಸ್ಥಾಪಿಸಲಾಗಿದೆ. ಊರಿನಲ್ಲಿ ಸುಮಾರು ೧೦೦ ವರ್ಷ ಹಳೆಯದಾದ ಒಂದು ಮಸೀದಿ ಹಾಗೂ ಒಂದು ದರ್ಗಾ ಇವೆ. ಈ ದರ್ಗಾ ಪೀರ್ ಹುಸೇನ್‌ಸಾಬ್ ಅವರದೆಂದು ಪ್ರತೀತಿ ಇದೆ. ಇಲ್ಲಿ ವಾರ್ಷಿಕವಾಗಿ ಉರುಸ್ ಜರುಗುತ್ತದೆ. ಊರಿನಲ್ಲಿ ಮೊಹರಂ ಸಂದರ್ಭದಲ್ಲಿ ಬಾಬಯ್ಯನ ಜಲಧಿ, ಹುಲಿವೇಷಗಳು, ಬೆಂಕಿಯ ಹೊಂಡ ಹಾಯ್ಯುವುದು ಹಾಗೂ ವಿವಿಧ ಧಾರ್ಮಿಕ ಚಟುವಟಿಕೆಗಳು ನಡೆಯುವಾಗ ಹಿಂದೂಗಳು ಮತ್ತು ಮುಸಲ್ಮಾನರು ಸೌಹಾರ್ದತೆಯಿಂದ ಭಾಗವಹಿಸುತ್ತಾರೆ. ದರ್ಗಾವು ಹಿಂದೂ ಮುಸಲ್ಮಾನರ ಸೌಹಾರ್ದದ ಸಂಕೇತವಾಗಿದ್ದು, ಎರಡೂ ಧರ್ಮೀಯರು ಒಟ್ಟಿಗೆ ಸೇರಿ ಆರಾಧಿಸುತ್ತಾರೆ. **ದೇವರಗುಡಿಪಲ್ಲಿ:** ಬಾಗೇಪಲ್ಲಿಯಿಂದ ಮೂರು ಕಿ.ಮೀ. ದೂರದಲ್ಲಿರುವ ಈ ಸ್ಥಳಕ್ಕೆ 'ಗಡಿದಂ' ಅಥವಾ 'ಗಡಿದಂಪಟ್ಟಣ'ವೆಂಬ ಹೆಸರುಗಳು ಬಳಕೆಯಲ್ಲಿತ್ತೆಂದು ತಿಳಿದುಬರುತ್ತದೆ. ವಿಜಯನಗರದ ಕೃಷ್ಣದೇವರಾಯನ ನಂತರದ ಕಾಲದಲ್ಲಿ ಕೃಷ್ಣರಾಯ ಸಮುದ್ರವೆಂಬ ಹೆಸರು ರೂಢಿಗೆ ಬಂದಿತು. ಈ ಊರಿನಲ್ಲಿರುವ ತಿರುವೆಂಗಡನಾಥ ಅಥವಾ ವೆಂಕಟೇಶನ ದೇವಾಲಯದಿಂದಾಗಿ ಈ ಊರಿಗೆ 'ದೇವರಗುಡಿಪಲ್ಲಿ' ಎಂದು ಕರೆಯಲಾಗುತ್ತದೆ. ಈ ದೇವಾಲಯದ ಮೂಲ ವಿಗ್ರಹವನ್ನು ಪರೀಕ್ಷಿತ ರಾಜನು ಪ್ರತಿಷ್ಠಾಪಿಸಿದನೆಂಬ ಪ್ರತೀತಿಯಿದೆ. ಈ ಸ್ಥಳದ ಬಳಿಯಿರುವ ಗುಡ್ಡಗಳಲ್ಲಿ ಪೂರ್ವೇತಿಹಾಸ ಕಾಲದ ಬೂದಿ, ಮಡಿಕೆಗಳು ಹಾಗೂ ಮಾನವ ಅವಶೇಷಗಳು ಕಂಡುಬರುತ್ತವೆ. ಇಲ್ಲಿಗೆ ಸಮೀಪವಿರುವ ಮಂಗಸಂದ್ರದಲ್ಲಿ ದೊರೆತಿರುವ ಶಾಸನ ಒಂದರಲ್ಲಿ ಹಿಂದೊಮ್ಮೆ ಇಲ್ಲಿ ಪಾಲ್ಗುಣ ಮಾಸದಲ್ಲಿ ವಾಜಪೇಯ ಹೋಮವನ್ನು ಮಾಡಿದ ಉಲ್ಲೇಖವಿದೆ. ಸುಮಾರು ೧೨೦ ವರ್ಷಗಳ ಹಿಂದೆ ಇಲ್ಲಿದ್ದ ಕಂದಾಯ ಅಧಿಕಾರಿಗಳ ಪ್ರಯತ್ನದಿಂದಾಗಿ ವೆಂಕಟೇಶ್ವರ ದೇವಾಲಯದ ವಿಶಾಲವಾದ ಪ್ರಾಕಾರವನ್ನು ಕೋಟೆಯ ಗೋಡೆಗಳ ರೀತಿಯಲ್ಲಿ ಉತ್ತರ ಭಾಗದಲ್ಲಿ ಎತ್ತರವಾದ ಪ್ರವೇಶದ್ವಾರವನ್ನು ನಿರ್ಮಿಸಿಲಾಯಿತೆಂದು ಪ್ರೊ॥ ಕೆ. ಆರ್. ನರಸಿಂಹನ್ ಅವರು ಹೇಳುತ್ತಾರೆ. ಇದೇ ಸಮಯದಲ್ಲಿ ದೇವಾಲಯದ ಅಕ್ಕಪಕ್ಕದಲ್ಲಿ ಯಾತ್ರಿಕರ ವಸತಿಗೆ ಅನುಕೂಲವಾಗುವಂತೆ ಮಂಟಪಗಳನ್ನು ನಿರ್ಮಿಸಿರುತ್ತಾರೆ. ವೆಂಕಟೇಶ್ವರ ದೇವಾಲಯವು ವಿಜಯನಗರದ ಆರಂಭದ ಕಾಲದಲ್ಲಿ ನಿರ್ಮಿತವಾಗಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಒಳಗೆ ಚೌಕಾಕಾರವಾದ ಗರುಡ ಪೀಠದ ಮೇಲೆ ಆಕರ್ಷಕ ಪ್ರಭಾವಳಿಯಿಂದ ಕೂಡಿರುವ ಶಂಖ, ಚಕ್ರ, ವರದ ಹಾಗೂ ಕಟಿಹಸ್ತಗಳನ್ನು ಹೊಂದಿರುವ ಶ್ರೀದೇವಿ ಮತ್ತು ಭೂದೇವಿಯವರ ಸಮೇತನಾದ ಸುಂದರ ವೆಂಕಟೇಶನ (ಸು. ಐದು ಅಡಿ ಎತ್ತರ) ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರ ಶಿಲ್ಪಗಳ ಅಲಂಕಾರವಿದೆ. ಶೈಲಿಯ ದೃಷ್ಟಿಯಿಂದ ಈ ವಿಗ್ರಹವು ಹೊಯ್ಸಳರ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಎಡಭಾಗದಲ್ಲಿರುವ ಸ್ತ್ರೀ ವಿಗ್ರಹವು ಅತ್ಯಂತ ಆಕರ್ಷಕವಾಗಿ ಮೂಡಿಬಂದಿದೆ. ನವರಂಗ ಹಾಗೂ ಮುಖಮಂಟಪಗಳಲ್ಲಿರುವ ಸ್ತಂಭಗಳು ದ್ರಾವಿಡ ಶೈಲಿಯಲ್ಲಿದ್ದು ಚೌರಸ ಆಕಾರವಾಗಿವೆ. ನವರಂಗದ ದ್ವಾರದ ಎರಡೂ ಕಡೆ ಜಯ–ವಿಜಯರ ಸುಂದರ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಎರಡು ಶಾಸನಗಳಿದ್ದು, ಮೊದಲನೆಯ ಶಾಸನವು ಕ್ರಿ. ಶ. ೧೩೯೨ರಲ್ಲಿ ವೀರ ಹರಿಹರ ರಾಯನ ಆಡಳಿತದಲ್ಲಿ ತೆಪ್ಪದ ನಾಗಣ್ಣ ಒಡೆಯನ ಮೊಮ್ಮಗ ತಿರುಮಲನಾಥನು ತಿರುಮಲಾಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ ತಿರುವೆಂಗಳನಾಥ ದೇವಾಲಯವನ್ನು ನಿರ್ಮಿಸಿ ಅದರಲ್ಲಿ ಮೂಲ ವಿಗ್ರಹವನ್ನು ಪ್ರತಿಷ್ಠಾಪಿಸಿದ ವಿಚಾರವನ್ನು ದಾಖಲಿಸುತ್ತದೆ. ಈ ಶಾಸನದಲ್ಲಿ ಗಡಿದ ಗ್ರಾಮದ ದಕ್ಷಿಣಕ್ಕಿರುವ ಬೊಮ್ಮನ ಕೋಟೆ ಹಾಗೂ ಈ ದೇವಾಲಯವನ್ನು ನಿರ್ಮಿಸಿದ ಮೂವರು ಶಿಲ್ಪಿಗಳಿಗೆ ದತ್ತಿಬಿಟ್ಟ ವಿಚಾರವನ್ನು ಸಹ ದಾಖಲಿಸಲಾಗಿದೆ. ವೀರ ಹರಿಹರನ ಕಾಲದಲ್ಲಿಯೇ ಕ್ರಿ. ಶ. ೧೩೯೧ರ ಮಹಾಮಂತ್ರಿ ಮಂಗಪ್ಪ ದಣ್ಣಾನಾಯಕನ ಆಡಳಿತದಲ್ಲಿ ಗಡಿದ ಶ್ರೀನಿವಾಸ ದೇವರ ಪ್ರತಿಷ್ಠಾಪನೆ ಮಾಡುವಾಗ ತೆಪ್ಪದ ನಾಗಣ್ಣನ ಮೊಮ್ಮಗ ತಿರುಮಲನಾಥನೆಂಬವನು ತಿರುವೆಂಗಳನಾಥನ ಸಮ್ಮುಖದಲ್ಲಿ ತಿರುಮಲಾಪುರ ಅಗ್ರಹಾರವನ್ನು ಕಟ್ಟಿಸಿದ್ದ ಬ್ರಾಹ್ಮಣರಿಗೆ ದೇವರ ಪೂಜಾ ಕೈಂಕರ್ಯಗಳಿಗೆಂದು ಯಲಪಗಾಲಕುಂಟ ಮತ್ತು ತಮ್ಮಡಿಕುಂಟ ಗ್ರಾಮಗಳನ್ನು ೨೨ ವೃತ್ತಿಗಳನ್ನಾಗಿ ವಿಂಗಡಿಸಿ ದಾನವಾಗಿ ನೀಡಿದನು. ವಿಜಯನಗರದ ಕಾಲದಲ್ಲಿ ನಿರ್ಮಿತವಾದ ಗಡಿದಂ ವೆಂಕಟೇಶ್ವರ ದೇವಾಲಯಕ್ಕೆ ವರ್ಷವಿಡೀ ರಾಜ್ಯದ ವಿವಿಧ ಭಾಗಗಳಿಂದ ಹಾಗೂ ನೆರೆಯ ಆಂಧ್ರಪ್ರದೇಶದಿಂದಲೂ ಭಕ್ತರು ಭೇಟಿಕೊಡುತ್ತಿರುತ್ತಾರೆ. ಈ ದೇವಾಲಯದಲ್ಲಿ ದೈನಂದಿನ ಪೂಜಾ ಕೈಂಕರ್ಯಗಳನ್ನು ವೈಖಾನಸ ಆಗಮದ ರೀತಿಯಲ್ಲಿ ನಡೆಸಲಾಗುತ್ತದೆ. ವಾರ್ಷಿಕವಾಗಿ ಈ ದೇವಾಲಯದಲ್ಲಿ ವೈಶಾಖ ಶುದ್ಧ ಹುಣ್ಣಿಮೆಯಂದು ಬ್ರಹ್ಮರಥೋತ್ಸವವು ನಡೆದಾಗ ಸಾವಿರಾರು ಭಕ್ತರು ಪಾಲ್ಗೊಳ್ಳುತ್ತಾರೆ.

**ಬ್ಯಾಟರಾಯಸ್ವಾಮಿ ದಿಬ್ಬ** (ಶಿಡ್ಲಘಟ್ಟ ತಾಲೂಕು): ಶಿಡ್ಲಘಟ್ಟದಿಂದ ನಾಲ್ಕು ಕಿ. ಮೀ ದೂರದಲ್ಲಿ ಚಿಕ್ಕದಾಸರಹಳ್ಳಿಗೆ ಸಮೀಪದಲ್ಲಿರುವ ವಿಜಯನಗರ ಕಾಲದ ಬ್ಯಾಟರಾಯಸ್ವಾಮಿ ದೇವಾಲಯವು ಎತ್ತರವಾದ ಗುಡ್ಡ ಅಥವಾ ದಿಬ್ಬದ ಮೇಲೆ ವಿಸ್ತಾರವಾಗಿ ಹರಡಿಕೊಂಡಿದೆ. ಬ್ಯಾಟರಾಯಸ್ವಾಮಿಯು ನಾಯಕ ಜನಾಂಗದವರ ಕುಲದೈವವಾಗಿದ್ದು, ಈ ದೇವರ ಪೂಜಾ ಕೈಂಕರ್ಯಗಳನ್ನು ನಾಯಕ ಜನಾಂಗದವರೇ ನಡೆಸುತ್ತಿರುವರು. ಪೌರಾಣಿಕ ನಂಬಿಕೆಯ ಪ್ರಕಾರ ಮೂಲತಃ ಮಾಗಡಿಯಿಂದ ಬಂದ ದೇವರು ಮಳಮಾಚನಹಳ್ಳಿ ಎಂಬ ಸ್ಥಳದಲ್ಲಿ ತಾತ್ಕಾಲಿಕವಾಗಿ ತಂಗಿದ್ದು, ನಂತರ ಇಲ್ಲಿ ಬಂದು ನೆಲೆಸಿದರೆಂದು ಪ್ರತೀತಿಯಿದೆ. ಇದಕ್ಕೆ ಪೂರಕವಾಗಿ ಮಳಮಾಚನಹಳ್ಳಿಯಲ್ಲಿ ಇನ್ನೊಂದು ಬ್ಯಾಟರಾಯಸ್ವಾಮಿ ದೇವಾಲಯವಿದೆ. ಐತಿಹಾಸಿಕವಾಗಿ ರಂಗನಾಥಸ್ವಾಮಿ ದೇವಾಲಯವಾಗಿದ್ದ ಈ ದೇವಾಲಯವು ನಂತರದ ಕಾಲದಲ್ಲಿ ಬ್ಯಾಟರಾಯಸ್ವಾಮಿ ಎಂದು ಜನಪ್ರಿಯವಾಗಿದೆ. "ಜಾನಪದ ಹಾಡಿನಲ್ಲಿ ಈ ದೇವರಿಗೆ ಸಂಬಂಧಿಸಿದಂತೆ ಕೆಲವು ಘಟನೆಗಳನ್ನು ಹೇಳುತ್ತಾರೆ. ಬ್ಯಾಟರಾಯನನ್ನು ವೈಷ್ಣವ ಸಂಪ್ರದಾಯದ ದೇವರೆಂದು ಪರಿಗಣಿಸಿ ನರಸಿಂಹ ಅಥವಾ ವೆಂಕಟೇಶ್ವರ ಇವರ ಸಾಲಿನಲ್ಲಿ ಸೇರಿಸಿ ಆರಾಧಿಸುತ್ತಾರೆ. ವಿಷ್ಣು ಅಥವಾ ನಾರಾಯಣನ ಎಲ್ಲಾ ಆಯುಧಗಳನ್ನು ಹೊಂದಿರುವ ಬ್ಯಾಟರಾಯಸ್ವಾಮಿಯ ಹಿಂದೆ ಒಂದು ಪುರಾಣದ ಪ್ರಸಕ್ತಿಯೇ ಅಡಗಿದೆ" ಎಂದು ಪ್ರೊ॥ ಕೆ. ಆರ್. ನರಸಿಂಹನ್ ಅವರು ಅಭಿಪ್ರಾಯಪಡುತ್ತಾರೆ. ಸ್ಥಳೀಯ ಐತಿಹ್ಯದ ಪ್ರಕಾರ ಮಾಗಡಿಯಿಂದ ಮಳಮಾಚನಹಳ್ಳಿಗೆ ಮೂರುಜನ ದಾಸರು ಬಂದಿಳಿದರು, ಅವರೆಂದರೇ, ಚಿನ್ನದಾಸ, ಪೆದ್ದದಾಸ ಮತ್ತು ನಡಿಪಿದಾಸ. ಈ ಸ್ಥಳದಲ್ಲಾಗಲೇ ರಂಗನಾಥಸ್ವಾಮಿಯ ದೇವಾಲಯವು ಸಾಕಷ್ಟು ಪ್ರಸಿದ್ಧಿಪಡೆದಿತ್ತು. ಇಲ್ಲಿಗೆ ಬಂದ ದಾಸರು ಇಲ್ಲಿನ ಅರ್ಚಕರನ್ನು ಕರೆದು ತಮ್ಮ ಕುಲದೈವನಾದ ಬ್ಯಾಟರಾಯಸ್ವಾಮಿ ಇಲ್ಲಿದ್ದಾನೆ. ಆದುದರಿಂದ ಆತನನ್ನು ಆರಾಧಿಸುವ ಹಕ್ಕು ತಮಗೆ ಸಹಜವಾಗಿಯೇ ಇದೆ ಎಂದಾಗ, ದೇವಾಲಯದ ಅರ್ಚಕರಿಗೂ ಮತ್ತು ದಾಸರಿಗೂ ವಾದವಿವಾದಗಳುಂಟಾದವು. ಆಗ ಕೆಲವು ಪರೀಕ್ಷೆಗಳು ನಡೆದು ಅಂದಿನಿಂದ ದಾಸರಿಗೆ ಅರ್ಚನಾಧಿಕಾರ ಲಭ್ಯವಾಯಿತೆಂದು ತಿಳಿದುಬರುತ್ತದೆ. ಹೀಗೆ ಬ್ಯಾಟರಾಯಸ್ವಾಮಿಯು ಚಿಕ್ಕದಾಸರ ಹಳ್ಳಿಯ ದಿಬ್ಬದ ಮೇಲೆ ನೆಲೆಸಿದನೆಂದು ಪ್ರತೀತಿಯಿದೆ. ಇನ್ನೊಂದು ನಂಬಿಕೆಯ ಪ್ರಕಾರ ಬ್ಯಾಟರಾಯಸ್ವಾಮಿಯೇ ಪ್ರತ್ಯಕ್ಷನಾಗಿ ತಾನು ಮೂಲತಃ ಪೆನುಗೊಂಡೆಯಲ್ಲಿದ್ದೆನೆಂದು ಹೇಳಿರುವ ಕಾರಣ ಈ ವಿಗ್ರಹವು ಆಂಧ್ರಪ್ರದೇಶದ ಪೆನುಗೊಂಡೆಯ ಮಾದಮಲ್ಲೇಶ ಬೆಟ್ಟದಿಂದ ತಂದು ಇಲ್ಲಿ ಪ್ರತಿಷ್ಠಾಪಿಸಲಾಯಿತೆಂದು ನಂಬಲಾಗಿದೆ. ಈ ದೇವಾಲಯವಿರುವ ದಿಬ್ಬದ ಕೆಳಗೆ ಹಲವು ವೀರಗಲ್ಲುಗಳಿವೆ ಹಾಗೂ ಸನಿಹದಲ್ಲೇ ಆಂಜನೇಯನ ದೇವಾಲಯವಿದೆ. ಗುಡ್ಡವನ್ನೇರಿ ಹೋಗಲು ಅನುಕೂಲವಾಗುವಂತೆ ಕಲ್ಲಿನ ಮೆಟ್ಟಲುಗಳನ್ನು ರಚಿಸಲಾಗಿದೆ. ಮೆಟ್ಟಿಲುಗಳನ್ನು ಹತ್ತಿ ಹೋದರೇ ಬಲಭಾಗದಲ್ಲಿ ಒಂದು ದೊಡ್ಡ ಪುಷ್ಕರಣಿ ಇದೆ. ಈ ಪುಷ್ಕರಣಿಯ ದಡದಲ್ಲಿ ಒಂದು ಚಿಕ್ಕ ಗುಡಿಯಿದ್ದು, ಒಳಗೆ ಸುಮಾರು ಮೂರು ಅಡಿ ಎತ್ತರವಿರುವ ಸ್ಥಾನಕ ನರಸಿಂಹನ ವಿಗ್ರಹವಿದೆ. ಹಿರಣ್ಯಕಶಿಪುವನ್ನು ಸಂಹಾರ ಮಾಡುತ್ತಿರುವ ಭಂಗಿಯಲ್ಲಿರುವ ಈ ವಿಗ್ರಹವು ಬಹಳ ಕಾಲ ನೀರಿನಲ್ಲಿಯೇ ಇತ್ತೆಂದು ಸ್ಥಳೀಯರು ಹೇಳುತ್ತಾರೆ. ಇದರ ಎದುರಿಗೆ ಪ್ರಹ್ಲಾದ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ದೇವಾಲಯವು ವಿಶಾಲವಾದ ಪ್ರಾಕಾರ, ಗರ್ಭಗೃಹ, ಅರ್ಧಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಬಾಗಿಲುವಾಡವು ಅಲಂಕಾರಿಕವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವನ್ನು ಹೊಂದಿದೆ ಹಾಗೂ ದ್ವಾರದ ಎರಡೂ ಕಡೆ ದ್ವಾರಪಾಲಕರ ವಿಗ್ರಹಗಳಿವೆ. ಬ್ಯಾಟರಾಯಸ್ವಾಮಿಯ ವಿಗ್ರಹವು ಸುಮಾರು ೪.೫ ಅಡಿ ಎತ್ತರವಿದ್ದು, ಸ್ಥಾನಕ ಭಂಗಿಯಲ್ಲಿದ್ದು, ಹೊಯ್ಸಳರ ನಂತರದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಈ ವಿಗ್ರಹವು ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಅಭಯ ಹಾಗೂ ಗದೆಗಳನ್ನು ಹೊಂದಿದೆ. ಶಿಲ್ಪಕಲಾ ದೃಷ್ಟಿಯಿಂದ ಅತ್ಯಂತ ಆಕರ್ಷಕ ಕಲಾನೈಪುಣ್ಯತೆಯನ್ನು ಈ ವಿಗ್ರಹವು ವ್ಯಕ್ತಪಡಿಸುತ್ತದೆ. ದೇವಾಲಯದ ಪ್ರಾಕಾರದಲ್ಲಿ ವಿಶಾಲವಾದ ಕೊಠಡಿಗಳನ್ನು ನಿರ್ಮಿಸಲಾಗಿದ್ದು, ವಿವಾಹ ಹಾಗೂ ಇತರೆ ಶುಭ ಸಮಾರಂಭಗಳಿಗೆ ಅನುಕೂಲವಾಗಿದೆ. ಬ್ಯಾಟರಾಯನ ಉತ್ಸವಮೂರ್ತಿಯ ಜೊತೆಗೆ ಶ್ರೀದೇವಿ–ಭೂದೇವಿಯರ ಸುಂದರ ಶಿಲ್ಪಗಳು ಇವೆ. ಈ ದೇವರ ರಥೋತ್ಸವವು ಕಾಮನ ಹುಣ್ಣಿಮೆಗೆ ನಡೆದಾಗ ಸಹಸ್ರಾರು ಭಕ್ತರು ಸೇರುತ್ತಾರೆ.

**ಬೂದಿಕೋಟೆ:** (ಬಂಗಾರಪೇಟೆ ತಾಲೂಕು: ಜನಸಂಖ್ಯೆ: ೩,೧೨೪) ಬಂಗಾರಪೇಟೆಯಿಂದ ನೈರುತ್ಯಕ್ಕೆ ೧೧ ಕಿ.ಮೀ. ದೂರದಲ್ಲಿ ಮಾರ್ಕಂಡೇಯ ನದಿಯ ಎರಡು ಕವಲುಗಳ ಸಂಗಮಸ್ಥಾನದಲ್ಲಿರುವ ಗ್ರಾಮ. ಇದೇ ಹೆಸರಿನ ಹೋಬಳಿಯ ಕೇಂದ್ರ. ಪ್ರಾಚೀನ ಕಾಲದಲ್ಲಿ ನಡೆದ ಮಹತ್ವವಾದ ಹೋಮದ ಪೂರ್ಣಾಹುತಿಯ ಪರಿಣಾಮವಾಗಿ ಈ ಸ್ಥಳಕ್ಕೆ ಬೂದಿಕೋಟೆ (ಸಂಸ್ಕೃತದಲ್ಲಿ ವಿಭೂತಿಪುರ) ಎಂದು ಹೆಸರು ಬಂದಿರಬಹುದೆಂದು ಹೇಳುವುದುಂಟು. ಬೂದಿಕೋಟೆಯಲ್ಲಿರುವ ಕ್ರಿ. ಶ. ೭೭೦ರ ಬಾಣ ವಂಶದ ಶಾಸನವು ಮಹಾವಳಿ ಬಾಣರಸನು ಗಂಗ–೬೦೦೦ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿದ್ದಾಗ ಇವನ ಸಾಮಂತನಾಗಿದ್ದ

ಗಂಗ ರಾಚಮಲ್ಲನು ಕಂಚಿಯ ಮೇಲೆ ವಿಜಯವನ್ನು ಸ್ಥಾಪಿಸಿ ತೇಕಲ್ಲು ಗ್ರಾಮದ ಮೇಲೆ ಎರಗಿದಾಗ ಬಾಳ್ಗಳ್ಚು ಸಂಪ್ರದಾಯಕ್ಕಾಗಿ ಖಡ್ಗವನ್ನು ನೀಡಿದ ಬಗ್ಗೆ ಉಲ್ಲೇಖಿಸುವ ಮಹತ್ವವಾದ ವಿವರಗಳನ್ನು ತಿಳಿಸುತ್ತದೆ. ೧೭ನೆಯ ಶತಮಾನದಲ್ಲಿ ಇದು ಶಿರಾದ ಸುಬೇದಾರನ ಕೆಳಗೆ ಫೌಜುದಾರನಾಗಿ ನೇಮಕಗೊಂಡಿದ್ದ ಫತ್ತೇಮಹಮ್ಮದನ ಜಹಗೀರಾಗಿತ್ತು. ಅವನ ಮಗ ಹೈದರ್‌ಅಲಿ ಜನಿಸಿದ್ದು ಇಲ್ಲಿಯೇ.

ಕೋಟೆಯ ಹೊರಭಾಗದಲ್ಲಿ ಒಂದು ಕಿ. ಮೀ. ದೂರದಲ್ಲಿ ಸೋಮೇಶ್ವರ ದೇವಾಲಯವಿದೆ. ಗರ್ಭಗೃಹವು ಚೌರಸವಾಗಿದ್ದು ಎತ್ತರವಾದ ಪಾಣಿಪೀಠದ ಮೇಲೆ ಕಪ್ಪುಶಿಲೆಯ ಶಿವಲಿಂಗ ಇದೆ. ಅದರ ಎದುರಿಗೆ ನಂದಿಯ ವಿಗ್ರಹವಿದೆ. ಗರ್ಭಗೃಹದ ಸುತ್ತಲೂ ಸಾಂಧಾರ ಪ್ರದಕ್ಷಿಣಾಪಥವಿದೆ ಹಾಗೂ ಮುಂಭಾಗದಲ್ಲಿ ಅರ್ಧಮಂಟಪವಿದೆ. ಸಾಮಾನ್ಯವಾಗಿ ಶಿವದೇವಾಲಯದ ನವರಂಗದಲ್ಲಿ ಕಂಡುಬರುವ ಚಿತ್ರಗಳು ಈ ದೇವಾಲಯದ ಪ್ರಾಕಾರದಲ್ಲಿ ಕಾಣಿಸಿಕೊಂಡು ಸಣ್ಣ ದೇವರುಗಳನ್ನೊಳಗೊಂಡ ಚಿಕ್ಕ ಚಿಕ್ಕ ವೀರರ ಗುಡಿಗಳಂತೆ ಕಂಡುಬರುತ್ತವೆ. ಮುಂಭಾಗದಲ್ಲಿ ಮುಖಮಂಟಪವಿದೆ. ಪ್ರಾಕಾರದ ಸುತ್ತಲೂ ಎಡದಿಂದ ಕ್ರಮವಾಗಿ ದಕ್ಷಿಣಾಮೂರ್ತಿ, ಸಪ್ತಮಾತೃಕೆಗಳು ಮತ್ತೊಂದು ಕಡೆ ದಕ್ಷಿಣಾಮೂರ್ತಿ, ವಿಷ್ಣು, ಮಹಿಷಾಸುರಮರ್ದಿನಿ, ಬ್ರಹ್ಮ, ಚಂಡೀಕೇಶ್ವರ, ಭೈರವ ಮತ್ತು ಸೂರ್ಯ ಈ ದೇವತೆಗಳ ಶಿಲ್ಪಗಳಿವೆ. ಊರಿನ ಮಧ್ಯೆ ಕೋದಂಡರಾಮನ ದೇವಾಲಯವಿದೆ. ಕೋದಂಡಪಾಣಿ ಶ್ರೀರಾಮನ ಅಕ್ಕಪಕ್ಕದಲ್ಲಿ ಲಕ್ಷ್ಮಣಸೀತೆಯರ ವಿಗ್ರಹಗಳಿವೆ. ಇಲ್ಲಿ ಗಂಗಾಧರೇಶ್ವರ ದೇವಾಲಯವು ಇದೆ.

ಊರ ಆರಂಭದಲ್ಲಿ ಎಡಭಾಗಕ್ಕೆ ಪ್ರಸಿದ್ಧ ಕೋಟೆಯ ಪ್ರವೇಶ ದ್ವಾರವಿದೆ. ಇಲ್ಲಿಂದ ಹಲವು ಮೆಟ್ಟಲುಗಳನ್ನು ಹತ್ತಿಹೋದರೆ ವಿಶಾಲವಾದ ಕಣಿವೆಯ ಪ್ರದೇಶವು ಸಿಗುತ್ತದೆ. ಇಲ್ಲಿ ಬಲಭಾಗದಲ್ಲಿ ವಿಜಯನಗರೋತ್ತರ ಕಾಲದ ವೇಣುಗೋಪಾಲಸ್ವಾಮಿಯ ಪಾಳುಬಿದ್ದಿರುವ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವಿದೆ. ಗರ್ಭಗೃಹದಲ್ಲಿದ್ದ ವೇಣುಗೋಪಾಲಸ್ವಾಮಿ ಮೂಲವಿಗ್ರಹವು ಕಳ್ಳತನವಾಗಿದ್ದು, ಕೆಲವು ಸಮಯದ ನಂತರ ದೊರೆತ ಮೇಲೆ ಊರಿನ ವೆಂಕಟರಮಣ ದೇವಾಲಯದಲ್ಲಿಡಲಾಗಿದೆ. ಅರ್ಧಮಂಟಪದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ನವರಂಗದ ಮಧ್ಯದಲ್ಲಿರುವ ಚೌಕಾಕಾರವಾದ ಸರಳ ಸ್ತಂಭಗಳು ಪಾಳೆಯಗಾರರ ಕಾಲದ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ. ಈ ದೇವಾಲಯದ ಎದುರು ಭಾಗದಲ್ಲಿ ಖಾಲಿ ಮಂಟಪಗಳಿವೆ. ಇನ್ನೊಂದು ಪ್ರವೇಶದ್ವಾರದ ಮೂಲಕ ಹತ್ತಿ ಹೋದರೆ ಹೈದರಾಲಿಯ ಜನ್ಮಸ್ಥಳ ಸಿಗುತ್ತದೆ. ಈ ಸ್ಥಳದಲ್ಲಿ ರಾಜ್ಯಪುರಾತತ್ವ ಇಲಾಖೆಯವರು ನಿರ್ಮಿಸಿರುವ ಸ್ಮಾರಕ ಮಂಟಪವಿದೆ. ಇದರ ಹಿಂಭಾಗದಲ್ಲಿ ಇನ್ನೊಂದು ಎತ್ತರವಾದ ಬೆಟ್ಟವಿದ್ದು ಮೇಲ್ಭಾಗದಲ್ಲಿ ಕಾವಲು ಕೊತ್ತಲಗಳಿವೆ. ಈ ಗುಡ್ಡದ ಹಿಂಭಾಗದಲ್ಲಿ ಮಾರ್ಕಂಡೇಯ ನದಿಯು ಹರಿಯುತ್ತದೆ. ಈ ಕೋಟೆಯಿಂದ ಇಳಿದು ಬಂದರೇ ಹೊರಭಾಗದ ಪ್ರವೇಶದ್ವಾರದ ಪಕ್ಕದಲ್ಲಿ ಪ್ರಾಚೀನ ಲಕ್ಷಣವುಳ್ಳ ವೀರಗಲ್ಲುಗಳಿವೆ. ಊರಿನಲ್ಲಿ ಪಾಳೆಯಗಾರರ ಕಾಲದ ವೆಂಕಟೇಶನ ದೇವಾಲಯವಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ವಿಶಾಲವಾದ ಮುಖಮಂಟಪ ಇವೆ. ಗರ್ಭಗೃಹದಲ್ಲಿರುವ ವೆಂಕಟೇಶನು ಸಮಭಂಗಿಯಲ್ಲಿದ್ದು ಶಂಖ, ಚಕ್ರ, ಅಭಯ ಮತ್ತು ಕಟಿಹಸ್ತನಾಗಿರುವನು. ಗರ್ಭಗೃಹದ ಸುತ್ತಲೂ ಸಾಂಧಾರ ಪ್ರದಕ್ಷಿಣಾಪಥವಿದೆ. ವಾರ್ಷಿಕವಾಗಿ ಈ ದೇವಾಲಯದಲ್ಲಿ ಚೈತ್ರಶುದ್ಧ ಪೌರ್ಣಿಮೆಯಂದು ಬ್ರಹ್ಮರಥೋತ್ಸವ ಜರುಗುತ್ತದೆ. ಗ್ರಾಮದ ಪ್ರವೇಶದ್ವಾರದಲ್ಲಿ ಹನುಮಂತ ದೇವರಗುಡಿ ಇದೆ. ಇದರ ಎದುರುಭಾಗದಲ್ಲಿ ವಿಶಾಲವಾಗಿರುವ ಚೌಕಾಕಾರವಾಗಿ ಕಲ್ಲಿನ ಸೋಪಾನಗಳಿರುವ ಕಲ್ಯಾಣಿಯು ಬಹಳ ಪುರಾತನವಾದುದೆಂದು ಪ್ರತೀತಿಯಿದೆ. ಇದರ ಬಳಿಯಲ್ಲೇ ಹರಿಯುವ ಮಾರ್ಕಂಡೇಯ ನದಿಯ ದಂಡೆಯ ಮೇಲೆ ಕರ್ನಾಟಕದಲ್ಲೇ ಅತ್ಯಂತ ಪ್ರಾಚೀನವೆನಿಸಿದ ಹಾಗೂ ಎರಡನೇ ಮಂತ್ರಾಲಯವೆಂದು ಕರೆಯಲಾಗುವ ಕ್ರಿ. ಶ. ೧೬೮೧ರಲ್ಲಿ ಪ್ರತಿಷ್ಠಾಪನೆಗೊಂಡ ರಾಘವೇಂದ್ರಯತಿಗಳ ಬೃಂದಾವನವಿದೆ. ಮಂತ್ರಾಲಯದಲ್ಲಿರುವ ರಾಘವೇಂದ್ರ ತೀರ್ಥರ ಮೂಲ ಬೃಂದಾವನವು ಕ್ರಿ.ಶ. ೧೬೭೧ರಲ್ಲಿ ನಿರ್ಮಾಣವಾಗಿದ್ದು, ಅಲ್ಲಿಂದ ಒಂದೇ ದಶಕದೊಳಗೆ ಕ್ರಿ.ಶ. ೧೬೮೧ರಲ್ಲಿ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಪ್ರತಿಷ್ಠಾಪನೆಗೊಂಡಿರುವುದು ಮಹತ್ವವಾಗಿದೆ. ಈ ಸ್ಥಳಕ್ಕೆ ಯಾತ್ರಿಕರು ವಿಶೇಷವಾಗಿ ಭೇಟಿನೀಡುವುದು ರೂಢಿಯಲ್ಲಿದೆ. ಇಲ್ಲಿ ವಾರ್ಷಿಕವಾಗಿ ಶ್ರಾವಣ ಬಹುಳ ಬಿದಿಗೆಯಂದು ಮೂರು ದಿನಗಳ ಕಾಲ ರಾಘವೇಂದ್ರತೀರ್ಥರ ಆರಾಧನಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಊರಿನಲ್ಲಿ ಒಂದು ಜಾಮಿಯಾ ಮಸೀದಿ ಇದೆ ಹಾಗೂ ಇತ್ತೀಚೆಗೆ ನಿರ್ಮಿಸಲಾಗಿರುವ ರೋಮನ್ ಕ್ಯಾಥೋಲಿಕ್ ಚರ್ಚಿದೆ.

**ಬೆಳ್ಳೂರು** (ಕೋಲಾರ ತಾಲೂಕು: ಜನಸಂಖ್ಯೆ:೨೦೮೫): ಕೋಲಾರದಿಂದ ೧೪ ಕಿ.ಮೀ. ದೂರದಲ್ಲಿರುವ ಬೆಳ್ಳೂರು ಶಾಸನಗಳಲ್ಲಿ 'ವೆಲ್ಲಿಯೂರು', 'ಬೆಳ್ಳೂರು ಸ್ಥಳ' ಅಥವಾ 'ವಿಷ್ಣುವರ್ಧನ ಚಥುರ್ವೇದಿ ಮಂಗಲಂ' ಎಂದು ವಿವಿಧ ರೂಪಗಳಲ್ಲಿ ಉಲ್ಲೇಖಿಸಲಾಗಿದೆ. ವೆಲ್ಲಿಯೂರು ಅಥವಾ ವಿಷ್ಣುವರ್ಧನ ಚತುರ್ವೇದಿ ಮಂಗಲಂ ಅಥವಾ ಬೆಳ್ಳೂರು ಸ್ಥಳವು ಕೈವಾರನಾಡಿನ ನಿಗಿರಿಲಿ ಚೋಳ ಮಂಡಲದ ವ್ಯಾಪ್ತಿಯಲ್ಲಿದ್ದ ಅತ್ಯಂತ ಮಹತ್ವವಾದ ಐತಿಹಾಸಿಕ ಕೇಂದ್ರವಾಗಿದ್ದುದರ ಬಗ್ಗೆ ಶಾಸನಗಳಿಂದ ಸ್ವಯಂ ವೇದ್ಯವಾಗುತ್ತದೆ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೇ, ಕಣ್ವೇಶ್ವರ, ವರದರಾಜ, ಮುನೇಶ್ವರ, ರಾಮನಾಥ, ಆಂಜನೇಯ, ಪಟ್ಟಾಲಂಬಿಕ, ಮುತ್ಯಾಳಾಂಬಿಕ, ಮಾರಿಕಾಂಬ, ಗಂಗಮ್ಮ ಮೊದಲಾದುವುಗಳು. ಕಣ್ಣೇಶ್ವರ ದೇವಾಲಯವು ಹೊಯ್ಸಳರ ಶೈಲಿಯಲ್ಲಿದ್ದು, ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು, ಎತ್ತರವಾದ ಪಾಣಿಪೀಠದ ಮೇಲೆ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಸ್ತಂಭಗಳು ಚೌರಸವಾಗಿದ್ದು ಸರಳವಾಗಿವೆ. ಮಧ್ಯದಲ್ಲಿ ನಂದಿಯ ಏಕಶಿಲಾ ಮೂರ್ತಿ ಇದೆ. ಅರ್ಧಮಂಟಪದ ಪ್ರವೇಶದ್ವಾರದ ಇಕ್ಕೆಲಗಳಲ್ಲಿರುವ ಕಟ್ಟೆಯ ಮೇಲೆ ಸೋಮಸ್ಕಂದ ಮತ್ತು ಉತ್ಸವ ಮೂರ್ತಿಗಳು ಹಾಗೂ ಕಾಳಭೈರವನ ಶಿಲಾಮೂರ್ತಿ ಇವೆ. ನವರಂಗಕ್ಕೆ ಪೂರ್ವದಿಕ್ಕಿನಿಂದ ಪ್ರವೇಶದ್ವಾರವಿದ್ದು, ದೇವಾಲಯವು ಉತ್ತರಾಭಿಮುಖವಾಗಿದೆ. ನವರಂಗದ ಪ್ರವೇಶದ್ವಾರದ ಮುಂಭಾಗದಲ್ಲಿ ಚೌರಸವಾದ ತೆರೆದ ಮುಖಮಂಟಪವಿದೆ. ದೇವಾಲಯದ ಹೊರಭಾಗದಲ್ಲಿ ಸುತ್ತಲೂ ಪ್ರದಕ್ಷಿಣಾಪಥವಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಇಟ್ಟಿಗೆಯಿಂದ ನಿರ್ಮಿತವಾಗಿದ್ದು ಹಾಗೂ ಶಿಥಿಲವಾಗಿರುವ ವೃತ್ತಾಕಾರವಾದ ಶಿಖರವಿದೆ. ಕಣ್ಣೇಶ್ವರ ದೇವಾಲಯದ ಪ್ರವೇಶದ್ವಾರದ ಬಳಿಯಿರುವ ಎರಡು ಶಾಸನಗಳ ಪೈಕಿ ಮೊದಲನೇಯದು ಕ್ರಿ.ಶ. ೧೧೬೭ರ ಶಾಸನವು ಮಹಾಮಂಡಳೇಶ್ವರ ತ್ರಿಭುವನಮಲ್ಲನು ತಲೈಕಾಡು, ಕೊಂಗು, ನಂಗಲಿ, ಉಚ್ಚಂಗಿ, ವನವಾಸಿ, ಪಾಣುಂಗಳ ಮತ್ತು ಪೆಲ್ವಳಗಳನ್ನು ಗೆದ್ದು ಸೇನೆಯೊಂದಿಗೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ವೀರಗಂಗ ಪ್ರತಾಪನರಸಿಂಹ ಪೊಯ್ಸಳೇಶ್ವರನು ಈ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿದ್ದನೆಂದು ಉಲ್ಲೇಖಿಸುತ್ತದೆ. ಇಲ್ಲೇ ಇರುವ ಎರಡನೇಯ ಶಾಸನವು ಕ್ರಿ. ಶ. ೧೨೮೮ರಲ್ಲಿ ಹೊಯ್ಸಳವೀರ ರಾಮನಾಥನ ಆಳ್ವಿಕೆಯಲ್ಲಿ ಗಂಗಾಧರನೆಂಬ ಅಧಿಕಾರಿಯ ಮಗ ಸೋಮನದೇವನು ವೀರನಾರಾಯಣನೆಂಬ ಕೊಯ್ಯಕ್ಕೊರನಾಡಿನ ಮಾಂಡಲಿಕನ ಮುಖೇನ ವಿಷ್ಣುವರ್ಧನ ಚತುರ್ವೇದಿ ಮಂಗಲ ಅಥವಾ ವೆಲ್ಲಿಯಾರಿನ (ಬೆಳ್ಳೂರು) ತಿರುಕ್ಕಾಂಬೀಶ್ವರ ದೇವರಿಗೆ (ಈ ದೇವರನ್ನು ಶಾಸನದಲ್ಲಿ ಶ್ರೀಕೈಲಾಸಮ್ ಎಂದೂ ಕರೆಯಲಾಗಿದೆ) ಮತ್ತು ಮೂಲಸ್ಥಾನದ ಉಡ್ಯೆಯಾರ್ ದೇವರಿಗೆ ಕೈವಾರನಾಡಿನಲ್ಲಿದ್ದ ಅಂಬಾಡಕ್ಕಿ ಗ್ರಾಮದಲ್ಲಿದ್ದ ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದ ದಕ್ಷಿಣ ಗೋಡೆಯಲ್ಲಿರುವ ಶಾಸನವು ಕ್ರಿ.ಶ. ೧೪೦೬ರಲ್ಲಿ ವಿಜಯನಗರದ ದೇವರಾಯನ ಆಳ್ವಿಕೆಯಲ್ಲಿ ಬೊಮ್ಮಣ್ಣ ದಣ್ಣಾಯಕನೆಂಬ ಮಂತ್ರಿಯು ಬೆಳ್ಳೂರಿನ ಸೋಮ ದೇವರಿಗೆ ದೈನಂದಿನ ಪೂಜಾ ಕೈಂಕರ್ಯಕ್ಕಾಗಿ ಬೆಳ್ಳೂರು ಸ್ಥಳದಲ್ಲಿದ್ದ ಬೈಲನಕುಂಟೆ ಮತ್ತು ತುಜಿಲಹಳ್ಳಿ ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದ ಅದಿಷ್ಠಾನದ ಮೇಲಿರುವ ಎರಡು ಶಾಸನಗಳ ಪೈಕಿ ಮೊದಲನೇಯದು ಕ್ರಿ. ಶ. ೧೨೮೬ರಲ್ಲಿ ಹೊಯ್ಸಳ ರಾಮನಾಥದೇವನ ೩೨ನೇ ವರ್ಷದ ಆಳ್ವಿಕೆಯ ಅವಧಿಯಲ್ಲಿ ಅಯ್ಯನ ಶಾವಶಿನಾಯನ ಮಗನಾದ ಅಂಕಕಾರ ಗಂಗಪೆರುಮಾಳ ತಟ್ಟರಾದಿತ್ತನು ವೆಲ್ಲಿಯೂರು ಅಥವಾ ವಿಷ್ಣುವರ್ಧನ ಚಥುರ್ವೇದಿಮಂಗಲದ ಶ್ರೀ ಕೈಲಾಸಂ ಉಡ್ಯೆಯಾರ್ ಮತ್ತು ಮೂಲಸ್ಥಾನ ಉಡ್ಯೆಯಾರ್ ದೇವರುಗಳಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇಲ್ಲೆ ಇರುವ ಎರಡನೇ ಶಾಸನವು ಕ್ರಿ.ಶ. ೧೨೮೦ರಲ್ಲಿ ಇರಾಜಪುರದ ಕುರುಕ್ಕಯ್ ಉಡ್ಯೆಯಾರ್ ನಾಚ್ಚಿಯಾರ ಎಂಬ ದೇವದಾಸಿಯ ಮಗಳಾದ ಪೊಣ್ಣಾಂಡಾಳ್ ಎಂಬ ದೇವಾಲಯದ ನರ್ತಕಿಯು ಪಳ್ಳಿಯಾರ್ರೈ ನಾಚ್ಚಿಯಾರ್ ಅಮ್ಮನವರ (ಲಕ್ಷ್ಮಿಯ) ದೇವಾಲಯದ ಗರ್ಭಗೃಹವನ್ನು ನಿರ್ಮಿಸಿದ ಬಗ್ಗೆ ಹಾಗೂ ಈ ದೇವಾಲಯಕ್ಕೆ ಭೂಮಿಗಳನ್ನು ದೇವಿಯ ದೈನಂದಿನ ಪೂಜಾ ಕೈಂಕರ್ಯಕ್ಕಾಗಿ ದತ್ತಿಬಿಟ್ಟ ಮಹತ್ವವಾದ ವಿಚಾರಗಳನ್ನು ದಾಖಲಿಸುತ್ತದೆ. ಈ ಶಾಸನದಲ್ಲಿರುವ ಇನ್ನೊಂದು ಪ್ರಮುಖ ಅಂಶವೆಂದರೇ ಫಾಲ್ಗುಣ ಮಾಸದ ಉತ್ತರಾ ನಕ್ಷತ್ರದಂದು ಈ ದೇವಿಯ ಉತ್ಸವವನ್ನು ಗ್ರಾಮದ ಬೀದಿ ಬೀದಿಗಳಲ್ಲಿ ಮಾಡುತ್ತಿದ್ದುದರ ಉಲ್ಲೇಖವಿದೆ. ಇದು ಆ ಕಾಲದ ಸೌಹಾರ್ದಯುತ ಸಮುದಾಯ ಜೀವನದ ಬಗ್ಗೆ ಉತ್ತಮ ಉದಾಹರಣೆಯಾಗಿದೆ. ಈ ದೇವಾಲಯದಿಂದ ಅನತಿ ದೂರದಲ್ಲಿ ಕ್ರಿ.ಶ. ೧೧೫೩ರಲ್ಲಿ ಹೊಯ್ಸಳ ನರಸಿಂಹನು ವಿಷ್ಣುವರ್ಧನ ಚತುರ್ವೇದಿ ಮಂಗಲದಲ್ಲಿದ್ದ ರಾಮನಾಥ (ಶಾಸನೋಕ್ತ ವೆಲ್ಲಿಯೂರಿನ ನರಸಿಂಹ ವಿನ್ನಾಗರ ವಾಳವಂದ ಪೆರುಮಾಳ್ ಅಥವಾ ತಿಗುಬೆಲಿ ದೇವಾಲಯವೇ ಇದು ಎಂಬ ಖಚಿತ ಅಭಿಪ್ರಾಯವಿದೆ) ದೇವಾಲಯವಿದ್ದು ಗರ್ಭಗೃಹ ಅರ್ಧಮಂಟಪ ಮತ್ತು ವಿಶಾಲವಾದ

ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು, ಸುಮಾರು ಐದು ಅಡಿ ಎತ್ತರದ ಸಮಭಂಗಿಯಲ್ಲಿರುವ ವರದರಾಜಸ್ವಾಮಿಯು ಶ್ರೀದೇವಿ ಮತ್ತು ಭೂದೇವಿಯರೊಡಗೂಡಿ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ವರದ ಹಾಗೂ ಅಭಯ ಮುದ್ರೆಗಳನ್ನು ಹೊಂದಿದೆ. ನವರಂಗ ಹಾಗೂ ಅರ್ಧಮಂಟಪದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಜಯ–ವಿಜಯರ ಎತ್ತರವಾದ ಶಿಲಾಕೃತಿಗಳಿವೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾ ಪಥವಿದೆ ಹಾಗೂ ಮೇಲ್ಭಾಗದಲ್ಲಿ ಚತುಷ್ಕೋನಾಕಾರದ ದ್ರಾವಿಡ ಶೈಲಿಯ ಶಿಖರವಿದೆ. ದೇವಾಲಯದ ಎದುರಿಗೆ ಎತ್ತರವಾದ ಚೌರಸ ಪೀಠದ ಮೇಲೆ ಗರುಡ ಸ್ತಂಭವಿದೆ. ಈ ದೇವಾಲಯದ ತಳಪಾಯದ ಮೇಲೆ ನಾಲ್ಕು ತಮಿಳು ಶಾಸನಗಳಿದ್ದು ಅವುಗಳ ಪೈಕಿ ಮೊದಲನೆಯದು ಕ್ರಿ.ಶ.೧೧೫೩ರಲ್ಲಿ ಹೊಯ್ಸಳ ನರಸಿಂಹನು ಆಡಳಿತ ಮಾಡುತ್ತಿದ್ದಾಗ ನಿಗಿರಲಿ ಚೋಳ ಮಂಡಲದ ವ್ಯಾಪ್ತಿಯಲ್ಲಿದ್ದ ಕೈವಾರನಾಡಿನಲ್ಲಿ ವೆಲ್ಲಿಯೂರು ಅಲಿಯಾಸ್ ವಿಷ್ಣುವರ್ಧನ ಚಥುರ್ವೇದಿಮಂಗಲಂನ ನರಸಿಂಗವಿಣ್ಣಗರ ಅಥವಾ ತಿಗುಬೆಲಿ ದೇವಾಲಯದ ಪೂಜಾ ಕೈಂಕರ್ಯಕ್ಕಾಗಿ ಗ್ರಾಮಸಭೆಯ ಒಬ್ಬ ಅಧಿಕಾರಿ ಸದಸ್ಯನೊಬ್ಬನು ಮಾದೇವಶೆಟ್ಟಿ ಎಂಬ ಸ್ಥಳೀಯ ಅಧಿಕಾರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇಲ್ಲೇ ಇರುವ ಎರಡನೇ ಶಾಸನವು ಕ್ರಿ.ಶ. ೧೨೮೪ರಲ್ಲಿ ಹೊಯ್ಸಳ ರಾಜ ಮೊದಲನೇ ರಾಮನಾಥದೇವನು ಆಳ್ವಿಕೆ ಮಾಡುತ್ತಿದ್ದಾಗ ತೊಕ್ಕಾರೈಶಾನಿ ಎಂಬ ಅಧಿಕಾರಿಯು ಕೆಲವು ಕುಳಿ ಭೂಮಿಯನ್ನು ವೆಲ್ಲಿಯೂರಿನ ವಾಳವಂಡ ಪೆರುಮಾಳನ ದೈನಂದಿನ ಪೂಜಾಕೈಂಕರ್ಯಕ್ಕಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇಲ್ಲಿರುವ ಮೂರನೇಯ ಶಾಸನವು ಕ್ರಿ. ಶ. ೧೨೮೮ರಲ್ಲಿ ಮೊದಲನೇ ರಾಮನಾಥದೇವನ ಆಳ್ವಿಕೆಯಲ್ಲಿ ಅಣ್ಣನೆಂಬ ಮಾಂಡಳಿಕನು ವೆಲ್ಲಿಯೂರಿನ ವಳವಂಡ ಪೆರುಮಾಳನಿಗೆ ಹಲವು ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸುತ್ತದೆ. ಇಲ್ಲೇ ಇರುವ ಇನ್ನೊಂದು ಶಾಸನವು ಮೊದಲನೇ ಶಾಸನದ (೧೩೮೦) ಮುಂದುವರಿಕೆಯಾಗಿದ್ದು ಈ ಗ್ರಾಮದ ಮಂಡಲ ಪುರುಷನ ಮಗನಾದ ಶಿರಪನ್ನಾಚಾರಿ ನಲ್ಲಪಿಳ್ಳೈ ಎಂಬ ಶಿಲ್ಪಿಯು ಈ ದೇವಾಲಯದ ಕೆಲವು ಕಾರ್ಯಮಾಡಿದ್ದ ಕಾರಣ ಹಲವು ದಾನಗಳನ್ನು ಸ್ವೀಕರಿಸಿದ ಬಗ್ಗೆ ದಾಖಲಿಸುತ್ತದೆ. ಇಲ್ಲೆ ಇರುವ ಮೂರನೇಯ ಶಾಸನವು ಕ್ರಿ.ಶ.೧೩೬೩ರಲ್ಲಿ ವಿಜಯನಗರದ ಬುಕ್ಕಣ್ಣ ಒಡೆಯನ ಮಗ ಕಂಪಣ್ಣ ಒಡೆಯನು ಆಳ್ವಿಕೆ ಮಾಡುತ್ತಿದ್ದಾಗ ಆತನ ಅರಮನೆಯ ಪಾರುಪತ್ತೇದಾರನಾಗಿದ್ದ ದುಗ್ಗಣ್ಣನು ವೆಲ್ಲಿಯೂರಿನ ವಾಳವಂಡ ಪೆರುಮಾಳ ದೇವರಿಗೆ ಹಲವು ದಾನಗಳನ್ನು ನೀಡಿದ ವಿಚಾರವನ್ನು ದಾಖಲಿಸುತ್ತದೆ. ಇಲ್ಲೆ ಇರುವ ನಾಲ್ಕನೇಯ ಶಾಸನವು ಕ್ರಿ.ಶ. ೧೨೯೩ರಲ್ಲಿ ಹೊಯ್ಸಳ ಚಕ್ರವರ್ತಿ ವೀರ ಬಲ್ಲಾಳದೇವನ ಮಗ ನರಸಿಂಹನಾಯಕನ ಮಗನಾದ ವಳ್ಳಪ್ಪ ದಣ್ಣಾಯಕನು ವೆಲ್ಲಿಯೂರಿನ ವಾಳವಂಡ ಪೆರುಮಾಳ್ ದೇವರಿಗೆ ಇದೇ ಗ್ರಾಮದಲ್ಲಿ ನೀಡಿದ ಹಲವಾರು ದಾನಗಳ ಬಗ್ಗೆ ಉಲ್ಲೇಖಿಸುತ್ತದೆ. ಊರಿನಲ್ಲಿ ಇತ್ತೀಚಿಗೆ ನಿರ್ಮಿಸಲಾದ ಒಂದು ಜಾಮಿಯಾ ಮಸೀದಿ ಇದೆ. ಯೋಗಮಂದಿರ ಹಾಗೂ ಆಂಜನೇಯ ದೇವಾಲಯಗಳಿವೆ. ಅಂತರರಾಷ್ಟ್ರೀಯ ಖ್ಯಾತಿಯ ಯೋಗಾಚಾರ್ಯ ಬಿ.ಕೆ.ಎಸ್.ಐಯ್ಯಂಗಾರ್ ಅವರು ಇದೇ ಸ್ಥಳದವರು. ಅವರು ಶಾಲೆ ಮತ್ತು ಯೋಗಮಂದಿರ ಕಟ್ಟಿಸಿದ್ದಾರೆ.

**ಬೇತಮಂಗಲ** (ಬಂಗಾರಪೇಟೆ ತಾಲೂಕು: ಜನಸಂಖ್ಯೆ: ೮,೭೯೩): 'ಬೇತಮಂಗಲ' ಅಥವಾ ಶಾಸನೋಕ್ತ 'ಬಿಜಯಾದಿತ್ಯ ಮಂಗಲ', 'ವಿಜಯಾದಿತ್ಯಮಂಗಲ'ವು ಕೋಲಾರದಿಂದ ೨೬ ಕಿ.ಮೀ. ಮತ್ತು ಕೆ.ಜಿ.ಎಫ್.ನಿಂದ ೧೧ ಕಿ.ಮೀ. ದೂರದಲ್ಲಿದ್ದು ಐತಿಹಾಸಿಕವಾಗಿ ಜಿಲ್ಲೆಯ ಪ್ರಮುಖ ಸ್ಥಳಗಳಲ್ಲೊಂದಾಗಿದೆ. ಬೇತಮಂಗಲದ ಬೃಹದಾಕಾರದ ಅತ್ಯಂತ ಪ್ರಾಚೀನ ಕಾಲದ ಕೆರೆ ಜನಪ್ರಿಯವಾಗಿದೆ. ಇತ್ತೀಚಿನವರೆಗೂ ಈ ಕೆರೆಯೂ ಸದಾಕಾಲ ತುಂಬಿರುತ್ತಿತ್ತು. ಇಲ್ಲಿಗೆ ವಿಹಾರಾರ್ಥವಾಗಿ ವಿವಿಧ ರಾಜ್ಯಗಳಿಂದ ಹಾಗೂ ವಿದೇಶಿಯಾತ್ರಿಕರುಗಳು ಭೇಟಿ ನೀಡುತ್ತಿದ್ದುದರ ಬಗ್ಗೆ ದಾಖಲೆಗಳಿವೆ. ಈ ಕೆರೆಯನ್ನು ಕ್ರಿ.ಶ.೮೯೦ರ ಸುಮಾರಿನಲ್ಲಿ ನೊಳಂಬರ ಆಳ್ವಿಕೆಯಲ್ಲಿ ನಿರ್ಮಿಸಲಾಗಿದೆ ಎಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಆವನಿಯ ದೇವಾಲಯದ ದಕ್ಷಿಣ ಪ್ರವೇಶದ್ವಾರದ ಸ್ತಂಭದ ಮೇಲಿರುವ ಕ್ರಿ.ಶ.೮೯೦ರ ಶಾಸನವು ವೀರ ನೊಳಂಬರ ರಾಣಿ ಪಲ್ಲವೇಂದ್ರ ಇರಿವ ಮಹೇಂದ್ರ ರಾಜನ ತಾಯಿ ದೇವಲಬ್ಬರಸಿ (ದೇವಬ್ಬರಸಿ)ಯು ತನ್ನ ಹೆಸರಿನಲ್ಲಿ ಪೊಳರಮಂಗಲ (ಬೇತಮಂಗಲದಲ್ಲಿ) ಬೃಹದಾಕಾರವಾದ ಕೆರೆಯನ್ನು ನಿರ್ಮಿಸಿದ ವಿಚಾರವನ್ನು ದಾಖಲಿಸುತ್ತದೆ. ಈ ಶಾಸನದಲ್ಲಿ ವಿಶಾಲವಾದ ಕೆರೆಯನ್ನು 'ದೇವಲಬ್ಬೆ ಸಮುದ್ರ'ವೆಂದು ಕರೆದು ಇದರ ತೀರದಲ್ಲಿ 'ಪೊಳರಮಂಗಲ'ವೆಂಬ ಅಗ್ರಹಾರವನ್ನು ಸ್ಥಾಪಿಸಿ 'ಮುಕುಂದ' (ವಿಷ್ಣು) ಹಾಗೂ ಈಶ್ವರ ದೇವಾಲಯಗಳನ್ನು ಮತ್ತು ಆವನಿಯಲ್ಲಿ ನೊಳಂಬ ನಾರಾಯಣೇಶ್ವರ ದೇವಾಲಯಗಳನ್ನೂ ನಿರ್ಮಿಸಿದ ಅಂಶ ಹಾಗೂ ದೇವಲಬ್ಬರಸಿಯು ಮೂಲತಃ ಕದಂಬ ವಂಶದವಳೆಂಬ ಹಲವಾರು ವಿಚಾರಗಳನ್ನು ದಾಖಲಿಸುತ್ತದೆ. ಈ ಶಾಸನ ಹೆಸರಿಸಿರುವ 'ಪೊಳರಮಂಗಲ'ವೇ

ಬೇತಮಂಗಲ ಇರಬಹುದೆಂದು ಕೆಲವು ವಿದ್ವಾಂಸರ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೇ, ವಿಜಯೇಂದ್ರಸ್ವಾಮಿ, ಸುಬ್ರಹ್ಮಣ್ಯೇಶ್ವರ, ಭೈರವೇಶ್ವರ, ಗಂಗಮ್ಮ, ಧರ್ಮರಾಯ, ಆಂಜನೇಯ ಮೊದಲಾದುವು. ವಿಜಯೇಂದ್ರಸ್ವಾಮಿ ದೇವಾಲಯವು ನೊಳಂಬಾಧಿರಾಜ ನುಳಿಪಯ್ಯನ ಕಾಲಕ್ಕೂ ಮೊದಲೇ ನಿರ್ಮಿತವಾಗಿರುವ ಸಾಧ್ಯತೆಯಿದೆ. ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಎರಡು ಮುಖಮಂಟಪಗಳನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹವು ಚೌರಸವಾಗಿದ್ದು ಪ್ರಾಚೀನ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಗರ್ಭಗುಡಿಯಲ್ಲಿ ಚೌಕಾಕಾರವಾದ ಸಿಂಹ ಪೀಠದ ಮೇಲೆ ಪದ್ಮಾಸನನಾಗಿ ಕುಳಿತಿರುವ ಧ್ಯಾನಾಸಕ್ತಯೋಗ ನಾರಾಯಣನ ವಿಗ್ರಹವು ಚತುರ್ಭುಜಗಳಲ್ಲಿ ಶಂಖ, ಚಕ್ರ, ವರದ ಹಾಗೂ ಅಭಯಮುದ್ರೆಗಳನ್ನು ಹೊಂದಿರುವನು. ಅರ್ಧಮಂಟಪದ ದ್ವಾರಬಂಧವು ಸರಳವಾಗಿದ್ದು ಇಕ್ಕೆಲಗಳಲ್ಲಿ ಜಯ–ವಿಜಯರ ಎತ್ತರವಾದ ಆಕರ್ಷಕ ಶಿಲಾಕೃತಿಗಳು ಕಂಡುಬರುತ್ತವೆ. ನವರಂಗವು ವಿಶಾಲವಾಗಿದ್ದು ಮಧ್ಯದಲ್ಲಿ ನಾಲ್ಕು ವೃತ್ತಾಕಾರವಾದ ನೊಳಂಬರ ಶೈಲಿಯ ಸ್ತಂಭಗಳಿದ್ದು ಮೇಲ್ಭಾಗದಲ್ಲಿ ದುಂಡನೆಯ ಪೀಠಗಳು ಕಂಡುಬರುತ್ತವೆ. ನವರಂಗದ ಛತ್ತು ಸರಳವಾಗಿದೆ. ನವರಂಗದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಜಯ–ವಿಜಯರ ಸುಮಾರು ಆರು ಅಡಿ ಎತ್ತರದ ಶಿಲಾಮೂರ್ತಿಗಳು ಕಂಡುಬರುತ್ತವೆ. ನವರಂಗದ ಎಡಭಾಗದಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಗೋವಿಂದರಾಜ ಸ್ವಾಮಿಯ ಶಯನ ಮುದ್ರೆಯ ಸುಂದರ ವಿಗ್ರಹವಿದೆ. ಮೊದಲನೇ ಮುಖಮಂಟಪದ ಬಲಭಾಗದಲ್ಲಿ ಚಿಕ್ಕ ಗರ್ಭಗೃಹವಿದ್ದು ಕುಳಿತ ಭಂಗಿಯಲ್ಲಿರುವ ಮಹಾಲಕ್ಷ್ಮಿಯ ಶಿಲಾಮೂರ್ತಿಯನ್ನು ಹಾಗೂ ಶ್ರೀದೇವಿ, ಭೂದೇವಿಯರ ಪ್ರತ್ಯೇಕ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟಪದಲ್ಲಿ ಚೌಕಾಕಾರವಾದ ವಿಜಯನಗರ ಶೈಲಿಯ ಸ್ತಂಭಗಳಿವೆ. ಈ ದೇವಾಲಯದಲ್ಲಿ ವೈಖಾನಸ ಆಗಮದ ರೀತಿಯಲ್ಲಿ ಪೂಜಾ ಕೈಂಕರ್ಯಗಳು ನಡೆಯುತ್ತದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾ ಪಥವಿದ್ದು ಗರ್ಭಗೃಹದ ಮೇಲೆ ಚೌರಸವಾದ ದ್ರಾವಿಡಶೈಲಿಯ ಶಿಖರವನ್ನು ನಿರ್ಮಿಸಲಾಗಿದೆ. ವಾರ್ಷಿಕವಾಗಿ ಶ್ರೀರಾಮನವಮಿಗೆ ೧೨ ದಿನಗಳ ಪರ್ಯಂತ ಉತ್ಸವಗಳು ನಡೆದು, ಇದೇ ಸಂದರ್ಭದಲ್ಲಿ ವಿಜಯೇಂದ್ರಸ್ವಾಮಿಯ ಬ್ರಹ್ಮರಥೋತ್ಸವವು ಜರುಗುತ್ತದೆ. ಈ ದೇವಾಲಯವು ರಾಜ್ಯ ಪುರಾತತ್ವ ಇಲಾಖೆಯವತಿಯಿಂದ ಸಂರಕ್ಷಿಸಲ್ಪಟ್ಟ ವಾಸ್ತುಶಿಲ್ಪವಾಗಿದೆ. ಈ ದೇವಾಲಯದ ಪಕ್ಕದಲ್ಲೇ ಈಶ್ವರನ ಪ್ರತ್ಯೇಕ ಗುಡಿಯಿದ್ದು ಆಧುನಿಕ ವಾಸ್ತು ರಚನೆಯನ್ನು ಹೊಂದಿದೆ. ಈಶ್ವರನ ಗುಡಿಯ ಸಮೀಪವೇ ಷಣ್ಮುಖ ಅಥವಾ ಸುಬ್ರಹ್ಮಣ್ಯನ ಚಿಕ್ಕ ಗುಡಿಯೂ ಇದೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ "ಹರೋಹರ" (ಕಾವಡಿ) ಉತ್ಸವವು ಜರುಗುತ್ತದೆ.

ಬೇತಮಂಗಲ ನಗರದ ಆಚೆಗಿರುವ ವಾಟರ್‌ವರ್ಕ್ಸ್ ಹಾಗೂ ಅದರ ಪರಿಸರವು ಪ್ರವಾಸಿಗರಿಗೆ ಒಂದು ಆಕರ್ಷಕ ತಾಣವಾಗಿದೆ. ಇತ್ತೀಚಿನವರೆಗೂ ಕೆರೆಯು ತುಂಬುತ್ತಿದ್ದಾಗ ಯಾತ್ರಿಕರ ಸೌಲಭ್ಯಕ್ಕಾಗಿ 'ನೌಕಾಯಾನ' ಸವಲತ್ತುಗಳನ್ನು ಇಲ್ಲಿ ಒದಗಿಸಲಾಗುತ್ತಿತ್ತು. ಕೋಲಾರ ಚಿನ್ನದ ಗಣಿಯ ವಾಟರ್‌ವರ್ಕ್ಸ್ ಎಂದು ಕರೆಯಲಾದ ಈ ಘಟಕದ ನಿರ್ಮಾಣವನ್ನು ಒಂದನೇ ಆಗಸ್ಟ್ ೧೯೦೩ರಲ್ಲಿ ಆರಂಭಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯ ಅವಧಿಯಲ್ಲಿ ಆಗಸ್ಟ್ ೧೯೦೪ರಲ್ಲಿ ಪೂರ್ಣಗೊಳಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹಸ್ತದಿಂದ ಈ ಘಟಕವು ಉದ್ಘಾಟನೆಗೊಂಡಾಗ, ದಿವಾನ್ ಕೃಷ್ಣಮೂರ್ತಿ, ಕೌನ್ಸಿಲರ್‌ಗಳಾದ ವಿ. ಪಿ. ಮಾಧವರಾವ್ ಮತ್ತು ಸಿ.ಶ್ರೀನಿವಾಸ ಐಯ್ಯಂಗಾರ್ ಅವರು ಹಾಜರಿದ್ದ ಬಗ್ಗೆ ದಾಖಲೆಗಳಿವೆ. ಈ ಘಟಕವು ಮೇಜರ್ ಎ.ಜೆ.ಲೊಟ್‌ಬಿನಿಯರ್, ಮುಖ್ಯ ಇಂಜಿನಿಯರ್ ಡಬ್ಲು.ಎಂ.ಹಚಿನ್ ಮತ್ತು ಇಂಜಿನಿಯರ್ ಜೆ.ಜೆ.ವೈಟ್‌ಲೀ ಮೊದಲಾದವರ ತಾಂತ್ರಿಕ ಸಲಹೆ ಮತ್ತು ಪರಿಶ್ರಮದಿಂದ ಕಾರ್ಯರೂಪಕ್ಕೆ ಬಂದಿತೆಂದು ಇಲ್ಲಿರುವ ಶಿಲಾನ್ಯಾಸ ಫಲಕದಲ್ಲಿ ದಾಖಲಿಸಲಾಗಿದೆ. ಕೋಲಾರ ಚಿನ್ನದ ಗಣಿಪ್ರದೇಶಕ್ಕೆ ಕುಡಿಯುವ ನೀರು ಸರಬರಾಜು ಮಾಡುವುದಕ್ಕಾಗಿ ಬೇತಮಂಗಲದ ವಾಟರ್‌ವರ್ಕ್ಸ್ ಯೋಜನೆ ಜಾರಿಗೆ ಬಂದಿತು. ಆದರೆ, ಪ್ರಸ್ತುತ ಈ ಪ್ರದೇಶವು ತೀವ್ರವಾದ ಕುಡಿಯುವ ನೀರಿನ ಕ್ಷಾಮವನ್ನು ಎದುರಿಸುತ್ತಿದೆ. ಭವಿಷ್ಯದಲ್ಲಿ ಉತ್ತಮ ಮಳೆ ಆಗಿದ್ದಲ್ಲಿ ಈ ಕ್ಷಾಮವು ಬಗೆಹರಿಯಬಹುದು. ಈ ವಾಟರ್‌ವರ್ಕ್ಸ್‌ನ ಹಿಂಭಾಗದಲ್ಲಿ ಸುಬ್ರಹ್ಮಣೇಶ್ವರ ಮತ್ತು ಸಂಗಮೇಶ್ವರ ದೇವಾಲಯಗಳಿವೆ. ವಿಜಯನಗರೋತ್ತರ ಕಾಲದಲ್ಲಿ ನವೀಕರಿಸಲಾಗಿರುವ ಈ ಎರಡೂ ದೇವಾಲಯಗಳು ಹಲವು ಪ್ರಾಚೀನ ಶಿಲ್ಪಗಳನ್ನು ಹೊಂದಿವೆ. ಸಂಗಮೇಶ್ವರ ದೇವಾಲಯದಲ್ಲಿ ಆಧುನಿಕ ಶೈಲಿಯಲ್ಲಿ ನವೀಕರಿಸಲ್ಪಟ್ಟಿರುವ ಗರ್ಭಗೃಹದಲ್ಲಿ ಚೌರಸವಾದ ಪಾಣಿಪೀಠದ ಮೇಲೆ ಎತ್ತರವಾದ ನೊಳಂಬರ ಕಾಲದ ಲಕ್ಷಣವುಳ್ಳ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಗೋಡೆಯ ಅಂಚಿಗೆ ನೊಳಂಬರ ಕಾಲದ ಸಪ್ತಮಾತೃಕೆಯರ ಬಿಡಿಶಿಲ್ಪಗಳನ್ನು ಪ್ರತ್ಯೇಕ ಪೀಠಗಳ ಮೇಲೆ ಪ್ರತಿಷ್ಠಾಪಿಸಲಾಗಿದೆ. ಇವುಗಳ ಬಳಿಯಲ್ಲೇ ಗಣಪತಿ, ಪಾರ್ವತಿ ಮೊದಲಾದ ಬಿಡಿ

ವಿಗ್ರಹಗಳನ್ನೂ ಪ್ರತಿಷ್ಠಾಪಿಸಲಾಗಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಚೌಕಾಕಾರವಾದ ವಿಜಯನಗರದ ನಂತರ ಕಾಲದ ಶೈಲಿಯ ಸ್ತಂಭಗಳು ಕಂಡುಬರುತ್ತವೆ.

ಊರಿನೊಳಗೆ ಮುಖ್ಯರಸ್ತೆಯ ಮಧ್ಯದಲ್ಲಿ ಗಂಗಮ್ಮನ ಚಿಕ್ಕಗುಡಿಯಿದ್ದು ಒಳಗೆ ನೊಳಂಬರ ಕಾಲದ ಎರಡು ಶಾಸನ ಕಲ್ಲುಗಳನ್ನು ಒಂದು ಚಿಕ್ಕಮಂಟಪದೊಳಗೆ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿದೆ. ಮೊದಲನೆಯ ಶಾಸನವು ಸುಮಾರು ಕ್ರಿ.ಶ.೯೦೪ರಲ್ಲಿ ಅಂದರೇ ಶ್ರಾವಣಮಾಸದಲ್ಲಿ ಅಪಾರ ಪಾಂಡಿತ್ಯವುಳ್ಳ ಇಪ್ಪತ್ತು ಬ್ರಾಹ್ಮಣರಿಗೆ ಒಂಭತ್ತು ಗ್ರಾಮಗಳನ್ನು ಶಾಶ್ವತವಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ಲಕ್ಷಣಗಳನ್ನು ಹೊಂದಿರುವ ಕ್ರಿ.ಶ.೯೪೩ರ ಎರಡನೇ ಶಾಸನವು ಬಿಜಯಾದಿತ್ಯಮಂಗಳ (ಬೇತಮಂಗಲ)ದಲ್ಲಿ ಅಗ್ರಹಾರದಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ಕೆಲವು ದಾನಗಳನ್ನು ನೀಡಿದ ವಿಚಾರವನ್ನು ದಾಖಲಿಸುತ್ತದೆ. ಕ್ರಿ.ಶ.೯೫೦ರ ಇನ್ನೊಂದು ಭಗ್ನ ಶಾಸನದಲ್ಲಿ 'ಪಲ್ಲವಾನ್ವಯ ನೊಳಂಬಾಧಿರಾಜ' ಎಂದು ಮಾತ್ರ ಓದಲು ಸಾಧ್ಯವಾಗಿರುತ್ತದೆ.

ಬೇತಮಂಗಲದ ವಿಜಯೇಂದ್ರಸ್ವಾಮಿ ದೇವಾಲಯದ ಪೂರ್ವಗೋಡೆಯ ತಳಪಾದಿಯ ಮೇಲಿರುವ ಕ್ರಿ.ಶ.೯೫೦ರ ಶಾಸನವು ಇರಿವ ನೊಳಂಬಾಧಿರಾಜ ನುಳಿಪಯ್ಯನ ಆಳ್ವಿಕೆಯ ಅವಧಿಯಲ್ಲಿ ಆತನು ಸಾಧಿಸಿದ ಹಲವಾರು ವಿಜಯಗಳ ಸಂಕೇತವಾಗಿ ವಿಕ್ರಮಾದಿತ್ಯ ತಿರುವಯ್ಯನೆಂಬ ಅಧಿಕಾರಿಯು ವಿಜಯಾದಿತ್ಯಮಂಗಳದ ಕೆರೆಯಲ್ಲಿ ಆಗಿಂದಾಗ್ಗೆ ಸಂಭವಿಸುತ್ತಿದ್ದ ದೌರ್ಬಲ್ಯತೆ ಹಾಗೂ ಶಿಥಿಲವಾಗಿದ್ದ ಕೆರೆಯ ಕಟ್ಟೆಯನ್ನು ದುರಸ್ತಿಗೊಳಿಸಿದ ಬಗ್ಗೆ ಹಾಗೂ ಕೈವಾರದ ೫೦೦ ಬ್ರಾಹ್ಮಣರಿಗೆ ವಿಜಯಾದಿತ್ಯಮಂಗಳ ಗ್ರಾಮ, ಕಣ್ಣಾನೂರು ಮತ್ತು ಮನಯೂರು ಗ್ರಾಮಗಳ ವ್ಯಾಪ್ತಿಯಲ್ಲಿದ್ದ ನೂರಾರು ಎಕರೆ ಗದ್ದೆಗಳನ್ನು ಶಾಶ್ವತ ಸಾಗುವಳಿ ಮಾಡುವುದಕ್ಕಾಗಿ ದಾನನೀಡಿದ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದ ಮುಂಭಾಗದಲ್ಲಿ ಎಡಗಡೆ ಇರುವ ಕ್ರಿ.ಶ.೧೫೨೮ರ ಶಾಸನವು ಅಸ್ಪಷ್ಟವಾಗಿದ್ದು ವಿಜಯನಗರದ ಕೃಷ್ಣರಾಯನ ಕಾಲದಲ್ಲಿ ನೀಡಿದ ಕೆಲವು ದಾನಗಳ ಬಗ್ಗೆ ದಾಖಲಿಸುತ್ತದೆ. ಇದೇ ದೇವಾಲಯದ ಗೋಡೆಗಳ ಮೇಲಿರುವ ಕ್ರಿ.ಶ.೧೨೮೮ರ ಮೊದಲನೇ ಶಾಸನವು ಕೌಂಡಿಣ್ಯ ಗೋತ್ರದ ಅನುಯಾಯಿಗಳು ವೀರ್ರಿರುಂಡ ಪೆರುಮಾಳ ದೇವರಿಗೆ ನೀಡಿದ ಹಲವು ದಾನಗಳ ಬಗ್ಗೆ ದಾಖಲಿಸುತ್ತದೆ. ಇಲ್ಲೇ ಕೆತ್ತಲಾಗಿರುವ ಎರಡನೆಯ ಶಾಸನವು ಕ್ರಿ.ಶ.೧೩೦೦ರಲ್ಲಿ ವಾಶರನೆಂಬ ಅಧಿಕಾರಿಯು ಎಂಟು ದೀಪಗಳನ್ನು ನಿರಂತರವಾಗಿ ಈ ದೇವಾಲಯದಲ್ಲಿ ಬೆಳಗಿಸುವ ಸಲುವಾಗಿ ನೀಡಿದ ದಾನವನ್ನು ದಾಖಲಿಸುತ್ತದೆ. ಇದೇ ದೇವಾಲಯದ ಗೋಡೆಯಲ್ಲಿರುವ ಕ್ರಿ.ಶ.೧೨೭೫ರ ಮೂರನೇ ಶಾಸನದಲ್ಲಿ ತಾಳಕುಟ್ಟೆಯ್ ವೀರ್ರಿರುಂಡ ಪಿಳ್ಳೆನ ಮಗ ಇಳ್ಳೆ ಪೆರುಮಾಳನೆಂಬ ಅಧಿಕಾರಿಯು ಹರಿತ್ಸಗೋತ್ರದ ಅನುಯಾಯಿಯಾಗಿದ್ದು ಇದೇ ಗ್ರಾಮದ ಭಾಗಸ್ವಾಮಿ (ಗ್ರಾಮದ ಒಡೆಯ)ಗೆ ನೀಡಿದ ಇದೇ ದೇವಾಲಯದ ಹಲವು ದೀಪಗಳ ದಾನದ ಬಗ್ಗೆ ಪ್ರಸ್ತಾಪಿಸುತ್ತಾ ಈ ಸ್ಥಳವನ್ನು ಇಳವಂಜಿನಾಡಿನ ವ್ಯಾಪ್ತಿಯಲ್ಲಿರುವ ವಿಜಯಾದಿತ್ಯ ಮಂಗಳವೆಂದು ಕರೆದಿದೆ. ಈ ಎಲ್ಲಾ ದಾನಗಳನ್ನೂ ಇದೇ ದೇವಾಲಯದ ಇಬ್ಬರು ಶ್ರೀವೈಷ್ಣವ ಅರ್ಚಕರು ಪಡೆದರೆಂದು ಶಾಸನವು ದಾಖಲಿಸುತ್ತದೆ. ಇದೇ ಸ್ಥಳದ ಕೆರೆಯ ಪೂರ್ವಕ್ಕೆ ಕೋಡಿಯ ಬಂಡೆಯ ಮೇಲಿರುವ ಕ್ರಿ.ಶ.೧೧೫೫ರ ನಾಲ್ಕನೇ ಶಾಸನವು ಪ್ರಭಾವಶಾಲಿ ಮಂತ್ರಿ, ಸರ್ವಾಧಿಕಾರಿ ಹಾಗೂ ಹಿರಿಯ ದಂಡನಾಯಕನಾಗಿದ್ದ (ಪಿರಿಯ ಪಡ್ಯೆವಾಳ) ಸೊಕ್ಕಿಮಯ್ಯನು ಗಂಗವಾಡಿ ೯೦,೦೦೦ದಲ್ಲಿ ವಾಸಿಸುತ್ತಿದ್ದ ನಾಗರಿಕರನ್ನು ಸಂರಕ್ಷಿಸಲು ತಾಮರೈಚೆರುವಾಳಿಯ ವ್ಯಾಪ್ತಿಯಲ್ಲಿದ್ದ ನಂಗಿಲಿಯಲ್ಲಿ ಬೀಡುಬಿಟ್ಟಿದ್ದಾಗ ವಿಜಯಾದಿತ್ಯಮಂಗಳದ ಕೆರೆಯಲ್ಲಿ ಉಂಟಾಗಿದ್ದ ಒಡಕುಗಳನ್ನು ದುರಸ್ತಿಗೊಳಿಸಿ, ಈ ಕೆರೆಗೆ ತೂಬನ್ನು ಇರಿಸಿ ಮಹಾಗ್ರಾಮವನ್ನು ಸ್ಥಾಪಿಸಿದ ಬಗ್ಗೆ ದಾಖಲಿಸುತ್ತದೆ ಹಾಗೂ ಈ ಊರಿನಲ್ಲಿ ದುರ್ಗೆಯ್ಯಾರ್ ದೇವಾಲಯವನ್ನು ನಿರ್ಮಿಸಿ ದೇವಿಯ ದೈನಂದಿನ ಪೂಜಾ ಕೈಂಕರ್ಯಕ್ಕಾಗಿ ನೀಡಿದ ಹಲವಾರು ದಾನಗಳನ್ನು ದಾಖಲಿಸುತ್ತದೆ. ಈ ಶಾಸನದಲ್ಲಿ ಸೊಕ್ಕಿಮಯ್ಯನು ಹೊಯ್ಸಳ ವಿಷ್ಣುವರ್ಧನದೇವನ ಗರುಡನಾಗಿದ್ದ ವಿಷಯವನ್ನು ದಾಖಲಿಸುತ್ತಾ ಸೊಕ್ಕಿಮಯ್ಯನು ವಿರೋಧಿ ರಾಜರುಗಳಾಗಿದ್ದ ಶಂಖ ಮತ್ತು ಪಣರ್ಜೋತ್ತುನ್ನು ಯಶಸ್ವಿಯಾಗಿ ಪರಾಭವಗೊಳಿಸಿದ ಜ್ಞಾಪಕಾರ್ಥವಾಗಿ ವಿಜಯಾದಿತ್ಯಮಂಗಳದ ಕೆರೆಯನ್ನು ದುರಸ್ತಿಗೊಳಿಸಿ ಶುಭ್ರವಾದ ನೀರು ನಿಲ್ಲುವಂತೆ ಮಾಡಿದ ಮಹತ್ವದ ವಿಚಾರವನ್ನು ತಿಳಿಸುತ್ತದೆ. ಈತನು ಮುಂದೆ ಕಂಚಿ ಹಾಗೂ ಕೊಂಗು ಪ್ರಾಂತ್ಯದ ರಾಜರುಗಳನ್ನೂ ದುರ್ಬಲಗೊಳಿಸಿದನೆಂದೂ ಈ ಶಾಸನವು ತಿಳಿಸುತ್ತದೆ. ಬೇತಮಂಗಲ ಹೋಬಳಿ ನಲ್ಲೂರು ಗ್ರಾಮದಲ್ಲಿರುವ ಕ್ರಿ.ಶ.೧೩೩೮ರ ಶಾಸನವು ಹೊಯ್ಸಳ ವೀರಬಲ್ಲಾಳನ ಆಡಳಿತದಲ್ಲಿ ಆತನ ಮಂತ್ರಿಯಾಗಿದ್ದ ದಾತಿ ಶಿಂಗೇ ದಣ್ಣಾಯಕನ ತಮ್ಮನಾಗಿದ್ದ ವಾಳನಾರಾಯಣನೆಂಬ ಅಧಿಕಾರಿಯು ತೊಳ್ಳಗದಲ್ಲಿ ಅಲಿಯಾಸ್ ರೂಪ ನಾರಾಯಣ

ವಲ್ಲಾಳನಲ್ಲೂರು ಗ್ರಾಮದಲ್ಲಿ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಬೇತಮಂಗಲದಲ್ಲಿ ರಾಜ್ಯದಲ್ಲೆ ಪ್ರತಿಷ್ಠಿತವೆಂದು ಹೇಳಲಾಗುವ ನಾದಸ್ವರ ಸಂಗೀತ ಶಾಲೆಯು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಊರು ಒಳನಾಡು ಮೀನುಗಾರಿಕೆಗೆ ಜನಪ್ರಿಯವಾಗಿದ್ದು, ಮೀನುಗಾರಿಕೆ ತರಬೇತಿ ಕೇಂದ್ರವನ್ನು ಹೊಂದಿದೆ. ಬೇತಮಂಗಲದಲ್ಲಿ ಪುರಾತನವೆಂದು ಹೇಳಲಾಗುವ ಜುಮ್ಮಾಮಸೀದಿ ಇದ್ದು ಎತ್ತರವಾದ ಮೀನಾರ್‌ಗಳನ್ನು ಹಾಗೂ ಮೆಹ್ರಾಬ್‌ಗಳನ್ನು ಹೊಂದಿದೆ. ಇಲ್ಲಿ ಮದರಸಾವಿದ್ದು ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣವನ್ನು ನೀಡಲಾಗುತ್ತದೆ. ಇದೇ ಮಸೀದಿಯ ಬಳಿ ಪೀರ್ ಸೈಯದ್ ಮದ್ನೀಷಾವಲಿ ದರ್ಗಾ ಇದ್ದು ವಾರ್ಷಿಕವಾಗಿ ಶಬಾನ್ ತಿಂಗಳಲ್ಲಿ ಉರುಸ್ ನಡೆಯುತ್ತದೆ. ಊರಿನಲ್ಲಿ ಇನ್ನೂ ಎರಡು ದರ್ಗಾಗಳಿದ್ದು ಮೊದಲನೆಯದು ಪೀರ್ ಸೈಯದ್ ಉಮರ್ ಷಾವಲಿಯದಾಗಿದ್ದು ಇಲ್ಲಿಯೂ ರಜಬ್ ಅಥವಾ ಶಬಾನ್ ತಿಂಗಳಲ್ಲಿ ದೊಡ್ಡ ಪ್ರಮಾಣದ ಉರುಸ್ ನಡೆಯುತ್ತದೆ. ಇನ್ನೊಂದು ದರ್ಗಾವು ಪೀರ್ ಗ್ರಾರ್‌ವೀ ಷರೀಫ್ ಪೀರ್ ಅವರದಾಗಿದ್ದು ರಜಬ್ ತಿಂಗಳಲ್ಲಿ ಉರುಸ್ ನಡೆದಾಗ ವಿಶೇಷವಾಗಿ ಕವ್ವಾಲಿಗಳನ್ನೂ ಏರ್ಪಡಿಸುತ್ತಾರೆ. ಊರಿನ ಮೇಲಿನ ಪೇಟೆಯಲ್ಲಿ ಇನ್ನೊಂದು ಚಿಕ್ಕ ಮಸೀದಿ ಇದೆ.

**ಬೈರಕೂರು** (ಮುಳಬಾಗಿಲು ತಾಲೂಕು:ಜನಸಂಖ್ಯೆ:೨೯೫೩): ಮುಳಬಾಗಿಲು–ಪುಂಗನೂರು ರಸ್ತೆಯಲ್ಲಿ (ಮುಳಬಾಗಿಲಿನಿಂದ ೧೫ ಕಿ.ಮೀ) ರುವ ಶಾಸನೋಕ್ತ 'ಬೈದಕೂರು' ಅಥವಾ 'ಬೈರಕೂರು' ವಿಜಯನಗರ ಪೂರ್ವಕಾಲದಲ್ಲಿ ನಿರ್ಮಿತವಾಗಿರಬಹುದಾಗಿ, ಕೋದಂಡರಾಮಸ್ವಾಮಿ ಮತ್ತು ಆಂಜನೇಯ ಜೋಡಿ ದೇವಾಲಯಗಳಿಗೆ ಜನಪ್ರಿಯವಾಗಿದೆ. ಈ ದೇವಾಲಯವು ಎತ್ತರವಾದ ಪ್ರವೇಶ ದ್ವಾರವಿರುವ ಕೋಟೆಯಂತಹ ಗೋಡೆಯಿಂದ ಸುತ್ತುವರೆಯಲ್ಪಟ್ಟಿದೆ. ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಮಂಟಪಗಳಿವೆ. ಇತ್ತೀಚೆಗೆ ಈ ದೇವಾಲಯದ ಪರಿಸರದಲ್ಲಿ ನಡೆದ ಶೋಧನಾ ಕಾರ್ಯದ ಫಲವಾಗಿ ವೀರಭದ್ರನ ವಿಗ್ರಹವು ಲಭ್ಯವಾಗಿದೆ ಎಂದು ತಿಳಿದುಬರುತ್ತದೆ. ದೇವಾಲಯದ ಪ್ರಾಕಾರವನ್ನು ಪ್ರವೇಶಿಸುತ್ತಿದ್ದಂತೆ ಎರಡು ದ್ರಾವಿಡ ಶೈಲಿಯ ಶಿಖರಗಳಿರುವ ಕೋದಂಡರಾಮ ಮತ್ತು ಆಂಜನೇಯ ದೇವಾಲಯಗಳು ಭಕ್ತರನ್ನು ಸ್ವಾಗತಿಸುತ್ತದೆ. ಇವು ವಿಜಯನಗರ ಶೈಲಿಯ ವಾಸ್ತು ರಚನೆಯನ್ನು ಹೊಂದಿದೆ. ಕೋದಂಡರಾಮ ದೇವಾಲಯವು ಗರ್ಭಗೃಹ ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿರುವ ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನಾದ ರಾಮಚಂದ್ರ ಸೀತಾದೇವಿ ಹಾಗೂ ಲಕ್ಷ್ಮಣರ ಶಿಲಾಮೂರ್ತಿಗಳು ಆಕರ್ಷಕವಾಗಿವೆ. ಅರ್ಧಮಂಟಪದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಜಯ–ವಿಜಯರ ಪ್ರತಿಮೆಗಳಿವೆ. ನವರಂಗದಲ್ಲಿರುವ ನಾಲ್ಕು ಚತುಷ್ಕೋನಾಕಾರದ ಸ್ತಂಭಗಳ ಮೇಲೆ ವೈಷ್ಣವ ಪುರಾಣವನ್ನು ಪ್ರತಿನಿಧಿಸುವ ಸುಂದರ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ಎಡಭಾಗದಲ್ಲಿ ಈ ದೇವಾಲಯಕ್ಕೆ ಹೊಂದಿಕೊಂಡಂತಿರುವ ಇನ್ನೊಂದು ಪ್ರತ್ಯೇಕ ಗರ್ಭಗೃಹದಲ್ಲಿ ಆಂಜನೇಯನ ಭವ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಖ್ಯ ದೇವಾಲಯದ ಎದುರಿಗೆ ಗರುಡ ಸ್ತಂಭವಿದೆ. ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು, ಗರ್ಭಗೃಹಕ್ಕೆ ಪ್ರದಕ್ಷಿಣಾಪಥವಿದೆ. ಎರಡೂ ಗರ್ಭಗೃಹಗಳ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಶಿಖರಗಳಿವೆ. ಆಂಜನೇಯ ದೇವಾಲಯದ ಪಶ್ಚಿಮ ಪ್ರಾಕಾರದಲ್ಲಿರುವ ಕ್ರಿ.ಶ. ೧೫೩೨ರ ಶಾಸನವು ವಿಜಯನಗರದ ಸದಾಶಿವರಾಯನ ಆಳ್ವಿಕೆಯಲ್ಲಿ ಭೈರಕೂರು ರಘುನಾಥ (ರಾಮಚಂದ್ರ) ಮತ್ತು ಹನುಮಂತನ ದೇವಾಲಯಗಳಿಗೆ ಯಾರಾತಿಮ್ಮನಾಯಕನ ಮಗ ಮುತೋಜಿ ಮತ್ತಿತರ ಅಧಿಕಾರಗಳು ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ದೇವಾಲಯದ ಬಾಗಿಲಿನ ಎಡಗೋಡೆಯ ಮೇಲಿರುವ ಇನ್ನೊಂದು ಅಸ್ಪಷ್ಟ ಶಾಸನವು ಪಾರ್ಥಿವ ಸಂವತ್ಸರದಲ್ಲಿ (ಮೇಲಿನ ಶಾಸನದ್ದೇ ಕಾಲ) ಮಹಾಮಂಡಳೇಶ್ವರ ಅಯ್ಯದೇವ ಮಹಾರಾಜನು ಬಯಿರಕೂರಿನ ದೇವಾಲಯದ ಕಟ್ಟಡವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಇದೇ ಗ್ರಾಮದ ದಕ್ಷಿಣ ಭಾಗದಲ್ಲಿರುವ ಸುಮಾರು ಕ್ರಿ.ಶ. ೯೩೪ರ ಲಕ್ಷಣವನ್ನು ವ್ಯಕ್ತಪಡಿಸುವ ವೀರಗಲ್ಲು ಶಾಸನವು ಬೈದಕೂರಿನ ಮಾರೆಮ್ಮನ ಮೊಮ್ಮಗ ಗಣಿಪರಾಮನು ಮದಿರೆಯ ಕೋಪರಗೇಶರಿವರ್ಮನಿಂದ ಸೆರೆಹಿಡಿಯಲ್ಪಟ್ಟಿದ್ದ ಗೋವುಗಳನ್ನು ರಕ್ಷಣೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾಗ ವೀರಮರಣ ಹೊಂದಿದ ವಿಚಾರವನ್ನು ನೀಡುತ್ತದೆ. ಮೇಲಿನ ಶಾಸನಗಳಿಂದ ಈ ಊರಿನ ಐತಿಹಾಸಿಕ ಪ್ರಾಮುಖ್ಯತೆಯು ಸ್ವಯಂ ವೇದ್ಯವಾಗುತ್ತದೆ.

**ಮಂಚೇನಹಳ್ಳಿ:** (ಗೌರಿಬಿದನೂರು ತಾಲೂಕು ಜನಸಂಖ್ಯೆ: ೧,೬೪೨) ಗೌರಿಬಿದನೂರಿನ ಆಗ್ನೇಯಕ್ಕೆ ೧೬ ಕಿ.ಮೀ. ದೂರದಲ್ಲಿ ಉತ್ತರ ಪಿನಾಕಿನಿ ನದಿಯ ಬಲದಂಡೆಯ ಮೇಲಿರುವ ಗ್ರಾಮ. ಹೋಬಳಿಯ ಆಡಳಿತ ಕೇಂದ್ರ. ಇಲ್ಲಿಯ ಶ್ರೀರಾಮ, ವೆಂಕಟೇಶ್ವರ, ಆಂಜನೇಯ, ಬಸವಣ್ಣ, ಕನ್ನಿಕಾಪರಮೇಶ್ವರಿ ಮತ್ತು ಬ್ರಹ್ಮದೇವರ ದೇವಾಲಯಗಳು ಪ್ರಮುಖವಾದುವು. ಶ್ರೀರಾಮ

ದೇವಾಲಯವೆಂದು ಕರೆಯುವ ಈ ದೇವಾಲಯದಲ್ಲಿ ಸುಮಾರು ಮೂರು ಅಡಿ ಎತ್ತರದ ಆಂಜನೇಯನ ವಿಗ್ರಹವಿದೆ. ಶ್ರೀರಾಮ ಮತ್ತು ವೆಂಕಟರಮಣನ ಉತ್ಸವ ಮೂರ್ತಿಗಳಿವೆ. ಮೂರು ದೇವರುಗಳು ಇರುವುದರಿಂದ ವೆಂಕಟರಮಣ ರಾಮಾಂಜನೇಯ ದೇವಾಲಯವೆಂದೂ ಹೇಳುವುದುಂಟು. ದೇವಾಲಯದ ಮುಂಭಾಗದಲ್ಲಿ ಸುಮಾರು ೩.೦೫ ಅಡಿ ಎತ್ತರದ ಬೃಂದಾವನವಿದೆ. ಮಂಚೇನಹಳ್ಳಿಯಲ್ಲಿ ಪ್ರಸನ್ನ ವೆಂಕಟೇಶ್ವರ ಸ್ವಾಮಿಯ ಗುಡಿಯು ಇದ್ದು ವಿಜಯನಗರೋತ್ತರ ಶೈಲಿಯಲ್ಲಿದೆ. ವೆಂಕಟೇಶ್ವರನ ಹೆಸರಿನಲ್ಲಿ ವೈಶಾಖ ಶುದ್ಧದಲ್ಲಿ ೧೫ ದಿನಗಳು ವಿಶೇಷ ಪೂಜೆ, ಐದನೆಯ ದಿನ ಬ್ರಹ್ಮರಥೋತ್ಸವ ನಡೆಯುತ್ತವೆ. ದೇವಾಲಯದಲ್ಲಿ ಕಪ್ಪು ಕಲ್ಲಿನ ಕನ್ನಿಕಾಪರಮೇಶ್ವರಿ ವಿಗ್ರಹವಿದೆ. ಊರಿನ ಪೂರ್ವಕ್ಕಿರುವ ಕೆರೆಯ ಕೋಡಿ ಹತ್ತಿರ ಜೈನರ ಕೋಡಿಬ್ರಹ್ಮ ದೇವರ ಜಿನಾಲಯವಿದೆ. ಸುಮಾರು ಆರು ಅಡಿ ಎತ್ತರದ ಕಲ್ಲುಗುಂಡಿನಲ್ಲಿ ಕುದುರೆಯ ಮೇಲೆ ಕುಳಿತಿರುವ ಬ್ರಹ್ಮದೇವರನ್ನು ಕೆತ್ತಲಾಗಿದೆ. ಬ್ರಹ್ಮದೇವರ ಗುಡಿಯ ಸಮೀಪದಲ್ಲೇ ಇತ್ತೀಚೆಗೆ ಬಾಹುಬಲಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಇದೇ ಊರಿನಲ್ಲಿರುವ ಕ್ರಿ.ಶ.೧೪೦೨ರ ನಾಗರಿ ಶಾಸನವು ವಿಜಯನಗರದ ಬುಕ್ಕರಾಯನ ಆಳ್ವಿಕೆಯಲ್ಲಿ ಈ ಪ್ರಾಂತ್ಯವನ್ನು ಆಡಳಿತ ಮಾಡುತ್ತಿದ್ದ ದೇವರಾಯ ಮಹಿಪತಿಯು ಈ ಊರಿನ ಬ್ರಾಹ್ಮಣನಾದ ಸುಬ್ಬಣ್ಣರಾಯನಿಗೆ ಪೆನುಕೊಂಡ ದೇಶದ ಪಿನಾಕಿನಿ ನದಿಯ ಪೂರ್ವಕ್ಕೆ ಬ್ರಹ್ಮಪಳ್ಳಿ ಗ್ರಾಮವನ್ನು ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ಪ್ರತಿ ಗುರುವಾರ ನಡೆಯುವ ವಿಶೇಷ ಪೂಜೆಗೆ ಜೈನ ಯಾತ್ರಾರ್ಥಿಗಳು ಗಣನೀಯ ಪ್ರಮಾಣದಲ್ಲಿ ಆಗಮಿಸುತ್ತಾರೆ. ಗ್ರಾಮದಲ್ಲಿ ಇತ್ತೀಚೆಗೆ ಪ್ರತಿಷ್ಠಾಪಿಸಲಾಗಿರುವ ರಾಘವೇಂದ್ರತೀರ್ಥರ ಬೃಂದಾವನವಿದೆ. ಹರಿದಾಸ ಸಾಹಿತ್ಯದಲ್ಲಿ ವಿಶೇಷ ಸಂಶೋಧನೆ ಮಾಡಿರುವ ಡಾ॥ ಅನಂತಪದ್ಮನಾಭರಾವ್ ಈ ಗ್ರಾಮಕ್ಕೆ ಸೇರಿದವರು. ವರವಣಿ, ಗೌಡಗೆರೆ ಮತ್ತು ಶ್ಯಾಮಪುರ ಗ್ರಾಮಗಳು ವಿಜಯನಗರೋತ್ತರ ಕಾಲದಲ್ಲಿ ಪ್ರಸಿದ್ಧವಾದ ಸಂಸ್ಕೃತ ಅಧ್ಯಯನ ಕೇಂದ್ರಗಳಾಗಿದ್ದವು. ಗೌಡಗೆರೆ ವೆಂಕಟರಮಣಚಾರ್ಯರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳಲ್ಲಿ ಅಪಾರ ಪಾಂಡಿತ್ಯವನ್ನು ಹೊಂದಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಆಸ್ಥಾನದ ವಿದ್ವಾಂಸರಾಗಿದ್ದರು.

**ಮಡಿವಾಳ:** (ಬಂಗಾರಪೇಟೆ ತಾಲೂಕು: ಜನಸಂಖ್ಯೆ:೫೩೨) ಕ್ಯಾಸಂಬಳ್ಳಿ ಮಡಿವಾಳ ಅಥವಾ ಶಾಸನೋಕ್ತ ಮುಳವಾಯಿ ಸಾಮ್ರಾಜ್ಯದ ಎಳವಂಜಿನಾಡಿನ ಕ್ಯಾಸಂಬಾಳದ 'ಮಡವಾಳ ಸ್ಥಾನ' ಜಿಲ್ಲೆಯ ಪ್ರಮುಖ ಐತಿಹಾಸಿಕ ಸ್ಥಳವಾಗಿದೆ. ಶಾಸನಗಳಲ್ಲಿ ಇದೇ ಜಿಲ್ಲೆಯಲ್ಲಿರುವ 'ಮಡಿವಾಳ'ವನ್ನು 'ಮಲೈಯಾರ್ ಮಡೈವಿಳಗಮ್ (ಮಾಲೂರು ಮಡಿವಾಳ), 'ತೆಂದಟ್ಟು ಮಡೈವಿಳಗವತ್' (ಕೆಂದಟ್ಟಿ ಮಡಿವಾಳ) 'ಕೇಶವನಾ ಪಳ್ಳಮ್ ಮಡೈವಿಳಗಮ್' (ಕ್ಯಾಸಂಬಳ್ಳಿ ಮಡಿವಾಳ) ಈ ಮೂರು ಮಡಿವಾಳಗಳಿಗೆ ಅನುಕ್ರಮವಾಗಿ ಇರುವ ಹೆಸರುಗಳು ಏಕಪ್ರಕಾರವಾಗಿದ್ದು ಕೊಟ್ಟಿರುವ ಉಲ್ಲೇಖವೇ ಬೇರೆಯದಾಗಿದ್ದು 'ಮಡೈವಿಳಗಮ್' ಹೇಗೆ ಮಡಿವಾಳವಾಯಿತು ಎಂಬುದು ಕುತೂಹಲಕಾರಿಯಾಗಿದೆ. 'ಮಡೈವಿಳಗಮ್' ಎಂದು ಈ ಸ್ಥಳವನ್ನು ತಮಿಳು ಶಾಸನಗಳಲ್ಲಿ ಸಂಬೋಧಿಸಿರುವುದರಿಂದ ತಮಿಳು ಭಾಷೆಯಲ್ಲಿ ಈ ಪದಕ್ಕೆ ದೇವಾಲಯ ಪರಿಸರ ಮತ್ತು ಸುತ್ತಲೂ ಇರುವ ಹಾದಿ ಅಥವಾ ರಸ್ತೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ, ಇದೇ ಸ್ಥಳದಲ್ಲಿರುವ ಕ್ರಿ.ಶ.೧೪೬೫ ಮತ್ತು ೧೪೭೨ರ ಶಾಸನಗಳಲ್ಲಿ 'ಮಡವಾಳ ಸ್ಥಾನ' ಮತ್ತು ಎಳವಂಜಿನಾಡಿನಲ್ಲಿರುವ 'ಮಡವಾಳ' ಎಂದೇ ಉಲ್ಲೇಖಿತಗೊಂಡಿರುವುದು ಈಗಿನ ಹೆಸರಿನ ಮೂಲವೆನ್ನಬಹುದಾಗಿದೆ. ಈ ಊರಿನಲ್ಲಿರುವ ಸ್ವಯಂಭೂವೇಶ್ವರ ದೇವಾಲಯವು ಜಿಲ್ಲೆಯಲ್ಲಿರುವ ಪ್ರಾಚೀನ ದೇವಾಲಯಗಳಲ್ಲೇ ಅತ್ಯಂತ ವ್ಯಾಪಕ ವಾಸ್ತುರಚನೆಯನ್ನು ಹೊಂದಿದೆ. ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಇದರ ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಸುಮಾರು ಎರಡು ಅಡಿ ಎತ್ತರವಿರುವ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು ಹೊರಭಾಗದ ಗೋಡೆಗಳಲ್ಲಿ ಚೋಳರ ಶೈಲಿಯ ಕಿರುಸ್ತಂಭಗಳಿದ್ದು ಮಧ್ಯದಲ್ಲಿ ದೇವಾಕೋಷ್ಠಗಳಿದ್ದು ಅವುಗಳಲ್ಲಿ ಯಾವುದೇ ವಿಗ್ರಹಗಳಿಲ್ಲ. ಗರ್ಭಗೃಹದಲ್ಲಿರುವ ಶಿವಲಿಂಗವನ್ನು ಶಿವಸ್ವಯಂಭೂನಾಥೇಶ್ವರ ಎಂದು ಇಲ್ಲಿರುವ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಗರ್ಭಗೃಹದ ಮೇಲೆ ಚತುಷ್ಕೋನಾಕಾರದ ದ್ರಾವಿಡ ಶೈಲಿಯ ಶಿಖರವಿದ್ದು ಮೇಲ್ಭಾಗದಲ್ಲಿ ಸ್ತೂಪಿಕಾ ಇದೆ. ಈ ದೇವಾಲಯವು ಸಂರಕ್ಷಣೆಯಿಲ್ಲದೇ ಶಿಥಿಲವಾಗಿದೆ. ಈ ದೇವಾಲಯದ ನಿರ್ಮಾಣವು ಯಾವ ಕಾಲದಲ್ಲಿ ನಡೆಯಿತೆಂಬುದಕ್ಕೆ ಸರಿಯಾದ ಮಾಹಿತಿ ಇಲ್ಲ. ಜಯಗೊಂಡಚೋಳ ಅಥವಾ ಇಳವಂಜಿ ವಾಸುದೇವರಾಯನ ಕಾಲದ ಹಲವು ಶಾಸನಗಳಲ್ಲಿ ದೇವಾಲಯದ ದೈನಂದಿನ ಪೂಜಾ ಕೈಂಕರ್ಯಗಳನ್ನು ನಿರಂತರವಾಗಿ ನಡೆದುಕೊಂಡು ಹೋಗಲೆಂದು ಹಲವಾರು ದಾನಗಳನ್ನು ನೀಡಿರುವ ಉಲ್ಲೇಖಗಳಿವೆ. ಕ್ಯಾಸಂಬಳ್ಳಿ ಮಡಿವಾಳದ ಸ್ವಯಂಭೂವೇಶ್ವರ ದೇವಾಲಯದ ಬಾಗಿಲಿನ ಉತ್ತರ ಭಾಗದ ತಳಪಾದಿಯ ಮೇಲಿರುವ

ಕ್ರಿ.ಶ.೧೪೬೫ರ ಶಾಸನವು ಮುಳವಾಯಿ ಸಾಮ್ರಾಜ್ಯದ ಎಳವಂಜಿನಾಡಿನ ಕೇಸಂಬಾಳದ ಮಡವಾಳ ಸ್ಥಾನದಲ್ಲಿರುವ ಸ್ವಯಂಭುನಾಥ ದೇವರಿಗೆ ಮುಳವಾಯಿ ಜನ್ನರಸನು 'ವಿಭೂತಿ ಗಣಿಕೆ ಹೊನ್ನು', ಅಂದರೇ, ಪವಿತ್ರ ವಿಭೂತಿ ತಯಾರಿಕೆಗೆ ಮತ್ತು ದೇವಾಲಯದ ದೀಪಾಲಂಕಾರಕ್ಕೆ, ಪೂಜಾದ್ರವ್ಯಗಳಿಗೆ ಹಾಗೂ ಇತರೆ ವಿಶೇಷ ಹಬ್ಬಗಳ ಆಚರಣೆಗಾಗಿ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ದೇವಾಲಯದ ಅದಿಷ್ಠಾನದ ಕಲ್ಲಿನ ಮೇಲಿರುವ ಕ್ರಿ.ಶ.೧೪೭೦ರ ಶಾಸನವು ಮಹಾರಾಜಾಧಿರಾಜ ವಿರೂಪಾಕ್ಷರಾಯನ ಆಳ್ವಿಕೆಯ ಅವಧಿಯಲ್ಲಿ ಈ ಸ್ಥಳವನ್ನು ಆಳುತ್ತಿದ್ದ ಸಾಳುವ ನರಸಿಂಗರಾಯನು ಈಶ್ವರಿ ನಾಯಕನಿಗೆ ಮಡಿವಾಳದ ಸ್ವಯಂ ಭೂ ದೇವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ದೇವಾಲಯದ ಪ್ರವೇಶದ್ವಾರದ ಎಡಭಾಗದಲ್ಲಿರುವ ಕ್ರಿ.ಶ.೧೨೯೩ರ ಶಾಸನವು ಹೊಯ್ಸಳ ಮೊದಲನೇ ರಾಮನಾಥ ದೇವನ ಮಗ ಮಂಜೆಯ ಮಾಗತ್ತೂರು ಎಂಬ ಅಧಿಕಾರಿಯು ಸ್ವಯಂಭೂನಾಥ ದೇವರಿಗೆ ಹಲವಾರು ದಾನಗಳನ್ನು ಮತ್ತು ದೇವಾಲಯದ ಭೂಮಿಗಳಿಗೆ ಅವಶ್ಯಕವಾದ ನೆಲಬಾವಿಗಳನ್ನು ಹಾಗೂ ಅನೇಕ ದೊಡ್ಡ ದೊಡ್ಡ (ಮರಗಳನ್ನು) ಸಸ್ಯರಾಶಿಗಳನ್ನು ತಮಿಳರ ಪವಿತ್ರ ಮಾಸವಾದ ಪುರತ್ತಾಡಿಯಂದು ಸಂಭವಿಸಿದ ಶತಭಿಷ ನಕ್ಷತ್ರದಲ್ಲಿ ಮಾಡಿದ ದಾನಗಳನ್ನು ನೀಡಿದ ಮಹತ್ವದ ವಿವರಗಳನ್ನು ದಾಖಲಿಸುತ್ತದೆ. ಈ ದಾನವನ್ನು ಇಳವಂಜಿನಾಡಿನ ನಿಗಿರಲಿ ಚೋಳಮಂಡಲ ಪ್ರದೇಶದ ಆಡಳಿತವನ್ನು ನಿರ್ವಹಿಸುತ್ತಿದ್ದ ಅಧಿಕಾರಿಯೊಬ್ಬನು ಪಡೆದನೆಂದೂ ಈ ಶಾಸನವು ಉಲ್ಲೇಖಿಸುತ್ತದೆ. ಇದೇ ದೇವಾಲಯದ ಪಶ್ಚಿಮದ ಗೋಡೆಯಲ್ಲಿರುವ ಕ್ರಿ.ಶ.೧೩೩೯ರ ಶಾಸನದಲ್ಲಿ ದತಿಶಿಂಗೆಯ ದಣ್ಣಾಯಕನ ಕಿರಿಯ ತಮ್ಮನಾದ ವಲ್ಲಪ್ಪ ದಣ್ಣಾಯಕನು ಕೆಲವು ಅಧಿಕಾರಿಗಳನ್ನು ತೆರಿಗೆ ವಸೂಲಿಗೆ ನೇಮಿಸಿದ ಬಗ್ಗೆ ಹಾಗೂ ಆತನು ಗ್ರಾಮಗಳಲ್ಲಿ ಜಾರಿಗೆ ತಂದ ಕೆಲವು ವಿಶೇಷ ತೆರಿಗೆಗಳಾದ ನೇಯ್ಗೆ ಮಗ್ಗಗಳ ತೆರಿಗೆ, ವಿಶ್ವಕರ್ಮರ ಕಾರ್ಯದ ಮೇಲಿನ ತೆರಿಗೆ, ಕುದುರೆಗಳನ್ನು ಪಾಲಿಸುವ ತೆರಿಗೆ ಮೊದಲಾದ ಕುತೂಹಲಕಾರಿ ವಿಚಾರಗಳನ್ನು ಉಲ್ಲೇಖಿಸುತ್ತದೆ. ಇದೇ ದೇವಾಲಯದ ಉತ್ತರದ ಗೋಡೆಯಲ್ಲಿರುವ ಕ್ರಿ.ಶ.೧೨೯೪ರ ಶಾಸನವು ಹೊಯ್ಸಳ ಮೊದಲನೇ ರಾಮನಾಥದೇವನು ಅಧಿಕಾರಕ್ಕೆ ಬಂದ ೩೮ನೇ ವರ್ಷದಲ್ಲಿ ಕಂಚಿಯ ರಾಜನಾಗಿದ್ದ ವಿರುಡ ಮುರಾರಿಯು ಸ್ವಯಂಭೂನಾಥ ದೇವರ ಪೂಜಾ ಕೈಂಕರ್ಯಗಳನ್ನು ನಿರ್ವಹಿಸುತ್ತಿದ್ದ ವ್ಯವಸ್ಥಾಪಕ ಶೈವ ಬ್ರಾಹ್ಮಣರಿಗೆ ೨೫ ಪಣಗಳನ್ನು ದಾನದ ರೂಪದಲ್ಲಿ ನೀಡಿದ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದ ಸೋಮಸೂತ್ರದ ಮೇಲಿರುವ ಕ್ರಿ.ಶ.೧೨೮೯ರ ಶಾಸನವು ಇಳೈವಂಜಿಯ ಕೂತ್ತಾಡುದೇವನ ಮಗನಾದ ಇಳವಂಜಿ ವಾಸುದೇವರಾಯನು ಸ್ವಯಂಭೂನಾಥ ದೇವರ ಸನ್ನಿಧಾನದಲ್ಲಿ ತಯಾರಾಗುತ್ತಿದ್ದ ಪಂಚಾಂಗದವರಿಗೆ ಕೆಲವು ಭೂಮಿ ಮತ್ತು ವಸತಿಗಳನ್ನು ದತ್ತಿ ಸಂಸ್ಥೆಗಳನ್ನಾಗಿ ಪರಿಗಣಿಸಿ ಅವುಗಳ ಮೇಲಿನ ಕಂದಾಯವನ್ನು ಮನ್ನಾ ಮಾಡಿದ ವಿಚಾರವನ್ನು ದಾಖಲಿಸುತ್ತದೆ. ಈ ದೇವಾಲಯಕ್ಕೆ ನೀಡಿದ ದಾನಗಳ ವಿವರಗಳನ್ನು ಹೊಂದಿರುವ ಇನ್ನೂ ಹಲವಾರು ಶಾಸನಗಳಿವೆ. ಸ್ವಯಂಭೂ ದೇವಾಲಯದ ಎಡಭಾಗದಲ್ಲಿ ಪಾರ್ವತಿಯ ಪ್ರತ್ಯೇಕ ದೇವಾಲಯವಿದೆ. ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದ್ದು ಗರ್ಭಗೃಹದ ಮೇಲೆ ಚತುಷ್ಕೋನಾಕಾರದ ದ್ರಾವಿಡ ಶೈಲಿಯ ಕಿರು ಶಿಖರವಿದೆ. ಈ ದೇವಾಲಯದ ಭಿತ್ತಿಯಲ್ಲಿರುವ ಕ್ರಿ.ಶ.೧೨೨೮ರ ಶಾಸನವು ಇಳವಂಜಿ ಕೂತ್ತಾಂಡದೇವನ ಆಳ್ವಿಕೆಯಲ್ಲಿ ಸ್ವಯಂಭೂನಾಥ ದೇವರ ದೈನಂದಿನ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳಲು ಹಲವು ದಾನಗಳನ್ನು ನೀಡಿದ ವಿಚಾರವನ್ನು ದಾಖಲಿಸುತ್ತದೆ. ಅಮ್ಮನವರ ದೇವಾಲಯದಲ್ಲಿರುವ ಎರಡನೇ ಸ್ತಂಭದ ಮೇಲಿರುವ ಕ್ರಿ.ಶ.೧೨೮೦ರ ಶಾಸನವು ಜಯಗೊಂಡ ಚೋಳ ಇಳೈವಂಜಿ ರಾಯನು ಈ ದೇವಾಲಯದ ನೃತ್ಯಮಂಟಪ, ನಾಡೈಮಾಲಿಗೈ (ದೇವಾಲಯದ ಮುಖ್ಯ ಕಟ್ಟಡಕ್ಕೂ ನಾಟ್ಯಮಂಟಪಕ್ಕೂ ನಡುವೆ ಇರುವ ಕಿರು ಕೊಠಡಿ (vestibule) ಮತ್ತು ಶಿಖರದ ಸುತ್ತಲೂ ಇರುವ ಸಂರಕ್ಷಣಾ ಗೋಡೆಗಳನ್ನು ಕಟ್ಟಿಸಿದ ಬಗ್ಗೆ ಹಾಗೂ ದೇವಾಲಯಕ್ಕೆ ಅವಶ್ಯಕವಾಗಿದ್ದ ಹಲವು ದೇವರ ಉತ್ಸವ ಮೂರ್ತಿಗಳನ್ನು ಮಾಡಿಸಿಕೊಟ್ಟ ವಿಷಯವನ್ನು ದಾಖಲಿಸುತ್ತದೆ. ಇಷ್ಟೇ ಅಲ್ಲದೇ ಈ ಶಾಸನದಲ್ಲಿ ದೇವಾಲಯದ ವಿವಿಧ ಮನರಂಜನಾ ಸೇವೆಗಳನ್ನು ಮುಂದುವರೆಸುವ ಬಗ್ಗೆ ನೀಡಿದ ಭೂದಾನಗಳನ್ನು ವಿವರಿಸುತ್ತದೆ ಮತ್ತು ಇದನ್ನು ನಾಲ್ಕು ಶೈವ ಬ್ರಾಹ್ಮಣರಿಗೆ (ಶೈವಾಚಾರ್ಯನ್‌ಗೆ), ೨೪ ಜನ ನರ್ತಕಿಯರಿಗೆ, ಒಬ್ಬ ಗಾಯಕನಿಗೆ, ಒಬ್ಬ ರಂಗ ವ್ಯವಸ್ಥಾಪಕನಿಗೆ, ೧೨ ವಿವಿಧ ದೇವಾಲಯದ ಬ್ರಾಹ್ಮಣ ಕುಟುಂಬಗಳಿಗೆ (ದೇವಾಲಯದಲ್ಲಿ ನಿರಂತರ ಸ್ತೋತ್ರಪಾರಾಯಣಕ್ಕೆ), ಒಬ್ಬ ದೇವಾಲಯದ ತೋಟದ ಕೆಲಸಗಾರನಿಗೆ ಮೊದಲಾದವರಿಗೆ ನೀಡಿದ ವೈವಿಧ್ಯಮಯವಾದ ದಾನಗಳನ್ನು ದಾಖಲಿಸಲಾಗಿದೆ. ಈ ದೇವಾಲಯ ಸಮೀಪದಲ್ಲೇ ಸಪ್ತಮಾತೃಕೆಯರ ಬಿಡಿಶಿಲ್ಪಗಳೂ ಇವೆ. ದೇವಾಲಯದ ಮುಂದೆ ಹಲವು ಸ್ಮಾರಕಶಿಲೆಗಳಿವೆ.

**ಮಾರ್ಗಾನುಕುಂಟೆ** : (ಬಾಗೇಪಲ್ಲಿ ತಾಲೂಕು: ಜನಸಂಖ್ಯೆ:೨,೨೬೪) ಬಾಗೇಪಲ್ಲಿಯಿಂದ ೧೬ ಕಿ.ಮೀ. ದೂರದಲ್ಲಿರುವ ಮಾರ್ಗಾನುಕುಂಟೆ ಅಥವಾ ಶಾಸನೋಕ್ತ 'ಮೊರಗಾನಿಕುಂಟೆ' ಗೂಳೂರು ಹೋಬಳಿಗೆ ಸೇರಿದೆ. ಬಾಗೇಪಲ್ಲಿಯಿಂದ ಹಾಗೂ ಬೆಂಗಳೂರಿನಿಂದ ಸುಲಭವಾಗಿ ಬಂದು ಹೋಗಲು ವಾಹನ ಸೌಕರ್ಯಗಳಿವೆ. ಮಾರ್ಗಾನುಕುಂಟೆಯು ಪ್ರಸಿದ್ಧ ವೈಷ್ಣವ ಕೇಂದ್ರವಾಗಿದ್ದು, ವೆಂಕಟೇಶ ಅಥವಾ ವಿಷ್ಣು ಮತ್ತು ಲಕ್ಷ್ಮೀನಾರಾಯಣಸ್ವಾಮಿ ದೇವಾಲಯಗಳಿಗೆ ಪ್ರಸಿದ್ಧಿಯಾಗಿದೆ. ಈ ಊರಿನಲ್ಲಿರುವ ಲಕ್ಷ್ಮೀನಾರಾಯಣ ಅಥವಾ ಜನಾರ್ಧನ ದೇವಾಲಯವು ಶಿಥಿಲವಾಗಿದ್ದು, ವಿಜಯನಗರ ಕಾಲದ ರಚನೆಯಾಗಿದೆ. ಗರ್ಭಗೃಹದಲ್ಲಿ ಶಂಖ, ಚಕ್ರ, ವರದ ಹಾಗೂ ಗದೆಗಳನ್ನು ನಾಲ್ಕು ಕೈಗಳಲ್ಲಿ ಹೊಂದಿದ್ದು, ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಸುಂದರ ಕಿರು ಶಿಲ್ಪಗಳನ್ನು ಹಾಗೂ ಹೂ ಬಳ್ಳಿಗಳನ್ನು ಕೆತ್ತಲಾಗಿದೆ. ಈ ಊರನ್ನು ಪ್ರವೇಶಿಸುವುದಕ್ಕೆ ಮುಂಚೆ ಸುಮಾರು ಅರ್ಧ ಕಿ. ಮೀ. ದೂರದಲ್ಲಿ ಎತ್ತರವಾದ ಶಿಖರವುಳ್ಳ ವೆಂಕಟೇಶ–ವಿಷ್ಣುವಿನ (ಶಾಸನೋಕ್ತ ತಿರುವೆಂಗಳನಾಥ) ದೇವಾಲಯವು ಕಂಡುಬರುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳಿವೆ. ಗರ್ಭಗೃಹವು ಚೌರಸವಾಗಿದ್ದು, ಒಳಗೆ ಸುಮಾರು ಐದು ಅಡಿ ಎತ್ತರವಿರುವ ಹಾಗೂ ಸಿಂಹದ ಪ್ರಭಾವಳಿಯಿರುವ ಶಾಸನೋಕ್ತ ತಿರುವೆಂಗಳನಾಥ ಅಥವಾ ವೆಂಕಟೇಶನ ವಿಗ್ರಹವು ವಿಜಯನಗರದ ಕಾಲದಲ್ಲಿ ಪ್ರತಿಷ್ಠಾಪಿಸಲಾಗಿದೆ ಎಂದು ಶಾಸನದಿಂದ ವ್ಯಕ್ತವಾಗುತ್ತದೆ. ಗರ್ಭಗೃಹದ ಮೇಲಿರುವ ಶಿಥಿಲವಾದ ಶಿಖರವು ೧೬–೧೭ನೇ ಶತಮಾನದಲ್ಲಿ ಜೀರ್ಣೋದ್ಧಾರಗೊಂಡಿದೆ ಎಂದು ಪ್ರತೀತಿಯಿದೆ. ಮುಖಮಂಟಪದಲ್ಲಿ ದೇವಕೋಷ್ಠಗಳು ಕಂಡುಬಂದರೂ ಯಾವುದೇ ಬಿಡಿ ಶಿಲ್ಪಗಳಿಲ್ಲ. ಈ ದೇವಾಲಯವನ್ನು ಕುರಿತು ಎರಡು ಶಾಸನಗಳು ಲಭ್ಯವಾಗಿವೆ. ಮೊದಲನೆಯ ಶಾಸನವು ಕ್ರಿ.ಶ. ೧೫೩೯ರಲ್ಲಿ ಮಾರಗಾನಿಕುಂಟ ತಿರುವೆಂಗಳನಾಥ ದೇವರಿಗೆ ಪೆನುಗೊಂಡೆಯ ಆಡಳಿತವನ್ನು ನಿರ್ವಹಿಸುತ್ತಿದ್ದ ವೀರಪ್ರತಾಪ ಅಚ್ಯುತದೇವರಾಯನು ತನ್ನ ಅಧಿಕಾರಿಗಳಾದ ಭಂಡಾರದ ಅಪ್ಪರಸಯ್ಯ ಅವನ ಮಗ ತಿಮ್ಮರಸಯ್ಯ, ಕೊಂಡಪ್ಪಯ್ಯ ಮೊದಲಾದವರ ಮೂಲಕ ನೀಡಿದ ಹಲವು ದತ್ತಿಗಳನ್ನು ದಾಖಲಿಸುತ್ತದೆ. ಈ ದೇವಾಲಯದ ಪಶ್ಚಿಮಕ್ಕೆ ಖಾಸಗಿ ಜಮೀನಿನಲ್ಲಿರುವ ಕ್ರಿ. ಶ. ೧೫೯೨ರ ಶಾಸನವು ವೀರಪ್ರತಾಪ ವೆಂಕಟದೇವ ಮಹಾರಾಯನು ಪೆನುಗೊಂಡದ ತಿರುಮಲ ತಾತಾಚಾರ್ಯರಿಗೆ ಮಾರ್ಗಾನುಕುಂಟೆಯ ಗ್ರಾಮವನ್ನು ಸರ್ವಮಾನ್ಯ ಅಗ್ರಹಾರವನ್ನಾಗಿ ದಾನ ನೀಡಿದ್ದನ್ನು ದಾಖಲಿಸುತ್ತದೆ. ಚೌರಸವಾದ ಗರ್ಭಗೃಹದಲ್ಲಿರುವ ಸುಮಾರು ಐದು ಅಡಿ ಎತ್ತರವಿರುವ ವೆಂಕಟೇಶನ ವಿಗ್ರಹವು ಶಂಖ, ಚಕ್ರ ವರದ ಮತ್ತು ಕಟಿಹಸ್ತಗಳಿಂದ ಕೂಡಿ ಅತ್ಯಂತ ಆಕರ್ಷಕವಾಗಿದೆ. ವೆಂಕಟೇಶನ ವಕ್ಷಸ್ಥಳದಲ್ಲಿ ಶ್ರೀದೇವಿ–ಭೂದೇವಿಯರ ಸುಂದರ ಕಿರುಶಿಲ್ಪಗಳು ಕಂಡುಬರುತ್ತವೆ. ಈ ಗ್ರಾಮದ ಸಮೀಪದಲ್ಲಿರುವ ನಲ್ಲಬಾಲಮ್ಮನ ಕುಂಟೆಯಲ್ಲಿ ದೊರೆತಿರುವ ಇನ್ನೊಂದು ಶಾಸನದಲ್ಲಿ ತಿರುವೆಂಕಳಸ್ವಾಮಿಯ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವಗಳಿಗಾಗಿ ಗ್ರಾಮವೊಂದನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಲಾಗಿದೆ. ಪಾಂಚರಾತ್ರ ಆಗಮ ಪ್ರವೀಣರೂ, ಪರಾಶರಗೋತ್ರದವರೂ ಆದ ತಿರುವೆಂಗಳಾಚಾರ್ಯರ ಮೊಮ್ಮಗ ರಾಮಾಚಾರ್ಯರ ಮಗ ಕೃಷ್ಣಚಾರ್ಯರಿಗೆ ಕೊಟ್ಟಿರುವ ದಾನಗಳ ಉಲ್ಲೇಖವು ಇದರಲ್ಲಿದೆ.

**ಮಹಾ ಕೈಲಾಸಗಿರಿ** : (ಚಿಂತಾಮಣಿ ತಾಲೂಕು) ಚಿಂತಾಮಣಿಯಿಂದ ಆರು ಕಿ.ಮಿ ದೂರದಲ್ಲಿ ಅಂಬಾಜಿದುರ್ಗದ ಕೈಲಾಸಗಿರಿಯು ಆಧುನಿಕ ತಂತ್ರಜ್ಞಾನವನ್ನು ಬಳಸಿ ಇತ್ತೀಚೆಗೆ ಕೊರೆಯಲಾಗಿರುವ ಗುಹಾಂತರ ದೇವಾಲಯಗಳಿಗೆ ಪ್ರಸಿದ್ಧವಾಗಿದೆ. ಕೈಲಾಸಗಿರಿಯನ್ನು ಚಿಂತಾಮಣಿ–ಬೆಂಗಳೂರು ರಸ್ತೆಯಿಂದ ಬಲಭಾಗದ ಕೂಡು ಡಾಂಬರು ರಸ್ತೆಯ ಮೂಲಕ ತಲುಪಬಹುದಾಗಿದೆ. ಇಲ್ಲಿರುವ ಎತ್ತರವಾದ ಕೋಡುಗಲ್ಲುಗಳ ರೀತಿಯಲ್ಲಿ ನಿಂತಿರುವ ಮೂರು ನೈಸರ್ಗಿಕವಾಗಿ ಸೃಷ್ಟಿಯಾಗಿರುವ ಬೆಟ್ಟಗಳ ಸಾಲುಗಳನ್ನು ಅನತಿ ದೂರದಿಂದ ಧಾರ್ಮಿಕ ಮನೋಭಾವದ ವ್ಯಕ್ತಿಗಳಿಗೆ ಬೆಟ್ಟದ ಆಕಾರವು ಗಣೇಶ, ಗಂಗಾಧರ ಹಾಗೂ ಮಹೇಶ್ವರನ ವಿವಿಧ ರೂಪಗಳಾಗಿ ಗೋಚರವಾಗುತ್ತವೆ. ಈ ಬೆಟ್ಟಗಳ ಮಧ್ಯದಲ್ಲಿರುವ ತಟಾಕವನ್ನು ದುರಸ್ತಿಗೊಳಿಸಿ ಚಿಂತಾಮಣಿ ನಗರಕ್ಕೆ ಕುಡಿಯುವ ನೀರು ಒದಗಿಸುವ ಯೋಜನೆಯನ್ನು ಕಾರ್ಯಗತಗೊಳಿಸಲು ಭೇಟಿ ನೀಡಿದ್ದ ಚಿಂತಾಮಣಿಯ ಮಾಜಿ ಸಚಿವ ಚೌಡರೆಡ್ಡಿ ಅವರಿಗೆ ಒಂದು ಬೆಟ್ಟದಲ್ಲಿ ಗಂಗಾಧರನ ಸ್ವರೂಪವು ಗೋಚರಿಸಿ ಆತನ ಶಿರಭಾಗದಿಂದ ಗಂಗೆ ಹರಿದು ಬರುತ್ತಿರುವಂತೆ ಭಾಸವಾಯಿತು. ಬಹುಶಃ ಈ ದೈವಿಕ ಪ್ರೇರಣೆಯೇ ಅವರಿಗೆ ಈ ಬೆಟ್ಟದಲ್ಲಿ ನಾಲ್ಕು ಗುಹೆಗಳನ್ನು ಕೊರೆಯಿಸಿ ಗುಹಾಂತರ ದೇವಾಲಯಗಳನ್ನು ನಿರ್ಮಿಸಬೇಕೆಂದು ಸಂಕಲ್ಪ ಮಾಡಲು ಉತ್ತೇಜನ ನೀಡಿತೆಂದು ಸ್ಥಳೀಯರು ಹೇಳುತ್ತಾರೆ. ಈ ನೂತನ ದೇವಾಲಯಗಳ ನಿರ್ಮಾಣ ಕಾರ್ಯವು ಖಾಸಗಿ ಸಂಸ್ಥೆಯೊಂದರ ವತಿಯಿಂದ ಕಾರ್ಯರೂಪಕ್ಕೆ ಬಂದಿದೆ. ಇದರ ಪ್ರಮುಖ ರೂವಾರಿಯಾದ ರಾಜ್ಯದ ಮಾಜಿ ಸಚಿವರಾಗಿದ್ದ ಚೌಡರೆಡ್ಡಿ ಅವರನ್ನು ಆಧುನಿಕ ಮಂಗಲೇಶನೆಂದು ಅವರ

ಅಭಿಮಾನಿಗಳು ಕರೆದಿರುತ್ತಾರೆ. ಎತ್ತರವಾದ ಬೆಟ್ಟದ ಮಧ್ಯಭಾಗದಲ್ಲಿ ನಾಲ್ಕು ವಿಶಾಲ ಗುಹೆಗಳನ್ನು ಆಧುನಿಕ ತಂತ್ರಜ್ಞಾನದ ಸಹಾಯದಿಂದ ಕೊರೆಯಲಾಗಿದೆ. ಈ ಗುಹೆಗಳನ್ನು ಕಠಿಣವಾದ ಕಗ್ಗಲ್ಲಿನ ಮೆಟ್ಟಿಲುಗಳು ಹಾಗೂ ಇಳಿಜಾರು ರಸ್ತೆಯ ಮೂಲಕ ಸುಮಾರು ಎರಡು ಕಿ.ಮೀ. ಕ್ರಮಿಸಿ ತಲುಪಬಹುದು. ಮೇಲ್ಭಾಗದಲ್ಲಿರುವ ಮೊದಲ ಗುಹೆಯಲ್ಲಿ ಸುಮಾರು ೧೦೦ x ೧೦೦ ಅಡಿ ಅಳತೆಯ ಕಲ್ಯಾಣ ಮಂಟಪವು ಇದ್ದು, ಸುಮಾರು ೧೫ ರಿಂದ ೧೮ ಅಡಿ ಎತ್ತರವಾದ ಬಂಡೆಯ ಛಾವಣಿಯನ್ನು ಹೊಂದಿದೆ. ಇದರ ಪಕ್ಕದಲ್ಲಿ ಪ್ರತ್ಯೇಕವಾದ ಭೋಜನ ಶಾಲೆಯನ್ನೂ ನಿರ್ಮಿಸಲಾಗುತ್ತಿದೆ. ಇಲ್ಲಿಂದ ಸ್ವಲ್ಪ ಮೇಲ್ಭಾಗಕ್ಕೆ ಏರಿಹೋದರೆ, ದೇವಾಲಯಗಳ ಮುಂಭಾಗದಲ್ಲಿ ಹೆಚ್ಚು ಸ್ಥಳಾವಕಾಶವಿಲ್ಲದ ನಿವೇಶನವು ಸಿಗುತ್ತದೆ. ಎಡಭಾಗದಲ್ಲಿ ಸಾಲಾಗಿ ನಾಲ್ಕು ಗುಹಾದ್ವಾರಗಳಿವೆ. ಎರಡನೇ ಗುಹೆಯಲ್ಲಿ ಗರ್ಭಗೃಹ ಹಾಗೂ ನವರಂಗಗಳಿವೆ. ಗರ್ಭಗೃಹದಲ್ಲಿ ವಲ್ಲಭ ಗಣಪತಿಯ ಆಸೀನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಸುತ್ತಲೂ ಸಾಂಧಾರ ಪ್ರದಕ್ಷಿಣಾಪಥವಿದೆ. ಗುಹೆಯು ಸುಮಾರು ೧೫ ಅಡಿ ಎತ್ತರವಿದೆ ಹಾಗೂ ವಿಶಾಲವಿದೆ. ಇದರ ಪಕ್ಕದಲ್ಲಿರುವ ಮೂರನೇ ಗುಹೆಯಲ್ಲಿಯೂ ನವರಂಗ ಹಾಗೂ ಗರ್ಭಗೃಹಗಳಿವೆ. ಗರ್ಭಗೃಹದಲ್ಲಿ ಎತ್ತರವಾದ (೬ x ೫ ಅಡಿ) ಚೌರಸ ಪಾಣಿಪೀಠದ ಮೇಲೆ ಎತ್ತರವಾದ ಚತುರ್ಮುಖ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಗಂಗಾಧರೇಶ್ವರ ಲಿಂಗವೆಂದು ಪೂಜಿಸಲಾಗುತ್ತದೆ. ಗರ್ಭಗೃಹದ ಸುತ್ತಲೂ ಸಾಂಧಾರ ಪ್ರದಕ್ಷಿಣಾ ಪಥವಿದೆ ಹಾಗೂ ಎದುರಿಗೆ ಆಸೀನ ನಂದಿಯ ಶಿಲ್ಪವಿದೆ. ಇದರ ಪಕ್ಕದಲ್ಲಿರುವ ನಾಲ್ಕನೇ ಗುಹೆಯಲ್ಲಿ (ಇನ್ನೂ ಅಪೂರ್ಣವಾಗಿದೆ) ನವರಂಗ ಹಾಗೂ ಗರ್ಭಗೃಹಗಳನ್ನು ಯೋಜಿಸಲಾಗಿದ್ದು, ಸುಬ್ರಹ್ಮಣ್ಯ ಮತ್ತು ಮುಂಭಾಗದಲ್ಲಿ ನವಗ್ರಹಗಳನ್ನು ಪ್ರತಿಷ್ಠಾಪಿಸಲಾಗುವುದೆಂದು ದೇವಾಲಯದ ಸಮಿತಿಯು ತಿಳಿಸುತ್ತದೆ. ಗುಹೆಗಳ ಮುಂಭಾಗದಲ್ಲಿ ಎತ್ತರವಾದ ನಂದಿ ಸ್ತಂಭವಿದೆ. ಈ ಪರಿಸರದಲ್ಲಿ ನಿಂತು ಎದುರಿಗೆ ಕಾಣುವ ಇತರೆ ಬೆಟ್ಟಗಳನ್ನು ಹಾಗೂ ಆಕರ್ಷಣೀಯ ನಿಸರ್ಗ ಸೌಂದರ್ಯವನ್ನು ವೀಕ್ಷಿಸುವುದು ಆಹ್ಲಾದಕರವಾಗಿರುತ್ತದೆ. ದೇವಾಲಯಗಳಲ್ಲಿ ಗವಾಕ್ಷ ಅಥವಾ ಜಾಲಂಧ್ರಗಳು ಕಂಡು ಬರದಿದ್ದರೂ ಎತ್ತರವಾದ ಪ್ರದೇಶದಲ್ಲಿರುವುದರಿಂದ ಸಮೃದ್ಧಿಯಾದ ಗಾಳಿ ಮತ್ತು ಬೆಳಕು ಇರುವುದು ಸಹಜವಾಗಿಯೇ ಅನುಭವಕ್ಕೆ ಬರುತ್ತದೆ. ಬೆಟ್ಟದ ಕೆಳಭಾಗದ ವಿಶಾಲವಾದ ನಿವೇಶನದಲ್ಲಿ ಅನ್ನಪೂರ್ಣೇಶ್ವರಿ ನಿಲಯ ಹಾಗೂ ವಸತಿಗೃಹಗಳನ್ನು ನಿರ್ಮಿಸಲಾಗಿದೆ. ದೇವಾಲಯದ ನಿರ್ಮಾಣ ಸಮಿತಿಯು ಈ ಧರ್ಮಕಾರ್ಯಗಳನ್ನು ನಿರ್ವಹಿಸುತ್ತಿದೆ. ಚಿಂತಾಮಣಿಗೆ ಸಮೀಪವಿರುವುದರಿಂದ ಹಾಗೂ ಬೆಂಗಳೂರಿಗೂ ಹೆಚ್ಚು ದೂರವಿಲ್ಲದ ಕಾರಣ ಕೈಲಾಸಗಿರಿ ಗುಹಾಂತರ ದೇವಾಲಯಗಳನ್ನು ವೀಕ್ಷಿಸಲು ಯಾತ್ರಿಕರು ಸುಲಭವಾಗಿ ಬಂದು ಹೋಗಬಹುದಾಗಿದೆ. ಈ ಸ್ಥಳವೊಂದು ಧಾರ್ಮಿಕ ಮನೋಭಾವದ ಹಾಗೂ ಸಾಹಸಪ್ರವೃತ್ತಿಯ ಯಾತ್ರಿಕರಿಗೆ ಅವಶ್ಯತಾಣವಾಗಿದೆ. ದೇವಾಲಯ ಸಮಿತಿಯವರು ಸುಮಾರು ೨೭೯ ಅಡಿ ಎತ್ತರದ ಕೋಡುಗಲ್ಲ ರೀತಿಯ ಬಂಡೆಯಲ್ಲಿ ಎತ್ತರವಾದ ಹಾಗೂ ಬೃಹದಾಕಾರವಾದ ಗಂಗಾಧರೇಶ್ವರ (೫೦ ಅಡಿಗಳು) ಶಿಲಾಮೂರ್ತಿಯನ್ನು ಕೆತ್ತಿಸಬೇಕೆಂದು ಯೋಜಿಸಿದೆ. ಈ ಹುಟ್ಟು ಬಂಡೆಯ ಶಿಲಾಮೂರ್ತಿಯ ಶಿರೋಭಾಗದಿಂದ ಸದಾ ಗಂಗೆಯು ಹಂತಗಳಲ್ಲಿ ಧುಮುಕುವಂತೆ ಮಾಡುವ ಯೋಜನೆಯಿದೆ.

**ಮಾರ್ಕಂಡೇಯ ಅಣೆಕಟ್ಟು:** (ಬಂಗಾರಪೇಟೆ ತಾಲೂಕು) ಬೂದಿಕೋಟೆಯ ಸಮೀಪವಿರುವ (ಮೂರು ಕಿ.ಮೀ.) ಪ್ರಶಾಂತ ಪ್ರವಾಸಿ ತಾಣವಾಗಿದೆ. ಕೋಲಾರ ತಾಲೂಕಿಗೆ ಸೇರಿದ ವಕ್ಕಲೇರಿ ಬೆಟ್ಟದಲ್ಲಿ ಉದ್ಭವಗೊಂಡು ಪೂರ್ವಾಭಿಮುಖವಾಗಿ ಹರಿಯುವ ಮಾರ್ಕಂಡೇಯ ನದಿಯು ಕವಲುಗಳಾಗಿ ಹರಿದು ಬೂದಿಕೋಟೆಯನ್ನು ಸುತ್ತುವರೆದಿದೆ. ಈ ಎರಡು ಕವಲುಗಳ ಸಂಗಮದಲ್ಲಿ ಬೂದಿಕೋಟೆ ಗ್ರಾಮವಿದೆ. ಮಾರ್ಕಂಡೇಯ ನದಿಗೆ ಉಕ್ಕುಂದ ಗ್ರಾಮದ ಮೇಲ್ಭಾಗದಲ್ಲಿ ಎರಡು ಕಿರುಬೆಟ್ಟಗಳ ನಡುವೆ ಒಂದು ಅಣೆಕಟ್ಟನ್ನು ೧೯೩೬–೧೯೪೦ರ ಅವಧಿಯಲ್ಲಿ ಕಟ್ಟಲಾಗಿದೆ. ಇದರ ಎತ್ತರ ೩೦ ಮೀಟರ್ ಮತ್ತು ಉದ್ದ ಸುಮಾರು ೭೫೦ ಮೀಟರ್‌ಗಳು. ಈ ಅಣೆಕಟ್ಟೆಯಿಂದಾಗಿ ಒಂದು ಸುಂದರ ಸರೋವರ ನಿರ್ಮಾಣವಾಗಿದ್ದು ಅದು ವಿಹಾರಪ್ರಿಯರಿಗೆ ಒಂದು ರಮಣೀಯ ಪ್ರೇಕ್ಷಣೀಯ ಕೇಂದ್ರವಾಗಿದೆ. ಈಗಾಗಲೇ ಈ ಸುಂದರ ತಾಣವು ಸಾಕಷ್ಟು ಯಾತ್ರಿಕರನ್ನು ಆಕರ್ಷಿಸುತ್ತಿದೆ. ಈ ಅಣೆಕಟ್ಟನ್ನು ಸುಮಾರು ನಾಲ್ಕು ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದ್ದು ಇಂದಿಗೂ ಸುಮಾರು ೪,೦೦೦ ಎಕರೆ ಗದ್ದೆಗಳಿಗೆ ನೀರು ಸರಬರಾಜು ಆಗುತ್ತಿದೆ.

**ಮಾಲೂರು:** (ತಾಲೂಕು ಕೇಂದ್ರ ಜನಸಂಖ್ಯೆ:೨೭,೮೧೫) ಮಾಲೂರು ಪಟ್ಟಣವು ಕೋಲಾರದ ನೈರುತ್ಯಕ್ಕೆ ೨೪ ಕಿ.ಮೀ. ಹಾಗೂ ಬೆಂಗಳೂರಿನಿಂದ ೪೬ ಕಿ.ಮೀ. ದೂರದಲ್ಲಿದೆ. ಈ ಊರಿನ ಮೂಲ ಹೆಸರು 'ಮಲ್ಲಿಕಾಪುರ' ಅಥವಾ 'ಮಲ್ಲಿಗೆಪುರ'.

ಈ ಊರಿನ ಸುತ್ತಮುತ್ತ ಮಲ್ಲಿಗೆಯ ತೋಟಗಳಿದ್ದುದೇ ಈ ಹೆಸರು ಬರಲು ಕಾರಣವೆನ್ನಲಾಗಿದೆ. ಇದು ೧೬ನೇ ಶತಮಾನದಲ್ಲಿ ಹೊಸಕೋಟೆಯ ನಾಯಕ ತಮ್ಮೇಗೌಡನ ಅಧಿಪತ್ಯಕ್ಕೆ ಸೇರಿದ್ದ ಭಾಗವಾಗಿತ್ತು. ವಿಜಾಪುರ ಸುಲ್ತಾನನ ಕೈವಶವಾದ ಮೇಲೆ ಇದು ಮಾನ್‌ಸುಬದಾರರಿಗೆ ಸೇರಿದ ಜಹಗೀರಾಗಿತ್ತು. ಮರಾಠರು ಇದನ್ನು ಹೃದ್‌ರಾಮ್‌ಸಿಂಗ್ ಎಂಬ ರಜಪೂತ ಜಮೀನುದಾರನಿಗೆ ಕೊಟ್ಟರು. ಈ ಪಟ್ಟಣಕ್ಕೆ ಹೊಸ ಬಡಾವಣೆಗಳನ್ನು ಸೇರಿಸಿ ಮಾಲೂರು ಎಂಬ ಹೆಸರನ್ನು ಕೊಟ್ಟನು. ಕೊನೆಗೆ ಇದು ಹೈದರ್ ಅಲಿಯ ವಶವಾಗಿ, ಅಲ್ಲಿಂದೀಚೆಗೆ ಇದು ಮೈಸೂರು ರಾಜ್ಯದ ಭಾಗವಾಗಿದೆ. ಇಲ್ಲಿರುವ ಶಂಕರನಾರಾಯಣ ದೇವಾಲಯವು ವಿಶಿಷ್ಟವಾದುದು, ಏಕೆಂದರೆ ಇಲ್ಲಿನ ಲಿಂಗದಲ್ಲಿ ಶಿವ ಮತ್ತು ವಿಷ್ಣು, ಇಬ್ಬರ ಚಿಹ್ನೆಗಳೂ ಇವೆ. ಈ ದೇವಾಲಯದಲ್ಲಿರುವ ಸೋಮಸ್ಕಂದನ ಉತ್ಸವಮೂರ್ತಿಯು ಬಹಳ ಸುಂದರವಾಗಿದೆ. ಇದು ಒಂದು ಕೈಯಲ್ಲಿ ಜಿಂಕೆ, ಮತ್ತೊಂದು ಕೈಯ್ಯಲ್ಲಿ ಪರಶು ಹಿಡಿದಿದ್ದು, ಉಳಿದೆರಡು ಕೈಗಳಲ್ಲಿ ಅಭಯ, ವರದಮುದ್ರೆಗಳನ್ನು ತೋರುತ್ತಿದೆ. ಈ ಚತುರ್ಬಾಹು ವಿಗ್ರಹದ ಪಕ್ಕದಲ್ಲಿ ಪಾರ್ವತಿಯು ಸಮಭಂಗಿಯಲ್ಲಿ ನಿಂತಿರುವಳು. ಈ ದೇವಾಲಯದಲ್ಲಿ ನವಗ್ರಹ ಪರಿಷ್ಠಾಪನೆ ಮಾಡಲಾಗಿದ್ದು ವರ್ಷವಿಡೀ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿರುತ್ತವೆ. ಈ ಪ್ರದೇಶದಲ್ಲಿ ಮಳೆಯ ಅಭಾವವಾದಾಗ ಶಂಕರ ನಾರಾಯಣ ಲಿಂಗವನ್ನು ನೀರಿನಲ್ಲಿ ಮುಳುಗಿಸಿ ಕುಂಭಾಭಿಷೇಕ ಮಾಡುವ ಸಂಪ್ರದಾಯವು ಆಚರಣೆಯಲ್ಲಿದೆ. ಇತ್ತೀಚೆಗೆ ಸ್ಥಳೀಯ ದಾನಿಗಳು ಹೊಸರಥ, ನಿರ್ಮಾಣ ಮಾಡಿಸಿ ದೇವಾಲಯದ ಸುತ್ತಲೂ ಚಪ್ಪಡಿಕಲ್ಲುಗಳನ್ನು ಹೊದಿಸಿರುತ್ತಾರೆ. ಇದೇ ಪ್ರಾಕಾರದಲ್ಲಿರುವ ಕಾಶಿವಿಶ್ವೇಶ್ವರ ದೇವಾಲಯದಲ್ಲಿ ಶಿವರಾತ್ರಿಯಂದು ವಿಶೇಷ ಪೂಜೆಗಳು ನಡೆಯುತ್ತವೆ. ಹಾಳುಬಿದ್ದಿರುವ ಕುರುಬರ ಗುಡಿಯ ಮುಂದೆ ಎರಡು ಸಾಲು ವೀರರ ಗುಡಿಗಳಿವೆ. ಈ ಪಟ್ಟಣವು ವಾಣಿಜ್ಯ ಬೆಳೆಗಳು ಮತ್ತು ತರಕಾರಿ ಬೆಳೆಗಳಿಗೆ ಪ್ರಖ್ಯಾತಿಯನ್ನು ಪಡೆದಿದೆ. ಮಾಲೂರು ತಾಲೂಕು ಹೆಂಚು ಮತ್ತು ಇಟ್ಟಿಗೆ ಕಾರ್ಖಾನೆಗಳಿಗೆ ಪ್ರಸಿದ್ಧಿಯಾಗಿದೆ. ಕೈಗಾರಿಕಾ ಪ್ರಾಂಗಣವೂ ಇಲ್ಲಿದೆ. ಹಲವಾರು ಶತಮಾನದಷ್ಟು ಹಳೆಯದಾದ ಧರ್ಮರಾಯನ ಗುಡಿಯಲ್ಲಿ ಪಂಚಪಾಂಡವರ ವಿಗ್ರಹಗಳಿವೆ. ದ್ರೌಪದಿ ಧರ್ಮರಾಯರ ಮೂಲವಿಗ್ರಹಗಳಿದ್ದು ಇವು ಬಹಳ ಪುರಾತನವಾದುವೆಂದು ನಂಬುತ್ತಾರೆ. ಈ ದೇವಾಲಯಕ್ಕಿರುವ ವಿಶಾಲ ಪ್ರಾಕಾರ, ಸುಂದರ ಗೋಪುರ ಹಾಗೂ ಆಧುನಿಕ ವಾಸ್ತುರಚನೆಯು ಉಲ್ಲೇಖಾರ್ಹವಾಗಿವೆ. ಬೆಂಗಳೂರಿನ ಕರಗ (ಚೈತ್ರ ಪೂರ್ಣಿಮೆಗೆ) ಮುಗಿದ ಒಂದು ವಾರದೊಳಗೆ ಇಲ್ಲಿ ಕಲಾತ್ಮಕ ಕರಗ ಮಹೋತ್ಸವವು ನಡೆದಾಗ ವಿವಿಧ ಶೈಲಿಯ ಜಾನಪದ ನೃತ್ಯಗಳೂ ರಾತ್ರಿಯಿಡೀ ನಡೆದು ಭಕ್ತಾದಿಗಳನ್ನು ಮೋಡಿಗೊಳಿಸುತ್ತವೆ. ಹಿಂದೂ–ಮುಸಲ್ಮಾನರು ಜೊತೆಜೊತೆಯಾಗಿ ಸೌಹಾರ್ದತೆಯಿಂದ ಕರಗದಲ್ಲಿ ಭಾಗವಹಿಸುತ್ತಾರೆ. ಪಟಾಲಮ್ಮನ ಗುಡಿಯ ಬಳಿ 'ಸಿಡಿ' ನಡೆಯುವ ಸಂಪ್ರದಾಯವು ಆಚರಣೆಯಲ್ಲಿದೆ. ಮಾಲೂರಿನ ಇತರೆ, ಪ್ರಮುಖ ದೇವಾಲಯಗಳೆಂದರೇ ಕೋದಂಡರಾಮ, ಪಾಂಡುರಂಗ, ಮಾರಿಕಾಂಬ, ಪಟಾಲಮ್ಮ ಮತ್ತು ಸಪ್ಪಲಮ್ಮ ಊರಿನ ಪೂರ್ವಪಶ್ಚಿಮದಲ್ಲಿ ಎರಡು ಆಂಜನೇಯ ಗುಡಿಗಳಿವೆ. ಇತ್ತೀಚೆಗೆ ನಿರ್ಮಾಣವಾಗಿರುವ ಕುಂಭೇಶ್ವರ ದೇವಾಲಯ ಅತ್ಯಂತ ಆಕರ್ಷಣೀಯವಾಗಿದೆ. ಶ್ರೇಣಿಗರ ಪೇಟೆಯಲ್ಲಿರುವ ಗಣಪತಿಯ ದೇವಾಲಯ ಸುಮಾರು ೧೫೦ ವರ್ಷಗಳಷ್ಟು ಹಳೆಯದೆಂದು ಹೇಳಬಹುದಾಗಿದೆ. ಸುಮಾರು ೧೫ ವರ್ಷಗಳ ಹಿಂದೆ ನಿರ್ಮಾಣವಾಗಿರುವ ಬೀರೇಶ್ವರನ ಗುಡಿಯಲ್ಲಿ ಕೆಲವು ಆಸಕ್ತಿದಾಯಕ ಶಿಲ್ಪಗಳಿವೆ. ಈ ದೇವಾಲಯದ ಆವರಣದಲ್ಲಿ ಒಂದು ಭಾರಿ ಹುತ್ತವಿದ್ದು ಅದನ್ನು ಜನರು ಭಕ್ತಿಯಿಂದ ಪೂಜಿಸುತ್ತಾರೆ. ಮಾಲೂರು ಸಮೀಪವಿರುವ **ತೊರ್ನಹಳ್ಳಿ**ಯ ಸಪ್ಪಲಮ್ಮ ದೇವಿ ಜಾತ್ರೆಯು ಬಹಳ ಪ್ರಸಿದ್ಧವಾಗಿದೆ. ಇದೇ ತಾಲೂಕಿನ ಬೆಳ್ಳಾವಿಯಲ್ಲಿ ಒಂದು ವೀರಶೈವ ಮಠವಿದೆ.

**ಮಾಸ್ತಿ:** (ಮಾಲೂರು ತಾಲೂಕು: ಜನಸಂಖ್ಯೆ: ೬,೪೦೯) ಮಾಲೂರು ತಾಲೂಕಿನ ಒಂದು ಗ್ರಾಮ. ಸಂಸ್ಕೃತದ ಮಹಾಸತಿಯೇ ಮಾಸ್ತಿಯಾಗಿದೆ ವಿಧವೆಯರು ೧೬ನೇ ಶತಮಾನದಲ್ಲಿ ತನ್ನ ಮಗಳ ಮಾನರಕ್ಷಣೆಗಾಗಿ ಕಂಚಿಯಿಂದ ಬಂದು ಇಲ್ಲಿ ನೆಲಸಿದ ಚೊಕ್ಕ ಬಾಬತಿ ಎಂಬುವನಿಂದ ಈ ಗ್ರಾಮ ಸ್ಥಾಪಿತವಾಯಿತು ಎಂದು ಹೇಳುತ್ತಾರೆ. ಮುಂದೆ ವಿಜಯನಗರದ ಅಚ್ಚುತರಾಯ ಚೊಕ್ಕ ಬಾಬತಿಯ ಸೇವೆಯನ್ನು ಪಡೆದು, ಅದಕ್ಕೆ ಪುರಸ್ಕಾರವಾಗಿ ೨೦,೦೦೦ ಪಗೋಡಗಳ ಆದಾಯ ಬರುವಂಥ ಪ್ರದೇಶಗಳನ್ನು ಕೊಟ್ಟ. ಚೊಕ್ಕ ಬಾಬತಿ ಮಾಸ್ತಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಅವನ ಅನಂತರ ಬಂದವರು ಅಂಕುಶಗಿರಿಯಿಂದ ರಾಜ್ಯವನ್ನಾಳತೊಡಗಿದರು. ಮುಂದೆ ಮರಾಠರು ಕೋಲಾರವನ್ನು ವಶಪಡಿಸಿಕೊಂಡಾಗ ಮಾಸ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡು ಹೊಸಕೋಟೆಯಲ್ಲಿ ವಿಲೀನವಾಯಿತು. ಹೈದರನ ಕಾಲದಲ್ಲಿ ಇದು ಮೈಸೂರು ರಾಜ್ಯಕ್ಕೆ ಸೇರಿತು. ಜ್ಞಾನಪೀಠ ಪುರಸ್ಕೃತ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಈ ಊರಿನವರು.

**ಮಿಣಕನಗುರ್ಕಿ:** (ಗೌರಿಬಿದನೂರು ತಾಲೂಕು: ಜನಸಂಖ್ಯೆ ೨,೬೫೮) ಗೌರಿಬಿದನೂರು ತಾಲೂಕಿನ ಮಿಣಕನಗುರ್ಕಿ ಮಂಚೇನಹಳ್ಳಿಯಿಂದ ಎರಡು ಕಿ. ಮೀ. ದೂರದಲ್ಲಿರುವ ಒಂದು ಆಹ್ಲಾದಕರವಾದ ತಾಣವಾಗಿದೆ. ಮಿಣಕನಗುರ್ಕಿ ಗ್ರಾಮವು ಬೆಂಗಳೂರಿನಿಂದ ೭೮ ಕಿ.ಮೀ. ದೂರದಲ್ಲಿದ್ದು, ಇತ್ತೀಚೆಗೆ ಇದನ್ನು ಪ್ರವಾಸಿ ತಾಣವನ್ನಾಗಿ ಮಹೇಶ್ವರಿ ಕ್ಷೇತ್ರವೆಂದು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಗ್ರಾಮದಲ್ಲಿ ಶ್ರೀ ಮಹೇಶ್ವರಿ ದೇವಾಲಯ ಹಾಗೂ ಕೊಂಡಾರ್ಯ ಮಠವಿದೆ. ಇಲ್ಲಿರುವ ಇತರೆ ದೇವಾಲಯಗಳೆಂದರೇ ಚೌಡೇಶ್ವರಿ ಗಂಗಮ್ಮ, ಭದ್ರಕಾಳಮ್ಮ, ಪ್ಲೇಗಮ್ಮ, ದೊಡ್ಡಮ್ಮ, ಏಳು ವಲದಮ್ಮ (ಸಪ್ತಮಾತೃಕೆಯರು), ಶ್ರೀರಾಮ, ಮುನೇಶ್ವರ, ಕುಂಭೇಶ್ವರಿ ಹನುಮಂತ ಮೊದಲಾದವುಗಳು. ಶ್ರೀರಾಮ, ಚೌಡೇಶ್ವರಿ ಕಮಠೇಶ್ವರ ದೇವಾಲಯಗಳನ್ನು ಬಿಟ್ಟರೇ ಉಳಿದ ದೇವಾಲಯಗಳು ಸಾಧಾರಣ ಕಟ್ಟಡಗಳನ್ನು ಹೊಂದಿವೆ. 'ಮಿಣಕನಗುರ್ಕಿ' ಅಥವಾ 'ಮಿಣಕುಮರಿ' ಗ್ರಾಮದ ಹೆಸರಿನ ಬಗ್ಗೆ ಹಲವಾರು ವಿವರಣೆಗಳನ್ನು ನೀಡಲಾಗುತ್ತದೆ. ಒಂದು ಅಭಿಪ್ರಾಯದ ಪ್ರಕಾರ ಈ ಪ್ರದೇಶವು ಅರಣ್ಯಾವೃತವಾಗಿದ್ದು, ರಾತ್ರಿಯ ವೇಳೆ ಮಿಂಚುತ್ತಿರುವಂತೆ ಬೆಳಕು ಆಗಿಂದಾಗ್ಗೆ ಕಾಣುತ್ತಿದ್ದ ಕಾರಣ 'ಮಿಣಕನಗುರ್ಕಿ' 'ಮಿಣಕುಮಾರಿ' ಎಂದು ಹೆಸರು ರೂಢಿಯಲ್ಲಿ ಬಂದಿದೆ ಎಂದು ತಿಳಿದುಬರುತ್ತದೆ. ಹಿಂದೆ ಬೇಟೆಗಾರರು ಕಾರ್ತೀಕ ಸೋಮವಾರದಂದು ಬೇಟೆಗೆ ಬಂದಾಗ ಒಂದು ಮೊಲ ನಾಯಿಯನ್ನು ಓಡಿಸಿಕೊಂಡು ಹೋದದ್ದನ್ನು ಕಂಡರು. ಇದರಿಂದ ಇದು ಗಂಡು ಭೂಮಿಯೆಂದು ಬಗೆದು ತಮ್ಮ ವಾಸಸ್ಥಳವನ್ನಾಗಿ ಮಾಡಿಕೊಂಡರೆಂದು ಪ್ರತೀತಿಯಿದೆ. ಇಲ್ಲಿರುವ ಮಾಹೇಶ್ವರಿ ದೇವಾಲಯವು ಸ್ವಲ್ಪ ಎತ್ತರವಾದ ನಿವೇಶನದಲ್ಲಿದ್ದು ಪೂರ್ವ ಮತ್ತು ಪಶ್ಚಿಮದಿಂದ ಎರಡು ಪ್ರವೇಶದ್ವಾರಗಳನ್ನು ಹೊಂದಿದೆ. ದೇವಾಲಯಕ್ಕೆ ಹೋಗಲು ಮೆಟ್ಟಿಲುಗಳಿವೆ. ಮಾಹೇಶ್ವರಿ ದೇವಾಲಯದ ಪಕ್ಕದಲ್ಲಿ ಕಲ್ಯಾಣ ಮಂಟಪವಿದೆ. ಈ ಗ್ರಾಮದ ಪಟೇಲನ ಹೊಲದಲ್ಲಿ ಹುಟ್ಟುಗುಂಡಿನ ಮೇಲೆ ನಾಗರಿ ಭಾಷೆಯ ಅಸ್ಪಷ್ಟವಾದ ಶಾಸನವಿದ್ದು, ಕ್ರಿ.ಶ. ೧೫೧೦ರಲ್ಲಿ ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಈ ಪ್ರದೇಶದಲ್ಲಿ ಗ್ರಹಣದ ಪವಿತ್ರ ಸಂದರ್ಭದಲ್ಲಿ ಮಾಡಿದ ದಾನವನ್ನು ಉಲ್ಲೇಖಿಸುತ್ತದೆ. ಸುಮಾರು ೩೦ ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಲಾಗಿದ್ದು, ಉದ್ಯಾನವನ, ಜಿಂಕೆಯವನ, ಮಕ್ಕಳ ಆಟದ ಮೈದಾನ, ಉಪಹಾರಗೃಹ, ಪ್ರವಾಸಿಗರು ಉಳಿಯಲು ವಸತಿಗೃಹ ಮೊದಲಾದ ಅವಶ್ಯಕತೆಗಳನ್ನು ರೂಪಿಸಲಾಗುತ್ತಿದೆ ಎಂದು ತಿಳಿದುಬರುತ್ತದೆ. ಅರಣ್ಯ ಇಲಾಖೆಯ ಸಹಕಾರದಿಂದ ಕೆಲವು ವಿಶೇಷ ವನಗಳನ್ನು ರೂಪಿಸಿ ಬೆಳೆಸಲಾಗುತ್ತಿದೆ. ನವಗ್ರಹ ವನದಲ್ಲಿ ಬೆಳೆಸಿರುವ ಸಸ್ಯಗಳೆಂದರೆ, ಸೂರ್ಯನಿಗೆ–ಎಕ್ಕ, ಚಂದ್ರನಿಗೆ–ಮುತ್ತುಗ, ಕುಜನಿಗೆ–ಕಗ್ಗಲಿ, ಬುಧನಿಗೆ–ಉತ್ತರಾಣಿ, ಗುರುವಿಗೆ–ಅಶ್ವತ್ಥ, ಶುಕ್ರನಿಗೆ–ಅತ್ತಿ, ಶನಿಗೆ–ಬನ್ನಿ, ರಾಹುಗೆ–ಗರಿಕೆ, ಕೇತುವಿಗೆ–ದರ್ಭೆ ಮೊದಲಾದವುಗಳನ್ನು ಬೆಳೆಸಲಾಗಿದೆ. ಈ ಸಸ್ಯಗಳ ಅಕ್ಕ–ಪಕ್ಕದಲ್ಲಿ ಆಯಾಗ್ರಹಗಳ ವಿಗ್ರಹಗಳನ್ನು ಸಂಕೇತಿಸುವ ಮೂರ್ತಿಗಳನ್ನು ಶಿವಾರಪಟ್ಟಣದ ಶಿಲ್ಪಿಗಳಿಂದ ತಯಾರಿಸಿ ಸ್ಥಾಪಿಸಲಾಗಿದೆ. ಇದೇ ರೀತಿ ದೇವೀವನದಲ್ಲಿ ಸಪ್ತಮಾತೃಕೆಯರಿಗಾಗಿ ಪ್ರತ್ಯೇಕ ಹೂತೋಟವನ್ನು ಬೆಳೆಸಲಾಗುತ್ತಿದೆ. ಶಿವ ಪಂಚಾಯತನ ವನ ಮತ್ತು ಕಾಶಿವನಗಳೂ ಇದೇ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಪ್ರತೀವರ್ಷ ಚೈತ್ರಶುದ್ಧ ಹುಣ್ಣಿಮೆಯಂದು ದೇವಿಯ ರಥೋತ್ಸವವು ಜರುಗುತ್ತದೆ. ಈ ಸಮಯದಲ್ಲಿ ವಿಶೇಷ ವಾಹನೋತ್ಸಗಳೂ ಹಾಗೂ ಹೂ ಪಲ್ಲಕ್ಕಿ ಉತ್ಸವಗಳೂ ವಿಜೃಂಭಣೆಯಿಂದ ನಡೆಯುತ್ತವೆ. **ನಾಮಗೊಂಡ್ಲು** (ಗೌರಿಬಿದನೂರು ತಾಲೂಕು: ಜನಸಂಖ್ಯೆ:೨೫೭೪) ಗೌರಿಬಿದನೂರು–'ಡಿ' ಪಾಳ್ಯದ ರಸ್ತೆಯಲ್ಲಿರುವ (ಗೌರಿಬಿದನೂರಿನಿಂದ ಆರು ಕಿ.ಮೀ.) 'ನಾಮಗೊಂಡ್ಲು' ಅಥವಾ 'ತಿಲಕಶಿಲಾಪುರಿ' ಒಂದು ಪ್ರಸಿದ್ಧ ವೈಷ್ಣವ ಕ್ಷೇತ್ರವಾಗಿದೆ. ಈ ಊರಿನ ಹಿಂಭಾಗದಲ್ಲಿ ಸುತ್ತುವರೆದಿರುವ ಗುಂಡಾಕೃತಿಯ ಬಂಡೆಗಳಿಂದ ಕೂಡಿರುವ ಗುಡ್ಡವಿದ್ದು, ಅವುಗಳ ಮೇಲೆ 'ನಾಮ' ಅಥವಾ 'ತಿಲಕ'ಗಳನ್ನು ರಚಿಸಿರುವ ಕಾರಣ ಈ ಊರಿಗೆ 'ನಾಮಗೊಂಡ್ಲು' (ತಿಲಕಶಿಲಾಪುರಿ) ಎಂಬ ಹೆಸರು ರೂಢಿಯಲ್ಲಿದೆ. ಈ ಗ್ರಾಮದಲ್ಲಿ ವಿಜಯನಗರೋತ್ತರ ಲಕ್ಷಣವನ್ನು ವ್ಯಕ್ತಪಡಿಸುವ ಎರಡು ಅಸ್ಪಷ್ಟ ಶಿಲಾಶಾಸನಗಳಿವೆ. ಮಂಚೇನಹಳ್ಳಿ ರಸ್ತೆಯಲ್ಲಿರುವ ಮೊದಲನೇ ಶಾಸನವು "ಮೂಡಣ ಕಿರಿಯ ಕಟ್ಟೆ" ಎಂದು ಮಾತ್ರ ತಿಳಿಯುತ್ತದೆ. ಇದೇ ಗ್ರಾಮದ ಸಂತೆ ಬಾಗಿಲ ಬಳಿ ಇರುವ ಎರಡನೇ ಶಾಸನವು ಸಹ ಮೇಲಿನ ಶಾಸನದ ಕಾಲಕ್ಕೆ ಸೇರಿದ್ದು, "ಕೃಷ್ಣರಾಜ ಕೊಡುಗೆ" ಎಂದು ಮಾತ್ರ ತಿಳಿಯುತ್ತದೆ. ಈ ಊರಿನಲ್ಲಿ ಉತ್ತರಾಧಿಮಠದ ಪರಂಪರೆಗೆ ಸೇರಿದ ಸತ್ಯವರತೀರ್ಥರ ಮೂಲ ಬೃಂದಾವನವಿದೆ. ಈ ಮಠವು ವಿಶಾಲವಾದ ನಿವೇಶನದಲ್ಲಿದೆ. 'ವಿಷ್ಣುತೀರ್ಥರು (ಕ್ರಿ.ಶ. ೧೭೫೬–೧೮೦೬) ಅಡವಿ ಸ್ವಾಮಿಗಳು ಸತ್ಯವರತೀರ್ಥರ ಸಾಕ್ಷಾತ್ ಶಿಷ್ಯರಾಗಿದ್ದು, ಭಾಗವತ ಸಾರೋದ್ಧಾರ, ನ್ಯಾಯಸುಧಾ ಟಿಪ್ಪಣಿ ಮೊದಲಾದ ದ್ವೈತ ಸಿದ್ಧಾಂತಕ್ಕೆ ಸಂಬಂದೀಸಿದ ಅನೇಕ

ಕೃತಿಗಳನ್ನು ರಚಿಸಿರುವರು. ಭಾಗವತಕ್ಕೆ ಹೊಸಬಗೆಯ ವ್ಯಾಖ್ಯಾನವೊಂದನ್ನು ರಚಿಸಿದ ಸತ್ಯಧರ್ಮತೀರ್ಥರು (ಕ್ರಿಶ. ೧೭೯೭–೧೮೩೦) ಸತ್ಯವರತೀರ್ಥರ ಶಿಷ್ಯರಾಗಿ ಆ ಪೀಠಕ್ಕೆ ಉತ್ತರಾಧಿಕಾರಿಗಳಾದರೆಂದು ಪ್ರತೀತಿಯಿದೆ.

**ಮಿಟ್ಟೇಮರಿ:** (ಬಾಗೇಪಲ್ಲಿ ತಾಲೂಕು;ಜನಸಂಖ್ಯೆ:೨,೬೦೨) ಬಾಗೇಪಲ್ಲಿಯಿಂದ ೧೩ ಕಿ.ಮೀ. ದೂರದಲ್ಲಿರುವ ಮಿಟ್ಟೇಮರಿಯು ಚಿಂತಾಮಣಿಯಿಂದ ಬಾಗೇಪಲ್ಲಿಗೆ ಹೋಗುವ ಮುಖ್ಯ ರಸ್ತೆಯಲ್ಲಿರುವ ಯಾತ್ರಾಸ್ಥಳವಾಗಿದೆ. ಸ್ಥಳೀಯ ನಂಬಿಕೆಯ ಪ್ರಕಾರ ಈ ಊರಿಗೆ ಗರುಡಾದ್ರಿಪುರವೆಂದು ಕರೆಯಲಾಗುತ್ತಿತ್ತೆಂದು ತಿಳಿದುಬರುತ್ತದೆ. ಕಾಲಕ್ರಮೇಣ 'ಮಿಟಾಪುರಿ' ಆಗಿ ಈಗ ಮಿಟ್ಟೇಮರಿಯೆಂದು ರೂಢಿಗೆ ಬಂದಿದೆ ಎಂದು ಹೇಳುತ್ತಾರೆ.. ಈ ಊರಿಗೆ ಎರಡು ಮೈಲಿ ದೂರದಲ್ಲಿ ಚಿತ್ರಾವತಿ ನದಿ ಹರಿಯುತ್ತದೆ. ಊರಿನಲ್ಲಿ ಎತ್ತರವಾದ ಸ್ಥಳದಲ್ಲಿ ವಿಜಯನಗರೋತ್ತರ ಕಾಲದ ನರಸಿಂಹಸ್ವಾಮಿಯ ದೇವಾಲಯವಿದ್ದು, ಸುಮಾರು ೩೦–೪೦ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕಾಗುತ್ತದೆ. ದೇವಾಲಯದ ಮಹಾದ್ವಾರದಲ್ಲಿ ಎರಡು ಮಂಟಪಗಳಿದ್ದು, ಒಂದರಲ್ಲಿ ಆಂಜನೇಯ ಹಾಗೂ ಮತ್ತೊಂದರಲ್ಲಿ ಸು. ಮೂರು ಅಡಿ ಎತ್ತರವಿರುವ ಗರುಡನ ಮೂರ್ತಿಗಳಿವೆ. ದೇವಾಲಯವು ವಿಶಾಲವಾದ ಕಲ್ಲಿನ ಪ್ರಾಕಾರವನ್ನು ಹೊಂದಿದ್ದು, ಗರ್ಭಗೃಹ ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ಲಕ್ಷ್ಮೀನರಸಿಂಹನ ಒಂದೂವರೆ ಅಡಿ ಎತ್ತರವಿರುವ ಅಸ್ಪಷ್ಟ ವಿಗ್ರಹವಿದೆ. ಇಲ್ಲಿರುವ ಇನ್ನೊಂದು ಮೂರ್ತಿಯು ಲಕ್ಷ್ಮೀನಾರಾಯಣನ ವಿಗ್ರಹವಾಗಿದೆ. ಇದು ಸುಮಾರು ಮೂರು ಅಡಿ ಎತ್ತರವಿದ್ದು, ನಾರಾಯಣನು ತನ್ನ ತೊಡೆಯ ಮೇಲೆ ಲಕ್ಷ್ಮೀಯನ್ನು ಕೂಡಿಸಿಕೊಂಡಿರುವ ಆಸೀನ ಭಂಗಿಯು ಆಕರ್ಷಕವಾಗಿದೆ. ಒಂದೇ ಗರ್ಭಗೃಹದಲ್ಲಿ ವಿಭಿನ್ನ ವಿಷ್ಣುಮೂರ್ತಿಗಳು ಪ್ರತಿಷ್ಠಾಪಗೊಂಡಿರುವುದು ಅಪರೂಪವಾಗಿದೆ. ಈ ದೇವಾಲಯದಲ್ಲಿ ದೈನಂದಿನ ಪೂಜಾ ಕೈಂಕರ್ಯಗಳು ಪಾಂಚರಾತ್ರ ಆಗಮನ ರೀತಿಯಲ್ಲಿ ನಡೆಯುತ್ತದೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಫಾಲ್ಗುಣ ಬಹುಳ ಪಾಡ್ಯಮಿಯೆಂದು ಬ್ರಹ್ಮರಥೋತ್ಸವವು ನಡೆಯುತ್ತದೆ. ಇದೇ ಸಂದರ್ಭದಲ್ಲಿ ಸುಮಾರು ಎಂಟು ದಿನಗಳ ಕಾಲ ದನಗಳ ಬೃಹದ್ ಜಾತ್ರೆಯು ನಡೆದಾಗ ಸಾವಿರಾರು ಭಕ್ತಾದಿಗಳು ಭಾಗವಹಿಸುತ್ತಾರೆ. ಸ್ಥಳೀಯ ನಂಬಿಕೆಯ ಪ್ರಕಾರ ಉತ್ಸವಮೂರ್ತಿಯನ್ನು ರಥದಲ್ಲಿರಿಸಿದಾಗ ಗರುಡ ಪಕ್ಷಿಯೊಂದು ರಥವನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿದ ಮೇಲೆ ರಥೋತ್ಸವವು ಆರಂಭವಾಗುತ್ತದೆ. ಈ ಜಿಲ್ಲೆಯಲ್ಲಿ ನಡೆಯುವ ಪ್ರಮುಖ ಜಾತ್ರೆಗಳಲ್ಲಿ ಮಿಟ್ಟೇಮರಿ ಜಾತ್ರೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಈ ಊರಿಗೆ ಸಂಬಂಧಿಸಿದಂತೆ ಮೂರು ಶಾಸನಗಳು ದೊರೆತಿವೆ. ಮೊದಲನೆಯದು ತಾಮ್ರಶಾಸನವಾಗಿದ್ದು, ಕ್ರಿಶ. ೧೬೩೬ರಲ್ಲಿ ಮಹಾನಾಯಕಾಚಾರ್ಯ ಗುಮ್ಮಿನಾಯಿನಿ ನರಸಿಂಹನಾಯಿನಿಯ ಮಗ ಕದಿರಪ್ಪನಾಯಿನಿಯು ಮಿಟ್ಟೇಮರಿಯ ಮೇಕಲಾಬೊಮ್ಮ ಎಂಬ ದಾಸಗಾವುಂಡನಿಗೆ ಈ ಸ್ಥಳದ ಕೆರೆಯ ವಡ್ಡಿನ ದುರಸ್ತಿಗಾಗಿ ಹಲವು ದಾನಗಳನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ. ಇದೇ ಊರಿನ ಊರಬಾಗಿಲಿನ ಬಳಿಯಿರುವ ಕ್ರಿಶ. ೧೫೩೩ರ ಶಾಸನವು ಕರಾಳಿ ನರಸಿಂಹ ದೇವರಿಗೆ ನಾಯಕ್ಷಿಪನೆಂಬ ಅಧಿಕಾರಿಯು ತಿಮ್ಮರಸಯ್ಯನ ಆಡಳಿತದಲ್ಲಿ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಬಾಗೇಪಲ್ಲಿಗೆ ಸಮೀಪವಿರುವುದರಿಂದ ಈ ಸ್ಥಳಕ್ಕೆ ಯಾತ್ರಿಕರು ಅಧಿಕ ಸಂಖ್ಯೆಯಲ್ಲಿ ಭೇಟಿ ಕೊಡಲು ಅನುಕೂಲವಾಗಿದೆ.

**ಮುದ್ದೇನಹಳ್ಳಿ** :(ಚಿಕ್ಕಬಳ್ಳಾಪುರ ತಾಲೂಕು:ಜನಸಂಖ್ಯೆ:೨೫೫) ಚಿಕಬಳ್ಳಾಪುರದಿಂದ ಮೂರು ಕಿ.ಮೀ. ದೂರದಲ್ಲಿರುವ ಮುದ್ದೇನಹಳ್ಳಿ ಅತ್ಯಂತ ಸಣ್ಣ ಪ್ರಮಾಣದ ಕಂದಾಯ ಗ್ರಾಮವಾಗಿದ್ದರು ಭಾರತರತ್ನ ಪ್ರಶಸ್ತಿ ಪುರಸ್ಕೃತ ಹಾಗೂ ಆಧುನಿಕ ಕರ್ನಾಟಕದ ಶಿಲ್ಪಿ ಎಂದು ಜನಪ್ರಿಯರಾಗಿರುವ ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದ ಕಾರಣ ಪ್ರಸಿದ್ಧವಾಗಿದೆ. ಮುದ್ದೇನಹಳ್ಳಿಯಲ್ಲಿರುವ ವಿಶ್ವೇಶ್ವರಯ್ಯನವರ ಮನೆಯಲ್ಲಿ ಇತ್ತೀಚೆಗೆ ಅವರ ನೆನಪಿನ ವಸ್ತು ಸಂಗ್ರಹಾಲಯವನ್ನು ತೆರೆಯಲಾಗಿದೆ.

**ಮುರುಗಮಲ್ಲ** :(ಚಿಂತಾಮಣಿ ತಾಲೂಕು: ಜನಸಂಖ್ಯೆ:೨,೪೯೨) ಚಿಂತಾಮಣಿಯಿಂದ ೧೧ ಕಿ.ಮೀ. ದೂರದಲ್ಲಿರುವ ಮುರುಗಮಲ್ಲ ಅಥವಾ ಪ್ರಾಚೀನ ಮುರುಗಮಾಲೆ ಸುಮಾರು ೬೦೦ ಅಡಿ ಎತ್ತರವಿರುವ ಬೆಟ್ಟದ ಮೇಲಿರುವ ಕೋಟೆಯಾಗಿದೆ. ಇದನ್ನು ಕ್ರಿ. ಶ. ೧೮ನೇ ಶತಮಾನದಲ್ಲಿ ನಿರ್ಮಿಸಲಾಯಿತೆಂದು ಸ್ಥಳೀಯವಾಗಿ ನಂಬಲಾಗಿದ್ದು, ಈಗ ಕುಸಿಯುತ್ತಿದೆ. ಇಲ್ಲಿರುವ ಫೀರ್ ಫಕೀರ್ ಷಾ ವಲಿ ದರ್ಗಾ ಟಿಪ್ಪು ಸುಲ್ತಾನನ ಸಮಕಾಲೀನರೆಂದು ಪ್ರತೀತಿಯಿದೆ. ಇಲ್ಲಿ ವಾರ್ಷಿಕವಾಗಿ ಉರುಸ್ ಅನ್ನು ನಡೆಸಲಾಗುತ್ತದೆ ಮತ್ತು ಈ ಸಂದರ್ಭದಲ್ಲಿ ಸಹಸ್ರಾರು ಭಕ್ತರು ಕರ್ನಾಟಕ ಮಾತ್ರವಲ್ಲದೇ ನೆರೆಯ ರಾಜ್ಯಗಳಿಂದಲೂ ಬಂದು ಭಾಗವಹಿಸುತ್ತಾರೆ. ಹಿಂದೂಗಳು ಸಹ ಈ ವಾರ್ಷಿಕ ಉರುಸ್ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಹಲವು ರೋಗ–ರುಜಿನಗಳಿಗೆ ಈ ದರ್ಗಾದಲ್ಲಿರುವ ಪೀರ್ ನಿವಾರಿಸಬಲ್ಲ ಶಕ್ತಿಯನ್ನು ಹೊಂದಿರುವರೆಂದು ಭಕ್ತಾದಿಗಳು ನಂಬಿರುತ್ತಾರೆ. ಬೆಟ್ಟದ ತಪ್ಪಲಲ್ಲಿ

ಪ್ರಾಚೀನ ಶಿವಲಿಂಗವಿರುವ ದೇವಾಲಯವಿದ್ದು, ಪಾಳೇಯಗಾರರ ಕಾಲದ ವಾಸ್ತುರಚನೆಯನ್ನು ಹೊಂದಿದೆ. ಮುರುಗಮಲ್ಲಕ್ಕೆ ಹೋಗಿಬರಲು ಚಿಂತಾಮಣಿಯಿಂದ ಬಸ್ಸುಗಳ ಸೌಕರ್ಯವಿದ್ದು, ಸಹಸ್ರಾರು ಭಕ್ತಾದಿಗಳನ್ನು ಆಕರ್ಷಿಸುತ್ತಿದೆ. ಈ ದರ್ಗಾವೊಂದು ಹಿಂದೂ–ಮುಸಲ್ಮಾನರ ಭಾವೈಕ್ಯದ ಸಂಕೇತವಾಗಿದೆ.

**ಮುಳಬಾಗಿಲು:** (ತಾಲೂಕು ಕೇಂದ್ರ ಜನಸಂಖ್ಯೆ: ೪೪,೦೩೩) ಕೋಲಾರದಿಂದ ೩೦ ಕಿ.ಮೀ. ಮತ್ತು ಬೆಂಗಳೂರಿನಿಂದ ೧೦೦ ಕಿ.ಮೀ. ದೂರದಲ್ಲಿರುವ ಮುಳಬಾಗಿಲು ಜಿಲ್ಲೆಯ ಪ್ರಾಚೀನ ಸ್ಥಳಗಳಲ್ಲಿ ಒಂದಾಗಿದೆ. ಮುಳಬಾಗಿಲು ಸ್ಥಳನಾಮವು 'ಮುಳವಾಯಿ ರಾಜ್ಯ', 'ಮುಳವಾಗಿಲ ರಾಜ್ಯ', 'ಮುಳವಾಯ' ಮೊದಲಾದ ರೂಪಗಳಿಂದ ವಿವಿಧ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಹಾಗೆ 'ಮುಳಬಾಗಿಲು' ಎಂಬುದು 'ಮೂಡಲ ಬಾಗಿಲು' ಎಂದು ಅರ್ಥೈಸಿರುವುದು ಸಮಂಜಸವೆನಿಸುತ್ತದೆ. ಏಕೆಂದರೆ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಪ್ರಾಚೀನ ಕೇಂದ್ರವಾದ ಕಾಂಚೀಪುರದವರು ಕರ್ನಾಟಕವನ್ನು ಪ್ರವೇಶಿಸಬೇಕೆಂದರೇ ಇರುವುದು ಇದೊಂದೇ ಸ್ಥಳವಾಗಿದೆ. ಮುಳಬಾಗಿಲು ಕರ್ನಾಟಕದ ಪೂರ್ವದ ಅಂಚಿನಲ್ಲಿರುವ ಸ್ಥಳವೆಂದು ಭೌಗೋಳಿಕವಾಗಿ ಕರೆಯಲಾಗಿದೆ. ತಿರುಪತಿಯ ಕ್ಷೇತ್ರದಿಂದ ಬರುವ ಭಕ್ತಾದಿಗಳು ಈ ಮೂಡಲಬಾಗಿಲಿಂದಲೇ ಕರ್ನಾಟಕವನ್ನು ಅನಾದಿ ಕಾಲದಿಂದಲೂ ಈ ಊರಿನ ಮೂಲಕ ಪ್ರವೇಶಿಸುತ್ತಿದ್ದರಿಂದ ಈ ಸ್ಥಳವು 'ಮೂಡಲ ಬಾಗಿಲು' ಎಂಬ ಹೆಸರು ಪಡೆಯಿತೆಂದು ನಂಬಲಾಗಿದೆ. ಮಹಾಭಾರತ ಯುದ್ಧದಲ್ಲಿ ವೀರಹನುಮನು ಅರ್ಜುನನ ರಥದ ಧ್ವಜದಲ್ಲಿ ನಿಂತು ಜಯವನ್ನು ಲಭಿಸಿಕೊಟ್ಟ ಸ್ಮರಣಾರ್ಥ ಅರ್ಜುನನಿಂದ ಈ ಸ್ಥಳದಲ್ಲಿ ಹನಮಂತದೇವರನ್ನು ಪ್ರತಿಷ್ಠಾಪಿಸಿದ ಕಾರಣ ಈ ಊರಿಗೆ 'ಅರ್ಜುನಕ್ಷೇತ್ರ'ವೆಂಬ ಹೆಸರು ಬಂದಿತೆಂದು ಹೇಳುತ್ತಾರೆ. ಆಂಜನೇಯನ ತಾಯಿ ಅಂಜನಾದೇವಿಯು ಇಲ್ಲಿನ ಬೆಟ್ಟದ ಮೇಲೆ ತಪೋನಿರತಳಾಗಿದ್ದುದರಿಂದ ಈ ಬೆಟ್ಟಕ್ಕೆ 'ಅಂಜನಾದ್ರಿ' ಎಂದು ಸಹ ಹೇಳಲಾಗುತ್ತಿತ್ತು. ಇತ್ತೀಚೆಗೆ ಈ ಸ್ಥಳವು ಕರ್ನಾಟಕದ ಪ್ರಮುಖ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರವಾಗಿ ಅಭಿವೃದ್ಧಿಗೊಂಡಿದೆ. ಮುಳಬಾಗಿಲು ಹಲವು ಪ್ರಾಚೀನ ದೇವಾಲಯಗಳನ್ನು ಹೊಂದಿರುವುದರಿಂದ ಕೋಲಾರ ಜಿಲ್ಲೆಯ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲೊಂದೆನಿಸಿದೆ. ಮೈಸೂರು, ಬೆಂಗಳೂರು, ಚೆನ್ನೈ ಮತ್ತು ಕೇರಳ ರಾಜ್ಯಗಳಿಂದ ತಿರುಪತಿಗೆ ಹೋಗುವ ಭಕ್ತರು ಊರಿನ ಅಂಚಿನಲ್ಲಿರುವ ಹಂಚಿಕಲ್ಲು ಬೆಟ್ಟದ ತಪ್ಪಲಲ್ಲಿರುವ ಶ್ರೀಪಾದರಾಯರ ಮಠ ಹಾಗೂ ಅದರ ಬಳಿಯಲ್ಲಿರುವ ನರಸಿಂಹತೀರ್ಥ ಇವುಗಳ ದರ್ಶನ ಪಡೆದು ನಂತರ ತಿರುಪತಿಗೆ ತೆರಳುವ ಸಂಪ್ರದಾಯವೂ ಆಚರಣೆಯಲ್ಲಿದೆ. ಹೀಗಾಗಿ, ಮುಳಬಾಗಿಲಿಗೆ ದಿನನಿತ್ಯ ಬಂದು ಹೋಗುವ ಪ್ರವಾಸಿಗರ ಸಂಖ್ಯೆ ಸಾವಿರವನ್ನೂ ಮೀರಿರುತ್ತದೆ. ವಿಜಯನಗರ ಕಾಲದಲ್ಲಿ ಹಾಗೂ ಹೊಯ್ಸಳ ಅಂತ್ಯಭಾಗದಲ್ಲಿ ಈ ಸ್ಥಳವು ಮುಳವಾಯಿ ರಾಜ್ಯದ ಕೇಂದ್ರ ಸ್ಥಾನವಾಗಿತ್ತೆಂದು ಹಲವಾರು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಆಗ ಮುಳಬಾಗಿಲು ಒಂದು ಪ್ರಮುಖವಾದ ಉಪರಾಜಧಾನಿಯಾಗಿತ್ತು. ಬುಕ್ಕರಾಯನ ಮಗ ಕಂಪಣರಾಯನು ಇಲ್ಲಿ ಆಳ್ವಿಕೆ ನಡೆಸಿದ್ದನು. ಅನಂತರ ಈ ಸ್ಥಳವು ಸುಗಟೂರಿನ ತಮ್ಮೇಗೌಡನ ಆಳ್ವಿಕೆಗೆ ಒಳಪಟ್ಟಿತು. ಮುಳಬಾಗಿಲನ್ನು ಬ್ರಿಟೀಷರು ಜೂನ್ ೧೭೬೮ರಲ್ಲಿ ಕರ್ನಲ್ ಕ್ಯಾಂಪ್‌ಬೆಲ್‌ನ ನೇತೃತ್ವದಲ್ಲಿ ತಮ್ಮ ವಶಕ್ಕೆ ತೆಗೆದುಕೊಂಡರು. ಇದೇ ವರ್ಷದಲ್ಲಿ ಹೈದರ್ ಅಲಿಯು ತನ್ನ ವಶಕ್ಕೆ ಪುನಃ ತೆಗೆದುಕೊಂಡನು. ಮುಳಬಾಗಿಲಿನಲ್ಲಿ ಆಂಜನೇಯ ದೇವಾಲಯ ಸಂಕೀರ್ಣ, ನಾಚಾರಮ್ಮ, ಸೋಮೇಶ್ವರ, ನರಸಿಂಹ, ಶ್ರೀನಿವಾಸ, ಗೋವಿಂದರಾಜ, ವರದರಾಜ, ವೀರಭದ್ರ, ಗೋಪಾಲಕೃಷ್ಣ ಮೊದಲಾದ ದೇವಾಲಯಗಳಿವೆ. ವಿಜಯನಗರದ ಆರಂಭಕಾಲದಲ್ಲಿ ನಿರ್ಮಾಣಗೊಂಡ ಆಂಜನೇಯ ದೇವಾಲಯದ ಸಂಕೀರ್ಣವು ಮುಳಬಾಗಿಲಿನ ಅತ್ಯಂತ ಪ್ರಮುಖ ದೇವಾಲಯವಾಗಿದೆ. ಇದರಲ್ಲಿ ಚೌರಸವಾದ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಂಭಾಗದಲ್ಲಿ ವಿಶಾಲವಾದ ಮುಖಮಂಟಪಗಳಿವೆ. ಗರ್ಭಗೃಹದಲ್ಲಿರುವ ಆಂಜನೇಯನ ವಿಗ್ರಹವು ಸುಮಾರು ಹತ್ತು ಅಡಿ ಎತ್ತರವಿದ್ದು ಅರ್ಜುನನಿಂದ ಪ್ರತಿಷ್ಠಾಪಿಸಲಾಗಿದೆ ಎಂದು ನಂಬಲಾಗಿದೆ. ಆಂಜನೇಯನಿಗೆ ಪ್ರತಿನಿತ್ಯ ಕೇದಿಗೆ ಹೂವಿನ ಅಲಂಕಾರ ಮಾಡಲೇಬೇಕೆಂಬ ಪದ್ಧತಿಯಿದೆ. ವಿಜಯನಗರ ಪೂರ್ವ ರಚನೆಯನ್ನು ಹೊಂದಿರುವ ಈ ಆಂಜನೇಯನ ವಿಗ್ರಹವು ಅತ್ಯಂತ ಆಕರ್ಷಣೀಯವಾಗಿದೆ. ಮೂಲ ಕಟ್ಟಡದಲ್ಲಿರುವ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳು ವಿಜಯನಗರದ ಕಾಲದ ರಚನೆಗಳಾಗಿದ್ದು, ಗರ್ಭಗೃಹದ ಮೇಲ್ಭಾಗದಲ್ಲಿ ಚತುಷ್ಕೋನಾಕಾರದ ದ್ರಾವಿಡ ಶೈಲಿಯ ಶಿಖರವಿದೆ. ಮೊಗಲ್ ಚಕ್ರವರ್ತಿ ಅಕ್ಬರನ ಪ್ರಖ್ಯಾತ ಕಂದಾಯ ಮಂತ್ರಿ ರಾಜ ತೋದರಮಲ್ಲನು ತನ್ನ ದಕ್ಷಿಣಭಾರತದ ತೀರ್ಥಯಾತ್ರೆ ಸಮಯದಲ್ಲಿ ಈ ಸ್ಥಳಕ್ಕೆ ಭೇಟಿಕೊಟ್ಟಿದ್ದನೆಂದು ಪ್ರತೀತಿಯಿದೆ. ಈತನೇ ಆಂಜನೇಯ ದೇವಾಲಯದ ಮುಖಮಂಟಪದ ಭಾಗವನ್ನು ನಿರ್ಮಿಸಿದನೆಂದು ಪ್ರತೀತಿಯಿದೆ. ಮುಖಮಂಟಪದಲ್ಲಿ ರಾಜಾ ತೋದರಮಲ್ಲನ ಮತ್ತು ಆತನ ಪತ್ನಿಯ ಆಕರ್ಷಕ

ಭಕ್ತವಿಗ್ರಹಗಳಿವೆ. ಅರ್ಧಮಂಟಪದಲ್ಲಿ ಸೀತಾ, ರಾಮ, ಲಕ್ಷ್ಮಣ ಮೊದಲಾದ ದೇವರುಗಳ ಉತ್ಸವಮೂರ್ತಿಗಳನ್ನು ಇಡಲಾಗಿದೆ. ಈ ದೇವಾಲಯದ ಕಲ್ಯಾಣಮಂಟಪದಲ್ಲಿ ಕಂಬ ಗೋಡೆ ಹಾಗೂ ಛಾವಣಿಗಳಲ್ಲಿ ಮೈಸೂರು ಒಡೆಯರ ಕಾಲದ ಮಂಡಿಕಲ್ಲು ರಂಗರಾಜು ರಚಿಸಿದ ಸುಂದರ ವರ್ಣಚಿತ್ರಗಳಿವೆ. ಅರ್ಧಮಂಟಪದ ಮುಂಭಾಗದಲ್ಲಿರುವ ನವರಂಗದಲ್ಲಿ ನಾಲ್ಕು ಚತುಷ್ಕೋನಾಕಾರದ ಬೃಹತ್ ಸ್ತಂಭಗಳು ಆಕರ್ಷಕ ಉಬ್ಬು ಶಿಲ್ಪಗಳನ್ನು ಹೊಂದಿವೆ. ದೇವಾಲಯದ ವಿಶಾಲವಾದ ಪ್ರಾಕಾರದಲ್ಲಿ ಕೋದಂಡರಾಮ, ಕೇಶವ, ಗೋಪಾಲಕೃಷ್ಣ ಮತ್ತು ನರಸಿಂಹ, ಕಂಚಿ ವರದರಾಜಸ್ವಾಮಿ, ಶ್ರೀನಿವಾಸ ಮತ್ತು ಗೋವಿಂದರಾಜಸ್ವಾಮಿ ದೇವರುಗಳ ಚಿಕ್ಕ ಚಿಕ್ಕ ಗುಡಿಗಳಿವೆ. ಈ ದೇವಾಲಯದ ಮುಖಮಂಟಪದ ಪಶ್ಚಿಮ ಭಾಗವನ್ನು ವಿಜಯನಗರದ ಕೃಷ್ಣದೇವರಾಯನು ನಿರ್ಮಿಸಿದನೆಂದು ಪ್ರತೀತಿಯಿದ್ದು ಅದರ ಒಂದು ಸ್ತಂಭದ ಮೇಲೆ ಕೈಮುಗಿದುಕೊಂಡಿರುವ ಆತನ ತಗ್ಗು ಶಿಲ್ಪವಿದೆ. ಮುಖಮಂಟಪದ ಎದುರಿಗೆ ಎತ್ತರವಾದ ಗರುಡಸ್ತಂಭವಿದೆ. ಆಂಜನೇಯ ದೇವಾಲಯದಲ್ಲಿ ಶ್ರೀ ರಾಮದೇವರ ಕಿರುಗುಡಿಯ ಪಶ್ಚಿಮಕ್ಕೆ ಹೊರಭಿತ್ತಿಯಲ್ಲಿರುವ ಕ್ರಿ.ಶ.೧೫೨೮ರ ಶಾಸನವು (ಎಂ.ಬಿ–೩) ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಆತನ ಸಾಮಂತ ಸಿಂಧಣ ಒಡೆಯನು ಮುಳವಾಯ ಮೂಡಣಪರಿಶೆಯ ಹನುಮಂತ ದೇವರಗುಡಿಯ ದಕ್ಷಿಣ ಭಾಗದಲ್ಲಿ ರಾಮನಾಥದೇವರು, ಸೀತಾ ಪರಮೇಶ್ವರಿ ಮತ್ತು ಲಕ್ಷ್ಮಣ ದೇವರುಗಳನ್ನು ಪ್ರತಿಷ್ಠಾಪನೆ ಮಾಡಿ ಈ ದೇವಾಲಯದ ಹೊರಪ್ರಾಕಾರವನ್ನು ಹಾಗೂ ಮಹಾದ್ವಾರದ ರಾಯಗೋಪುರಗಳನ್ನು ನಿರ್ಮಿಸಿ ಹನುಮಂತ ದೇವರ ಅಂಗಭೋಗಕ್ಕೆ ಮತ್ತು ದೈನಂದಿನ ಪೂಜಾಕೈಂಕರ್ಯಗಳನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುವಂತೆ ಶಾಶ್ವತ ದಾನಗಳನ್ನು ನೀಡಿದ ವಿವರಗಳನ್ನು ನೀಡುತ್ತದೆ. ಈ ದೇವಾಲಯಕ್ಕೆ ವಿಶಾಲವಾದ ಹೊರಪ್ರಾಕಾರವಿದ್ದು, ನೈರುತ್ಯಭಾಗದಲ್ಲಿ ಗೋವಿಂದರಾಜಸ್ವಾಮಿ ದೇವಾಲಯವನ್ನು ಪಾಳೆಯಗಾರರ ಕಾಲದಲ್ಲಿ ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿಸಲಾಗಿದೆ. ಶ್ರೀನಿವಾಸನ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳು ಕಂಡುಬರುತ್ತವೆ. ಗರ್ಭಗೃಹದಲ್ಲಿರುವ ಶ್ರೀನಿವಾಸನ ಪ್ರತಿಮೆಯು ತಿರುಮಲೆ ಶ್ರೀನಿವಾಸನಷ್ಟೇ ಎತ್ತರವಿದ್ದು ಸಮಭಂಗಿಯಲ್ಲಿದ್ದು ಶಂಖ, ಚಕ್ರ, ವರದ ಮತ್ತು ಕಟಿಹಸ್ತಗಳನ್ನು ಹೊಂದಿದೆ. ನವರಂಗದ ಗೋಡೆಯಲ್ಲಿ ಶ್ರೀನಿವಾಸ ಕಲ್ಯಾಣದ ಕಥೆಗಳನ್ನು ಪ್ರತಿನಿಧಿಸುವ ಇತ್ತೀಚೆಗೆ ರಚಿಸಲಾಗಿರುವ ಸುಂದರ ತೈಲವರ್ಣ ಚಿತ್ರಗಳು ಕಂಡುಬರುತ್ತವೆ. ಈ ದೇವಾಲಯದಲ್ಲಿ ಪೂಜಾ ಕೈಂಕರ್ಯಗಳನ್ನು ವೈಖಾನಸ ಆಗಮದ ರೀತಿಯಲ್ಲಿ ನೆರವೇರಿಸಲಾಗುತ್ತದೆ. ಈ ದೇವಾಲಯದ ಒಳಗೆ ಪದ್ಮಾವತಿ ದೇವಾಲಯದ ಚಿಕ್ಕ ಗುಡಿಯೂ ಇದೆ. ಆಂಜನೇಯನ ರಥೋತ್ಸವವು ವಾರ್ಷಿಕವಾಗಿ ವೈಶಾಖ ಶುದ್ಧ ದಶಮಿಯಂದು ಉತ್ಸವಗಳು ನಡೆಯುತ್ತವೆ. ಈ ದೇವಾಲಯದ ಪಕ್ಕದಲ್ಲಿರುವ ಚಿಕ್ಕ ಗುಡಿಯಲ್ಲಿ ಕಂಚಿವರದರಾಜಸ್ವಾಮಿ ಶಿಲಾಮೂರ್ತಿಯಿದೆ.

ಮುಳಬಾಗಿಲ ಹಳೆಯ ಊರಿನ ಭಾಗದಲ್ಲಿ ಹಲವಾರು ಪ್ರಾಚೀನ ದೇವಾಲಯಗಳು ಹಾಗೂ ಪುರಾತನ ಮಠಗಳು ಕಂಡುಬರುತ್ತವೆ. ಈ ಹಳೆಯ ಊರಿನ ಹಿಂಭಾಗದಲ್ಲಿರುವ ಬೆಟ್ಟಗಳು ಪ್ರಶಾಂತವಾದ ಪರಿಸರವನ್ನು ಹೊಂದಿವೆ. ಈ ಬೆಟ್ಟಕ್ಕಿರುವ ಮೆಟ್ಟಿಲುಗಳನ್ನು ಏರಿಹೋದರೇ ಎರಡು ಬೃಹದಾಕಾರವಾದ ಕಲ್ಲುಗುಂಡುಗಳ ನಡುವೆ ವಿಜಯನಗರದ ಕಾಲದಲ್ಲಿ ನಿರ್ಮಿಸಲಾಗಿರುವ ನೈಸರ್ಗಿಕ ಗವಿದೇವಾಲಯಗಳಿವೆ. ಗರ್ಭಗೃಹದಲ್ಲಿರುವ ನಾಚಾರಮ್ಮನೆಂದು ಕರೆಯಲಾಗುವ ದೇವಿಯ ವಿಗ್ರಹವು ಚೋಳರ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು ನಾಲ್ಕು ಕೈಗಳನ್ನು ಹೊಂದಿದೆ. ದೇವಾಲಯದ ಎಡಭಾಗಕ್ಕೆ ಹುಟ್ಟು ಬಂಡೆಯ ಮೇಲೆ ವಿಜಯನಗರ ಕಾಲದ ಕ್ರಿ.ಶ.೧೪೧೬ರ ಶಾಸನವು (ಎಂ.ಬಿ–೭) ಪ್ರತಾಪದೇವರಾಯನ ಆಳ್ವಿಕೆಯಲ್ಲಿ ಮುಳವಾಗಿಲ ನಾಗಣ್ಣ ದಣ್ಣಾಯಕನೆಂಬ ಮಂತ್ರಿಯು ಈ ರಾಜ್ಯವನ್ನು ಆಳುತ್ತಿದ್ದಾಗ ಅನ್ನದಾನಿ ಒಡೆಯನೆಂಬ ಅಧಿಕಾರಿಯು ಮುಳವಾಗಿಲ ಗ್ರಾಮದೇವತೆಯಾದ 'ಮುಳವಾಯಿ ನಾಚಿದೇವಿ' ದೇವಾಲಯದ ಮುಖ್ಯ ಪೂಜಾರಿ ಕೇಶವ ಪೆರುಮಾಳನ ಮಕ್ಕಳಾದ ಬಾಳಿಪ, ಮುನಿಯ, ಮಾರಪ್ಪ ಹಾಗೂ ಆವಾಂಬಳ ಎಲ್ಲರ ಒಪ್ಪಿಗೆಯ ಮೇರೆಗೆ ಕೆಲವು ಬ್ರಾಹ್ಮಣರಿಗೆ ಮುಳವಾಯಿ ನಾಚಿದೇವಿಗೆ ಸೇರಿದ್ದ ಕಾತರಿಯಹಳ್ಳಿ ಸೀಮೆಯಲ್ಲಿದ್ದ ಪಾಲಾರು ನದಿಯ ಅರಳಿ ಅಣೆಕಟ್ಟೆಯ ಇದರ ದುರಸ್ತಿ ಕಾರ್ಯಕ್ಕೆ ಹಣ ಒದಗಿಸಲು ಹಲವು ದಾನಗಳನ್ನು ನೀಡಲಾಯಿತು ಮತ್ತು ಸೋರುತ್ತಿದ್ದ ನೀರು ಹರಿಯುತ್ತಿದ್ದ ವಿಶಾಲವಾದ ಹರವಿನಲ್ಲಿ ಮುಳವಾಯಿ–ನಾಚಿಪುರ ಎಂಬ ಗ್ರಾಮವನ್ನು ಕಟ್ಟಬೇಕೆಂದೂ ಪುನಃ ಈ ಅಣೆಕಟ್ಟಿನಲ್ಲಿ ಬಿರುಕು ಉಂಟಾದರೇ ಅಗ್ರಹಾರದ ಬ್ರಾಹ್ಮಣರುಗಳೇ ದುರಸ್ತಿ ಮಾಡಿಸಿಕೊಳ್ಳಬೇಕೆಂಬ ವಿಚಾರವನ್ನೂ ಇದೇ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಈ ಗುಡ್ಡಕ್ಕೆ ಹೋಗುವ ದಾರಿಯಲ್ಲಿ ಹಳೇ ಕೋಟೆ ಭಾಗದಲ್ಲಿರುವ ನಿರ್ಲಕ್ಷಿತ ವೀರಭದ್ರ ದೇವಾಲಯವು ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದ್ದು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಈಗ ಖಾಲಿಯಿದೆ. ಇದರ ಮೇಲ್ಭಾಗದಲ್ಲಿ ಚತುಷ್ಕೋನಾಕಾರದ ವಿಜಯನಗರ ಶೈಲಿಯ ಗಾರೆ ಮತ್ತು ಇಟ್ಟಿಗೆಯ ಶಿಖರವಿದೆ. ಅರ್ಧಮಂಟಪದ ಬಲಬದಿಯಲ್ಲಿ ಶೂಲಬ್ರಹ್ಮನ ವಿಗ್ರಹವಿದೆ. ಆದರೆ, ಬೇರೆ ದೇವಕೋಷ್ಠಗಳು ಖಾಲಿ ಇದರ ನವರಂಗದಲ್ಲಿ ಚೌಕಾಕಾರವಾದ ಸ್ತಂಭಗಳಿದ್ದು ಅವುಗಳ ಮೇಲ್ಭಾಗದಲ್ಲಿ ಶೈವ ಪುರಾಣದ ಕಥೆಗಳನ್ನು ಪ್ರತಿನಿಧಿಸುವ ಆಕರ್ಷಕ ಉಬ್ಬು ಶಿಲ್ಪಗಳಿವೆ. ದೇವಾಲಯದ ಬಲಭಾಗದಲ್ಲಿ ಉತ್ಸವ ಮಂಟಪವಿದ್ದು ಇದೂ ಸಹ ವಿಜಯನಗರ ಕಾಲದ ರಚನೆಯಾಗಿದೆ. ದೇವಾಲಯದ ಎದುರಿಗೆ ೪೦ ಅಡಿ ಎತ್ತರದ ಧ್ವಜಸ್ತಂಭವಿದೆ.

ವೀರಭದ್ರ ದೇವಾಲಯದ ದಕ್ಷಿಣಕ್ಕೆ ಹಾಗೂ ಕೃಷ್ಣಾನಂದ ಮಠದ ಹಿಂಭಾಗಕ್ಕೆ ಕೆರೆಯ ದಂಡೆಯಲ್ಲಿ ಇರುವ ವಿಠಲನಾರಾಯಣ ದೇವಾಲಯವೂ ಸಹ ವಿಜಯನಗರದ ಕಾಲದ ವಾಸ್ತುರಚನೆಯಾಗಿದೆ. ಎತ್ತರವಾದ ರಾಯಗೋಪುರವಿರುವ ಮಹಾದ್ವಾರದಿಂದ ಪ್ರವೇಶಿಸಿದರೇ ವಿಶಾಲವಾದ ಒಳಪ್ರಾಕಾರವು ಸಿಗುತ್ತದೆ. ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಒಳಗೆ ಐದು ಅಡಿ ಎತ್ತರದ ವಿಠಲನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದ್ದು ಅದು ಎರಡು ಕೈಗಳನ್ನು ಹೊಂದಿದ್ದು ಶಂಖ ಮತ್ತು ಅಭಯ ಭಾವಗಳನ್ನು ವ್ಯಕ್ತಪಡಿಸುತ್ತದೆ. ಈ ದೇವಾಲಯದ ನವರಂಗದಲ್ಲಿರುವ ವಿಠಲನ ಉತ್ಸವಮೂರ್ತಿಯು ಜರ್ನಾರ್ಧನನ ವಿಗ್ರಹವಾಗಿದ್ದು ನಾಲ್ಕು ಕೈಗಳಲ್ಲಿ ಅಭಯ, ಚಕ್ರ ಶಂಖ ಮತ್ತು ಗದೆಗಳನ್ನು ಹೊಂದಿದೆ. ನವರಂಗದಲ್ಲಿರುವ ನಾಲ್ಕು ದ್ರಾವಿಡ ಶೈಲಿಯಲ್ಲಿಯ ಸುಂದರ ಸ್ತಂಭಗಳು ಶೋಡಷಕೋನದ ಮಧ್ಯ ಭಾಗಗಳನ್ನು ಹೊಂದಿದ್ದು ಉಬ್ಬು ಶಿಲ್ಪಗಳಿಂದ ಅಲಂಕೃತಗೊಂಡಿವೆ. ಮೊದಲ ಸ್ತಂಭದಲ್ಲಿ ಜಯ, ಗೋಪಿಕಾ ವಸ್ತ್ರಾಪಹರಣ, ಮರ ಏರಿರುವ ಕೃಷ್ಣ ವಾಮನ, ಬಲಿ, ತ್ರಿವಿಕ್ರಮ, ಲಕ್ಷ್ಮೀನರಸಿಂಹ, ವೇಣುಗೋಪಾಲ, ಅಮರನಾರಾಯಣ, ಹಿರಣ್ಯಕಶಿಪುವನ್ನು ಸಂಹಾರ ಮಾಡುತ್ತಿರುವ ನರಸಿಂಹ, ಉಗ್ರನರಸಿಂಹ ಮತ್ತು ಯೋಗಾನರಸಿಂಹನ ಆಕರ್ಷಕ ಉಬ್ಬು ಶಿಲ್ಪಗಳನ್ನು ಹೊಂದಿದೆ. ಎರಡನೇ ಸ್ತಂಭದಲ್ಲಿ ಸೂರ್ಯನಾರಾಯಣ, ಲಕ್ಷ್ಮೀ ಶಿಲ್ಪಗಳಿವೆ. ಮೂರನೇ ಸ್ತಂಭದಲ್ಲಿ ಗೋವರ್ಧನ ಗಿರಿಧಾರಿ, ಬೆಣ್ಣೆಕೃಷ್ಣ ಕಾಳಿಂಗಮರ್ದನ, ಜನಾರ್ಧನ ಮೊದಲಾದ ಸುಂದರ ಉಬ್ಬು ಶಿಲ್ಪಗಳಿವೆ. ನಾಲ್ಕನೇ ಸ್ತಂಭದಲ್ಲಿ ವಿಜಯ, ಕೃಷ್ಣ ಲಕ್ಷ್ಮೀನರಸಿಂಹ, ಲಕ್ಷ್ಮೀಜನಾರ್ಧನ, ನಾರಾಯಣ, ವೇಣುಗೋಪಾಲ ಮೊದಲಾದ ಉಬ್ಬು ಶಿಲ್ಪಗಳಿವೆ. ಎಲ್ಲಾ ಶಿಲ್ಪಗಳು ಚಿತ್ತಾಕರ್ಷಕವಾಗಿವೆ. ಈ ದೇವಾಲಯದ ಮುಂದೆ ದಕ್ಷಿಣಕ್ಕೆ ನೆಟ್ಟ ಕ್ರಿ.ಶ.೧೫೪೮ರ ಶಾಸನವು ವಿಜಯನಗರದ ಸದಾಶಿವರಾಯನ ಆಳ್ವಿಕೆಯಲ್ಲಿ, ಮಹಾಮಂಡಲೇಶ್ವರ ನಂದ್ಯಾಲ ಶ್ರೀರಂಗರಾಜನ ಮಗ ಮಹಾ ಅರಸು ಮುಳವಾಯಿ ರಾಜ್ಯದಲ್ಲಿದ್ದ ೧೮ ದೇವಾಲಯಗಳಿಗೆ ಹಲವು ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದ ತಳಪಾದಿಯ ಮೇಲಿರುವ ಇದೇ ಅವಧಿಯ ಶಾಸನವು (ಎಂ.ಬಿ–೫) ಅಸ್ಪಷ್ಟವಾಗಿದ್ದು ಅರಸನೊಬ್ಬನು ಈ ಊರಿನ ಅಗ್ರಹಾರಕ್ಕೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ದೇವಾಲಯದ ದಕ್ಷಿಣ ಗೋಡೆ ಕಲ್ಲಿನಲ್ಲಿರುವ ಕ್ರಿ.ಶ. ೧೫೧೮ರ ಶಾಸನವು ಅಸ್ಪಷ್ಟವಾಗಿದ್ದು ಕೇವಲ "ಮಳವಾಯ ಭೋಗಾರ ಆಳ್ವಾರ್ ಅಣಂಗಳ್" ಎಂದು ಮಾತ್ರ ತಿಳಿಯಬಹುದಾಗಿದೆ. ಈ ದೇವಾಲಯದಿಂದ ಅನತಿ ದೂರದಲ್ಲಿ ಅಂಜನಾದ್ರಿ ಬೆಟ್ಟದ ತಪ್ಪಲಲ್ಲಿ ಕೆರೆಯ ದಂಡೆಯ ಮೇಲೆ ಗದ್ದೆಗಳ ಮಧ್ಯದಲ್ಲಿ ವಿಜಯನಗರ ಗೋಪಾಲಕೃಷ್ಣ ದೇವಾಲಯವು ಇದ್ದು ಶಿಥಿಲವಾಗಿದೆ. ದೇವಾಲಯವು ವಿಶಾಲವಾದ ಒಳ ಪ್ರಾಕಾರವನ್ನು ಹೊಂದಿದ್ದು ಎತ್ತರವಾದ ಪ್ರವೇಶದ್ವಾರವಿದ್ದು ಮೇಲ್ಭಾಗದಲ್ಲಿ ಆಯತಾಕಾರವಾದ ವಿಜಯನಗರ ಶೈಲಿಯ ರಾಯಗೋಪುರವಿದೆ. ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪಗಳು ಇದ್ದು ಮುಂಭಾಗದಲ್ಲಿದ್ದ ನವರಂಗವು ಬಿದ್ದುಹೋಗಿದ್ದು ಕೇವಲ ಅಧಿಷ್ಠಾನದ ಭಾಗ ಮಾತ್ರ ಇದೆ. ದೇವಾಲಯದಲ್ಲಿ ಯಾವುದೇ ವಿಗ್ರಹಗಳೂ ಇಲ್ಲ, ಆದರೇ, ಗರ್ಭಗೃಹದ ಮೇಲಿರುವ ಸುಂದರ ಶಿಖರದ ಮುಂಭಾಗದಲ್ಲಿ (ಕೀರ್ತಿ ಮುಖದಲ್ಲಿ) ಕುಳಿತ ಭಂಗಿಯಲ್ಲಿರುವ ಯೋಗನಾರಾಯಣನ ಆಕರ್ಷಕ ವಿಗ್ರಹವಿದೆ. ಗರ್ಭಗೃಹದ ಸುತ್ತಲೂ ಸಾಂಧಾರ ಪ್ರದಕ್ಷಿಣಾಪಥವಿದೆ. ದೇವಾಲಯದ ಎದುರು ಕಲ್ಲಿನ ಕಟ್ಟಡವಿರುವ ಪುಷ್ಕರಣಿ ಇದೆ.

ಹಳೇಕೋಟೆಯ ಅಗ್ರಹಾರದಲ್ಲಿರುವ ಕೃಷ್ಣಾನಂದಮಠ ಒಂದು ವೈಶಿಷ್ಟತೆಯನ್ನು ವ್ಯಕ್ತಪಡಿಸುತ್ತದೆ. ಮಠದಲ್ಲಿ ವೇಣುಗೋಪಾಲ ವಿಗ್ರಹವು ಕೃಷ್ಣಾನಂದ ತೀರ್ಥರ ಮೂಲ ಬೃಂದಾವನದ ಮೇಲ್ಭಾಗದಲ್ಲಿದೆ. ಈ ಮಠವನ್ನು ಮುಳಬಾಗಿಲಿನಲ್ಲಿ ಅದ್ವೈತ

ಸಂಪ್ರದಾಯದ ದ್ವಾರಕಾ ಜಗದ್ಗುರು ಸಂಸ್ಥಾನದವರಾಗಿದ್ದ ಕೃಷ್ಣಾನಂದ ತೀರ್ಥ ಸ್ವಾಮಿಗಳು ಸ್ಥಾಪಿಸಿದರೆಂದು ಮಠದ ದಾಖಲೆಗಳಿಂದ ತಿಳಿದುಬರುತ್ತದೆ. ಈ ಮಠದ ಶಾಖೆಯು ತೀರ್ಥಹಳ್ಳಿಯ ಬಳಿಯಿರುವ ಮುಳಬಾಗಿಲ ಗ್ರಾಮದಲ್ಲಿದೆ. ದ್ವಾರಕಾಸಂಸ್ಥಾನದ ಅಭಿನವ ಸಚ್ಚಿದಾನಂದ ತೀರ್ಥಸ್ವಾಮಿಗಳು ಮೂಲತಃ ೨೫ನೇ ಸೆಪ್ಟೆಂಬರ್ ೧೯೧೯ ರಂದು ಮುಳಬಾಗಿಲಿನಲ್ಲಿ ಜನ್ಮತಾಳಿದರು. ಅನಂತರ ಅವರಿಗೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ದ್ವಾರಕಾಮಠದ ಯತಿಗಳಾಗಿದ್ದ ಕೃಷ್ಣಾನಂದ ತೀರ್ಥಸ್ವಾಮಿಗಳು ಸಂನ್ಯಾಸ ದೀಕ್ಷೆ ನೀಡಿದರೆಂದು ಮಠದ ದಾಖಲೆಗಳಿಂದ ತಿಳಿದುಬರುತ್ತದೆ. ಗರ್ಭಗೃಹದ ಮರದ ಬಾಗಿಲವಾಡದಲ್ಲಿ ಸುಂದರವಾದ ವಿಷ್ಣುವಿನ ದಶಾವತಾರವನ್ನು ಕೆತ್ತಲಾಗಿದೆ. ಮುಳಬಾಗಿಲಿನ ಶಂಕರಮಠವು ಊರಿನ ಪೂರ್ವದಿಕ್ಕಿನಲ್ಲಿರುವ ಶಂಕರತೀರ್ಥವೆಂಬ ಪ್ರದೇಶದಲ್ಲಿದ್ದು ಪುಷ್ಕರಣಿ, ದೇವಾಲಯ ಹಾಗೂ ಅನೇಕ ಮಂಟಪಗಳಿಂದ ಕೂಡಿದೆ. ಈ ಸ್ಥಳವು ಅತ್ಯಂತ ಪ್ರಶಾಂತವಾಗಿದ್ದು ವಿಜಯನಗರದ ಆರಂಭದ ಕಾಲದಲ್ಲೇ ಒಂದು ಪ್ರಮುಖ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಈ ಸ್ಥಳದಲ್ಲಿದ್ದ ಎರಡು ದೇವಾಲಯಗಳೆಂದರೇ ಲಕ್ಷ್ಮೀನಾರಾಯಣ ಅಥವಾ ವಿಠಲನಾರಾಯಣ ಮತ್ತು ವಿದ್ಯಾಶಂಕರ. ಆದರೇ ಇವು ಈಗ ಕೇವಲ ಹಾಳು ಮಂಟಪಗಳಾಗಿವೆ. ಶಂಕರತೀರ್ಥದ ಬಳಿಯಿರುವ ಲಕ್ಷ್ಮೀನಾರಾಯಣ ದೇವಾಲಯದ ದಕ್ಷಿಣ ಗೋಡೆಯ ಮೇಲಿರುವ ಕ್ರಿ.ಶ.೧೪೫೯ರ ಶಾಸನವು (ಎಂ.ಬಿ.೧೦) ವಿಜಯನಗರದ ಮಾಂಡಲಿಕನ ಮಂತ್ರಿಯಾಗಿದ್ದ ಹೆಗ್ಗಪ್ಪನ ಮಗ ಮಲ್ಲರಸನು ಲಕ್ಷ್ಮೀನಾರಾಯಣ ದೇವರನ್ನು ಪ್ರತಿಷ್ಠಾಪಿಸಿ ದೇವಾಲಯದ ಗರ್ಭಗೃಹದ ಮೇಲಿರುವ (ಈಗ ಬಿದ್ದಿರುವ) ಚತುಷ್ಕೋನಾಕಾರದ ಶಿಖರವನ್ನು ನಿರ್ಮಿಸಿದನೆಂದು ದಾಖಲಿಸುತ್ತದೆ. ಮಲ್ಲಿಕ್ ಕಾಫುರನು ನಡೆಸಿದ ಹಾವಳಿಗೆ ಹೆದರಿ ಪಂಡರಾಪುರದಲ್ಲಿದ್ದ ಪಾಂಡುರಂಗನ ವಿಗ್ರಹವನ್ನು ಮುಳಬಾಗಿಲಿನ ವಿಠಲನಾರಾಯಣ ದೇವಾಲಯದಲ್ಲಿ ತಾತ್ಕಾಲಿಕವಾಗಿ ಇಟ್ಟಿದ್ದು, ವಿಜಯನಗರದ ಆಳ್ವಿಕೆಯ ಸಮಯದಲ್ಲಿ ಪುನಃ ಪಂಡರಾಪುರಕ್ಕೆ ಒಯ್ಯಲಾಯಿತೆಂದು ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಅಭಿಪ್ರಾಯಪಡುತ್ತಾರೆ. ಶಂಕರತೀರ್ಥದ ಬಳಿ ಇರುವ ಪಾಳು ಬಿದ್ದ ದೇವಾಲಯದ ಗೋಡೆಯ ಮೇಲಿರುವ ಕ್ರಿ.ಶ. ೧೩೮೯ (ಎಂ.ಬಿ.–೧೧) ರ ಶಾಸನವು ಇಮ್ಮಡಿ ಬುಕ್ಕರಾಯನು ತನ್ನ ಗುರು ವಿದ್ಯಾಶಂಕರನ ಸ್ವರೂಪರಾದ ಕ್ರಿಯಾಶಕ್ತಿ ಅವರಿಗೆ ಮುಳವಾಯಿ ರಾಜ್ಯದ ಆವನಿ ನಾಡಿನಲ್ಲಿರುವ ಕುಮ್ಮಾದೇವಿಯ ಹಳ್ಳಿಯನ್ನು ಎಲ್ಲಾ ರೀತಿಯ ಭೂಕಂದಾಯಗಳಿಂದ ಹಾಗೂ ತೆರಿಗೆಗಳಿಂದ ಮನ್ನಾ ಮಾಡಿ ನೀಡಿದ ವಿಚಾರವನ್ನು ದಾಖಲಿಸುತ್ತದೆ. ಅಗ್ರಹಾರದಲ್ಲಿರುವ ವ್ಯಾಸರಾಜ ಮಠವು ಪುರಾತನ ಕಟ್ಟಡವನ್ನು ಹೊಂದಿದ್ದು, ಗರ್ಭಗೃಹದಲ್ಲಿ ವೇಣುಗೋಪಾಲನ ಸುಂದರ ವಿಗ್ರಹವಿದ್ದು ಅಕ್ಕಪಕ್ಕದಲ್ಲಿ ರುಕ್ಮಿಣಿ ಸತ್ಯಭಾಮೆಯರ ಆಕರ್ಷಕ ಶಿಲ್ಪಗಳನ್ನೂ ಪ್ರತಿಷ್ಠಾಪಿಸಲಾಗಿದೆ. ಇದರ ಸಮೀಪವೇ ಪುರಾತನವಾದ ಶ್ರೀಪಾದರಾಜ ಮಠವೂ ಇದ್ದು ಪಕ್ಕದಲ್ಲಿ ಕಲ್ಯಾಣ ಮಂಟಪವೂ ಇದೆ. ಶ್ರೀಮಠದಲ್ಲಿ ಲಕ್ಷ್ಮೀನಾರಾಯಣನ ಸುಂದರ ವಿಗ್ರಹವಿದೆ. ಸಮೀಪದಲ್ಲಿ ಮಾಧವತೀರ್ಥ ಮಠದ ಇಬ್ಬರು ಯತಿಗಳ ಮೂಲ ಬೃಂದಾವನಗಳೂ ಇವೆ.

ಊರಿನೊಳಗಿರುವ ಸೋಮೇಶ್ವರ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದ್ದು ವಿಜಯನಗರ ಪೂರ್ವಕಾಲದ ವಾಸ್ತು ರಚನೆಯಾಗಿದೆ. ಈ ದೇವಾಲಯದ ಗರ್ಭಗೃಹ ಮತ್ತು ಅರ್ಧಮಂಟಪವು ಇಳವಂಜಿ ವಾಸುದೇವರಾಯನ (ಕ್ರಿ.ಶ.೧೨೩೦) ಕಾಲದ ಲಕ್ಷಣಗಳನ್ನು ವ್ಯಕ್ತಿಪಡಿಸುತ್ತದೆ. ಅರ್ಧಮಂಟಪದ ತಳಪಾಯದ ಮೇಲಿರುವ ತಮಿಳು ಶಾಸನವು ಇದೇ ಕಾಲದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ನವರಂಗ ಹಾಗೂ ಅಲ್ಲಿರುವ ಸ್ತಂಭಗಳ ಶೈಲಿಯು ವಿಜಯನಗರದ ಮಧ್ಯಕಾಲಕ್ಕೆ ಸೇರುತ್ತದೆ. ಈ ದೇವಾಲಯದ ಸ್ತಂಭದ ರಚನೆಯು ಮೈಸೂರು ಜಿಲ್ಲೆಯ ಗುಂಡ್ಲುಪೇಟೆಯಲ್ಲಿರುವ ಪರವಾಸುದೇವ ದೇವಾಲಯದ ಸ್ತಂಭಗಳನ್ನು ಬಹಳಷ್ಟು ಮಟ್ಟಿಗೆ ಹೋಲುತ್ತದೆಂದು ಮೈಸೂರು ಪುರಾತತ್ವ ವರದಿಯಲ್ಲಿ ಅಭಿಪ್ರಾಯಪಡಲಾಗಿದೆ. ಗರ್ಭಗೃಹವು ಚೌರಸವಾಗಿದ್ದು ಒಳಗೆ ಹೆಚ್ಚು ಎತ್ತರವಿಲ್ಲದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ದಕ್ಷಿಣ ಭಾಗದಲ್ಲಿರುವ ಕೊಠಡಿಯಲ್ಲಿ ಸಪ್ತಮಾತೃಕೆಯರ ಬಿಡಿ ಶಿಲ್ಪಗಳನ್ನು ಇಡಲಾಗಿದೆ. ಇದರ ಉತ್ತರಭಾಗದಲ್ಲಿರುವ ಕೊಠಡಿಯಲ್ಲಿ ಉತ್ಸವಮೂರ್ತಿಗಳಾದ ಶಿವ–ಪಾರ್ವತಿ ಮತ್ತು ಗಣೇಶನ ವಿಗ್ರಹಗಳನ್ನು ಇಡಲಾಗಿದೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಸ್ತಂಭಗಳು ಚೌಕಾಕಾರವಾಗಿದ್ದು ಶೈವಪುರಾಣದ ಕಥೆಗಳನ್ನು ಪ್ರತಿನಿಧಿಸುವ ಸುಂದರ ಉಬ್ಬುಶಿಲ್ಪಗಳನ್ನು ಹೊಂದಿವೆ. ನವರಂಗದ ಪ್ರವೇಶದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ. ಇದರ ಮುಂಭಾಗದಲ್ಲಿ ಚಿಕ್ಕದಾದ ತೆರೆದ ಮುಖಮಂಟಪವಿದೆ. ದೇವಾಲಯದ ದಕ್ಷಿಣಕ್ಕೆ ಪುಷ್ಕರಣಿ ಇದೆ ಮತ್ತು ಎದುರಿಗೆ ದೀಪಮಾಲೆ ಸ್ತಂಭ ಮತ್ತು ದೊಡ್ಡದಾದ ಕಲ್ಲಿನ ಮಂಟಪವಿದೆ. ಇದರೊಳಗೆ ನಂದಿಯ ಏಕಶಿಲಾ ಶಿಲ್ಪವಿದೆ. ಈ ದೇವಾಲಯದಲ್ಲಿದ್ದ ಕಂಚಿನ ನಟರಾಜನ ವಿಗ್ರಹವು ಅತ್ಯಂತ ಮನಮೋಹಕವಾಗಿದ್ದು,

ಇದು ಕ್ರಿ. ಶ. ೧೩ನೇ ಶತಮಾನದ ಲಕ್ಷಣಗಳನ್ನು ಹೊಂದಿದ್ದು, ನಟರಾಜನು ಅಂಧಕಾಸುರನನ್ನು ಮೆಟ್ಟಿನಿಂತಿರುವ ರೂಪವು ಅನೇಕ ಕಲಾ ತಜ್ಞರನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಮುಖ್ಯ ದೇವಾಲಯದ ನೈರುತ್ಯಕ್ಕೆ ಪಾರ್ವತಿಯ ಪ್ರತ್ಯೇಕ ದೇವಾಲಯವಿದ್ದು ವಿಜಯನಗರದ ವಾಸ್ತುಶೈಲಿಯನ್ನು ವ್ಯಕ್ತಪಡಿಸುತ್ತದೆ. ಸೋಮೇಶ್ವರ ದೇವಾಲಯದ ದಕ್ಷಿಣ ಗೋಡೆಯಲ್ಲಿರುವ ಕ್ರಿ.ಶ.೧೫೧೮ರ (ಎಂ.ಬಿ–೧೯) ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ಈ ಪ್ರದೇಶದ ಸಲಗೆಯ ದೇವನೆಂಬ ಅಧಿಕಾರಿಯು ಮುಳವಾಯಿ ರಾಜ್ಯದ ಎಳವಂಜಿ ನಾಡಿನ ಮಂದರಗೊಂಟೆ ಗ್ರಾಮವನ್ನು ಸೋಮೇಶ್ವರ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಈ ಆದೇಶವನ್ನು ನೀಡಿದವನು ಕರಣಿಕ ನಾಗಣ್ಣನೆಂದು ಸಹ ಶಾಸನದಲ್ಲಿ ದಾಖಲಿಸಿದೆ. ಇದೇ ಗೋಡೆಯಲ್ಲಿರುವ ಇನ್ನೊಂದು ಶಾಸನವು ಕ್ರಿ.ಶ.(ಎಂ.ಬಿ.೨೦) ೧೪೬೮ರಲ್ಲಿ ವೀರಪ್ರತಾಪ ವಿರೂಪಾಕ್ಷರಾಯನ ಆಳ್ವಿಕೆಯಲ್ಲಿ ಮುಳವಾಯಿ ಹರಿಯಪ್ಪನು ಮುಳವಾಯಿನಗರದ ವರ್ತಕ ದಣದಪ್ಪನ ಮಗನಾದ ಎಲೆಯ ಸಂಕಪ್ಪ ಸೆಟ್ಟಿಯು ಈ ಸೋಮೇಶ್ವರ ದೇವಾಲಯಕ್ಕೆ ನೀಡಿದ ಹಲವು ದಾನಗಳ ವಿವರಗಳನ್ನು ದಾಖಲಿಸುತ್ತದೆ. ಸೋಮೇಶ್ವರ ದೇವಾಲಯದ ಪ್ರಾಂಗಣದ ಹಿಂಭಾಗದಲ್ಲಿ ನವಿಲಿನ ಮೇಲೆ ಕುಳಿತಿರುವ ಕುಮಾರಸ್ವಾಮಿಯ ಸುಂದರ ಶಿಲ್ಪವಿದ್ದು (ಆರು ಅಡಿ ಎತ್ತರವಿದೆ) ಆರು ಮುಖ (ಷಣ್ಮುಖ) ಗಳನ್ನು ಮತ್ತು ೧೨ ಕೈಗಳನ್ನು ಹೊಂದಿದೆ. ಮುಳಬಾಗಿಲಿನ ಬಸವಣ್ಣ ದೇವಾಲಯದ ಪಕ್ಕದಲ್ಲಿರುವ ಭಗ್ನ ಶಾಸನವು ವೀರಪ್ರತಾಪ ವೆಂಕಟಪತಿ ದೇವರಾಯ (೧೫೮೬–೧೬೧೪)ನ ಆಳ್ವಿಕೆಯಲ್ಲಿ ಸುಗಟೂರಿನ ಹಿರಿಯಣಗೌಡನು ಮುಳವಾಯಿ ಪೇಟೆಯಲ್ಲಿ ಒಂದು ಧಾರ್ಮಿಕ ತೆರಿಗೆ ವಿನಾಯಿತಿಯನ್ನು ನೀಡಿದ ವಿಚಾರವನ್ನು ದಾಖಲಿಸುತ್ತದೆ. ಇದೇ ಊರಿನ ವೀರಭದ್ರಸ್ವಾಮಿ ದೇವಾಲಯದ ಎದುರಿಗಿರುವ ಶಾಸನವು ಬಹಳಷ್ಟು ಅಳಿಸಿಹೋಗಿದ್ದು, ಕ್ರಿ.ಶ. ೧೬ನೇ ಶತಮಾನದಲ್ಲಿ ಮಹತ್ತಿನ ಮಠದ ಕೆಲವು ಭಾಗಗಳನ್ನು ತಿಮ್ಮನಾಯಕನೆಂಬ ಅಧಿಕಾರಿಯು ನಿರ್ಮಿಸಿ, ಮಠಕ್ಕೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಊರಿನಲ್ಲಿ ರಣಭೇರಮ್ಮ, ಅಗಸ್ತ್ಯೇಶ್ವರ ವಾರ್ಷಿಕವಾಗಿ ಕರಗ ನಡೆಯುವ ಧರ್ಮರಾಯಸ್ವಾಮಿ, ಕೋದಂಡರಾಮ ಹಾಗೂ ಪಕ್ಕದಲ್ಲೇ ತುಳಸಿ ರಾಮಾಲಯ, ಸೂರ್ಯನಾರಾಯಣ ದೇವಾಲಯಗಳಿವೆ. ಇಲ್ಲಿ ರಾಘವೇಂದ್ರಸ್ವಾಮಿಗಳ ಮಠವಿದ್ದು, ಹಲವು ಯತಿಗಳ ಬೃಂದಾವನಗಳಿವೆ.

ಮುಳಬಾಗಿಲಿನ ಸೋಮೇಶ್ವರ ಪಾಳ್ಯದಲ್ಲಿ ಸ್ವಾತಂತ್ರ್ಯಸಂಗ್ರಾಮದ ಸಂದರ್ಭದಲ್ಲಿ ನಿರ್ಮಿಸಲಾದ ಸಮಾಧಿಯೊಂದು ಇದ್ದು ೧೮೫೭ರಲ್ಲಿ ನಡೆದ ಸಿಪಾಯಿದಂಗೆ ಅಥವಾ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಈ ಪ್ರಾಂತ್ಯದ ಸುಬೇದಾರನ ಪತ್ನಿ ಚೋರಿಯಪ್ಪ ಡಿಸಕ್ಕ ಎಂಬ ಮಹಿಳೆಯು ತನ್ನ ಇಬ್ಬರು ಮಕ್ಕಳೊಂದಿಗೆ ಇಪ್ಪತ್ತೈದನೇ ವಯಸ್ಸಿನಲ್ಲಿ ಮಡಿದ ದಾರುಣ ವಿಷಯ ಅದರ ಮೇಲಿರುವ ಬರಹದಿಂದ ವ್ಯಕ್ತವಾಗುತ್ತದೆ. ಊರಿನಲ್ಲಿರುವ ಹೈದರ್‌ವಲಿ ಮತ್ತು ಹಾಜಿ ಮೆಕ್ಕಾಯಿ ದರ್ಗಾ ಇರುವ ಕಟ್ಟಡವು ಒಂದು ನಿರ್ವಸಿತ ಪುರಾತನ ದೇವಾಲಯದ ವಾಸ್ತುರಚನೆಯನ್ನು ಹೊಂದಿದೆ. ಈ ಕಟ್ಟಡದ ನವರಂಗವಿದ್ದ ಭಾಗದಲ್ಲಿ ಹೈದರ್‌ವಲಿ ಮತ್ತು ಹಾಜಿ ಮೆಕ್ಕಾಯಿ ಸಮಾಧಿಗಳು ಕಂಡುಬರುತ್ತವೆ. ಹೈದರ್ ವಲಿ ಪೀರ್ ಒಬ್ಬರು ಜನಪ್ರಿಯ ಸೂಫೀ ಸಂತರಾಗಿ ಮುಳಬಾಗಿಲಿನಲ್ಲಿ ಜೀವಿಸಿದ್ದರು. ಇವರ ಜ್ಞಾಪಕಾರ್ಥವಾಗಿ ನಿರ್ಮಿಸಲಾಗಿರುವ ಈ ದರ್ಗಾಕ್ಕೆ ದಕ್ಷಿಣಭಾರತದ ವಿವಿಧ ಭಾಗಗಳಿಂದಲೂ ಮತ್ತು ನೆರೆಯ ಆಂಧ್ರಪ್ರದೇಶದಿಂದಲೂ ಭಕ್ತರು ವಾರ್ಷಿಕವಾಗಿ ನಡೆಯುವ ಉರುಸ್ ಸಂದರ್ಭದಲ್ಲಿ ಭೇಟಿಕೊಡುವುದು ರೂಢಿಯಲ್ಲಿದೆ. **ನರಸಿಂಹತೀರ್ಥ:** ಮುಳಬಾಗಿಲಿನಿಂದ ಎರಡು ಕಿ.ಮೀ. ತಿರುಪತಿ ರಸ್ತೆಯಲ್ಲಿ ಹೋದರೆ ಸಿಗುವುದೇ ನರಸಿಂಹತೀರ್ಥ ಅಥವಾ ಶ್ರೀಪಾದರಾಜ ಮಠವೆಂಬ ವೈಷ್ಣವರ ಪವಿತ್ರ ಕ್ಷೇತ್ರ. ಶ್ರೀಪಾದರಾಜರು (ಕ್ರಿ.ಶ. ೧೪೦೨–೧೫೦೨) ಅಪ್ರತಿಮ ವಿದ್ಯಾಗುರುಗಳಾಗಿದ್ದು ಈ ಕ್ಷೇತ್ರವನ್ನು ನರಸಿಂಹ ಕ್ಷೇತ್ರವೆಂದು ಪರಿಗಣಿಸಿ ಇದನ್ನು ಪವಿತ್ರವಾದ ಘಟಿಕಾಸ್ಥಾನವನ್ನಾಗಿ ಅಭಿವೃದ್ಧಿಪಡಿಸಿ ಅನೇಕ ವೈಷ್ಣವ ವಿದ್ವಾಂಸರುಗಳನ್ನು ಕಠಿಣ ಧಾರ್ಮಿಕ ವಿದ್ಯಾಭ್ಯಾಸದ ಕ್ರಿಯೆಗೆ ಒಳಪಡಿಸಿದರೆಂದು ಪ್ರತೀತಿಯಿದೆ. ಇವರ ಮೂಲ ಹೆಸರು ಲಕ್ಷ್ಮೀನಾರಾಯಣ ತೀರ್ಥರು ಎಂದಾಗಿತ್ತು. 'ವಾಗ್ವಜ್ರ' ಎಂಬ ಸಂಸ್ಕೃತ ಕೃತಿಯನ್ನು ಇವರು ರಚಿಸಿರುವರು. ಮುಳಬಾಗಿಲು ಇವರ ಪರಿಶ್ರಮದಿಂದಾಗಿ ಇತಿಹಾಸ ಕಂಡ ಅಪೂರ್ವ ವಿದ್ಯಾಕೇಂದ್ರವೆಂಬ ಹಿರಿಮೆಯನ್ನು ಅನೇಕ ಶತಮಾನಗಳ ಕಾಲ ಹೊಂದಿತ್ತೆಂಬುದು ವಿಶೇಷ. ಇವರ ಶಿಷ್ಯರಲ್ಲಿ ವ್ಯಾಸರಾಜರು ಬಹಳ ಪ್ರಮುಖರಾಗಿದ್ದರು. ವ್ಯಾಸರಾಜರು ಮತ್ತು ಶ್ರೀಪಾದರಾಜರುಗಳನ್ನು ಮಾತ್ರ ರಾಯ ಅಥವಾ ರಾಜರೆಂದು ಕರೆದಿರುವುದಕ್ಕೆ ಮುಖ್ಯಕಾರಣವೆಂದರೆ ಇವರಿಬ್ಬರಿಗೂ ಕೃಷ್ಣದೇವರಾಯ ಹಾಗೂ ವಿಜಯನಗರದ ಇತರೆ ರಾಜರುಗಳು ರಾಜ ಮರ್ಯಾದೆ ನೀಡುತ್ತಿದ್ದುದೇ ಆಗಿದೆ. ಶ್ರೀಪಾದರಾಜರು ಕ್ರಿ.ಶ. ೧೪೦೨ ರಿಂದ ೧೫೦೪ರವರೆಗೆ ನೂರು ವರ್ಷ ಪರ್ಯಂತ ಜೀವಿತವಾಗಿದ್ದು ಮುಳಬಾಗಿಲಿನ ನರಸಿಂಹ

ಕ್ಷೇತ್ರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ದಕ್ಷಿಣ ಭಾರತದಾದ್ಯಂತ ಸಂಚರಿಸಿ ಆಧ್ಯಾತ್ಮಲೋಕದಲ್ಲಿ ಮಾತ್ರವಲ್ಲದೇ ಕನ್ನಡ ಸಾರಸ್ವತಲೋಕದಲ್ಲಿಯೂ ಅಪರಿಮಿತವಾದ ಪಾಂಡಿತ್ಯವನ್ನು ಗಳಿಸಿ ಜನಪ್ರಿಯತೆ ಪಡೆದವರು. ಇವರು ಪ್ರಾರಂಭದಲ್ಲಿ ಶ್ರೀರಂಗದಲ್ಲಿ ತಮ್ಮ ಗುರುಕುಲದ ವಿದ್ಯಾಭ್ಯಾಸವನ್ನು ಗಳಿಸಿ 'ರಂಗವಿಠಲ'ನೆಂಬ ಅಂಕಿತದಿಂದ ನೂರಾರು ದೇವರ ನಾಮಗಳನ್ನು ರಚಿಸಿ ಕನ್ನಡ ಹರಿದಾಸ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ದೇವರ ನಾಮಗಳ ಜೊತೆಗೆ ಉಗಾಭೋಗ, ವೃತ್ತನಾಮ, ದೇವರನಾಮ, ನರ್ತನಕ್ಕಾಗಿ ಪ್ರತ್ಯೇಕ ಸಾಹಿತ್ಯ, ಭಜನೆಗಾಗಿ ಭ್ರಮರಗೀತೆ, ಸುಳಾದಿ, ಇತ್ಯಾದಿ ವಿವಿಧ ಪ್ರಕಾರದ ಕೃತಿಗಳನ್ನು ರಚಿಸಿ ಪ್ರಖ್ಯಾತರಾಗಿರುವರು. ಮಠದ ಆವರಣದಲ್ಲಿ ಶ್ರೀಪಾದರಾಜರ ಮೂಲ ಬೃಂದಾವನ ಮತ್ತು ಇದೇ ಪರಂಪರೆಗೆ ಸೇರಿದ ಇತರೆ ಹನ್ನೊಂದು ಯತಿಗಳ ಬೃಂದಾವನಗಳೂ ಇವೆ. ಈ ಪ್ರಾಂಗಣದಲ್ಲಿರುವ ದೇವಾಲಯಗಳೆಂದರೇ ಯೋಗಾನರಸಿಂಹ, ಮುಖ್ಯ ಪ್ರಾಣದೇವರು ಮತ್ತು ವ್ಯಾಸರಾಜರು ಪಾಠ ಪ್ರವಚನ ನೀಡುತ್ತಿದ್ದ ತಪೋ ಗುಹೆ. ನರಸಿಂಹ ದೇವಾಲಯದ ಹಿಂಬಾಗದಲ್ಲಿ ವ್ಯಾಸಗುಹೆ ಇದ್ದು, ಅದರ ಒಳಗಿನ ಬಂಡೆಯ ಮೇಲೆ ವ್ಯಾಸರಾಜರ ಉಬ್ಬುಶಿಲ್ಪವನ್ನು ಕಾಣಬಹುದಾಗಿದೆ. ನರಸಿಂಹ ದೇವಾಲಯದಲ್ಲಿ ವ್ಯಾಸರಾಜರು ಪ್ರತಿಷ್ಠಾಪಿಸಿರುವ ಒಂದು ಸುಂದರ ಆಂಜನೇಯ ಮೂರ್ತಿಯೂ ಇದೆ. ನರಸಿಂಹ ತೀರ್ಥದ ಬಳಿಯೇ ಮುಳಬಾಗಿಲಿಗೆ ಹೋಗುವ ಹೆದ್ದಾರಿಯ ಇಕ್ಕೆಲಗಳಲ್ಲಿ ಎರಡು ಬಂಡೆಗಳ ಮೇಲೆ ಚಕ್ರ ಶಂಖಗಳ ಉಬ್ಬು ಶಿಲ್ಪಗಳಿದ್ದು, ಅವುಗಳು ಸಹ ಅಕ್ಷೋಭ್ಯತೀರ್ಥದಿಂದ ನಿರ್ಮಿತ ಎಂದು ಪ್ರಸಿದ್ಧವಾಗಿದೆ. ನರಸಿಂಹ ತೀರ್ಥದ ಬಳಿ ಉಡುಪಿ ಪೇಜಾವರ ಮಠದ ಪರಂಪರೆಗೆ ಸೇರಿದ ನಿತ್ಯವಲ್ಲಭ ತೀರ್ಥರ ಬೃಂದಾವನವೂ ಸಹ ಇದ್ದು, ಅದು ಈ ಎರಡೂ ಮಠಗಳಿಗೆ ಇದ್ದ ವಿಶೇಷ ಸಂಬಂಧಕ್ಕೆ ಸೂಚಕವಾಗಿದೆ. ಮಠದ ಎದುರು ಭಾಗದಲ್ಲಿ ಸರ್ವಋತು ನರಸಿಂಹ ತೀರ್ಥವೆಂಬ ಕಲ್ಲಿನ ಸೋಪಾನವಿರುವ ವಿಶಾಲವಾದ ಪುಷ್ಕರಣಿಯಿದೆ. ಇದರ ಮಧ್ಯದಲ್ಲಿ ಕಲ್ಲಿನ ತೆಪ್ಪೋತ್ಸವ ಮಂಟಪವಿದೆ. ಇಲ್ಲಿರುವ ಯೋಗಾನರಸಿಂಹನ ರೇಖಾಚಿತ್ರವನ್ನು ಮೊದಲು ಕ್ರಿ.ಶ.೧೩ನೇ ಶತಮಾನದಲ್ಲಿ ಅಕ್ಷೋಭ್ಯತೀರ್ಥರು ಅಂಗಾರದಲ್ಲಿ ರಚಿಸಿ, ನಂತರ ಕಲ್ಲಿನಲ್ಲಿ ಸ್ವಯಂಭೂವಾಗಿ ಮೂಡಿದೆ ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ನರಸಿಂಹದೇವಾಲಯದ ಹಿಂಭಾಗದಲ್ಲಿ ವ್ಯಾಸಗುಹೆ ಇದ್ದು ಒಳಗೆ ವ್ಯಾಸರಾಜರ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ವ್ಯಾಸರಾಜರು ಶ್ರೀಪಾದರಾಜರಲ್ಲಿ ಶಿಷ್ಯವೃತ್ತಿ ವಹಿಸಿ ಸುಮಾರು ೧೨ ವರ್ಷಗಳ ಕಾಲ ಇಲ್ಲಿ ನೆಲೆಸಿದ್ದರೆಂದು ಪ್ರತೀತಿಯಿದೆ. ಶ್ರೀಪಾದರಾಜರ ಆರಾಧನೆಯು ಜೇಷ್ಠ ಶುದ್ಧ ಚತುರ್ದಶಿಯಂದು ವಿಜೃಂಭಣೆಯಿಂದ ನಡೆಯುತ್ತದೆ. ಆ ಸಂದರ್ಭದಲ್ಲಿ ಸಹಸ್ರಾರು ಜನ ಭಕ್ತಾದಿಗಳು ದಕ್ಷಿಣ ಭಾರತದ ಎಲ್ಲಾ ಕಡೆಗಳಿಂದಲೂ ಬಂದು ಮುಳಬಾಗಿಲಿನ ಕ್ಷೇತ್ರದಲ್ಲಿ ಸೇರುತ್ತಾರೆ. **ಹಂಚಿಕಲ್ಲು ಗುಡ್ಡ:** ಶ್ರೀಪಾದರಾಜಮಠದ ಎದುರಿಗೆ ಇರುವ ಬೆಟ್ಟದ ಸಾಲುಗಳಲ್ಲಿ ಹಂಚಿಕಲ್ಲುಗುಡ್ಡವೂ ಒಂದು. ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರೆನಿಸಿದ್ದ ಅಕ್ಷೋಭ್ಯತೀರ್ಥರು ಈ ಪ್ರದೇಶದಲ್ಲಿ ನೆಲಸಿ ಹಂಚಿಕಲ್ಲು ಗುಡ್ಡದಲ್ಲಿ ತಪಸ್ಸನ್ನಾಚರಿಸುತ್ತಿದ್ದರೆಂದು ಪ್ರತೀತಿಯಿದೆ. ಒಮ್ಮೆ ವಿಜಯನಗರ ಸ್ಥಾಪಕರೆಂದು ಪ್ರಸಿದ್ಧರಾಗಿರುವ ವಿದ್ಯಾರಣ್ಯರು ಇಲ್ಲಿಗೆ ಭೇಟಿ ಕೊಟ್ಟಾಗ ಅಕ್ಷೋಭ್ಯತೀರ್ಥರು ಅವರಿಗೆ ಭವ್ಯ ಸ್ವಾಗತವನ್ನು ಕೋರಿ ಹಂಚಿಕಲ್ಲು ಬೆಟ್ಟದ ತಮ್ಮ ತಪೋಸ್ಥಾನದಲ್ಲಿ ತತ್ವವಾದದಲ್ಲಿ ಪರಾಭವಗೊಳಿಸಿದರೆಂದು ಪ್ರತೀತಿಯಿದೆ. ಈಗಲೂ ಈ ಸ್ಥಳದಲ್ಲಿ ಈ ತತ್ವವಾದದ ಜಯದ ಸಂಕೇತವಾಗಿ ನೆಡಲಾಗಿರುವ ವಿಜಯಸ್ತಂಭವು ಕಂಡುಬರುತ್ತದೆ. ಕನ್ನಡದ ಕವಿಋಷಿಗಳೆಂದು ಪ್ರಸಿದ್ಧರಾಗಿರುವ ಹಾಗೂ 'ಮಂಕುತಿಮ್ಮ ಕಗ್ಗ'ವನ್ನು ರಚಿಸಿರುವ ಡಾ॥ ಡಿ. ವಿ. ಗುಂಡಪ್ಪನವರು ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಮುಳಬಾಗಿಲಿನಲ್ಲಿ ಪಡೆದರು. **ಘಟ್ಟು** (ಮುಳಬಾಗಿಲು ತಾಲೂಕು) ಮುಳಬಾಗಿಲಿನಿಂದ ಬೈರಕೂರಿಗೆ ಪೂರ್ವದಲ್ಲಿ ಸುಮಾರು ಏಳು ಕಿ.ಮೀ. ದೂರದಲ್ಲಿರುವ ಘಟ್ಟು ಪ್ರಮುಖ ಯಾತ್ರಾ ಸ್ಥಳವಾಗಿದ್ದು, ವೆಂಕಟರಮಣ ದೇವಾಲಯಕ್ಕೆ ಪ್ರಸಿದ್ಧವಾಗಿದೆ. ಇದೊಂದು ಬೇಚಿರಾಕ್ ಗ್ರಾಮವಾಗಿದ್ದು, ಜನ ವಸತಿ ಇಲ್ಲದಿದ್ದರೂ ಈ ದೇವಾಲಯದಿಂದಾಗಿ ಹಾಗೂ ವಾರ್ಷಿಕವಾಗಿ ನಡೆಯುವ ದನಗಳ ಬೃಹತ್ ಜಾತ್ರೆಯಿಂದ ಜನಪ್ರಿಯವಾಗಿದೆ. ಈ ದೇವಾಲಯವು ಆಧುನಿಕ ವಾಸ್ತುರಚನೆಯನ್ನು ಹೊಂದಿದ್ದು, ಸುಮಾರು ೬೦ ವರ್ಷಗಳ ಹಿಂದೆ ನಿರ್ಮಿಸಲಾಯಿತೆಂದು ಹೇಳಲಾಗುತ್ತದೆ. ಸ್ಥಳೀಯ ಹೇಳಿಕೆಯ ಪ್ರಕಾರ ಒಬ್ಬ ತಹಶೀಲ್ದಾರ್ ಅವರು ಒಂದು ದಿನ ಕಾರ್ಯನಿಮಿತ್ತ ಈ ಸ್ಥಳದ ಮೂಲಕ ಹೋಗುತ್ತಿದ್ದಾಗ ನಾಮ ಧರಿಸಿದ್ದ ಬಾಲಕನೊಬ್ಬನು ಅವರಿಗೆ ಕಾಣಿಸಿಕೊಂಡು ಸ್ವಲ್ಪ ಸಮಯದಲ್ಲೇ ಮಾಯವಾದನೆಂದೂ, ನಂತರ ಅವರ ಕನಸಿನಲ್ಲಿ ವೆಂಕಟರಮಣನು ಕಾಣಿಸಿಕೊಂಡು ಈ ಸ್ಥಳದಲ್ಲಿ ತನ್ನ ದೇವಾಲಯವನ್ನು ನಿರ್ಮಿಸಬೇಕೆಂದು ಪ್ರೇರಣೆ ನೀಡಿದನೆಂದು ಪ್ರತೀತಿಯಿದೆ. ಆಧುನಿಕ ದೇವಾಲಯದಲ್ಲಿ ಗರ್ಭಗೃಹ, ನವರಂಗ ಹಾಗೂ ಮುಖಮಂಟಪಗಳಿದ್ದು, ಗರ್ಭಗೃಹದ ಮೇಲೆ ಎತ್ತರವಾದ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾದ ಶಿಖರವಿದೆ. ಇದರ ಬಲಭಾಗದಲ್ಲಿ ಪದ್ಮಾವತಿ ಅಮ್ಮನವರ ಚಿಕ್ಕ ಗುಡಿಯಿದೆ. ಪ್ರತಿ ವರ್ಷ ಚೈತ್ರಮಾಸದಲ್ಲಿ

ಬ್ರಹ್ಮರಥೋತ್ಸವ ನಡೆದಾಗ ಸಹಸ್ರಾರು ಜನ ಕರ್ನಾಟಕ ಮಾತ್ರವಲ್ಲದೆ ನೆರೆ ರಾಜ್ಯಗಳಿಂದಲೂ ಭೇಟಿ ನೀಡುತ್ತಾರೆ. ಇಲ್ಲಿ ಕೇವಲ ವಾರಕ್ಕೊಮ್ಮೆ ಪೂಜೆ ನಡೆಯುತ್ತದೆ.

**ಯಗವಕೋಟೆ** (ಚಿಂತಾಮಣಿ ತಾಲೂಕು: ಜನಸಂಖ್ಯೆ: ೧,೨೫೫) ಚಿಂತಾಮಣಿಯಿಂದ ಬಟ್ಲಹಳ್ಳಿಗೆ ಹೋಗುವ ಮಾರ್ಗದಲ್ಲಿ ೧೫ ಕಿ. ಮೀ. ದೂರದಲ್ಲಿರುವ ಯಗವಕೋಟೆಯು ಅನೇಕ ಅವಶೇಷಗಳನ್ನು ಹೊಂದಿದೆ. ಊರಿನಿಂದಾಚೆ (ಒಂದು ಕಿ.ಮೀ) ವೀರನಾರಾಯಣನ ಪ್ರಸಿದ್ಧ ದೇವಾಲಯವಿದ್ದು, ಇದರ ಸಮೀಪದಲ್ಲಿರುವ ಬೃಹದಾಕಾರವಾದ ಗುಡ್ಡದ ಮೇಲೆ ವಿಷ್ಣುಪಾದಗಳು ಹಾಗೂ ಇದರ ತಪ್ಪಲಲ್ಲಿ ವಿಶಾಲ ಕೊಳ ಕಂಡುಬರುತ್ತವೆ. ಈ ಕೊಳಕ್ಕೆ 'ಮುತ್ತಿನ ಕೊಳ'ವೆಂದು ಕರೆಯಲಾಗುತ್ತದೆ. ಇದೇ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಮೂಕೊಂಡ (ಯಗವಕೋಟೆ)ದ ತಿರುವೆಂಗಡನಾಥ ಎಂದು ಉಲ್ಲೇಖಗೊಂಡಿರುವುದು ಗಮನೀಯವಾಗಿದೆ. ವೀರನಾರಾಯಣ ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಈ ದೇವಾಲಯದ ಗರ್ಭಗೃಹ ಮತ್ತು ಅರ್ಧಮಂಟಪಗಳು ಹೊಯ್ಸಳರ ವಾಸ್ತು ಲಕ್ಷಣಗಳನ್ನು ವ್ಯಕ್ತಪಡಿಸುತ್ತಿದ್ದು, ನವರಂಗ ಮತ್ತು ಮುಖಮಂಟಪಗಳು ನಂತರದಲ್ಲಿ ವಿಜಯನಗರ ಹಾಗೂ ಪಾಳೆಯಗಾರರ ಕಾಲದಲ್ಲಿ ವಿಸ್ತರಿಸಲ್ಪಟ್ಟಿದೆ. ಮುಖಮಂಟಪವು ವಿಶಾಲವಾಗಿದ್ದು, ಇಲ್ಲಿಯ ಸ್ತಂಭಗಳ ಮೇಲೆ ವೈಷ್ಣವ ಪುರಾಣವನ್ನು ಪ್ರತಿನಿಧಿಸುವ ಅನೇಕ ಆಕರ್ಷಕ ಉಬ್ಬುಶಿಲ್ಪಗಳು ಕಂಡುಬರುತ್ತವೆ. ನವರಂಗದಲ್ಲಿ ಆಳ್ವಾರರ ಬಿಡಿಶಿಲ್ಪಗಳಿವೆ. ನವರಂಗದ ದಕ್ಷಿಣಕ್ಕಿರುವ ದ್ವಾರವನ್ನು ಜಯ–ವಿಜಯರ ಸುಂದರ ಶಿಲ್ಪಗಳಿಂದ ಅಲಂಕರಿಸಲಾಗಿದ್ದು, ಈ ದ್ವಾರಕ್ಕೆ ವೈಕುಂಠದ್ವಾರವೆಂದೂ ಕರೆಯಲಾಗುತ್ತದೆ. ನವರಂಗದ ಸ್ತಂಭಗಳ ಮೇಲೆ ವೈಷ್ಣವ ಪುರಾಣಕ್ಕೆ ಸಂಬಂಧಿಸಿದ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗುಡಿಯು ಚೌರಸವಾಗಿದ್ದು, ಒಳಗೆ ಸುಮಾರು ಆರು ಅಡಿ ಎತ್ತರವಿರುವ ವೀರನಾರಾಯಣ (ಅಥವಾ ಶಾಸನೋಕ್ತ ತಿರುವೆಂಗಡನಾಥ) ಚತುರ್ಭುಜಗಳಲ್ಲಿ ಶಂಖ, ಚಕ್ರ, ಅಭಯ ಮತ್ತು ಕಟಿ ಹೊಂದಿದ್ದು, ಸಮಭಂಗಿಯ ಆಕರ್ಷಕ ವಿಗ್ರಹವನ್ನು ಹೊಂದಿದೆ. ವೀರನಾರಾಯಣನು ಶ್ರೀದೇವಿ ಮತ್ತು ಭೂದೇವಿ ಸಮೇತನಾಗಿರುವನು. ಈ ಸುಂದರ ಪ್ರತಿಮೆಯಲ್ಲಿ ಕಂಡುಬರುವ ವಿಶೇಷತೆಗಳೆಂದರೇ ಕಿರೀಟದಲ್ಲಿ ನಾಲ್ಕು ಕಡೆ ಕೆತ್ತಲಾಗಿರುವ ಲಕ್ಷ್ಮಿಯ ಉಬ್ಬು ಶಿಲ್ಪಗಳು, ವಕ್ಷಸ್ಥಳ ಹಾಗೂ ಎಡ ತೋಳುಗಳಲ್ಲಿ ಕೆತ್ತಲಾಗಿರುವ ಶ್ರೀದೇವಿ–ಭೂದೇವಿಯರ ಸುಂದರ ವಿಗ್ರಹಗಳು ಮೊದಲಾದವುಗಳಾಗಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ನವೀಕರಿಸಿರುವ ಗಾರೆಯ ಎತ್ತರವಾದ ದ್ರಾವಿಡ ಶೈಲಿಯ ಶಿಖರವಿದ್ದು, ಅದರಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವಿದೆ. ಪೌರಾಣಿಕ ನಂಬಿಕೆಯ ಪ್ರಕಾರ ಪೂರ್ವಾಭಿಮುಖವಾಗಿರುವ ವೀರನಾರಾಯಣನು ದೇವೇಂದ್ರನಿಂದ ಪ್ರತಿಷ್ಠಾಪನೆ ಮಾಡಿದೆ ಎನ್ನಲಾಗಿದೆ. ವೀರನಾರಾಯಣ ಚತುರ್ವೇದಿ ಮಂಗಲಮ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಯರ್ರಕೋಟೆ ಎಂಬ ಗ್ರಾಮವು ಯಗವಕೋಟೆಗೆ ಸಮೀಪವಾಗಿದೆ. ಈ ದೇವಾಲಯದಲ್ಲಿ ವೈಖಾನಸ ಆಗಮದಂತೆ ಪೂಜಾ ಕೈಂಕರ್ಯಗಳು ನಡೆಯುತ್ತಿವೆ. ದೇವಾಲಯದ ಆವರಣದಲ್ಲಿ ವೇದ ಪಾಠಶಾಲೆಯನ್ನು ಇತ್ತೀಚೆಗೆ ಆರಂಭಿಸಲಾಗಿದೆ. ಈ ದೇವಾಲಯದ ಮುಂದೆ ಬಂಡೆಯ ಮೇಲಿರುವ ಕ್ರಿ.ಶ. ೧೪೮೭ರ ಶಾಸನವು ಮೂಕೊಂಡದ ಮಹಾನಾಯಕಾಚಾರ್ಯ ಮತ್ತು ಕದಿರಪ್ಪನಾಯಿನಿ ಎಂಬ ಅಧಿಕಾರಿಗಳು ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ಗ್ರಾಮದ ಶೆಟ್ಟಿಗುಂಟೆಯ ಕೆರೆಯ ಏರಿಯ ಮೇಲಿರುವ ಕ್ರಿ.ಶ.೧೪೭೮ರ ಶಾಸನವು ಮೂಕೊಂಡದ ತಿರುವೆಂಗಡನಾಥ ದೇವರಿಗೆ ನಾರಪ್ಪನಾಯಿನಿ ಮತ್ತು ಚಿನಾಳಕಿ ನಾಯಿನಿ ಇವರುಗಳು ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಫಾಲ್ಗುಣ ಮಾಸದಲ್ಲಿ ವೀರನಾರಾಯಣನ ಬ್ರಹ್ಮರಥೋತ್ಸವವು ನಡೆಯುತ್ತದೆ.

**ರಂಗಸ್ಥಳ:** (ಚಿಕ್ಕಬಳ್ಳಾಪುರ ತಾಲೂಕು) ಶ್ರೀರಂಗನಾಥ ಸ್ವಾಮಿಯ ಹೊಯ್ಸಳರ ಕಾಲದ ಬೃಹತ್ ದೇಗುಲಕ್ಕೆ ಜನಪ್ರಿಯವಾಗಿದ್ದು, ಚಿಕ್ಕಬಳ್ಳಾಪುರ–ಗೌರಿಬಿದನೂರು ಮಾರ್ಗದಲ್ಲಿ, ತಿಪ್ಪೇನಹಳ್ಳಿಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ರಂಗಸ್ಥಳವಿದೆ. ಶ್ರೀರಂಗನಾಥಸ್ವಾಮಿ ದೇವಾಲಯವು ವಾಸ್ತುಶಿಲ್ಪದ ದೃಷ್ಟಿಯಿಂದ ವಿಜಯನಗರ ಪೂರ್ವ ಅಥವಾ ಹೊಯ್ಸಳರ ಕಾಲದ ರಚನೆಯಾಗಿದೆ. ದೇವಾಲಯದ ಮಹಾದ್ವಾರ ದಕ್ಷಿಣಾಭಿಮುಖವಾಗಿದ್ದು ನವರಂಗ, ಸುಂದರವಾದ ಮುಖಮಂಟಪಗಳನ್ನು ಹೊಂದಿದೆ. ಮುಖಮಂಟಪದ ಸುತ್ತಲೂ ಸುಂದರ ಕೆತ್ತನೆಯಿಂದ ಕೂಡಿದ ಶಿಲಾಸ್ತಂಭಗಳನ್ನೊಳಗೊಂಡ ಹಜಾರವಿದೆ. ಮುಖಮಂಟಪವು ಎತ್ತರಿಸಿದ ಜಗತಿಯ ಮೇಲೆ ನಿರ್ಮಾಣಗೊಂಡಿದೆ. ಈ ಮಂಟಪದಲ್ಲಿ ಉಬ್ಬುಶಿಲ್ಪಗಳಿಂದ ಅಲಂಕೃತವಾದ ೨೪ ಶಿಲಾಸ್ತಂಭಗಳಿವೆ. ಇದಕ್ಕೆ ಹೊಂದಿಕೊಂಡಂತಿರುವ ಹಜಾರದ ೧೪ ಶಿಲಾಸ್ತಂಭಗಳೂ ಉತ್ತಮ ವೈಷ್ಣವ ಉಬ್ಬು ಶಿಲ್ಪಗಳ

ಕೆತ್ತನೆಯಿಂದ ಕೂಡಿವೆ. ಮುಂಭಾಗದ ಹಜಾರದಲ್ಲಿ ಎಂಟು ಶಿಲಾಸ್ತಂಭಗಳಿವೆ. ಮುಖಮಂಟಪ ಹಾಗೂ ಹಜಾರದಲ್ಲಿ ಸಾಲುಸಾಲಾಗಿ ಎಲ್ಲಾ ಶಿಲಾಸ್ತಂಭಗಳಲ್ಲಿಯೂ ಮೂರು ಸಾಲುಗಳ ಕೆತ್ತನೆಗಳಿವೆ. ಮಂಟಪದ ಸೂರು ಕೂಡ ಕಲ್ಲಿನಲ್ಲಿಯೇ ಕೊರೆಯಲ್ಪಟ್ಟಿದ್ದು ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದ್ದು ಆಕರ್ಷಕವಾಗಿದೆ. ಸೂರಿನಲ್ಲಿನ ಕಲ್ಲಿನ ಬಳೆಗಳು ಮತ್ತು ನೆಗೆಯುತ್ತಿರುವ ಕೋತಿ ವಿಗ್ರಹಗಳು ಸುಂದರವಾಗಿವೆ. ನವರಂಗದಲ್ಲಿ ಶ್ರೀವೈಷ್ಣವ ಆಚಾರ್ಯರುಗಳಾದ ವಿಶ್ವಕ್ಸೇನ ರಾಮಾನುಜ, ನಮ್ಮಾಳ್ವಾರ್ ಮತ್ತು ಚಕ್ರತ್ತಾಳ್ವಾರ್‌ಗಳ ಲೋಹದ ಪ್ರತಿಮೆಗಳಿವೆ. ಗರ್ಭಗುಡಿಯಲ್ಲಿರುವ ಶೇಷಶಯನನಾಗಿರುವ ಶ್ರೀರಂಗನಾಥ ಸ್ವಾಮಿಯ ಮೂರ್ತಿ ಸುಮಾರು ನಾಲ್ಕು ಅಡಿ ಎತ್ತರವಿದ್ದು ಆಕರ್ಷಕವಾಗಿದೆ. ಗರ್ಭಗೃಹದ ಮೇಲೆ ಚತುಷ್ಕೋನಾಕಾರದ ದ್ರಾವಿಡ ಶೈಲಿಯ ಶಿಖರವಿದೆ. ಮುಖಮಂಟಪದ ಮುಂಭಾಗದ ಹಜಾರಕ್ಕೆ ಹೊಂದಿಕೊಂಡಂತೆ ಅಲಂಕೃತ ಚೌಕಾಕಾರದ ಸ್ತಂಭಗಳಿದ್ದು ಮೊದಲ ಸಾಲಿನ ಮಧ್ಯದ ಎರಡು ಸ್ತಂಭಗಳ ಮೇಲೆ ಅಶ್ವಾರೋಹಿಗಳನ್ನು ಸುಂದರವಾಗಿ ಕಡೆಯಲಾಗಿದೆ. ವಿಶಾಲವಾದ ಪ್ರಾಕಾರದೊಳಗೆ ಧ್ವಜಸ್ತಂಭದ ಪೂರ್ವಕ್ಕೆ ಶ್ರೀಲಕ್ಷ್ಮೀದೇವಿ ಹಾಗೂ ಆಂಡಾಳದೇವಿಯರ ಪ್ರತ್ಯೇಕ ಗವಿಗಳಿವೆ. ದೇವಾಲಯದ ಪ್ರಾಕಾರದ ಹೊರಗೆ ಪೂರ್ವದಿಕ್ಕಿನಲ್ಲಿ ಶಂಖ ಮತ್ತು ಚಕ್ರತೀರ್ಥಗಳಿವೆ. ದೇವಾಲಯದ ಪಶ್ಚಿಮಕ್ಕೆ ಜ್ವಾಲಾ ನರಸಿಂಹಸ್ವಾಮಿ ಬೆಟ್ಟವಿದೆ.

ಶ್ರೀರಂಗನಾಥಸ್ವಾಮಿ ದೇವಾಲಯವನ್ನು ಚಾಮರಾಜ ಒಡೆಯರು ಪರಕಾಲ ಮಠಾಧೀಶ್ವರರ ಅಭೀಷ್ಟದಂತೆ ಜೀರ್ಣೋದ್ಧಾರಗೊಳಿಸಿದ್ದರೆಂದು ತಿಳಿದುಬರುತ್ತದೆ. ಇಲ್ಲಿ ನಡೆಯುವ ಉತ್ಸವಗಳಲ್ಲಿ ಮಾರ್ಗಶಿರ ಶುದ್ಧ ಪೂರ್ಣಿಮೆಯಂದು ನಡೆಯುವ ಬ್ರಹ್ಮೋತ್ಸವ, ಮುಕ್ಕೋಟಿ ಏಕಾದಶಿ, ದಸರ ವಿಶೇಷ ಸೇವೆ ಮತ್ತು ಶ್ರೀರಾಮನವಮಿ ಉತ್ಸವಗಳು ಮುಖ್ಯವಾದವುಗಳು. ೧೨ನೆಯ ಶತಮಾನದಲ್ಲಿ ಪ್ರಸಿದ್ಧ ವೈಷ್ಣವ ಗುರುಗಳಾದ ಪರಾಶರ ಭಟ್ಟರು ಶ್ರೀರಂಗನಾಥನನ್ನು ಕೊಂಡಾಡಿ ಸಂಸ್ಕೃತ ಭಾಷೆಯಲ್ಲಿ 'ಶ್ರೀರಂಗಾರಾಜಸ್ತವ' ಎಂಬ ಕಾವ್ಯವನ್ನು ಇದೇ ಸ್ಥಳದಲ್ಲಿ ರಚಿಸಿರುತ್ತಾರೆ.

**ರಾಮಸಾಗರ:** (ಬಂಗಾರಪೇಟೆ ತಾಲೂಕು: ಜನಸಂಖ್ಯೆ:೮೫೫) ಬಂಗಾರಪೇಟೆಯಿಂದ ೨೭ ಕಿ.ಮೀ. ದೂರದಲ್ಲಿರುವ ಶಾಸನೋಕ್ತ ಬುಕ್ಕಸಾಗರ ಅಥವಾ ರಾಮಸಾಗರವು ಪಾಲಾರ್ ನದಿಯ ಎಡದಂಡೆಯಲ್ಲಿರುವ ಐತಿಹಾಸಿಕ ಸ್ಥಳವಾಗಿದೆ. ಇದರ ಸಮೀಪವೇ ವಿಶಾಲವಾದ ದೊಡ್ಡ ಕೆರೆಯನ್ನು ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ. ಈ ಕೆರೆಯ ಬಳಿ ಇರುವ ಕ್ರಿ.ಶ.೧೪೪೪ರ ಶಾಸನವು ಈ ಊರಿನ ಅಣ್ಣಪ್ಪ ಒಡೆಯರ್ ಎಂಬ ಅಧಿಕಾರಿಯು ಬುಕ್ಕಸಾಗರದ ಪ್ರಸನ್ನ ವಿರೂಪಾಕ್ಷ ದೇವಾಲಯದ ದೈನಂದಿನ ಪೂಜಾ ಕೈಂಕರ್ಯವನ್ನು ನೋಡಿಕೊಳ್ಳಲು ವೀರ ಪ್ರತಾಪರಾಯ ಅಥವಾ ಪ್ರತಾಪ ದೇವರಾಯನ ಆದೇಶದ ಮೇರೆಗೆ ಮುಳವಾಯಿ ಸಾಮ್ರಾಜ್ಯದ (ಮುಳಬಾಗಿಲ) ಬುಕ್ಕಸಾಗರದಲ್ಲಿ ಕೆಲವು ದಾನ ಮತ್ತು ದತ್ತಿಗಳನ್ನು ನೀಡಿದ ಮಹತ್ವದ ವಿಚಾರವನ್ನು ದಾಖಲಿಸುತ್ತದೆ. ಶಾಸನದ ಉಳಿದ ಭಾಗವು ಅಸ್ಪಷ್ಟವಾಗಿದೆ. ರಾಮಸಾಗರದಲ್ಲಿರುವ ಪ್ರಮುಖ ದೇವಾಲಯಗಳೆಂದರೇ ವಿರೂಪಾಕ್ಷ, ವೀರಭದ್ರ, ಸೋಮೇಶ್ವರ, ವೆಂಕಟರಮಣ ಮೊದಲಾದವು. ವಿರೂಪಾಕ್ಷ ದೇವಾಲಯವು ವಿಜಯನಗರ ಶೈಲಿಯಲ್ಲಿದ್ದು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ತೆರೆದ ಮುಖಮಂಟಪಗಳನ್ನು ಹೊಂದಿದೆ. ಆದರೆ, ಈ ದೇವಾಲಯದ ಮುಂಭಾಗ ಹಾಗೂ ನವರಂಗದ ಭಾಗಗಳು ಶಿಥಿಲವಾಗಿದೆ. ಈ ದೇವಾಲಯದ ಬಲಭಾಗದಲ್ಲಿರುವ ವೀರಭದ್ರ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ವಿಜಯನಗರೋತ್ತರ ಶೈಲಿಯ ಈ ದೇವಾಲಯವು ಸುಸ್ಥಿತಿಯಲ್ಲಿದ್ದು ಚೌಕಾಕಾರದ ಗರ್ಭಗೃಹದಲ್ಲಿ ಸುಮಾರು ಆರು ಅಡಿ ಎತ್ತರವಿರುವ ವೀರಭದ್ರನ ಭವ್ಯ ಪ್ರತಿಮೆ ಇದೆ. ನವರಂಗದ ಸ್ತಂಭಗಳು ಚೌಕಾಕಾರವಾಗಿದ್ದು ಹಲವು ಉಬ್ಬು ಶಿಲ್ಪಗಳನ್ನು ಹೊಂದಿವೆ. ಇಲ್ಲಿಂದ ಅನತಿ ದೂರದಲ್ಲಿರುವ ವೆಂಕಟರಮಣ ದೇವಾಲಯವು ವಿಜಯನಗರ ಪೂರ್ವದ ವಾಸ್ತುರಚನೆಯನ್ನು ಹೊಂದಿದೆ. ಗರ್ಭಗೃಹದಲ್ಲಿರುವ ವೆಂಕಟರಮಣನು ನಾಲ್ಕು ಹಸ್ತಗಳನ್ನು ಹೊಂದಿದ್ದು ಶಂಖ, ಚಕ್ರ ಅಭಯ ಹಾಗೂ ಕಟಿ ಹಸ್ತಗಳನ್ನು ವ್ಯಕ್ತಪಡಿಸುತ್ತಿರುವ ಆಕರ್ಷಕ ಪ್ರತಿಮೆಯಾಗಿದೆ. ಶ್ರೀದೇವಿ ಮತ್ತು ಭೂದೇವಿಯರ ಸಹಿತ ವೆಂಕಟರಮಣನ ವಿಗ್ರಹವು ವೈಖಾನಸ ಆಗಮದ ರೀತಿಯಲ್ಲಿ ಪೂಜಿಸಲ್ಪಡುತ್ತಿದೆ. ಇದೇ ಊರಿನ ಕ್ರಿ.ಶ.೧೩೦೦ರ ತಮಿಳು ಶಾಸನವು ಅಸ್ಪಷ್ಟವಾಗಿದ್ದು ಕೇವಲ ಇಳ್ಳೈಯೂರಿನ ವೀರರಾಮು ಪಿಳ್ಳೈ ಎಂಬ ಗ್ರಾಮದ ಒಡೆಯನು ೧೫ ಪಣಗಳನ್ನು ನೀಡಿದನು ಎಂದು ಓದಲಾಗಿದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ವೀರರಾಮು ಪಿಳ್ಳೈ ಎಂಬ ಊರಿನ ಆಡಳಿತಾಧಿಕಾರಿಯ ಹೆಸರನ್ನೇ ಊರಿಗೆ ರಾಮಸಾಗರ ಎಂದು ಪರಿವರ್ತಿತವಾಗಿರಬೇಕು. ಈ ಊರಿನ ವಿಶಾಲವಾದ ಕೆರೆ ಹಾಗೂ ದೇವಾಲಯಗಳ ಪರಿಸರವು ಸಹಜವಾಗಿಯೇ ಯಾತ್ರಿಕರನ್ನು ಆಕರ್ಷಿಸುತ್ತದೆ.

**ರೆಹಮಾನ್‌ಗಡ್** (ಚಿಂತಾಮಣಿ ತಾಲೂಕು): ಚಿಂತಾಮಣಿಯಿಂದ ನೈರುತ್ಯಕ್ಕೆ ೧೨ ಕಿ.ಮೀ. ದೂರದಲ್ಲಿರುವ ರೆಹಮಾನ್‌ಗಡ್ ಸು. ೪,೨೨೭ ಅಡಿ (ಎಂ.ಎಸ್.ಎಲ್) ಎತ್ತರವಿದೆ. ಟಿಪ್ಪುಸುಲ್ತಾನನು ಇಲ್ಲಿ ನಿರ್ಮಿಸಿರುವ ಕೋಟೆಯಿಂದಾಗಿ ರೆಹಮಾನ್‌ಗಡ್ ಎಂಬ ಹೆಸರು ಬಂದಿದೆ. ಪಾಂಡವ ಸಹೋದರರಲ್ಲಿ ಒಬ್ಬನಾದ ಭೀಮಸೇನನನ್ನು ಈ ಬೆಟ್ಟದಲ್ಲಿ ಸೆರೆ ಇಡಲಾಗಿತ್ತೆಂದು ಸ್ಥಳೀಯರು ಹೇಳುತ್ತಾರೆ. ಹಿಂದೂಗಳು ಬೆಟ್ಟವನ್ನು 'ತಪಸ್‌ಗಿರಿ' ಎಂದು ಕರೆಯುತ್ತಾರೆ. ಕೈವಾರದ ಕಡೆಯಿಂದ ಕೋಟೆಯನ್ನು ಪ್ರವೇಶಿಸಲು ಮೆಟ್ಟಿಲುಗಳಿರುವ ಮಾರ್ಗವಿದೆ. ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಪಾಳೆಯಗಾರರ ಕಾಲದಲ್ಲಿ ನಿರ್ಮಿತವಾಗಿರುವ ಚೌಕಾಕಾರವಾದ ಎರಡು ಬರುಜುಗಳಿವೆ. ಕೋಟೆಯ ಗೋಡೆಯ ಮೇಲೆ ಇಟ್ಟಿಗೆ ಹಾಗೂ ಗಾರೆಗಳಿಂದ ನಿರ್ಮಿತವಾದ ಕೈಪಿಡಿ ಗೋಡೆಗಳಿವೆ. ಬೆಟ್ಟದ ಮೇಲ್ಭಾಗದಲ್ಲಿ ಕೋಟೆಯ ಗೋಡೆಯ ಮೇಲೆ ವರ್ತುಲಾಕಾರವಾದ ಕೊತ್ತಲಗಳಿವೆ. ಇದರ ಸಮೀಪವೇ ಸೂರ್ಯನಾರಾಯಣನ ಚಿಕ್ಕಗುಡಿ, ಮೂರು ಕೋಣೆಗಳುಳ್ಳ ಮದ್ದಿನಮನೆ, ಅಡಗುತಾಣಗಳೂ ಕಂಡುಬರುತ್ತವೆ. ಇದರ ಬಳಿ ಒಂದು ದೊಡ್ಡ ಕಟ್ಟಡದ ಅವಶೇಷವಿದ್ದು, ಇದು ಕೋಟೆ ಅಧಿಕಾರಿಯ ವಸತಿಗೃಹವೆಂದು ಹೇಳುತ್ತಾರೆ. ಈ ಸ್ಥಳದ ಪೂರ್ವ ಮತ್ತು ದಕ್ಷಿಣಕ್ಕೆ ಒಂದೊಂದು ಬೃಹದಾಕಾರದ ಬಂಡೆಗಳಿದ್ದು, ನೈಸರ್ಗಿಕವಾದ ಬುರುಜುಗಳ ರೀತಿಯಲ್ಲಿ ಕಂಡುಬರುತ್ತವೆ.ಲಾರ್ಡ್ ಕಾರ್ನ್‌ವಾಲೀಸ್‌ನು ರೆಹಮಾನ್‌ಘಡವನ್ನು ೧೭೯೧ರಲ್ಲಿ ವಶಪಡಿಸಿಕೊಂಡಿದ್ದನು. ಬೆಟ್ಟದ ಮೇಲ್ಭಾಗದಲ್ಲಿ ಎರಡು ಪುಷ್ಕರಣಿಗಳಿದ್ದು ಇದರ ಪೂರ್ವಭಾಗದಲ್ಲಿ ೬' x ೬' ಅಳತೆಯ ಗರ್ಭಗೃಹವಿದ್ದು ಅದರಲ್ಲಿ ವಿಷ್ಣುವಿನ ಜನಾರ್ಧನ ರೂಪದ ತಗ್ಗು ಶಿಲ್ಪವನ್ನು ಕೆತ್ತಲಾಗಿದೆ. ಇದರ ಮುಂದೆ ಒಂದು ಧ್ವಜಸ್ತಂಭವಿದೆ ಹಾಗೂ ಮೇಲ್ಭಾಗದಲ್ಲಿ ಹನುಮಂತನ ಪಶ್ಚಿಮಾಭಿಮುಖವಾದ ಉಬ್ಬು ಶಿಲ್ಪವಿದೆ.

**ರೋಣೂರು** (ಶ್ರೀನಿವಾಸಪುರ ತಾಲೂಕು ಜನಸಂಖ್ಯೆ:೧೧೫೬) ಶ್ರೀನಿವಾಸಪುರದಿಂದ ಕಡಪಾಗೆ ಹೋಗುವ ಮಾರ್ಗದಲ್ಲಿ ಎಂಟು ಕಿ.ಮೀ.ದೂರದಲ್ಲಿರುವ ರೋಣೂರು ಲಕ್ಷ್ಮೀ–ವೆಂಕಟರಮಣ ದೇವಾಲಯಕ್ಕೆ ಪ್ರಸಿದ್ಧಿಯಾಗಿದೆ. ರೋಣೂರು ಒಂದು ವ್ಯಾಪಾರ ಹಾಗೂ ವಾಣಿಜ್ಯ ಕೇಂದ್ರವೂ ಆಗಿದೆ. ಊರಿನ ಮಧ್ಯಭಾಗದಲ್ಲಿರುವ ಕೋಟೆ ಎಂದು ಕರೆಯಲಾಗುವ ಪ್ರದೇಶದಲ್ಲಿ ವಿಶಾಲವಾದ ಹೊರ ಮತ್ತು ಒಳಪ್ರಾಕಾರವನ್ನು ಹೊಂದಿರುವ ಲಕ್ಷ್ಮೀ–ವೆಂಕಟರಮಣನ ದೇವಾಲಯವು ಬಹಳ ಪುರಾತನವೆಂದು ಪರಿಗಣಿಸಲಾಗಿದೆ. ಈ ದೇವಾಲಯವು ವಿಜಯನಗರದ ಆಳ್ವಿಕೆಗೂ ಮೊದಲೇ ನಿರ್ಮಿತಗೊಂಡಿದ್ದು ಹಂತ ಹಂತವಾಗಿ ವಿವಿಧ ರಾಜರುಗಳಿಂದ ವಿಸ್ತರಿಸಲ್ಪಟ್ಟಿರುವುದು ವ್ಯಕ್ತವಾಗುತ್ತದೆ. ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಇತ್ತೀಚೆಗೆ ಕಟ್ಟಲಾಗಿರುವ ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹವು ಚೌರಸವಾಗಿದ್ದು ಮೂಲ ವಿಗ್ರಹವು ಸುಮಾರು ಮೂರು ಅಡಿ ಎತ್ತರವಿದ್ದು ಚೌಕಾಕಾರವಾದ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಿದ್ದು ನಾಲ್ಕು ಕೈಗಳಲ್ಲಿ ಶಂಖ, ಚಕ್ರ ವರದ ಮತ್ತು ಕಟೀಹಸ್ತಗಳನ್ನು ಹಾಗೂ ಶ್ರೀದೇವಿ–ಭೂದೇವಿಯರನ್ನು ಹೊಂದಿದೆ. ಹಿಂಭಾಗದಲ್ಲಿ ಅಲಂಕೃತವಾದ ಪ್ರಭಾವಳಿಯು ಕಂಡುಬರುತ್ತದೆ. ಅರ್ಧಮಂಟಪವು ವಿಶಾಲವಾಗಿದ್ದು ಒಳಗೆ ಆಳ್ವಾರ್‌ಗಳ ಹಾಗೂ ವಿಶ್ವಕ್‌ಸೇನರುಗಳ ಕಿರುಶಿಲ್ಪಗಳನ್ನು ಹೊಂದಿದೆ. ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ಎಡಪಾರ್ಶ್ವದಲ್ಲಿ ಹನುಮಂತ ಸಮೇತನಾದ ರಾಮ, ಲಕ್ಷ್ಮಣ ಹಾಗೂ ಸೀತೆಯರ ವಿಗ್ರಹಗಳನ್ನು ಇಡಲಾಗಿದೆ. ದೇವಾಲಯದ ನವರಂಗದ ಮಧ್ಯದಲ್ಲಿರುವ ಸ್ತಂಭಗಳ ಮೇಲೆ ವೈಷ್ಣವ ಪುರಾಣಗಳನ್ನು ಪ್ರತಿನಿಧಿಸುವ ಸುಂದರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಮೇಲಿರುವ ದ್ರಾವಿಡ ಶೈಲಿಯ ಶಿಖರವು ನಾಲ್ಕು ಕಡೆಗಳಲ್ಲಿ ರಂಗನಾಥ, ಶ್ರೀರಾಮ, ಹಯಗ್ರೀವ, ಲಕ್ಷ್ಮೀನಾರಾಯಣ ಮತ್ತು ನರಸಿಂಹ ಇವರುಗಳ ಆಕರ್ಷಕ ಗಾರೆ ಶಿಲ್ಪಗಳು ಮತ್ತು ಯಕ್ಷರು, ಗಂಧರ್ವರು ಹಾಗೂ ಕುಬ್ಜರ ಅಲಂಕಾರಿಕ ಶಿಲ್ಪಗಳೂ ಕಂಡುಬರುತ್ತವೆ. ದೇವಾಲಯದ ಮುಖಮಂಟಪವನ್ನು ಇತ್ತೀಚೆಗೆ ನವೀಕರಿಸಿ ನಿರ್ಮಿಸಿರುವುದು ವ್ಯಕ್ತವಾಗುತ್ತದೆ. ಮುಖ್ಯ ಪ್ರವೇಶದ್ವಾರದಲ್ಲಿ ಎತ್ತರವಾದ ರಾಯಗೋಪುರವಿದ್ದು ಅದರ ಮೇಲಿರುವ ಶಾಸನದ ಪ್ರಕಾರ ಗೊಲ್ಲಪಲ್ಲಿ ಕೆ.ರಾಮಯ್ಯ ಎಂಬ ಶ್ರೇಷ್ಠ ಭಕ್ತರು ಶ್ರಾವಣ ಮಾಸದ ೫ನೇ ದಿನಾಂಕದ ಬುಧವಾರ ೧೪೯೪ರಂದು ಈ ರಾಯ ಗೋಪುರವನ್ನು ನಿರ್ಮಿಸಿದರೆಂದು ತಿಳಿದುಬರುತ್ತದೆ. ಈ ದೇವಾಲಯದಲ್ಲಿ ದೈನಂದಿನ ಪೂಜಾ ಕೈಂಕರ್ಯಗಳು ವೈಕಾನಸ ಆಗಮದ ರೀತಿಯಲ್ಲಿ ನಡೆಸಲಾಗುತ್ತದೆ. ಈ ದೇವಾಲಯದಲ್ಲಿ ವಾರ್ಷಿಕವಾಗಿ ಮಾರ್ಘಶಿರ ಹುಣ್ಣಿಮೆಯಂದು ಬ್ರಹ್ಮರಥೋತ್ಸವವು ಜರುಗುತ್ತದೆ. ಈ ದೇವಾಲಯದಲ್ಲಿ ಉತ್ಸವಮೂರ್ತಿಗಳು (ಕೇಶವ ಮತ್ತು ಆತನ ಪತ್ನಿಯರ ವಿಗ್ರಹಗಳು ಸೇರಿದಂತೆ) ಅತ್ಯಂತ ಆಕರ್ಷಕ ಲೋಹಶಿಲ್ಪಗಳಾಗಿವೆ.

**ವಕ್ಕಲೇರಿ** (ಕೋಲಾರ ತಾಲೂಕು: ಜನಸಂಖ್ಯೆ:೩,೬೪೨): ಮಾರ್ಕಂಡೇಶ್ವರ ಬೆಟ್ಟದ ತಪ್ಪಲಲ್ಲಿ ಕೋಲಾರದಿಂದ ೧೨ ಕಿ.ಮೀ. ದೂರದಲ್ಲಿರುವ ವಕ್ಕಲೇರಿಯು ಒಂದು ಪುರಾತನ ಸ್ಥಳವಾಗಿದ್ದು, ಯಾವುದೇ ಪ್ರಾಚೀನ ದೇವಾಲಯಗಳು ಕಂಡುಬರದಿದ್ದರೂ, ವಕ್ಕಲೇರಿ ಗ್ರಾಮದಲ್ಲಿ ಕರ್ಣ–ದುರ್ಯೋಧನರನ್ನು ಕಾಷ್ಠ ಶಿಲ್ಪದ ಮುಖೇನ ಆರಾಧಿಸುವ ಪದ್ಧತಿಯು ಜಾರಿಯಲ್ಲಿದೆ. ಇಲ್ಲಿ ದೊರೆತಿರುವ ಕ್ರಿ. ಶ. ಎಂಟನೇ ಶತಮಾನದ ಬಾದಾಮಿ ಚಾಲುಕ್ಯ ದೊರೆ ಕೀರ್ತಿವರ್ಮನ ತಾಮ್ರ ಶಾಸನದಿಂದಾಗಿ ಈ ಸ್ಥಳವು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇವು 'ವಕ್ಕಲೇರಿ ತಾಮ್ರ ಶಾಸನ'ಗಳೆಂದು ಹೆಚ್ಚು ಜನಪ್ರಿಯವಾಗಿದೆ. ಈ ತಾಮ್ರ ಶಾಸನವು ಕ್ರಿ.ಶ. ೭೫೭ರಲ್ಲಿ ಬಾದಾಮಿ ಚಾಲುಕ್ಯ ಚಕ್ರವರ್ತಿ ಕೀರ್ತಿವರ್ಮನ ಆಳ್ವಿಕೆಯಲ್ಲಿ ಪಾಂಡ್ಯ, ಚೋಳ, ಕೇರಳ, ಕಳಭ್ರ ಮತ್ತು ಕಂಚಿಗಳನ್ನು ಹಿಂದಿನಿಂದಲೂ ತನ್ನ ಹತೋಟಿಗೆ ತಂದ ಬಗ್ಗೆ ಹಲವು ವರ್ಣರಂಜಿತ ಪದಗಳಲ್ಲಿ ವರ್ಣಿಸಲಾಗಿದೆ. ಶಾಸನದಲ್ಲಿ ಈ ರಾಜ್ಯಗಳ ಎಲ್ಲೆಗಳ ಬಗ್ಗೆ ವಿವರಗಳಿದ್ದು, ಹಲವು ಹಿಂದಿನ ಯುದ್ಧಗಳಲ್ಲಿ ಗಳಿಸಿದ ಜಯಗಳ ಬಗ್ಗೆ ಹಾಗೂ ಬಾಲೇಂದು ಶೇಖರನ ಮಗ ತಾರಕಾರತಿ ಪ್ರಬಲನಾಗಿ ಕಾವೇರ, ಪರಾಸಿಕ, ಸಿಂಹಳ, ತ್ರೈರಾಜ್ಯಗಳಿಂದ ವಸೂಲು ಮಾಡಲಾದ ಕಪ್ಪ ಕಾಣಿಕೆಗಳ ವಿವರಗಳನ್ನು ನೀಡಲಾಗಿದೆ. ಈ ಶಾಸನದ ಅನೇಕ ವಿವರಗಳು ಕೋಲಾರ ಜಿಲ್ಲೆಗೆ ಸಂಬಂಧಿಸಿಲ್ಲ. ವಕ್ಕಲೇರಿ ಊರಿನ ಹಿಂಭಾಗದಲ್ಲಿರುವ **ಮಾರ್ಕಂಡೇಶ್ವರ ಬೆಟ್ಟ**ದ ಮೇಲೆ ಸುಮಾರು ಮೂರು ಎಕರೆ ಸಮತಟ್ಟಾದ ಸ್ಥಳದಲ್ಲಿ ವಿಜಯನಗರ ಶೈಲಿಯಲ್ಲಿ ಮೂಲತಃ ನಿರ್ಮಿತವಾಗಿದ್ದು, ನಂತರದ ಕಾಲಗಳಲ್ಲಿ ವಿಸ್ತರಿಸಲ್ಪಟ್ಟಿರುವ ಮಾರ್ಕಂಡೇಶ್ವರ ದೇವಾಲಯ ಸಂಕೀರ್ಣವಿದೆ. ಮಾರ್ಕಂಡೇಶ್ವರ ದೇವಾಲಯವು ಗರ್ಭಗೃಹ ಎರಡು ಅರ್ಧಮಂಟಪಗಳು ವಿಶಾಲವಾದ ನವರಂಗ ಹಾಗೂ ಆಯತಾಕಾರವಾದ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು, ಎತ್ತರವಾದ ಪಾಣಿಪೀಠದ ಮೇಲೆ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗಗಳು ಚೌಕಾಕಾರವಾಗಿದ್ದು, ಮಧ್ಯದಲ್ಲಿ ನಾಲ್ಕು ಚೌರಸವಾದ ಸ್ತಂಭಗಳಿದ್ದು, ಅವುಗಳ ಮೇಲೆ ಶೈವ ಪುರಾಣವನ್ನು ಪ್ರತಿನಿಧಿಸುವ ಆಕರ್ಷಕ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ನವರಂಗದ ಮಧ್ಯದ ಛಾವಣಿಯಲ್ಲಿ ಚೌರಸವಾದ ಗವಾಕ್ಷವಿದೆ. ಇದರಿಂದಾಗಿ ದೇವಾಲಯದ ಒಳಗೆ ಸಮೃದ್ಧವಾದ ಬೆಳಕಿಗೆ ಅವಕಾಶವಾಗಿದೆ. ನವರಂಗದ ಮುಂಭಾಗದಲ್ಲಿರುವ ಮುಖಮಂಟಪವು ವಿಜಯನಗರದ ನಂತರದ ಶೈಲಿಯ ೧೨ ಚೌರಸವಾದ ಸ್ತಂಭಗಳನ್ನು ಹೊಂದಿದೆ. ಇದರ ಮಧ್ಯಭಾಗದಲ್ಲಿ ಏಕಶಿಲಾ ನಂದಿಯ ಶಿಲಾಕೃತಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಎದುರಿಗೆ ಪ್ರತ್ಯೇಕ ನಂದಿಮಂಟಪದಲ್ಲಿ ಬೃಹದಾಕಾರವಾದ ಇನ್ನೊಂದು ಏಕಶಿಲಾ ನಂದಿಯು ಕಂಡುಬರುತ್ತದೆ. ದೇವಾಲಯಕ್ಕೆ ವಿಶಾಲವಾದ ಹೊರಪ್ರಾಕಾರವಿದ್ದು ಸುತ್ತಲೂ ಹಲವಾರು ಮಂಟಪಗಳು ಕಂಡುಬರುತ್ತವೆ. ಬೆಟ್ಟದ ಮೇಲಿರುವ ಈ ದೇವಾಲಯದ ಪ್ರವೇಶದ್ವಾರದಲ್ಲಿ ಎತ್ತರವಾದ ವಿಜಯನಗರ ಶೈಲಿಯ ರಾಯಗೋಪುರವು ಕಂಡುಬರುತ್ತದೆ. ರಾಯಗೋಪುರದ ಕೆಳಭಾಗದಲ್ಲಿ ನಗಾರಿಖಾನೆಯನ್ನು ಇಕ್ಕೆಲಗಳಲ್ಲಿ ನಿರ್ಮಿಸಲಾಗಿದೆ. ದೇವಾಲಯದ ಮೂಲ ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವಿದ್ದು ಮೇಲ್ಭಾಗದಲ್ಲಿ ಎತ್ತರವಾದ ದ್ರಾವಿಡ ಶಿಖರವಿದೆ. ದೇವಾಲಯದ ಅದಿಷ್ಠಾನದ ಗೋಡೆಗಳಲ್ಲಿ ಕೆಲವು ಕಡೆ ಕಳಸದ ಸಂಕೇತಗಳಿರುವ ಕಿರು ಸ್ತಂಭಗಳಿರುವುದು ಕುತೂಹಲಕಾರಿಯಾಗಿವೆ. ಹೊರಪ್ರಾಕಾರದ ಎತ್ತರವಾದ ಭದ್ರತಾಗೋಡೆಗಳಿಗೆ ತಾಗಿದಂತೆ ಉದ್ದನೆಯ ವರಾಂಡಗಳನ್ನು ನಿರ್ಮಿಸಲಾಗಿದೆ. ಈ ದೇವಾಲಯದ ವಿಶಾಲವಾದ ಹೊರಪ್ರಾಕಾರದಲ್ಲಿ ಸಪ್ತಮಾತೃಕೆಯರ ಹಾಗೂ ಪಾರ್ವತಿಯ ಪ್ರತ್ಯೇಕ ಗುಡಿಗಳಿವೆ. ಪಾರ್ವತಿಗುಡಿಯ ಎಡಪಾರ್ಶ್ವದಲ್ಲಿ ವೆಂಕಟೇಶ್ವರ ಹಾಗೂ ಭೈರವೇಶ್ವರರ ಚಿಕ್ಕಗುಡಿಗಳಿದ್ದು, ಇದರ ಪಕ್ಕದಲ್ಲಿ ಸಣ್ಣ ಸಣ್ಣ ಕೊಠಡಿಗಳು ಸಾಲಾಗಿ ನಿರ್ಮಿತವಾಗಿವೆ. ವೆಂಕಟೇಶ್ವರನ ವಿಗ್ರಹವು ನಾಲ್ಕು ಕೈಗಳಲ್ಲಿ ಕಟಿಹಸ್ತ ಅಭಯ, ಶಂಖ ಹಾಗೂ ಚಕ್ರಗಳನ್ನು ಹೊಂದಿದೆ. ಮುಖ್ಯ ದೇವಾಲಯದ ಹೊರಗೋಡೆಗೆ ತಾಗಿರುವಂತೆ ಬಲ ಪಾರ್ಶ್ವದಲ್ಲೂ ಚಿಕ್ಕಗುಡಿಗಳಿದ್ದು, ಉದ್ದನೆಯ ಪಡಸಾಲೆ ಕಂಡುಬರುತ್ತದೆ. ಎಡಪಾರ್ಶ್ವದ ಕೊಠಡಿಯೊಂದರಲ್ಲಿ ಹಲವು ಭಗ್ನ ವಿಗ್ರಹಗಳನ್ನು ಇಡಲಾಗಿದೆ. ಮುಖ್ಯ ದೇವಾಲಯದ ನೈಋತ್ಯ ಭಾಗದಲ್ಲಿ ಸಪ್ತಮಾತೃಕೆಯರ ಪ್ರತ್ಯೇಕ ಗುಡಿಯಿದ್ದು, ಗರ್ಭಗುಡಿಯಲ್ಲಿ ಸಪ್ತಮಾತೃಕೆಯರ ಬಿಡಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ೧೯೪೦–೪೧ರ ಪುರಾತತ್ತ್ವ ವರದಿಯಲ್ಲಿ ಈ ದೇವಾಲಯದ ಬಗ್ಗೆ ಸ್ಥೂಲವಾದ ಪರಿಚಯವಿದ್ದು, ಕ್ರಿ.ಶ. ೧೪ನೇ ಶತಮಾನದಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿರಬೇಕೆಂದು ಉಲ್ಲೇಖವಿದೆ. ಮೂಲ ಕಟ್ಟಡವು ಕ್ರಿ.ಶ. ೧೪ನೇ ಶತಮಾತನಕ್ಕೆ ಸೇರಿದ್ದು ನಂತರ ವಿಜಯನಗರ ಮತ್ತು ಸುಗಟೂರು ಅರಸರಿಂದ ವಿಸ್ತೃತಗೊಂಡಿರಬೇಕೆಂದು ಹೇಳಬಹುದಾಗಿದೆ. ವಕ್ಕಲೇರಿ ಗ್ರಾಮದಿಂದ ಬೆಟ್ಟದ ಮೇಲ್ಭಾಗವನ್ನು ತಲುಪಲು ವಾಹನಗಳು ಚಲಿಸಲು ಸಾಧ್ಯವಾಗುವಂತೆ ಡಾಂಬರು ರಸ್ತೆಯನ್ನು ತಾಲೂಕು ಆಡಳಿತವು ಇತ್ತೀಚೆಗೆ ನಿರ್ಮಿಸಿರುತ್ತದೆ. ವಾರ್ಷಿಕವಾಗಿ ಮಾರ್ಕಂಡೇಶ್ವರ ದೇವಾಲಯದಲ್ಲಿ ಶಿವರಾತ್ರಿಯ ಸಮಯಕ್ಕೆ ಬೃಹದ್ ಜಾತ್ರೆಯು ಜರುಗುತ್ತದೆ. ಮಾರ್ಕಂಡೇಶ್ವರನ

ರಾವಣಾಸುರ ವಾಹನೋತ್ಸವವು ಬಹಳ ಪ್ರಸಿದ್ಧಿಯಾಗಿದೆ. ಈ ಬೆಟ್ಟದ ತುದಿಯಲ್ಲಿ ಇತ್ತೀಚೆಗೆ ಮೈಕ್ರೋವೇವ್ ಟವರ್ ನಿಲ್ಲಿಸಲಾಗಿದೆ. ಈ ಸಮತಟ್ಟಾದ ಬೆಟ್ಟದ ಮೇಲ್ಭಾಗದಲ್ಲಿ ನಿಂತು ನೋಡಿದರೆ, ನಿಸರ್ಗ ರಮಣೀಯ ದೃಶ್ಯಗಳು ಹೃದ್ಮನಗಳನ್ನು ಮುದಗೊಳಿಸುತ್ತವೆ.

**ವಿದುರಾಶ್ವತ್ಥ** :(ಗೌರಿಬಿದನೂರು ತಾಲೂಕು) ವಿದುರಾಶ್ವತ್ಥ ದೊಡ್ಡ ಕುರಗೋಡು ಗ್ರಾಮದ ವ್ಯಾಪ್ತಿಯಲ್ಲಿದ್ದು ಪುರಾಣ ಪ್ರಸಿದ್ಧವಾದ ಯಾತ್ರಾಸ್ಥಳವಾಗಿದೆ. ಗೌರಿಬಿದನೂರಿನ ಉತ್ತರಕ್ಕೆ ಸುಮಾರು ಆರು ಕಿ.ಮೀ. ದೂರದಲ್ಲಿ ದೊಡ್ಡ ಕುರುಗೋಡು ಬಳಿ ವಿದುರನೇ ನೆಟ್ಟು ಬೆಳೆಸಿದ್ದೆಂದು ಹೇಳಲಾಗುವ ವಿಶಾಲವಾದ ಒಂದು ಅಶ್ವತ್ಥ ವೃಕ್ಷವುಂಟು. ಸ್ಥಳ ಪುರಾಣದ ಪ್ರಕಾರ ಪೂರ್ವದಲ್ಲಿ ಮಾಂಡವ್ಯಮುನಿಯು ಬ್ರಹ್ಮಪಟ್ಟಕ್ಕಾಗಿ ತಪಸ್ಸನ್ನು ಆಚರಿಸುತ್ತಿದ್ದ ಸಮಯದಲ್ಲಿ ಒಬ್ಬ ಕಳ್ಳನು ರಾಜನ ಬೊಕ್ಕಸದಿಂದ ಹಣವನ್ನು ದೋಚಿಕೊಂಡು ಬರುತ್ತಿರುವಾಗ, ರಾಜಭಟ್ಟರು ಅವನನ್ನು ಅಟ್ಟಿಸಿಕೊಂಡು ಬರುತ್ತಿರಲು ಆತನು, ಭಟರಿಂದ ತಪ್ಪಿಸಿಕೊಳ್ಳಲು ತಾನು ಕದ್ದು ತಂದಿದ್ದ ಹಣವನ್ನು ಧ್ಯಾನಾಸಕ್ತನಾದ ಮಾಂಡವ್ಯ ಋಷಿಯ ಮುಂದೆ ಸುರಿದು ತಪ್ಪಿಸಿಕೊಂಡನು. ಕಳ್ಳನನ್ನು ಹುಡುಕುತ್ತಾ ಬಂದ ರಾಜಭಟರು ಋಷಿಯ ಮುಂದೆ ಇದ್ದ ಹಣದ ರಾಶಿಯನ್ನು ಕಂಡು ಅವರನ್ನೇ ಕಳ್ಳನೆಂದು ಭಾವಿಸಿ, ಆತನನ್ನು ರಾಜನ ಆಸ್ಥಾನಕ್ಕೆ ತಂದು ನಿಲ್ಲಿಸಿದರು. ಮೌನ ವ್ರತಾನುಷ್ಠಾನ ಮಾಡುತ್ತಿದ್ದ ಋಷಿಯು ಏನನ್ನೂ ಹೇಳಲಿಲ್ಲ. ಕೋಪಗೊಂಡ ರಾಜನು ಆತನಿಗೆ ಶೂಲದ ಶಿಕ್ಷೆಯನ್ನು ವಿಧಿಸಿದನು. ಆಗ ಮುನಿಯು ತನ್ನ ತಪೋಬಲದಿಂದ ಮೃತ್ಯುದೇವನನ್ನು ಕರೆದು ನಿರಪರಾಧಿಯಾದ ತನಗೆ ಶೂಲದ ಶಿಕ್ಷೆಗೆ ಕಾರಣವನ್ನು ಯಾಚಿಸಿದನು. ಇದಕ್ಕೆ ಉತ್ತರವಾಗಿ "ಎಲೈ ಮುನಿಯೇ, ನೀನು ಬಾಲ್ಯದಲ್ಲಿ ಕಡ್ಡಿಯಿಂದ ಒಂದು ನೊಣವನ್ನು ಚುಚ್ಚಿ ಸಾಯಿಸಿದ ಕಾರಣದಿಂದಾಗಿ ಈಗ ನೀನು ಶೂಲಕ್ಕೆ ಏರಿಸಲ್ಪಟ್ಟಿರುವೆ" ಎಂದು ಯಮಧರ್ಮರಾಯನು ಉತ್ತರಿಸಿದನು. "ತಿಳಿಯದ ತಪ್ಪಿಗೆ ಇಂತಹ ಶಿಕ್ಷೆ ಕೊಡುವುದು ಸರಿಯಲ್ಲ" ಎಂದು ಮಾಂಡವ್ಯನು ಕೋಪಗೊಂಡು ನೀನು ಅಧರ್ಮಿಯಾಗಿದ್ದೀಯೆ; ಆದುದರಿಂದ ಭೂಲೋಕದಲ್ಲಿ ದಾಸಿಯ ಗರ್ಭದಲ್ಲಿ ಜನಿಸು" ಎಂದು ಯಮಧರ್ಮರಾಯನನ್ನು ಶಪಿಸಿದನು. ಹೀಗೆ ಮಾಂಡವ್ಯ ಋಷಿಯ ಶಾಪಕ್ಕೆ ಗುರಿಯಾದ ಯಮಧರ್ಮನು ದ್ವಾಪರಯುಗದಲ್ಲಿ ಪುರಾಣ ಪ್ರಸಿದ್ಧನಾದ ವಿಚಿತ್ರವೀರ್ಯ ಮಹಾರಾಜನ ಅಂತಃಪುರದಲ್ಲಿದ್ದ ಒಬ್ಬ ದಾಸಿಯ ಮಗನಾಗಿ ವೇದವ್ಯಾಸಾನುಗ್ರಹದಿಂದ ಜನಿಸಿ, ಭೀಷ್ಮರಿಂದ ಸಕಲ ವಿದ್ಯೆಗಳನ್ನು ಕಲಿತು ವಿದುರನೆಂಬ ಹೆಸರಿನಿಂದ ಪ್ರಸಿದ್ಧನಾದನು. ಮಹಾಭಾರತದ ಉದ್ಯೋಗಪರ್ವದಲ್ಲಿ ದೃತರಾಷ್ಟ್ರನಿಗೆ ನೀಡಿದ ಉಪದೇಶ 'ವಿದುರನೀತಿ' ಎಂದೇ ಪ್ರಖ್ಯಾತವಾಗಿದೆ. ವಿದುರನ ಅಪಾರವಾದ ತತ್ವಜ್ಞಾನ ಪರಿಣತಿ, ರಾಜನೀತಿ, ಕೌಶಲ ಹಾಗೂ ಸಮಾಜದ ಕಳಕಳಿ ಮೊದಲಾದ ಶ್ರೇಷ್ಠ ಗುಣಗಳು ಇದರಿಂದ ವ್ಯಕ್ತವಾಗುತ್ತದೆ. ನಂತರ ಶ್ರೀಕೃಷ್ಣನ ಪರಮ ಭಕ್ತನಾಗಿ ಮಹಾಭಕ್ತ ವಿದುರನೆಂದು ಪ್ರಖ್ಯಾತಿ ಹೊಂದಿದನು. ಕುರುಕ್ಷೇತ್ರ ಯುದ್ಧದ ತರುವಾಯ ಶ್ರೀಕೃಷ್ಣನ ಮಾರ್ಗದರ್ಶನದ ಮೇರೆಗೆ ವಿದುರನು ಉತ್ತರ ಪಿನಾಕಿನಿ ನದಿಯ ದಡದಲ್ಲಿ ತಪಸ್ಸನ್ನಾಚರಿಸುತ್ತಿದ್ದನು. ಈ ಸ್ಥಳದಲ್ಲಿ ಒಂದು ಬೃಹದಾಕಾರವಾದ ಅಶ್ವತ್ಥ ವೃಕ್ಷವನ್ನು ಪ್ರತಿಷ್ಠಾಪಿಸಿದ ಮೈತ್ರೇಯಿ ಮಹಾಋಷಿಗಳು ವಿದುರನಿಗೆ ನಾರಾಯಣ ಮಂತ್ರೋಪದೇಶ ಮಾಡಿದರೆಂದು ಪ್ರತೀತಿಯಿದೆ. ಇದೇ ವೃಕ್ಷದ ಸನ್ನಿಧಿಯಲ್ಲಿದ್ದ ಅಶ್ವತ್ಥನಾರಾಯಣವನ್ನು ಆರಾಧಿಸಿ ಯಮನು ಶಾಪವಿಮೋಚನೆ ಹೊಂದಿದನೆಂದು ಪ್ರತೀತಿಯಿದ್ದು ಸ್ಥಳಪುರಾಣವು ತಿಳಿಸುತ್ತದೆ. ಹಾಗೂ ಪ್ರಾಚೀವ ಕಾಲದಿಂದಲೂ ಈ ಸ್ಥಳವು ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಈ ವೃಕ್ಷ ಉತ್ತರ ಪಿನಾಕಿನಿ ನದಿಯ ಎಡದಂಡೆಯ ಮೇಲಿದೆ ಹಾಗೂ ಇದರ ಬುಡದಲ್ಲಿ ಭಕ್ತರು ನೂರಾರು ವಿವಿಧಾಕೃತಿಯ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಿದ್ದಾರೆ. ಈ ವೃಕ್ಷದ ಪ್ರಾಕಾರಕ್ಕೆ ಹೊಂದಿಕೊಂಡಂತೆ ಈಶ್ವರ, ನವಗ್ರಹಗಳು, ನಾರಾಯಣ, ಶ್ರೀರಾಮರ ಇತ್ತೀಚಿನ ಕಾಲದ ಸಣ್ಣ ದೇವಸ್ಥಾನಗಳಿವೆ. ಈ ದೇವಸ್ಥಾನದ ಹಿಂಭಾಗದ ಪಶ್ಚಿಮಕ್ಕೆ ಒಂದು ವಿಶಾಲವಾದ ಮರಗಳ ತೋಪಿದೆ. ಪ್ರತೀವರ್ಷ ಚೈತ್ರಮಾಸದ ಹುಣ್ಣಿಮೆಯ ದಿನ ದೊಡ್ಡ ಜಾತ್ರೆ ನಡೆಯುತ್ತದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಇಲ್ಲಿ ನಡೆದ ಒಂದು ಘಟನೆ ಉಲ್ಲೇಖಾರ್ಹವಾಗಿದೆ. ಏಪ್ರಿಲ್ ೨೫, ೧೯೩೮ ರಂದು ಜಾರಿಯಲ್ಲಿದ್ದ ನಿಷೇದಾಜ್ಞೆಯನ್ನು ಉಲ್ಲಂಘಿಸಿ ವಿದುರನಾರಾಯಣ ದೇವಾಲಯದ ಸಮೀಪ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಜಮಾಯಿಸಿದ ಸುಮಾರು ೭,೦೦೦ ಜನರ ಗುಂಪೊಂದು ಹತೋಟಿ ತಪ್ಪಿ ಹಿಂಸಾಚಾರಕ್ಕಿಳಿಯಬಹುದೆಂಬ ಶಂಕೆಯಿಂದ ಪೋಲಿಸರು ಗಂಡುಹಾರಿಸಿದಾಗ ಹತ್ತು ಜನರು ಮಡಿದರು. ಪೋಲಿಸರ ಕ್ರಮವನ್ನು ರಾಜಾದ್ಯಂತ ಸ್ವಾತಂತ್ರ್ಯ ಹೋರಾಟಗಾರರು ಪ್ರತಿಭಟಿಸಿದರು. 'ಕರ್ನಾಟಕದ ಜಲಿಯನ್‌ವಾಲಾ ಬಾಗ್' ಎಂದೇ

ಕರೆಯಲಾಗಿದೆ. ಈ ಘಟನೆಯ ಸ್ಮರಣಾರ್ಥವಾಗಿ ಸ್ವಾತಂತ್ರ್ಯಾನಂತರ ೧೯೫೫ರಲ್ಲಿ ಸರ್ವೋದಯ ಮೆಮೋರಿಯಲ್ ಪ್ರೌಢಶಾಲೆಯನ್ನು ಸ್ಥಾಪಿಸಲಾಗಿದೆ. ೧೯೬೦ರಲ್ಲಿ ದೇವಸ್ಥಾನದಲ್ಲಿರುವ ತೋಪಿನಲ್ಲಿ ಮರಣ ಹೊಂದಿದ ಸತ್ಯಾಗ್ರಹಿಗಳ ನೆನಪಿಗಾಗಿ ಸ್ಮಾರಕ ಸ್ತಂಭ ವೊಂದನ್ನು ನಿಲ್ಲಿಸಲಾಗಿದೆ. ಇತ್ತೀಚೆಗೆ ವೀರಸೌಧವನ್ನು ನಿರ್ಮಿಸಲಾಗಿದೆ. (ಹೆಚ್ಚಿನ ವಿವರಗಳಿಗೆ ಅಧ್ಯಾಯ–೨ ಇತಿಹಾಸ ನೋಡಿ).

**ವಿರೂಪಾಕ್ಷಿ** (ಮುಳಬಾಗಿಲ ತಾಲೂಕು): ಮುಳಬಾಗಿಲಿನಿಂದ ಐದು ಕಿ.ಮೀ. ದೂರದಲ್ಲಿರುವ ವಿರೂಪಾಕ್ಷಪುರ ಅಥವಾ ವಿರೂಪಾಕ್ಷಿಯು ವಿಜಯನಗರದ ಎರಡನೇ ದೇವರಾಯನ ಆಳ್ವಿಕೆಯಲ್ಲಿ ಮುಳವಾಯಿ ಪ್ರಾಂತ್ಯದ ರಾಜ್ಯಪಾಲನಾಗಿದ್ದ ಲಕ್ಕಣ್ಣದಂಡೇಶನು ನಿರ್ಮಿಸಿರುವ ವಿರೂಪಾಕ್ಷ ದೇವಾಲಯದಿಂದಾಗಿ ಜನಪ್ರಿಯವಾಗಿದೆ. ದ್ರಾವಿಡ ಶೈಲಿಯ ವಿರೂಪಾಕ್ಷ ದೇವಾಲಯವು ವಿಶಾಲವಾದ ಹೊರ ಮತ್ತು ಒಳಪ್ರಾಕಾರಗಳನ್ನು ಹಾಗೂ ಮೂರು ಪ್ರವೇಶದ್ವಾರಗಳನ್ನು ಹೊಂದಿದೆ. ಮುಂಭಾಗದಲ್ಲಿ ಎತ್ತರವಾದ ಪ್ರವೇಶದ್ವಾರದ ಮೇಲೆ ಇದ್ದ ರಾಯಗೋಪುರವು ಈಗ ಕುಸಿಯುತ್ತಿದೆ. ಮುಖ್ಯ ದೇವಾಲಯದಲ್ಲಿ ಚೌರಸವಾದ ದ್ರಾವಿಡಶೈಲಿಯ ಗರ್ಭಗೃಹ, ಎರಡು ಅರ್ಧಮಂಟಪಗಳು, ಆಯತಾಕಾರವಾದ ವಿಶಾಲವಾದ ನವರಂಗ ಹಾಗೂ ಆಯತಾಕಾರದ ಬಹು ಸ್ತಂಭಗಳಿಂದ ಅಲಂಕೃತವಾಗಿರುವ ಮುಖಮಂಟಪಗಳು ಕಂಡುಬರುತ್ತವೆ. ಗರ್ಭಗೃಹದಲ್ಲಿ ಚೌಕಾಕಾರವಾದ ಪಾಣಿಪೀಠದ ಮೇಲೆ ನವಿರಾಗಿರುವ, ಮುಂಜಾನೆಯಲ್ಲಿ ಜೇನುತುಪ್ಪ ಮತ್ತು ಸಂಜೆಯ ಹೊತ್ತಿಗೆ ಬಿಳಿಮಿಶ್ರಿತ ಬಣ್ಣಗಳನ್ನು ಹೊಮ್ಮಿಸುತ್ತಿರುವ ಆತ್ಮಲಿಂಗ ಸ್ವರೂಪದ ತೇಜೋಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಶಿವಲಿಂಗವನ್ನು ಅತ್ರಿ ಮಹರ್ಷಿಗಳು ಪ್ರತಿಷ್ಠಾಪಿಸಿದರೆಂದು ಸ್ಥಳಪುರಾಣವು ತಿಳಿಸುತ್ತದೆ. ನವರಂಗದಲ್ಲಿರುವ ನಾಲ್ಕು ಬೃಹದಾಕಾರವಾದ ಚೌರಸ ಸ್ತಂಭಗಳು ಶೈವಪುರಾಣವನ್ನು ಪ್ರತಿನಿಧಿಸುವ ಉಬ್ಬುಶಿಲ್ಪಗಳನ್ನು ಹೊಂದಿವೆ. ನವರಂಗದ ಬಲಭಾಗದಲ್ಲಿ ಒಂದು ಚಿಕ್ಕ ಕೊಠಡಿಯಿದ್ದು ಸುಮಾರು ನಾಲ್ಕು ಅಡಿ ಎತ್ತರದ ವೀರಭದ್ರಸ್ವಾಮಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿರುವ ಮುಖಮಂಟಪವು ಆಯತಾಕಾರವಾಗಿದ್ದು ದ್ರಾವಿಡಶೈಲಿಯ ಸ್ತಂಭಗಳನ್ನು ಹೊಂದಿದೆ. ದೇವಾಲಯವು ವಿಶಾಲವಾದ ಹೊರಪ್ರಾಕಾರವನ್ನು ಹೊಂದಿದೆ. ಮುಖ್ಯ ಕಟ್ಟಡದ ಆಗ್ನೇಯ ಭಾಗದಲ್ಲಿ ವಿಶಾಲವಾದ ಕಲ್ಯಾಣಮಂಟಪವಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಗರ್ಭಗೃಹದ ಮೇಲ್ಭಾಗದ ದ್ರಾವಿಡ ಶೈಲಿಯ ಶಿಖರವು ಈಗ ಶಿಥಿಲವಾಗಿದೆ. ದೇವಾಲಯದ ವಾಯುವ್ಯ ಭಾಗದಲ್ಲಿ ಪಾರ್ವತಿ ದೇವಿಯ ಪ್ರತ್ಯೇಕ ಗುಡಿ ಇದ್ದು ಕೇವಲ ಗರ್ಭಗೃಹ ಹಾಗೂ ನವರಂಗಗಳನ್ನು ಮಾತ್ರ ಹೊಂದಿದೆ. ಈ ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಚಿಕ್ಕ ಶಿಖರವಿದೆ. ಹೊರಪ್ರಾಕಾರದಲ್ಲಿ ದುರ್ಗಿಯ ಪ್ರತ್ಯೇಕ ದೇವಾಲಯವಿದ್ದು ಸಿಂಹವಾಹನ ದುರ್ಗಿಯ ವಿಗ್ರಹವು ಚತುರ್ಬಾಹುಗಳನ್ನು ಹೊಂದಿದ್ದು, ಖಡ್ಗ, ಚಕ್ರ, ಶಂಖ ಮತ್ತು ತ್ರಿಶೂಲಗಳನ್ನು ಹೊಂದಿದೆ. ಹೊರಪ್ರಾಕಾರದ ಈಶಾನ್ಯ ಹಾಗೂ ಆಗ್ನೇಯ ದಿಕ್ಕುಗಳಲ್ಲಿ ವಸಂತೋತ್ಸವ ಮತ್ತು ಕಲ್ಯಾಣಮಂಟಪಗಳಿವೆ. ಹೊರಭಾಗದಲ್ಲಿ ಕೆಲವು ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು ಕಂಡುಬರುತ್ತವೆ. ದೇವಾಲಯದ ಬಲಭಾಗದಲ್ಲಿ ಆಕರ್ಷಕವಾದ ಗಡಿಯಾರ ಆಕಾರದ ಪುಷ್ಕರಣಿಯಿದೆ. ಮೊದಲನೇಯ ಪ್ರವೇಶದ್ವಾರದಲ್ಲಿ ಎತ್ತರವಾದ ನಗಾರಿಖಾನೆಗಳಿವೆ. ಈ ದೇವಾಲಯವು ರಾಜ್ಯ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ.

ವಿರೂಪಾಕ್ಷ ದೇವಾಲಯದ ರಥೋತ್ಸವವು ಸಂಕ್ರಾಂತಿಯ ನಂತರ ರಥಸಪ್ತಮಿಯಂದು ನಡೆಯುತ್ತದೆ. ವಿರೂಪಾಕ್ಷ ದೇವಾಲಯದ ಎರಡನೇ ಗೋಪುರದ ತಳಪಾದಿಯ ಮೇಲಿರುವ ಕ್ರಿ.ಶ.೧೪೩೧ರ ಶಾಸನವು ವಿಜಯನಗರದ ದೇವರಾಯನ ಆಳ್ವಿಕೆಯಲ್ಲಿ ವಿಷ್ಣುವರ್ಧನ ಗೋತ್ರದ ಹೆಗ್ಗಡೆದೇವನೆಂಬ ಅಧಿಕಾರಿಯು ಪ್ರಸನ್ನ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಒಂದು ದೇವಾಲಯ, ಭದ್ರತಾಗೋಡೆ, ಚಿನ್ನದ ಕಳಶಗಳನ್ನು, ಮನ್ಮಥ ಪುಷ್ಕರಣಿ, ದೀಪಾಲಂಕಾರ, ಅಗ್ರಹಾರಗಳನ್ನು, ಮಂಟಪಗಳನ್ನು ಭಕ್ತಾದಿಗಳಿಗೆ ಒಂದು ಮಠವನ್ನು ನಿರ್ಮಿಸಿದ ಮತ್ತು ದೇವಾಲಯದ ವಿವಿಧ ಕೈಂಕರ್ಯಗಳಿಗೆ ಹಲವು ದಾನಗಳನ್ನು ನೀಡಿದ ವಿಚಾರಗಳನ್ನು ದಾಖಲಿಸುತ್ತದೆ. ವೋಮ್ಮಾಯಮ್ಮಳ ಮಕ್ಕಳಾದ ಲಕ್ಕಣ್ಣ ದಣ್ಣಾಯಕ ಮತ್ತು ಮಾದಣ್ಣ ಇವರುಗಳು ಪ್ರಸನ್ನ ವಿರೂಪಾಕ್ಷ ದೇವಾಲಯದ ವಿವಿಧ ದುರಸ್ತಿ ಹಾಗೂ ನಿರ್ಮಾಣ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದರೆಂದು ಇದೇ ಶಾಸನದಲ್ಲಿ ದಾಖಲಿಸಲಾಗಿದೆ. ಇದೇ ದೇವಾಲಯದ ಮಹಾದ್ವಾರ ಗೋಪುರದ ದಿಂಡುಕಲ್ಲುಗಳಲ್ಲಿರುವ ಕ್ರಿ.ಶ.೧೫೨೭ರ ಶಾಸನವು ವಿಜಯನಗರದ ದೇವರಾಯನ ಆಳ್ವಿಕೆಯಲ್ಲಿ ರಾಯದುರ್ಗ ತಿಪ್ಪರಸನ ಮಗನಾದ ಭೋಗರಸನು ಪ್ರಸನ್ನ ವಿರೂಪಾಕ್ಷ ದೇವರ ದೈನಂದಿನ ಕೈಂಕರ್ಯಕ್ಕಾಗಿ ಕಾಳವೇಕಲ್ ಗ್ರಾಮ ಅಥವಾ ಮುಳವಾಯಿ ಚಾವಡಿಯ ಕುಂದಾಣಿ ಸೀಮೆಯಲ್ಲಿದ್ದ ಮುಕುಂದಸಾಗರದ ತಿಪ್ಪಸಮುದ್ರವನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದ

ಮಹಾಪ್ರಾಕಾರದ ಬಂಡೆಯ ಮೇಲಿರುವ ಕ್ರಿ.ಶ.೧೭೦೩ರ ಶಾಸನವು ತೆಲುಗು ಭಾಷೆಯಲ್ಲಿದ್ದು ಪಶ್ಚಿಮ ವಿರೂಪಾಕ್ಷಪುರ ಅಥವಾ ತಿರುವಳಂಗಾಡು ಧರ್ಮಶಿವಾಚಾರ್ಯರು ಸ್ಥಾಪಿಸಿದ ವೇದಾಂಗ ಮಾರ್ಗದ ಸಹಾಯಕ ಆಚಾರ್ಯರ ಶಿಷ್ಯರಾದ ಸಹಾಯಾಚಾರ್ಯ, ಇಮ್ಮಡಿ ಆಚಾರ್ಯ ಮತ್ತು ಪೂರ್ವ ಧರ್ಮಶಿವಾಚಾರ್ಯರ ಸಹಾಯಕ ವೀರ ರಾಜಪ್ರಶಸ್ತಿ ಮೊದಲಾದವರೊಂದಿಗೆ ನಡೆದ ಧಾರ್ಮಿಕ ಒಪ್ಪಂದ ಹಾಗೂ ಮೂಲಸ್ಥಾನದ ತೀರ್ಮಾನದ ವಿವರಗಳನ್ನು ದಾಖಲಿಸುತ್ತದೆ.

**ಶಿಡ್ಲಘಟ್ಟ:** (ಕೋಲಾರ ಜಿಲ್ಲೆ; ತಾಲೂಕು ಕೇಂದ್ರ) ಶಿಡ್ಲಘಟ್ಟವು ಬೆಂಗಳೂರಿನಿಂದ ೬೬ ಕಿ.ಮೀ. ಮತ್ತು ಕೋಲಾರದಿಂದ ವಾಯುವ್ಯಕ್ಕೆ ಸುಮಾರು ೪೮ ಕಿ.ಮೀ. ದೂರದಲ್ಲಿ ಚಿಕ್ಕಬಳ್ಳಾಪುರ ಚಿಂತಾಮಣಿ ರಸ್ತೆಯಲ್ಲಿರುವ ಒಂದು ಪುರಸಭಾ ಪಟ್ಟಣ. ಇದರ ಪುರಾತನ ಹೆಸರು 'ಸಿಡಿಲ ಘಟ್ಟ' ಎಂದು. ಸ್ಥಳ ಪುರಾಣದ ಪ್ರಕಾರ ಕ್ರಿ.ಶ.೧೫೨೬ರಲ್ಲಿ ಉಜನಿ ಪಟ್ಟಣದ ಕೆಂಪೇಗೌಡನ ಧರ್ಮಪತ್ನಿ ಹಲಸೂರಮ್ಮ ಈ ಊರನ್ನು ಕಟ್ಟಿಸಿ ತನ್ನ ಮಾವನಾದ ಸಿಡಿಲಗೌಡನ ಹೆಸರಿನಿಂದ ಕರೆದಳು. ವೆಲ್ಲೂರ ಮೇಲೆ ನಡೆಸಿದ ದಂಡಯಾತ್ರೆಯಲ್ಲಿ ಕೆಂಪೇಗೌಡನು ಮೃತನಾದಾಗ ಆಗ ಗರ್ಭವತಿಯಾಗಿದ್ದ ಹಲಸೂರಮ್ಮ ಶಿವನಗೌಡ ಎಂಬ ಗಂಡು ಮಗುವಿಗೆ ಜನ್ಮವಿತ್ತಳು; ಅಲ್ಲದೇ, ಅಬ್ಲೋಡು ಎಂಬ ಸ್ಥಳವನ್ನು ಆಕ್ರಮಣದ ವಿರುದ್ಧ ಬಲಪಡಿಸಿ ಕೆಲವು ಹಳ್ಳಿಗಳನ್ನು ಸಹ ವಶಪಡಿಸಿಕೊಂಡಳು. ಶಿವನೇಗೌಡನಿಗೆ ಕ್ರಿ.ಶ.೧೫೨೯ರಲ್ಲಿ ಪಟ್ಟವಾಯಿತು. ಇಲ್ಲಿರುವ ಎರಡು ಕೆರೆಗಳಲ್ಲಿ ನೈಋತ್ಯ ದಿಕ್ಕಿನಲ್ಲಿರುವ 'ಅಮ್ಮನಕೆರೆ'ಯನ್ನು ಹಲಸೂರಮ್ಮನೂ, ಆಗ್ನೇಯ ದಿಕ್ಕಿನಲ್ಲಿರುವ 'ಗೌಡನ ಕೆರೆ'ಯನ್ನು ಶಿವನೇಗೌಡನೂ ಕಟ್ಟಿಸಿದರು. ಕೆರೆ ಅಚ್ಚುಕಟ್ಟಿನಲ್ಲಿರುವ ಛಾವಣಿಗೆ ಹೊದಿಸಿರುವ ಸಮಾಧಿಗಳು ಶಿವನೇಗೌಡ ಮತ್ತು ಅವನ ಧರ್ಮಪತ್ನಿಯವು. ಈ ಪಟ್ಟಣ ೧೭ನೇಯ ಶತಮಾನದಲ್ಲಿ ಮರಾಠರ, ತದನಂತರ, ವಿಜಾಪುರ ಸುಲ್ತಾನರ ಮತ್ತು ಮೊಗಲರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ.೧೬೭೯ರಲ್ಲಿ ಇದನ್ನು ವಶಪಡಿಸಿಕೊಂಡ ಮರಾಠರು ೧೬೯೧ರಲ್ಲಿ ಅಣ್ಣಯ್ಯಗೌಡ ಎಂಬಾತನಿಗೆ ಮಾರಿದರು. ಇದನ್ನು ೧೭೬೨ರಲ್ಲಿ ಹೈದರ್ ಅಲಿಯು ವಶಪಡಿಸಿಕೊಂಡನು. ಈ ಪಟ್ಟಣದಲ್ಲಿರುವ ಅನೇಕ ದೇವಾಲಯಗಳು ಆಧುನಿಕ ಕಾಲದವು. ಇವುಗಳಲ್ಲಿ ಹೆಸರಿಸಬೇಕಾದ ದೇವಾಲಯಗಳೆಂದರೆ ವೇಣುಗೋಪಾಲ, ಶ್ರೀಕಂಠೇಶ್ವರ, ನಗರೇಶ್ವರ ಮತ್ತು ವೆಂಕಟರಮಣ. ಇವುಗಳಲ್ಲೆಲ್ಲಾ ಅತ್ಯಂತ ಹಳೆಯದೆಂದರೆ, ಕೆತ್ತನೆ ಕೆಲಸದಿಂದ ಕೂಡಿರುವ ಸ್ತಂಭಗಳುಳ್ಳ ಆಂಜನೇಯನ ಗುಡಿ. ಶಿಡ್ಲಘಟ್ಟದಲ್ಲಿ ಒಂದು ಮಸೀದಿಯೂ ಇದೆ. ರಾಜ್ಯದ ರೇಷ್ಮೆ ಕೇಂದ್ರಗಳಲ್ಲೊಂದಾದ ಇಲ್ಲಿ ರೇಷ್ಮೆ ವ್ಯವಸಾಯ ಕೇಂದ್ರ ಮತ್ತು ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ಮತ್ತು ಬಿತ್ತನೆ ಕೋಠಿಗಳಿವೆ. ಈ ತಾಲೂಕಿನ ಇತರ ಮುಖ್ಯಸ್ಥಳಗಳೆಂದರೆ ಗಂಗಾದೇವಿ ಗುಡಿ ಇರುವ ಮೇಲೂರು ಮತ್ತು ರಾಮಲಿಂಗೇಶ್ವರ ಗುಡಿಯಿರುವ ನಲ್ಲಾರಹಳ್ಳಿ. ಶಿಡ್ಲಘಟ್ಟದ ಸಮೀಪವಿರುವ (೧೦ ಕಿ.ಮೀ.) ದೇವರ ಮಳ್ಳೂರಿನಲ್ಲಿ ಆಂಜನೇಯನ ದೇವಾಲಯವಿದೆ. ಈ ಊರು ಜಾನಪದೀಯವಾದ ಕಳಸ ನೃತ್ಯಕ್ಕೆ ಪ್ರಸಿದ್ಧಿಪಡೆದಿದೆ. ಶಿಡ್ಲಘಟ್ಟ ತಾಲೂಕಿನ **ಸಾದಲಿ** (ಬಾಗೇಪಲ್ಲಿಯಿಂದ ೨೨ ಕಿ.ಮೀ) ಯಲ್ಲಿ ಪೌರಾಣಿಕವಾಗಿ ಸಹದೇವನು ನಿರ್ಮಿಸಿದನೆಂದು ಹೇಳಲಾಗುವ ನಂದೀಶ್ವರ ದೇವಾಲಯವಿದೆ. ಈ ಊರಿನ ನಾಗರಕಲ್ಲು ಕಟ್ಟೆಯ ಬಳಿಯಿರುವ ಬಂಡೆಯ ಮೇಲಿನ ಕ್ರಿ. ಶ. ೧೭೯೨ರ ಶಾಸನವು ಆವತಿ ನಾಡಪ್ರಭು ದೊಡ್ಡ ಭೈರೇಗೌಡನ ಮೊಮ್ಮಗ ಚನ್ನಣಪ್ಪಯ್ಯನ ಮಗ ರಾಮಸ್ವಾಮಿಯೆಂಬ ಅಧಿಕಾರಿಯು ನಂದೀಶ್ವರ ದೇವರ ಅರ್ಚಕರಾದ ರಾಮಶಾಸ್ತ್ರಿ ಎಂಬುವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ.

**ಶಿವಾರಪಟ್ಟಣ** (ಮಾಲೂರು ತಾಲೂಕು: ಜನಸಂಖ್ಯೆ: ೧,೯೪೮): 'ಶಿವಾರಪಟ್ಟಣ' ಅಥವಾ ಶಾಸನೋಕ್ತ 'ಶಿವಮಾರ ಪಟ್ಟಣ' ಅಥವಾ 'ಕದಂಬೂರು' ಕರ್ನಾಟಕದ 'ಶಿಲ್ಪಕಾಶಿ' ಎಂದೇ ಪ್ರಸಿದ್ಧಿಯಾಗಿದೆ. ಗಂಗರ ಕಾಲದಲ್ಲಿ ಶಿವಮಾರನಿಂದ ನಿರ್ಮಿತವಾಗಿರುವ ಸೋಮೇಶ್ವರ ದೇವಾಲಯವು ನಂತರ ಚೋಳರ ಕಾಲದಲ್ಲಿ ವಿಸ್ತರಿಸಲ್ಪಟ್ಟಿದ್ದು ಈಗ ಬಹಳಷ್ಟು ಮಟ್ಟಿಗೆ ನಾಶಗೊಂಡಿದೆ. ಇದೇ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ೭೫೩ರ ಗಂಗರಸು ಕೊಂಗುಣಿ ಮಹಾರಾಜ ಶ್ರೀಪುರುಷನ ಶಾಸನವು ಶಿವಮಾರನು ಕದಂಬೂರು ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಕದಂಬೂರು ಕುದರಮ್ಮಾಳದ ಓಂಕಾರ ಶ್ರೀಕಂಠೇಶ್ವರ ದೇವಾಲಯಕ್ಕೆ ಗದ್ದೆಯೊಂದನ್ನು ಬೆಳೆಯುವ ಸಾಮರ್ಥ್ಯವುಳ್ಳ ಭೂಮಿಯನ್ನು ದತ್ತಿಬಿಟ್ಟ ವಿಚಾರ ದಾಖಲಿಸುತ್ತದೆ. ಇದೇ ಗ್ರಾಮದ ರಾಮೇಶ್ವರ ದೇವಾಲಯದ ಪುಷ್ಕರಣಿಯ ಮೂಲೆಯಲ್ಲಿರುವ ಕ್ರಿ. ಶ. ೭೬೦ರ ಗಂಗರ ಶಾಸನವು ಶ್ರೀಪುರುಷನ ಆಳ್ವಿಕೆಯ ಅವಧಿಯಲ್ಲಿ ಕೂಡಲೂರಿನ ಪಾಡಿ ಒಡೆಯ ಮತ್ತು ನಂದಿಕಾಡವ ಎರೆಯಂಗ ಇಬ್ಬರ ನಡುವೆ ಉದ್ಭವಿಸಿದ್ದ ಕಲಹವನ್ನು ಲೋಕಾದಿತ್ಯ ಏಳರಸನ ಮಗ ಮಲ್ಲಾಡಿ ಹಾಗೂ ದಿದಂಬೂರಿನ ನಲವತ್ತು ಜನ ಸಮಸ್ತರ ಸಮ್ಮುಖದಲ್ಲಿ

ಪರಿಹರಿಸಿದ ವಿಚಾರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಚೌಡೇಶ್ವರಿ ದೇವಾಲಯದ ಬಳಿ ದೊರೆತ ಭಿನ್ನವಾದ ಕಲ್ಲಿನ ಮೇಲಿರುವ ಕ್ರಿ.ಶ. ೭೫೩ರ ಶಾಸನವು ಗಂಗ ಶ್ರೀಪುರುಷನ ಆಳ್ವಿಕೆಯಲ್ಲಿ ಲೋಕಾದಿತ್ಯ ಏಳರಸನು ಕದಂಬೂರನ್ನು ನಿರ್ಮಿಸಿದ ಬಗ್ಗೆ ಹಾಗೂ ಆತನು ನಡೆಸಿದ ದಾಳಿಗಳ ಬಗ್ಗೆ ಉಲ್ಲೇಖಿಸುತ್ತದೆ. ಶಾಸನದ ಉಳಿದ ಭಾಗವು ನಾಶಗೊಂಡಿದೆ. ಇದೇ ಗ್ರಾಮದ ಆಂಜನೇಯ ದೇವಾಲಯದ ಮುಂದಿರುವ ಕ್ರಿ. ಶ. ೯೨೫ರ ಶಾಸನವು ಪಲ್ಲವ ಕುಲದ ವೀರ ನೊಳಂಬರಾಜನ ಆಳ್ವಿಕೆಯ ಅವಧಿಯಲ್ಲಿ ತೊಂಬುವಯ್ಯನ ಮಕ್ಕಳಾದ ನಾಗಯ್ಯ ಮತ್ತು ಕೊಂಡಯ್ಯ ಎಂಬ ಅಧಿಕಾರಿಗಳು ಮೆಂಡಿಮಂಗಲದ ಬ್ರಾಹ್ಮಣ ವಿದ್ವಾಂಸರಿಗೆ ೧೬ ಗದ್ಯಾಣ ಚಿನ್ನದ ನಾಣ್ಯಗಳನ್ನು ಮತ್ತು ಅವರ ದೈನಂದಿನ ಆಹಾರಕ್ಕಾಗಿ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ಗ್ರಾಮದ ವಾಯುವ್ಯಕ್ಕೆ ಖಾಸಗಿ ಜಮೀನಿನಲ್ಲಿರುವ ಕ್ರಿ.ಶ. ೧೩೨೩ರ ಶಾಸನವು ಹೊಯ್ಸಳ ಎರಡನೇ ಬಲ್ಲಾಳನ ಆಳ್ವಿಕೆಯಲ್ಲಿ ಮಹಾಸಾಮಂತಾಧಿಪತಿ ಪೆಮ್ಮಿವರದ ಭೂಪಲ್ಲಿ ನಾಯಕರ್ ಮತ್ತು ತೇಕಲ್ಲುನಾಡಿನ ನಿವಾಸಿಗಳು ವಿಟ್ಟಿಮಂಗಲದ ಶೆಟ್ಟಿಪಲ್ಲಿ ಗ್ರಾಮದ ವ್ಯಾಪ್ತಿಯಲ್ಲಿದ್ದ ಭೂಮಿಯನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಕೆರೆಯ ಪಶ್ಚಿಮ ಕೋಡಿ ಜರುಗುದಿಣ್ಣೆಯಲ್ಲಿರುವ ಗಂಗರ ಕಾಲದ ಎರಡು ವೀರಗಲ್ಲು ಶಾಸನಗಳ ಪೈಕಿ ಮೊದಲನೆಯದು ಕ್ರಿ.ಶ. ೭೫೦ರಲ್ಲಿ ಪೃಥ್ವಿ ಕೊಂಗುಣಿ ಮುತ್ತರಸ ಶ್ರೀಪುರುಷನ ಆಳ್ವಿಕೆಯಲ್ಲಿ ನೆಲ್ಲಿವಾರ ಕಾಳಕಣ್ಣನೆಂಬ ವೀರನು ಕಲಿಕಂಗ ಮತ್ತು ಗಂಜಿನಾಡಿನ ಆಕ್ರಮಣಕಾರ ಕಲಿದೊರೆ ಗಂಬಕ್ಕಿ ಅರಸನ ವಿರುದ್ಧ ಭೀಕರವಾಗಿ ಹೋರಾಡಿ ವೀರ ಸ್ವರ್ಗವನ್ನು ಸೇರಿದ ವಿಚಾರವನ್ನು ದಾಖಲಿಸುತ್ತದೆ. ಇಲ್ಲೇ ಇರುವ ಎರಡನೇ ವೀರಗಲ್ಲು ಶಾಸನವು ಕ್ರಿ.ಶ. ೯೫೦ರಲ್ಲಿ ಒಳಣನೆಂಬ ವೀರನು ಪ್ರಬಲವಾಗಿ ಚಿಕ್ಕ ಊರಿನ ಕೋಟೆಯನ್ನು ವಶಪಡಿಸಿಕೊಂಡಾಗ ಶಿವ ಊರಿನ (ಶಿವಾರಪಟ್ಟಣ) ಗೌಂಡ ಪುಲಿನಲ್ಲೂರು ನಿಜಾರಮಯ್ಯನ ಮಗ ಮುದ್ಧಯ್ಯನು ಆತನ ಆಕ್ರಮಣವನ್ನು ತಡೆಗಟ್ಟಲು ಯತ್ನಿಸಿ ವೀರಸ್ವರ್ಗವನ್ನು ಸೇರಿದ ವಿಚಾರವನ್ನು ದಾಖಲಿಸುತ್ತದೆ.

ಪ್ರಸಿದ್ಧ ಶಿಲ್ಪಿ ಡಿ. ವಾದಿರಾಜ ಅವರು ತಿಳಿಸುವಂತೆ, "ಶಿವಾರಪಟ್ಟಣದ ಶಿಲ್ಪಿಗಳು ಯಾವುದೇ ಸಾಂಪ್ರದಾಯಿಕ ಶಿಲ್ಪಕಲಾ ಶೈಲಿಯನ್ನು ಅತ್ಯಂತ ತೀಕ್ಷ್ಣವಾಗಿ ಅರಿತು ಸೃಷ್ಟಿಸಬಲ್ಲವರಾಗಿದ್ದಾರೆ. ನೊಳಂಬರು, ಗಂಗರು, ಚೋಳರು, ಹೊಯ್ಸಳರು ಹಾಗೂ ವಿಜಯನಗರ ಕಲಾಶೈಲಿಗಳ ಶಿಲ್ಪ ಮತ್ತು ವಾಸ್ತು ವೈವಿಧ್ಯತೆಗಳು ಕೋಲಾರ ಜಿಲ್ಲೆಯಾದ್ಯಂತ ಕಂಡುಬರುವುದರಿಂದ ಶಿವಾರಪಟ್ಟಣವು ಗಂಗರ ಆಡಳಿತ ಕಾಲದಿಂದಲೂ ಜನಪ್ರಿಯ ಶಿಲ್ಪಕಲಾ ಕೇಂದ್ರವಾಗಿ ಬೆಳೆದು ಬಂದಿರುವುದು ಸಹಜವಾಗಿಯೇ ಇದೆ". ಇಲ್ಲಿಯ ಶಿಲ್ಪಿಗಳು ತಮ್ಮ ಶಿಲಾ ಮಾಧ್ಯಮವಾದ ಕೃಷ್ಣ ಶಿಲೆಯನ್ನು ವೇಮಗಲ್ ಬಳಿಯಿರುವ ಸೂರಿ ಮಲ್ಲೇಶ್ವರ ಬೆಟ್ಟದಿಂದ ತರುತ್ತಾರೆ. ಈ ಶಿಲ್ಪಿಗಳು ಅನೇಕ ದೇವ ದೇವಿಯರ ಪ್ರತಿಮೆಗಳನ್ನು ರೂಪಿಸಿದ್ದು, ಬೆಂಗಳೂರಿನ ಪೊಲೀಸ್ ಮಹಾ ನಿರ್ದೇಶಕರ ಕಛೇರಿಯಲ್ಲಿರುವ ಶೇಷಶಯನ ರಂಗನಾಥಸ್ವಾಮಿಯ ವಿಗ್ರಹವು ಶಿವಾರಪಟ್ಟಣದ ಕೊಡುಗೆಯಾಗಿದೆ. ಶಿವಾರಪಟ್ಟಣವು ತನ್ನ ಹಿರಿಮೆಗೆ ತಕ್ಕಂತ 'ಶಿಲ್ಪಕಾಶಿ' ಎಂದೇ ಹೆಸರು ಪಡೆದಿದೆ. ಶಿವಾರಪಟ್ಟಣದ ಶಿಲ್ಪಿಗಳಿಗೆ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಹಲವು ಪ್ರಶಸ್ತಿಗಳು ಬಂದಿವೆ. ಹಾಗೆಯೇ, ಈ ಊರಿನ ಶಿಲ್ಪಿಗಳಲ್ಲಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದವರೂ ಇದ್ದಾರೆ.

**ಶ್ರೀನಿವಾಸಪುರ:** (ತಾಲೂಕು ಕೇಂದ್ರ ಜನಸಂಖ್ಯೆ: ೨೨,೯೫೯) ಶ್ರೀನಿವಾಸಪುರ ಕೋಲಾರದಿಂದ ಈಶಾನ್ಯಕ್ಕೆ ೨೮ ಕಿ.ಮೀ. ಮತ್ತು ಬೆಂಗಳೂರಿನಿಂದ ೯೫ ಕಿ.ಮೀ. ದೂರದಲ್ಲಿದೆ. ಹಿಂದೆ ಇದಕ್ಕೆ ಪಾಪನಪಲ್ಲಿ ಎಂಬ ಹೆಸರಿತ್ತು. ದಿವಾನ್ ಪೂರ್ಣಯ್ಯನವರು, ತಿರುಪತಿ ಯಾತ್ರೆ ಮುಗಿಸಿ ಹಿಂತಿರುಗುತ್ತಿದ್ದಾಗ, ಇದಕ್ಕೆ ತಮ್ಮ ಮಗ ಶ್ರೀನಿವಾಸಮೂರ್ತಿಯ ಹೆಸರನ್ನು ಇಟ್ಟರು. ಇಲ್ಲಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಗುಳ್ಳನಪೊಡೆ ಒಂದು ಪುರಾತನ ಪಟ್ಟಣವಾಗಿತ್ತೆಂದು ವರ್ಣಿತವಾಗಿದೆ. ಹರಲಕೋಟೆ ಎಂಬಲ್ಲಿ ಬಾಣರ ಎರಡು ಶಾಸನಗಳು ಲಭ್ಯವಿದೆ. ಇಲ್ಲಿನ ಚೌಡೇಶ್ವರಿದೇವಿಯ ಗುಡಿಯಲ್ಲಿರುವ ವಿಗ್ರಹದ ನಾಲ್ಕು ಕೈಗಳಲ್ಲಿ, ಕ್ರಮವಾಗಿ ಡಮರು, ಸರ್ಪ, ಕಪಾಲ ಮತ್ತು ದಾನವನೋರ್ವನನ್ನು ತಿವಿಯುತ್ತಿರುವ ತ್ರಿಶೂಲವಿದೆ. ಇದೇ ಗುಡಿಯಲ್ಲಿ ಸಾಲಾಗಿ ಕುಳಿತಿರುವ ಸಪ್ತಮಾತೃಕೆಯರ ಪ್ರತಿಮೆಗಳಿವೆ. ಈ ಪಟ್ಟಣವು ಗೋಡಂಬಿ, ಹುಣಸೆ ಹಾಗೂ ಮಾವಿನ ಕೃಷಿಗೆ ಪ್ರಸಿದ್ಧವಾಗಿದೆ. ಶ್ರೀನಿವಾಸಪುರದಿಂದ ಆರು ಕಿ.ಮೀ. ದೂರದಲ್ಲಿರುವ ಹೆಬ್ಬಟ್ಟ ಒಂದು ಪ್ರಾಚೀನ ನಿವೇಶನವಾಗಿದ್ದು ಗಂಗರ ಅನೇಕ ಶಾಸನಗಳು ಅಲ್ಲಿ ದೊರಕಿವೆ. ಶ್ರೀನಿವಾಸಪುರದಿಂದ ೨೨ ಕಿ.ಮೀ. ದೂರದಲ್ಲಿರುವ ಕೊಳಗುರ್ತಿ, ಅಲ್ಲಿರುವ ಗಂಗಮ್ಮನ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಈ ಊರಿನಲ್ಲಿರುವ ರಾಮಸ್ವಾಮಿ ದೇವಾಲಯದ ಗೋಡೆಯ ಮೇಲೆ ಅಸ್ಪಷ್ಟ ತೆಲುಗು ಶಾಸನವಿದ್ದು ಕೇವಲ 'ಭೀಮಾಚಾರ್ಯಲು' ಮತ್ತು 'ಭಟಮಾನ್ಯ'ವೆಂದು ಮಾತ್ರ ಓದಲು ಸಾಧ್ಯವಾಗಿದೆ. ಶ್ರೀನಿವಾಸಪುರದ

ಈಚಲುಕುಂಟೆಗೆ ದಕ್ಷಿಣ ಕಡೆ ಬಿದ್ದಿರುವ ಕಲ್ಲಿನ ಮೇಲಿರುವ ಕ್ರಿ.ಶ.೧೫೪೯ರ ಶಾಸನವು ಮಾರಪ್ಪ ನಾಯಕನ ಮಗನಾದ ತಿಪ್ಪಣ್ಣ ನಾಯಕನು ದೇರೆಯ ನಾಯಕನ ಮಗನಾದ ತಿಮ್ಮೆಯ ನಾಯಕನಿಗೆ ಪಾಪನಹಳ್ಳಿಯ ಉತ್ತರಕ್ಕಿರುವ ಕೋರೇನಹಳ್ಳಿ (ಶ್ರೀನಿವಾಸಪುರದ ಪ್ರಾಚೀನ ಹೆಸರು)ಯ ಕೋದಂಡಮ್ ಕಣಿವೆಯ ಕೆರೆಯ ಅಂಚಿನಲ್ಲಿ ನೀಡಿದ ಭೂದಾನದ ಬಗ್ಗೆ ಉಲ್ಲೇಖಿಸುತ್ತದೆ. ಶ್ರೀನಿವಾಸಪುರದ ಪೂರ್ವಕ್ಕೆ ಗುಲಗನ ಪೊದೆಯ ಅರಲುಕೋಟೆಯಲ್ಲಿರುವ ಕ್ರಿ.ಶ.೭೮೦ರ ಶಾಸನವು ಮಹಾವಳಿ ಬಾಣರಸನು ಈ ಪ್ರದೇಶವನ್ನು ಆಳ್ವಿಕೆಮಾಡುತ್ತಿದ್ದಾಗ ಮಣಸೂರಿನ ಅರಳಿಕಾಯಪ್ಪನ ಮಗ ಪ್ರಭು ಕಾಯಪ್ಪನು ಬಾಳ್ಗಳ್ಚು ಎಂಬ ಸಾಂಪ್ರದಾಯಿಕ ಆಚರಣೆಯ ಸಂದರ್ಭದಲ್ಲಿ ಕುಲಾನೆಲ್ಲೂರಿನ ಪರಮೇಶ್ವರ ದೇವರ ಪೂಜಾ ಕೈಂಕರ್ಯಕ್ಕಾಗಿ ನೀಡಿದ ಹಲವು ಭೂದಾನಗಳನ್ನು ದಾಖಲಿಸುತ್ತದೆ. ಇದೇ ಸ್ಥಳದಲ್ಲಿರುವ ಇನ್ನೊಂದು ಕ್ರಿ.ಶ.೭೮೦ರ ಶಾಸನವು ಮಹಾವಳಿ ಬಾಣರಸನ ಆಳ್ವಿಕೆಯ ಕಾಲದಲ್ಲಿ ಪ್ರಭುಮೇರು ಎಂಬ ಅಧಿಕಾರಿಯು ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ಸ್ಥಳದ ಅರಲುಕೋಟೆಯ ಗವಿಯ ಸಮೀಪದಲ್ಲಿ ಭಿನ್ನಗೊಂಡು ಬಿದ್ದಿರುವ ಕಂಬದಲ್ಲಿರುವ ಕ್ರಿ.ಶ.೯೮೮ರ ಶಾಸನವು ನೊಳಂಬ ಜಯಗೊಂಡ ಅರಸನು ಕೆಲವು ನೂತನ ಎಲ್ಲೆಗಳನ್ನೊಳಗೊಂಡ ಪ್ರದೇಶಗಳನ್ನು ಬಿದಿರುಕುಲದ ದೇವಾಲಯದ ಸಮ್ಮುಖದಲ್ಲಿ ತನ್ನ ನೇತೃತ್ವದ ಅಧಿಕಾರಿಗೆ ನೀಡಿದ ವಿವರಗಳನ್ನು ದಾಖಲಿಸುತ್ತದೆ. ಇದೇ ಕಂಬದ ಸಮೀಪದಲ್ಲಿರುವ ಇನ್ನೊಂದು ಕ್ರಿ.ಶ.೧೨೨೫ರ ತಮಿಳುಶಾಸನವು ಶೇಣಿಗ ನಾಯಗಟ್ಟೇವನ್ ಎಂಬ ಕಂಚೀನಗರದ ಪ್ರಮುಖ ವರ್ತಕನು ಶೀಟ್ಟೀಶ್ವರಮ್ ದೇವರ ನಿರಂತರ ಸೇವಾ ಕೈಂಕರ್ಯಕ್ಕೆ ಸಹಾಯ ಮಾಡುವ ಉದ್ದೇಶದಿಂದ ಈ ಸ್ಥಳದಲ್ಲಿ ವಿಶಾಲವಾದ ಕೆರೆಯನ್ನು ನಿರ್ಮಿಸಿದನೆಂಬ ಮಹತ್ವದ ವಿಚಾರವನ್ನು ದಾಖಲಿಸುತ್ತದೆ.

**ಸೀತಿಬೆಟ್ಟ** (ಕೋಲಾರ ತಾಲೂಕು: ಜನಸಂಖ್ಯೆ: ೧,೨೯೦) : ಕೋಲಾರದಿಂದ ೨೦ ಕಿ.ಮೀ. ದೂರದಲ್ಲಿರುವ ಸೀತಿಬೆಟ್ಟವು ಶಾಸನಗಳಲ್ಲಿ ‘ಶ್ರೀಪತಿ’, ‘ಸೀಪತಿ’, ಮೊದಲಾಗಿ ಉಲ್ಲೇಖಿಸಲ್ಪಟ್ಟಿದ್ದು, ಜಿಲ್ಲೆಯಲ್ಲಿರುವ ಪ್ರಾಚೀನ ಸ್ಥಳಗಳಲ್ಲಿ ಒಂದಾಗಿದೆ. ತಮಿಳು ಶಾಸನಗಳಲ್ಲಿ ಈ ಗ್ರಾಮವನ್ನು ‘ಶ್ರೀಪತಿ’ ಅಥವಾ ‘ಶ್ರೀಪತಿ ಮಲೆ’ ಎಂದು ಉಲ್ಲೇಖಿಸಲಾಗಿದೆ. ಭೌಗೋಳಿಕವಾಗಿ ‘ಸೀತಿ’ ಗ್ರಾಮವು ಹೆಚ್ಚು ಎತ್ತರವಿಲ್ಲದ ಬೆಟ್ಟಗಳಿಂದ ಕೂಡಿದ್ದು, ಪ್ರಶಾಂತ ವಾತಾವರಣದಲ್ಲಿದ್ದು ಧಾರ್ಮಿಕವಾಗಿ ಅತ್ಯಂತ ಜಾಗೃತ ತಾಣವಾಗಿದೆ. ಸೀತಿಬೆಟ್ಟದ ಮೇಲಿರುವ ಭೈರವೇಶ್ವರ ಹಲವಾರು ಜಾತಿಗಳಿಗೆ ಅದರಲ್ಲೂ ಮೊರಸು ಒಕ್ಕಲಿಗರಿಗೆ, ರೆಡ್ಡಿಗಳಿಗೆ ಆರಾಧ್ಯ ದೈವವಾಗಿದೆ. ಇಷ್ಟೇ ಅಲ್ಲದೇ ಪರಿಶಿಷ್ಟ ಜಾತಿಯವರು, ಬ್ರಾಹ್ಮಣರು, ಬಣಜಿಗರು, ನಾಯಕರು (ಬೇಡ ಜನಾಂಗ), ತೊಗಟರು, ಪಾಂಚಾಳರು (ಬಡಗಿ, ಕಮ್ಮಾರರು, ಸೊನ್ನೆಗಾರರು ಮೊದಲಾದವರು), ಹೀಗೆ ವಿವಿಧ ಪಂಗಡಗಳ ಜನರು ಸೀತಿಬೆಟ್ಟದ ಭೈರವನಿಗೆ ನಡೆದುಕೊಳ್ಳುತ್ತಾರೆ. ಐತಿಹಾಸಿಕ ಕಾಲದಲ್ಲಿ ಸೀತಿಬೆಟ್ಟವು ಕೈವಾರನಾಡಿನ ವ್ಯಾಪ್ತಿಯಲ್ಲಿತ್ತು. “ಕೈವಾರನಾಡು ನೊಳಂಬವಾಡಿಯ ಭಾಗವಾಗಿತ್ತು. ಚೋಳರ ಆಳ್ವಿಕೆಯ ಕಾಲದಲ್ಲಿ ಕೋಲಾರ ಜಿಲ್ಲೆಯ ಸೋಳಂಬವಾಡಿ ಪ್ರದೇಶವನ್ನು ನಿಗಿರಿಲಿ ಚೋಳ ಮಂಡಲವೆಂದು ಅವರ ಶಾಸನಗಳಲ್ಲಿ ಕರೆದಿದೆ. ಸೀತಿಬೆಟ್ಟದ ದಕ್ಷಿಣಕ್ಕೆ ಕುವಲಾಳನಾಡು, ಪಶ್ಚಿಮಕ್ಕೆ ನೊಂಡುಗುಳಿ ನಾಡುಗಳು ಇದ್ದವು”, ಎಂದು ಡಾ॥ ಪಿ. ವಿ. ಕೃಷ್ಣಮೂರ್ತಿ ಅಭಿಪ್ರಾಯಪಟ್ಟಿರುತ್ತಾರೆ. ಪೌರಾಣಿಕ ನಂಬುಗೆಯ ಪ್ರಕಾರ ಭಸ್ಮಾಸುರನು ಶಿವನಿಂದ ಪಡೆದ ವರವನ್ನು ಶಿವನ ಮೇಲೇ ಪ್ರಯೋಗಿಸಲು ಯತ್ನಿಸಿದಾಗ ಶಿವನು ಸೀತಿಬೆಟ್ಟದ ಈ ಗುಹೆಯಲ್ಲಿ ಅವಿತುಕೊಂಡಿದ್ದನೆಂದು ಪ್ರತೀತಿಯಿದೆ. ನಂತರ ಶಿವನ ಕೋರಿಕೆಯ ಮೇರೆಗೆ ವಿಷ್ಣು ಮೋಹಿನಿ ಅವತಾರವನ್ನು ತಾಳಿ ನೃತ್ಯದ ಪೈಪೋಟಿಯ ಮೂಲಕ ಭಸ್ಮಾಸುರನನ್ನು ಸಂಹಾರ ಮಾಡಿ, ಶಿವನಿಗೆ ರಕ್ಷಣೆಯನ್ನು ನೀಡಿದನೆಂದು ಈ ಸ್ಥಳದ ಪೌರಾಣಿಕ ನಂಬಿಕೆಯಾಗಿದೆ. ಸೀತಿಬೆಟ್ಟದ ಬಳಿ ಸುಮಾರು ೨೦೦ ಅಡಿಗೂ ಎತ್ತರವಾದ ಶಂಖುವಿನಾಕಾರದ ಒಂದು ಬೆಟ್ಟವಿದ್ದು, ಅದನ್ನು ಇಂದಿಗೂ ಭಸ್ಮಾಸುರನ ಬೆಟ್ಟವೆಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಧಾರಾಕಾರ ಮಳೆ ಸುರಿದರೂ ಬೆಟ್ಟದ ಮೇಲೆ ಬಿದ್ದ ನೀರು ಕೆಳಗೆ ಹರಿಯದೇ ಅಲ್ಲೇ ಹಿಂಗುವುದರಿಂದ ಇದೊಂದು ಬೂದಿಯ ಗುಡ್ಡವೆಂಬ ನಂಬಿಕೆಯೂ ಇದೆ. ಸೀತಿಬೆಟ್ಟದಲ್ಲಿರುವ ಕಾಲಭೈರವನ ದೇವಾಲಯವು ಹಿಂದೆ ನಾಥಪಂಥದ ಕೇಂದ್ರವೂ ಆಗಿದ್ದಿರಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಬೆಟ್ಟವನ್ನು ಹತ್ತಿ ಹೋಗಲು ದುರಸ್ತಿಗೊಳಿಸಿರುವ ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ಸಮತಟ್ಟಾದ ಪ್ರದೇಶದಲ್ಲಿ ದೇವಾಲಯವಿದ್ದು, ಅದರ ಹಿಂಭಾಗದಲ್ಲಿ ಉತ್ತರಕ್ಕೆ ಒಂದು ಬೃಹದಾಕಾರವಾದ ಬಂಡೆಯ ಮೇಲೆ ಒಂದು ಪ್ರಾಚೀನ ಶಿವಾಲಯವಿದೆ. ಶಿಲೆಯ ವಾಸ್ತುರಚನೆಯನ್ನು ಹೊಂದಿದ್ದು ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಕ್ರಿ.ಶ. ಒಂಭತ್ತು–ಹತ್ತನೇ ಶತಮಾನದ

ಗಂಗರ ಶೈಲಿಯ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯವನ್ನು ಕೆಲವರು ಚಂದ್ರಮೌಳೇಶ್ವರ ಗುಡಿ ಎಂದೂ ಕರೆಯುತ್ತಾರೆ. ಇದರ ಪಕ್ಕದಲ್ಲೇ ಒಂದು ಇಕ್ಕಟ್ಟಾದ ಶಿಲೆಯ ನಡುವೆ ಒಂದು ದೋಣಿ ಇದೆ. ಇದಕ್ಕೂ ಆಚೆ ಒಂದು ದೊಡ್ಡ ಕೆರೆಯಿದ್ದು, ಇದರ ಸುತ್ತಲೂ ಒಂದು ಕಡೆ ನೀರು ತುಂಬಿಕೊಳ್ಳಲು ಒಂದು ಗೋಡೆಯನ್ನು ಕಲ್ಲಿನಿಂದ ಕಟ್ಟಿರುತ್ತಾರೆ. ಇದರ ಸಮೀಪವಿರುವ ಹುಟ್ಟು ಬಂಡೆಯ ಮೇಲೆ ಒಂದೆರಡು ಅಸ್ಪಷ್ಟ ಶಾಸನಗಳಿವೆ. ಚಿತ್ತಾಕರ್ಷಕವಾದ ಶಿಲಾಖಂಡಗಳಿಂದ ತುಂಬಿದ ಬೆಟ್ಟವನ್ನು ಹತ್ತುತ್ತಾ ಹೊದಂತೆ ಸುತ್ತಲಿನ ಪ್ರಾಕೃತಿಕ ನಿಸರ್ಗ ಸೌಂದರ್ಯದ ದೃಶ್ಯವು ಗೋಚರಿಸುತ್ತದೆ. ಬಿಸಿಲಿನ ಕಿರಣಗಳಿಂದ ಹೊಳೆಯುವ ಕೆರೆಕುಂಟೆಗಳು ಹಾಗೂ ಹಸಿರು ಜಮಖಾನೆಗಳಂತೆ ಕಾಣುವ ಗದ್ದೆಗಳು ನೋಡುಗರನ್ನು ವಿಸ್ಮಯಗೊಳಿಸುತ್ತವೆ. ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿರುವ ಈ ಬೆಟ್ಟದ ಮೇಲ್ಭಾಗದಲ್ಲಿ ಇತ್ತೀಚಿನವರೆಗೂ ಜನವಸತಿಯಿದ್ದ ಕುರುಹುಗಳು ಕಂಡುಬರುತ್ತವೆ. ಅಲ್ಲಲ್ಲಿ ಕೋಟೆಯ ಶಿಥಿಲಗೊಂಡ ದ್ವಾರದ ಅವಶೇಷಗಳು ಉಳಿದುಕೊಂಡಿವೆ. ಈ ದ್ವಾರದಿಂದ ಪ್ರವೇಶಿಸಿದರೆ ಪುನಃ ಎತ್ತರವಾದ ಗುಡ್ಡದ ಮೇಲೆ ಮೆಟ್ಟಿಲುಗಳನ್ನೇರಿ ಹೋದರೇ ಸುಮಾರು ೧೦೦ ಅಡಿ ಸುತ್ತಳತೆಯ ವಿಶಾಲವಾದ ಪ್ರದೇಶವಿದೆ. ಬೆಟ್ಟದ ಮೇಲ್ಭಾಗದಲ್ಲಿ ಮನಸೆಳೆಯುವ ಬಂಡೆಗಲ್ಲುಗಳ ಸಮೂಹವು ಸುತ್ತಲೂ ಕಂಡುಬರುತ್ತವೆ. ಇಲ್ಲಿಂದ ಎತ್ತರವಾದ ಮೆಟ್ಟಿಲುಗಳನ್ನು ಹತ್ತುತ್ತಾ ಹೋದರೇ ಒಂದು ಕಲ್ಲಿನ ತೋರಣದ ಅಲಂಕಾರವಿರುವ ಪ್ರವೇಶದ್ವಾರವು ಸಿಗುತ್ತದೆ. ಈ ಮೆಟ್ಟಿಲುಗಳ ಮೇಲೆ ಕೆಲವು ಭಕ್ತರುಗಳ ಹೆಸರುಗಳನ್ನು ಕೆತ್ತಲಾಗಿವೆ. ದೇವಾಲಯದ ಸಮೀಪಕ್ಕೆ ಹೋದರೇ ಗಂಗರ ಕಾಲದ ಲಕ್ಷಣವಿದೆ ಎಂದು ಹೇಳಲಾಗುವ ಒಂದು ಧ್ವಜಸ್ತಂಭವು ಎರಡು ಭಾಗವಾಗಿ ಬಿದ್ದಿರುವುದು ಕಂಡುಬರುತ್ತದೆ. ಇದರ ಬಳಿಯಲ್ಲೇ ಇರುವ ಎತ್ತರವಾದ ಶಾಸನದ ಕಲ್ಲಿದ್ದು ಎರಡೂ ಬದಿಯಲ್ಲಿರುವ ತಮಿಳು ಶಾಸನವು ಕ್ರಿ. ಶ. ೧೩೭೬ರಲ್ಲಿ ವಿಜಯನಗರದ ಅರಸು ವೀರ ಬುಕ್ಕರಾಯನ ಆಳ್ವಿಕೆಯಲ್ಲಿ ವೆಂಗಡವರನ ಮಗ ಅಳಗೀಯ ವರದಾರ್ ಅಧಿಕಾರಿಯು ಸೀಪತಿಯ ಸೇವೆಗಾಗಿ ವಿನಿಹ ತೆರಿಗೆಗಳನ್ನು ಮನ್ನಾ ಮಾಡಿದ ವಿವರಗಳನ್ನು ದಾಖಲಿಸುತ್ತದೆ. ಇದೇ ಸ್ಥಳದಲ್ಲಿ ಮುಂದೆ ಚಲಿಸಿದರೆ, ರಾಯಗೋಪುರವನ್ನು ಹೊಂದಿರುವ ಪ್ರವೇಶದ್ವಾರವಿದೆ. ಈ ಗೋಪುರದ ಕೆಳಗಿರುವ ನಗಾರಿಖಾನೆಯು ಸಾಕಷ್ಟು ವಿಶಾಲವಾಗಿದ್ದು, ವಿಜಯನಗರ ಕಾಲದ ರಚನೆಯಾಗಿದೆ. ನಗಾರಿಖಾನೆಯ ಒಳಭಾಗದ ಇಕ್ಕೆಲಗಳಲ್ಲಿ ವಿಜಯನಗರ ಶೈಲಿಯ ಗಂಗೆ ಹಾಗೂ ಯಮುನೆಯರ ಶಿಲ್ಪಗಳನ್ನು ಕೆತ್ತಲಾಗಿದೆ.

ವಿಜಯನಗರ ಶೈಲಿಯ ಈ ಕಿರು ಶಿಲ್ಪಗಳ ಕೈಯಲ್ಲಿ ಬಳ್ಳಿಗಳ ಕೆತ್ತನೆಯನ್ನು ಇದ್ದು, ಈ ಬಳ್ಳಿಗಳು ಸುರುಳಿಯಾದ ವಿನ್ಯಾಸ ಮತ್ತು ಆಕರ್ಷಕ ಕೆತ್ತನೆಗಳೊಂದಿಗೆ ದ್ವಾರಬಂಧದ ಮೇಲ್ಭಾಗದವರೆಗೂ ರಚಿಸಲಾಗಿದೆ. ಈ ದ್ವಾರಬಂಧದಲ್ಲಿರುವ ಸುಂದರ ಶಿಲ್ಪಗಳ ಕೇಶವಿನ್ಯಾಸ, ಕರ್ಣಕುಂಡಲ, ಕಂಠಿಹಾರ, ನಡುಪಟ್ಟಿ, ಕೇಯೂರ, ಕಂಕಣ, ನೂಪುರ ಮುಂತಾದ ಆಭರಣಗಳು ಮತ್ತು ನಿಂತ ಭಂಗಿ ಹಾಗೂ ಉಟ್ಟ ಉಡುಪಿನ ವಿನ್ಯಾಸಗಳು ಅತ್ಯಂತ ಆಕರ್ಷಕವಾಗಿ ಮೂಡಿವೆ. ಪ್ರವೇಶದ್ವಾರದಿಂದ ಮುಂದುವರೆದರೆ ಇರುವ ಎರಡನೇ ಬಾಗಿಲುವಾಡದ ಎಡಭಾಗದಲ್ಲಿ ಗದೆ ಹಾಗೂ ಅಭಯ ಇರುವ ದ್ವಿಬಾಹು ವೈಷ್ಣವ ದ್ವಾರಪಾಲಕನ ಶಿಲಾಮೂರ್ತಿ ಇದ್ದರೆ, ಬಲಭಾಗದಲ್ಲಿ ಚತುರ್ಭುಜಗಳನ್ನು ಹೊಂದಿರುವ ತ್ರಿಶೂಲ, ಢಮರು, ಗದೆ ಹಾಗೂ ಸೂಚಿಮುದ್ರೆಗಳ ಸಂಕೇತಗಳನ್ನು ಹೊಂದಿರುವ ಶೈವ ದ್ವಾರಪಾಲಕನ ವಿಗ್ರಹವು ಕಂಡುಬರುತ್ತದೆ. ಶ್ರೀಪತೀಶ್ವರ ದೇವಾಲಯವನ್ನು ಪ್ರವೇಶ ಮಾಡಿದರೆ ನಾಲ್ಕು ಸಾಲುಗಳನ್ನು ಹೊಂದಿರುವ ಇಪ್ಪತ್ತು ಚೌಕಾಕಾರವಾದ ವಿಜಯನಗರ ಶೈಲಿಯ ಎತ್ತರವಾದ ಸ್ತಂಭಗಳ ಮುಖ ಮಂಟಪವು ಕಂಡುಬರುತ್ತದೆ. ಇದರ, ಎದುರು ಭಾಗದಲ್ಲಿರುವುದೇ ಶ್ರೀಪತೀಶ್ವರ ಲಿಂಗವಿರುವ ಗರ್ಭಗೃಹವಿದೆ. ಬೃಹದಾಕಾರವಾದ ಬಂಡೆಯ ಆಸರೆಯ ಕೆಳಗೆ ಈ ಗರ್ಭಗೃಹವನ್ನು ನಿರ್ಮಿಸಲಾಗಿದೆ ಹಾಗೂ ಇದೊಂದು ನೈಸರ್ಗಿಕ ಗವಿಯೂ ಆಗಿದೆ. ಇದರ ಮುಂಭಾಗದಲ್ಲಿರುವ ವಿಶಾಲಮಂಟಪವು ಗವಿಯಲ್ಲಿರುವ ಗರ್ಭಗೃಹಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಇದರಲ್ಲಿ ಒಂದು ವಿಶಾಲವಾದ ಕೊಠಡಿ ಇದ್ದು, ಇದನ್ನು ಯಾಗಶಾಲೆ ಅಥವಾ ಉಗ್ರಾಣವನ್ನಾಗಿ ಉಪಯೋಗಿಸುತ್ತಿರುವರು. ಈ ಮಂಟಪದಲ್ಲಿರುವ ಎರಡು ಸ್ತಂಭಗಳು ಮಾತ್ರ ಹೊಯ್ಸಳರ ಶೈಲಿಯಲ್ಲಿರುವುದು ವ್ಯಕ್ತವಾಗುತ್ತವೆ. ಯಜ್ಞಶಾಲೆಯ ಪಶ್ಚಿಮಕ್ಕೆ ಒಂದು ಬಾಗಿಲಿದ್ದು ಇದರಲ್ಲಿ ಪ್ರವೇಶಿಸಿದರೆ ಸಾಲಾಗಿ ಮೂರು ಕಿರು ಗರ್ಭಗೃಹಗಳಿವೆ. ಮೊದಲಿನ ಗರ್ಭಗೃಹದಲ್ಲಿ ಒಂದು ಪ್ರತ್ಯೇಕ ಅಂತರಾಳವಿದೆ. ಇದರಲ್ಲಿ ವಿಜಯನಗರೋತ್ತರ ಶೈಲಿಯ ಚತುರ್ಭುಜಗಳನ್ನು ಹೊಂದಿರುವ ವೀರಭದ್ರನ ಸಮಭಂಗಿಯ ಮೂರ್ತಿಯಿದೆ. ಈ ವಿಗ್ರಹದ ಹಿಂದೆ ಲಾಳಾಕಾರದ ಸರಳವಾದ ಪ್ರಭಾವಳಿಯಿದ್ದು, ನಾಲ್ಕು ಕೈಗಳಲ್ಲಿ ಬಿಲ್ಲು ಬಾಣ ಮತ್ತು ಗುರಾಣಿ ಹಿಡಿದಿರುವ ರಕ್ಷಕನನ್ನು ಈ ಪ್ರಭಾವಳಿಯ ಭಾಗದಲ್ಲಿ ಕೆತ್ತಲಾಗಿದೆ. ಎರಡನೇಯ ಗರ್ಭಗೃಹದಲ್ಲಿ ವಿಜಯನಗರ ಶೈಲಿಯ

ಗಣಪತಿಯ ವಿಗ್ರಹವಿದೆ. ಮೂರನೇ ಗರ್ಭಗೃಹದಿಂದಲೇ ಗುಹೆಯ ಒಳಭಾಗಕ್ಕೆ ಪ್ರವೇಶವಿದೆ. ಗವಿಯಲ್ಲಿ ಪ್ರತ್ಯೇಕವಾದ ಕೊಠಡಿ ನಿರ್ಮಿಸಿ, ಅಲ್ಲಿ ಮಹಿಷಮರ್ಧಿನಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಿಯ ಹಿಂಭಾಗದಲ್ಲಿರುವ ಬಂಡೆಯಲ್ಲಿ ರಾಜರಾಜ ಚೋಳನ ಕ್ರಿ. ಶ. ೧೦೦೫ನೇ ಇಸವಿಯ ತಮಿಳು ಶಾಸನವೊಂದು ಕಂಡುಬರುತ್ತದೆ. ಈ ಶಾಸನವು ರಾಜೇಂದ್ರ ಚೋಳನ ಕೀರ್ತಿಯ ಬಗ್ಗೆ ವರ್ಣಿಸುತ್ತಾ ಎಡದೊರೆ ನಾಡನ್ನೂ, ಬನವಾಸಿಯನ್ನೂ, ಕೊಳ್ಳಿಪಾಕ್ಕವನ್ನೂ, ಮಣ್ಣೀಕಡಕ, ಈಳಾದೇಶ (ಶ್ರೀಲಂಕಾ)ದ ಅರಸರ ಕಿರೀಟವನ್ನೂ, ಅಲ್ಲಿ ಅವರ ದೇವಿಯರ ಕಿರೀಟವನ್ನೂ ಕೊಂಡಕೋಪುರ ಕೇಸರಿ ಪರ್ಮರಾದ ರಾಜೇಂದ್ರನು ನುಳಂಬಪಾಡಿಯ ನಿಗರಿಲಿ ಚೋಳ ಶ್ರೀನಾಮ ಗ್ರಾಮ ಶ್ರೀಪತಿ ಮಲೆಯಲ್ಲಿ ಕ್ಷೇತ್ರಪಾಲ ದೇವರಿಗೆ ನೀಡಿದ ಹಲವಾರು ಭೂದಾನಗಳ ಬಗ್ಗೆ ದಾಖಲಿಸುತ್ತದೆ. ಗವಿಯಂತಿರುವ ಗರ್ಭಗೃಹದ ಮುಂಭಾಗದಲ್ಲಿ ಅಂತರಾಳವನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಎರಡು ವಿಜಯನಗರ ಶೈಲಿಯ ಸ್ತಂಭಗಳು ಕಂಡುಬರುತ್ತವೆ. ಅರ್ಧಮಂಟಪದ ಎಡಭಾಗದಲ್ಲಿ ಗಂಗರ ಕಾಲದ ನಂದಿಯ ವಿಗ್ರಹವಿದೆ. ಅಲ್ಲದೇ ಇಲ್ಲಿ ಸುಮಾರು ೧.೫ ಅಡಿ ಎತ್ತರವಿರುವ ದುರ್ಗೆಯ ಮತ್ತು ಮೂರು ಕಾಲುಗಳುಳ್ಳ ಭೃಂಗಿಯ ಶಿಲ್ಪಗಳೂ ಸಹ ಕಂಡುಬರುತ್ತವೆ. ಈ ಎಲ್ಲಾ ಶಿಲ್ಪಗಳು ಗಂಗರ ಕಾಲದ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ.

ಗವಿಯಲ್ಲಿ ಚೌರಸವಾದ ಪಾಣಿಪೀಠದಲ್ಲಿ ಕ್ರಿಶ. ಏಳು–ಎಂಟನೇ ಶತಮಾನದ ಲಕ್ಷಣವುಳ್ಳ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಇದನ್ನು ಶಾಸನಗಳಲ್ಲಿ ಶ್ರೀಪತೀಶ್ವರ ಎಂದು ಉಲ್ಲೇಖಿಸಲಾಗಿದೆ. ಸೂಕ್ಷ್ಮವಾಗಿ ಈ ಶಿವಲಿಂಗವನ್ನು ಗಮನಿಸಿದರೇ ಇದು ಗಂಗರ ಪೂರ್ವಕಾಲದ ಅಥವಾ ಅತ್ಯಂತ ಪ್ರಾಚೀನ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಈ ಗವಿಯು ಪೂರ್ವೇತಿಹಾಸದ ಕಾಲದ ಲಕ್ಷಣಗಳನ್ನು ಬಹಳಷ್ಟು ಮಟ್ಟಿಗೆ ಹೋಲುತ್ತದೆ ಹಾಗೂ ಶೈವಾರಾಧನೆಯು ಪ್ರಚಲಿತವಾಗಿತ್ತೆಂದು ಹಲವು ಪುರಾತತ್ವಶಾಸ್ತ್ರಜ್ಞರ ಅಭಿಪ್ರಾಯವಾಗಿರುತ್ತದೆ.

ಅರ್ಧಮಂಟಪದ ಮುಂಭಾಗದಲ್ಲಿರುವ ವಿಶಾಲ ಪಡಸಾಲೆಗೆ ಬಂದರೆ ಅಲ್ಲಿ ಎಡಭಾಗದಲ್ಲಿ ಹೊಸದಾಗಿ ನಿರ್ಮಿಸಿರುವ ಒಂದು ಗರ್ಭಗೃಹದಲ್ಲಿ ತನ್ನ ಇಬ್ಬರು ಅಪ್ಸರೆಯರೊಂದಿಗಿರುವ ಕಾರ್ತಿಕೇಯನ ಪ್ರತಿಮೆ ಇದ್ದು, ಇದು ಇತ್ತೀಚಿನ ಲಕ್ಷಣವನ್ನು ಹೊಂದಿದೆ. ಇದರ ಪಕ್ಕದಲ್ಲಿ ಹೊರಗಡೆ ಎಡಭಾಗಕ್ಕೆ ಒಂದು ನಾಗಶಿಲೆ ಹಾಗೂ ಗಂಗರ ಕಾಲದ ಸೂರ್ಯಶಿಲ್ಪಗಳಿವೆ. ಕಾರ್ತಿಕೇಯನ ಗರ್ಭಗೃಹದ ಆಚೆ ಹಿಂಭಾಗದಲ್ಲಿ ಪಾರ್ವತಿಯ ಗರ್ಭಗೃಹವಿದೆ. ಇದನ್ನು ತಲುಪಲು ಕೆಲವು ಮೆಟ್ಟಿಲುಗಳಿದ್ದು, ಇದರ ಇಕ್ಕೆಲಗಳಲ್ಲಿ ವಿಜಯನಗರ ಶೈಲಿಯ ತಾಳವಾರಗಳಿವೆ. ಈ ಗರ್ಭಗೃಹದಲ್ಲಿರುವ ಪಾರ್ವತಿಯು ಚತುರ್ಭುಜಗಳನ್ನು ಹೊಂದಿದ್ದು, ಎರಡರಲ್ಲಿ ಕಮಲ ಹೂಗಳನ್ನು ಮತ್ತು ಉಳಿದೆರಡು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ಮುಂಭಾಗದಲ್ಲಿ ಪ್ರವೇಶದ್ವಾರದ ಮೆಟ್ಟಿಲುಗಳು, ಬಲಿಪೀಠ ಮತ್ತು ಧ್ವಜ ಸ್ತಂಭಗಳಿವೆ.

ಭೈರವೇಶ್ವರ ದೇವಾಲಯದಲ್ಲಿ ಗರ್ಭಗೃಹ ಅರ್ಧಮಂಟಪ ಮತ್ತು ನವರಂಗಗಳಿದ್ದು ಮುಂಭಾಗದಲ್ಲಿ ಯಾಳಿಗಳಿರುವ ಪ್ರವೇಶದ್ವಾರವಿದೆ. ಇದರ ಮುಂಭಾಗದಲ್ಲಿ ವಿಶಾಲವಾದ ಮುಖಮಂಟಪವಿದೆ. ಗರ್ಭಗೃಹವು ಚೌರಸವಾಗಿದ್ದು, ಸಮಭೂಗಿಯಲ್ಲಿರುವ ಚತುರ್ಭುಜಾಕಾರದ ಭೈರವೇಶ್ವರನ ಶಿಲಾಮೂರ್ತಿಯನ್ನು ಹೊಂದಿದೆ. ಈ ಶಿಲಾಮೂರ್ತಿಯು ಗಂಗರ ಶೈಲಿಯಲ್ಲಿದ್ದು, ಸೌಮ್ಯ ಹಾಗೂ ಗಂಭೀರ ಮುಖ ಮುದ್ರೆಯನ್ನು ವ್ಯಕ್ತಪಡಿಸುತ್ತದೆ. ಹಿಂಭಾಗದಲ್ಲಿ ಅಗ್ನಿಶಿಖೆಯ ಅಶ್ವತ್ಥ ಪತ್ರದಾಕಾರದ ಪ್ರಭಾವಳಿಯಿದೆ. ಈ ಮೂರ್ತಿಯ ಆಭರಣಗಳೆಂದರೇ ಕಡಗ, ಒಡ್ಯಾಣ, ಉದರಬಂಧ ಹಾಗೂ ರುಂಡಮಾಲೆಯ ಉಪವೀತವೂ ಮೊಳಕಾಲವರೆಗೆ ಇಳಿಬಿಟ್ಟಿದೆ. ನಾಲ್ಕು ಕೈಗಳಲ್ಲಿ ತ್ರಿಶೂಲ, ಪಾಶ, ಪಾನಪಾತ್ರೆ ಮತ್ತು ಅಕ್ಷಮಾಲೆಗಳನ್ನು ಭೈರವನು ಹೊಂದಿರುವನು. ಹಿಂಭಾಗದಲ್ಲಿ ಐದು ಹೆಡೆಯ ಸರ್ಪದ ಅಲಂಕಾರದ ಪ್ರಭಾವಳಿಯಿದೆ. ಕರ್ಣಕುಂಡಲ ಮತ್ತು ಕಂಠಾಭರಣಗಳನ್ನು ಹೊಂದಿರುವ ಭೈರವ ಮೂರ್ತಿಯಿದೆ. ಅರ್ಧಮಂಟಪವು ಕಿರಿದಾಗಿದ್ದು ಸರಳವಾಗಿದೆ. ಇದರ ಮುಂಭಾಗದಲ್ಲಿರುವ ನವರಂಗವು ಗಂಗರ ಕಾಲದ ಅಥವಾ ಪಲ್ಲವರ ಶೈಲಿಯ ಸಿಂಹಪೀಠವನ್ನು ಹೊಂದಿರುವ ನಾಲ್ಕು ವೃತ್ತಾಕಾರದ ಸ್ತಂಭಗಳಿದ್ದು, ಮೇಲ್ಭಾಗದಲ್ಲಿ ದಿಂಬಿನ ಆಕಾರದ ಪೀಠಗಳನ್ನು ಹೊಂದಿವೆ. ಇದರಲ್ಲಿ ಗಂಗರ ಕಾಲದ ಪಲ್ಲವರ ಶೈಲಿಯನ್ನು ಹೋಲುವ ಸಿಂಹತಳದ ಎರಡು ಸ್ತಂಭಗಳೂ ಹಾಗೂ ಹೊಯ್ಸಳರ ಶೈಲಿಯ ಚೌಕಾಕಾರವಾದ ಅಲಂಕೃತ ಸ್ತಂಭಗಳೂ ಇವೆ. ನವರಂಗ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಅಲಂಕೃತವಾದ ಜಾಲಂದ್ರಗಳಿವೆ. ನವರಂಗದ ಒಳಛಾವಣಿಯಲ್ಲಿ ಅಷ್ಟದಿಕ್ಪಾಲಕರ ಸುಂದರ ಶಿಲ್ಪಗಳಿದ್ದು ಮಧ್ಯದಲ್ಲಿ ನಂದಿಯ ಮೇಲೆ ಅಲಂಕಾರಯುತ ಲಲಿತಾಸನದಲ್ಲಿ ಪೀಠದ ಮೇಲೆ ಕುಳಿತ ಶಿವಪಾರ್ವತಿಯರ ಸುಂದರ ಶಿಲ್ಪವಿದೆ. ಶಿವನು

ಚತುರ್ಭುಜ, ಕಿರೀಟ, ಡಮರುಗ, ತ್ರಿಶೂಲ, ಜಿಂಕೆ ಹಾಗೂ ಅಭಯ ಮುದ್ರೆಗಳನ್ನು ಹೊಂದಿರುವನು. ಇಲ್ಲಿ ಒಂದೆಡೆ ನಾಟ್ಯ ಗಣಪತಿ ಹಾಗೂ ದ್ವಿಬಾಹು ಭೈರವನ ದ್ವಿಭಂಗದ ಶಿಲ್ಪಗಳಿವೆ.

ನವರಂಗದ ಮುಂಭಾಗದಲ್ಲಿ ಪ್ರತ್ಯೇಕ ಮುಖಮಂಟಪವಿದ್ದು, ಮಧ್ಯದಲ್ಲಿ ಯಾಳಿಗಳಿರುವ ಮೆಟ್ಟಿಲುಗಳಿವೆ. ಇದರಲ್ಲಿ ಚೌಕಾಕಾರವಾದ ಸ್ತಂಭಗಳಿದ್ದು, ಬಹುಶಃ ನಂತರದ ಕಾಲದ ರಚನೆಯಾಗಿದೆ. ದೇವಾಲಯದ ಹೊರಗೋಡೆಯ ಮೇಲೆ ಕಾರ್ತಿಕೇಯನ ಸುಂದರ ಶಿಲ್ಪವಿದ್ದು, ಪಕ್ಕದಲ್ಲಿ ನವಿಲಿನ ಕೆತ್ತನೆಯಿದೆ. ಗರ್ಭಗೃಹದ ಹೊರಗೋಡೆಯಲ್ಲಿ ಪೂರ್ವ ಪಶ್ಚಿಮ ಹಾಗೂ ಉತ್ತರಕ್ಕೆ ಭೈರವನ ವಿವಿಧ ಭಂಗಿಯ ಮೂರ್ತಿಗಳು ದೇವಕೋಷ್ಠಗಳಲ್ಲಿ ಕಂಡುಬರುತ್ತವೆ. ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿರುವ ವಿಜಯನಗರ ಶೈಲಿಯ ಶಿಥಿಲವಾದ ಶಿಖರವಿದೆ. ಇದರ ವೃತ್ತಾಕಾರವಾದ ಸ್ತೂಪಿಕೆಯ ನಾಲ್ಕು ಭಾಗಗಳಲ್ಲಿ ಭೈರವನ ಗಾರೆಯ ಮೂರ್ತಿಗಳನ್ನು ರಚಿಸಲಾಗಿದೆ.

ಈ ದೇವಾಲಯದ ಈಶಾನ್ಯಕ್ಕೆ ೨೦ ಅಡಿ ಸುತ್ತಳತೆಯುಳ್ಳ ಚಚ್ಚೌಕ ಯಜ್ಞಶಾಲೆಯಿದೆ. ಇದರ ನಿರ್ಮಾಣದಲ್ಲಿ ಹಲವು ವಿಜಯನಗರ ಶೈಲಿಯ ಸ್ತಂಭಗಳನ್ನು ಬಳಸಲಾಗಿದೆ. ಇದರ ಹೊರ ಭಾಗದಲ್ಲಿ ಒಂದೆಡೆಗೆ ಆನೆಯ ಮೇಲೆ ಸವಾರಿ ಮಾಡುತ್ತಿರುವ ಹಾಗೂ ಇನ್ನೊಂದೆಡೆ ಬೇರೆ ಪ್ರಾಣಿಯೊಂದರ ಮೇಲೆ ಸವಾರಿ ಮಾಡುತ್ತಿರುವ ಮನ್ನೆಯರ ಸುಂದರ ವಿಜಯನಗರ ಶೈಲಿಯ ಸುಂದರ ಉಬ್ಬು ಶಿಲ್ಪಗಳಿವೆ. ಭೈರವ ದೇವಾಲಯದಲ್ಲಿರುವ ಕ್ರಿ. ಶ. ೧೪೯೯ರ ಶಾಸನವು ಶ್ರೀಪತಿಯಲ್ಲಿ ತ್ರಿಭುವನ ಕ್ಷೇತ್ರಪಾಲರಾದ ಪಿಳ್ಳೈಯಾರಿಗೆ ಸ್ವಸ್ತಿಶ್ರೀ ರಾಜರಾಜ ಕರ್ನಾಟಕ ಮಹಾರಾಜರು ಮಾಲಿಯೂರಿನಲ್ಲಿನ ಹೊಲಗದ್ದೆ ಹಾಗೂ ಸಾಗುವಳಿ ಭೂಮಿ, ಬಾವಿಗಳನ್ನು ದಾನನೀಡಿದ ಬಗ್ಗೆ ದಾಖಲಿಸುತ್ತದೆ. ಭೈರವನ ಜಾತ್ರೆಯು ವಾರ್ಷಿಕವಾಗಿ ಚೈತ್ರಶುದ್ಧ ತದಿಗೆಯೆಂದು ನಡೆದಾಗ ರಥೋತ್ಸವವೂ ಜರುಗುತ್ತದೆ. ಬೆಟ್ಟದ ಕೆಳಗೆ ದೇವಾಲಯದ ಸಮಿತಿಯವರು ನಿರ್ಮಿಸಿರುವ ವಿಶಾಲವಾದ ಛತ್ರಗಳು ಹಾಗೂ ಇತರೆ ಸಾರ್ವಜನಿಕ ಕಟ್ಟಡಗಳೂ ಇವೆ. ಬೆಟ್ಟದ ತಪ್ಪಲಲ್ಲಿ ಮೂರು ವೀರಗಲ್ಲುಗಳು ಕಂಡುಬರುತ್ತವೆ. ಸೀತಿಬೆಟ್ಟದ ಪೂರ್ವಕ್ಕೆ ಖಾಸಗಿ ಹೊಲದ ಬದುವಿನ ಮೇಲಿರುವ ಕ್ರಿ. ಶ. ೧೩೦೨ರ ಶಾಸನದಲ್ಲಿ ಶ್ರೀಪತಿಯಲ್ಲಿ ಮರೈಪುಕ್ಕರಾಮನ್ ಸೊಣ್ಣ ನಾಯಕನ ವಲ್ಲಾಳದೇವರ್ ಅವರಿಗೆ ಜಯವಾಗಲೆಂದು ಪರೈಯನ್ ಕೊಡೆ ಶ್ರೀಪತಿ ನಾಯನಾರ್ ದೇವದಾಸರಲ್ಲಿ ಉಮೈಯ ಪಿಳ್ಳೈ ಕರಿಯಪಿಳ್ಳೈಗೆ ಬಿಟ್ಟ ಕೆಲವು ದಾನಗಳನ್ನು ದಾಖಲಿಸುತ್ತದೆ. ಭೈರವ ದೇವಾಲಯದ ಹೊರ ಪ್ರವೇಶದ್ವಾರದ ಎಡಭಾಗದ ಗೋಡೆಯಲ್ಲಿರುವ ಕ್ರಿ.ಶ. ೧೩೭೮ರ ಬುಕ್ಕರಾಯನ ಶಾಸನವು, ಇದೇ ವರ್ಷ ಚೈತ್ರಮಾಸದ ದಿನದಂದು ವೆಂಗಡವರ ಮಗ ಆಳಗಿಯ ವರದನೆಂಬುವ ಅಧಿಕಾರಿಯು ತ್ರಿಭುವನ ವಿಡಂಗ ಕ್ಷೇತ್ರದ ಪಿಳ್ಳೈಯಾರಿಗೆ ನಂದಾದೀಪಕ್ಕೆಂದು ನೀಡಿದ ಹಲವಾರು ದಾನಗಳನ್ನು ದಾಖಲಿಸುತ್ತದೆ. ಬೆಟ್ಟದ ಕೆಳಗಿರುವ ಪ್ರಮುಖ ದೇವಾಲಯಗಳೆಂದರೆ ಜೋಗಿಲಿಂಗೇಶ್ವರ, ತ್ರಿಶೂಲ ಭೈರವಗುಡಿ (ಇತ್ತೀಚಿನದು), ವೀರಭದ್ರ, ಗಣಪತಿ, ಗಂಗಮ್ಮ, ಸಪ್ಪಲಮ್ಮ, ಭೂತಮ್ಮ ಮೊದಲಾದುವುಗಳು. ವೀರಭದ್ರ ದೇವಾಲಯವು ಮೈಸೂರು ಅರಸರ ಕಾಲದ ರಚನೆಯಾಗಿದ್ದು ಗರ್ಭಗೃಹವು ಕುಸಿದಿದೆ. ಭೂತಮ್ಮನ ಗುಡಿಯು ಎತ್ತರವಾದ ಬೆಟ್ಟದ ಪ್ರಾರಂಭದಲ್ಲಿದ್ದು, ೨೦ ಅಡಿ ಅಗಲವಾದ ಗವಿಯಲ್ಲಿ ಗೋಡೆಗಳಿಂದ ನಿರ್ಮಿತವಾಗಿದೆ. ಈ ಗವಿಯು ಬಹುಶಃ ಪೂರ್ವೇತಿಹಾಸಕಾಲದ ವಸತಿಯಾಗಿರಲು ಸಾಧ್ಯ. ಪ್ರತಿ ವರ್ಷ ಯುಗಾದಿಗೆ ಇಲ್ಲಿ ವಾರ್ಷಿಕವಾಗಿ ಜಾತ್ರೆ ನಡೆದಾಗ ಸಹಸ್ರಾರು ಜನ ಭಕ್ತಾದಿಗಳು ಸೇರುತ್ತಾರೆ.

**ಹುನುಕುಂದ** (ಬಂಗಾರಪೇಟೆ ತಾಲೂಕು: ಜನಸಂಖ್ಯೆ: ೧,೨೨೧): ಕೋಲಾರದಿಂದ ೨೦ ಕಿ.ಮೀ. ದೂರದಲ್ಲಿರುವ ಹುನುಕುಂದ ಅಥವಾ ಶಾಸನೋಕ್ತ 'ಪೊಕ್ಕುಂದ', 'ಪೊನ್‌ಕುಂದ', 'ಪೋಕುಂದ'–ನೊಳಂಬರ ಕಾಲದಿಂದಲೂ ಜನಪ್ರಿಯವಾಗಿದ್ದ ಒಂದು ಅಗ್ರಹಾರ. ಎತ್ತರವಾದ ದುಂಡಾದ ಬಂಡೆಗಳನ್ನು ಹೊಂದಿರುವ ಬೆಟ್ಟವು ಊರಿನ ಹಿಂಭಾಗದಲ್ಲಿ ಕಂಡುಬರುವುದರಿಂದ ಈ ಸ್ಥಳಕ್ಕೆ ಹುನುಕುಂದ (ಹೊನ್ನಿನಂತ–ಹ–ಕುಂದ) ಎಂದು ಕರೆಯಲಾಗಿದೆ. ಊರ ಹಿಂಭಾಗದಲ್ಲಿರುವ ಬೆಟ್ಟವನ್ನು ಕಾಲುದಾರಿಯ ಮೂಲಕ ಕಲ್ಲುಗುಂಡುಗಳ ಮಧ್ಯದಲ್ಲಿ ಹತ್ತಿ ಹೋದರೆ ಮೇಲ್ಭಾಗದಲ್ಲಿ ಸಮತಟ್ಟಾದ ಬಂಡೆಯಲ್ಲಿ ಪುಷ್ಕರಣಿ ಸಿಗುತ್ತದೆ. ಇಲ್ಲಿಂದ ಎಡಭಾಗದಲ್ಲಿರುವ ಇನ್ನೊಂದು ಬೆಟ್ಟವನ್ನು ಹತ್ತಿಹೋದರೆ ಬೃಹದಾಕಾರವಾದ ಎರಡು ಹುಟ್ಟುಬಂಡೆಗಳ ಕೆಳಗಿರುವ ಕಲ್ಲಾಸರೆಯಲ್ಲಿ ವೇಣುಗೋಪಾಲ, ಶಂಖ, ಚಕ್ರ, ಅಭಯ ಹಾಗೂ ವರದ ಹಸ್ತಗಳನ್ನು ಹೊಂದಿರುವ ಲಕ್ಷ್ಮಿಯ ವಿಗ್ರಹಗಳು ಕಂಡುಬರುತ್ತವೆ.

ಇದರ ಎದುರಿಗೆ ಬಂಡೆಯಮೇಲೆ ಸಾಲಾಗಿ ಸಪ್ತಮಾತೃಕೆಯರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇದರ, ಕೆಳಭಾಗದಲ್ಲಿ ಇನ್ನೊಂದು ಸ್ತ್ರೀ ವಿಗ್ರಹವಿದ್ದು ಶಂಖ, ಚಕ್ರ, ಅಭಯ ಮತ್ತು ಕಟಿಹಸ್ತಗಳನ್ನು ಹೊಂದಿದೆ. ಬಲಭಾಗದ ಬಂಡೆಯ ಮುಂಭಾಗದಲ್ಲಿರುವ ಸ್ವಲ್ಪ ವಿಶಾಲವಾದ ಸಮತಟ್ಟಾದ ಪ್ರದೇಶದಲ್ಲಿ ಕುಳವಾಲದ ಗಂಗರ ಉತ್ತರಾಧಿಕಾರಿಗಳಾದ ಬಾಣರ ಕಾಲದಲ್ಲಿ ನಿರ್ಮಿಸಲಾದ ಸೋಮೇಶ್ವರ ದೇವಾಲಯವಿದ್ದು ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಎತ್ತರವಾದ ಪಾಣಿಪೀಠದ ಮೇಲೆ ಸುಮಾರು ಮೂರು ಅಡಿ ಎತ್ತರದ ಗಂಗರ ಲಕ್ಷಣವನ್ನು ವ್ಯಕ್ತಪಡಿಸುವ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅರ್ಧಮಂಟಪದ ಬಲಭಾಗದಲ್ಲಿ ಸಮಭಂಗಿಯಲ್ಲಿರುವ ಚತುರ್ಬಾಹುಗಳಿದ್ದು, ಶಂಖ, ಚಕ್ರ, ಅಭಯ ಹಾಗೂ ವರದ ಹಸ್ತಗಳನ್ನು ಹೊಂದಿರುವ ಪಾರ್ವತಿಯ ಆಕರ್ಷಕ ಶಿಲ್ಪವಿದೆ. ಇಲ್ಲೇ ಎಡಭಾಗದಲ್ಲಿ ಕಮಲಪೀಠದ ಮೇಲೆ ಇರುವ ಭಿಕ್ಷಾಟನಾ ಶಿವಾ ಚತುರ್ಬಾಹುಗಳಲ್ಲಿ ಡಮರುಗ, ತ್ರಿಶೂಲ, ವರದ ಹಾಗೂ ಭಿಕ್ಷಪಾತ್ರೆಗಳನ್ನು ಹೊಂದಿದ್ದು ಬೆನ್ನಮೇಲೆ ಅಗಲವಾಗಿ ಹರಡಿಕೊಂಡಿರುವ ಜಟೆ ಇರುವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗಕ್ಕೆ ಪೂರ್ವ–ಪಶ್ಚಿಮದಿಂದ ಎರಡು ಪ್ರವೇಶದ್ವಾರಗಳಿದ್ದು, ಮಧ್ಯದಲ್ಲಿ ವೃತ್ತಾಕಾರವಾದ ನಾಲ್ಕು ಸ್ತಂಭಗಳಿದ್ದು ಮೇಲ್ಭಾಗದಲ್ಲಿ ದಿಂಬಿನಾಕಾರದ ಪೀಠಗಳನ್ನು ಹೊಂದಿವೆ. ಇದರ ಮಧ್ಯದಲ್ಲಿ ಬೃಹದಾಕಾರದ ಕುಳಿತ ನಂದಿಯ ಏಕಶಿಲಾ ಮೂರ್ತಿ ಇದೆ. ಅರ್ಧಮಂಟಪದ ದ್ವಾರದ ಇಕ್ಕೆಲಗಳಲ್ಲಿ ಗಣೇಶ ಹಾಗೂ ಬೇಟೆನಾರಾಯಣನ ಸುಂದರ ನೊಳಂಬರ ಕಾಲದ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಸೂರ್ಯನ ಬಿಡಿ ಶಿಲ್ಪವೂ ಇದೆ. ದೇವಾಲಯದ ಗರ್ಭಗೃಹದ ಮೇಲೆ ಇದ್ದ ದ್ರಾವಿಡ ಶೈಲಿಯ ಶಿಖರವು ಈಗ ಬಿದ್ದುಹೋಗಿದೆ. ದೇವಾಲಯದ ಸುತ್ತಲೂ ತಳಪಾದಿಯ ಕಲ್ಲಿನ ಮೇಲಿರುವ ಕ್ರಿ.ಶ.೧೩೦೦ರ ಶಾಸನವು ಉತ್ತಮ ಚೋಳ ಗಂಗಪೆರುಮಾಳನ ಮಗ ವಿಕ್ಕಿರಮಾದಿತ್ತನ್ ಮತ್ತು ದೇವ ಚೋಳಸ್ವಾಮಿ ಎಂಬ ಅಧಿಕಾರಿಗಳು ತೋರೀಶ್ವರನ್ ಉಡೈಯಾರ್ ದೇವರಿಗೆ ನೀಡಿದ ಪ್ರತ್ಯೇಕ ದಾನಗಳನ್ನು ದಾಖಲಿಸುತ್ತದೆ. ಇದೇ ದೇವರ ವಿಶೇಷ ಪೂಜಾ ಕೈಂಕರ್ಯಕ್ಕಾಗಿ ವಿಕ್ಕಿರಮ ಗಂಗವೇಲನ್ ಎಂಬ ಅಧಿಕಾರಿ ನೀಡಿದ ಭೂದಾನಗಳನ್ನು ಈ ಶಾಸನವು ದಾಖಲಿಸುತ್ತದೆ. ಇದೇ ದೇವಾಲಯದ ಬಂಡೆಯ ಮೇಲಿರುವ ಕ್ರಿ.ಶ.೧೨೮೦ರ ಶಾಸನವು ಕುವಳಾಲನಗರದ ಗಂಗವಂಶದ (ಕಾವೇರಿ ವಲ್ಲವ ಮತ್ತು ನಂದಿಗಿರಿಯ ರಾಜರಾದ) ವೀರಗಂಗ ಉತ್ತಮ ಚೋಳಗಂಗನ ಮಗನಾದ ವೆತ್ತುಮಪ್ಪರ ಬಾಣನು ಈ ದೇವಾಲಯದ ದೈನಂದಿನ ಕೈಂಕರ್ಯಕ್ಕಾಗಿ ಅಕ್ಕಿ ಮತ್ತು ಸೇವಕರಿಗೆ ಸಂಬಳ ಮೊದಲಾದ ವೆಚ್ಚಗಳಿಗಾಗಿ ಕುವಳಾಲನಾಡಿನ ಪೊರ್ಕುಂದದ ತೋರೀಶ್ವರಮ್ ದೇವರಿಗೆ ನೀಡಿದ ಹಲವು ದಾನಗಳನ್ನು ವಾರ್ಷಿಕ ತೆರಿಗೆಗಳಿಂದ ಮುಕ್ತ ಮಾಡಿದ ವಿಚಾರವನ್ನೂ ಹಾಗೂ ಶೈವ ಬ್ರಾಹ್ಮಣರಿಗೆ ಮತ್ತು ದೇವಾಲಯದ ಇತರೆ ಸೇವಕರಿಗೆ ನೀಡಿದ ವಿಶೇಷ ದಾನಗಳ ಬಗ್ಗೆ ದಾಖಲಿಸುತ್ತದೆ. ಇದೇ ದೇವಾಲಯದ ದಕ್ಷಿಣ ಗೋಡೆಯಲ್ಲಿರುವ ಕ್ರಿ.ಶ.೧೨೯೫ರ ಶಾಸನವು ಮೂಡಲಿಪಿಳ್ಳೈ ಎಂಬ ಮಹಾಮಂತ್ರಿ ಮತ್ತು ಇಳಾನಾಡಿನಲ್ಲಿರುವ ಪಿರಿಯ ನಾಡಿನ ನಿವಾಸಿಗಳು ಪೋರ್ಕುಣರಮ್‌ನ ತೋರಿಶ್ವರಮ್ ಉಡೈಯಾರ್ ದೇವಾಲಯದಲ್ಲಿ ಅಖಂಡ ದೀಪವನ್ನು ಉರಿಸುವುದಕ್ಕಾಗಿ ಯುತ್ತಂಡಾನ್ ಪಿಳ್ಳೈ ಎಂಬ ಅಧಿಕಾರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ.

ಬೆಟ್ಟದಿಂದ ಇಳಿದು ಬಂದರೆ ಹುನುಕುಂದ ಗ್ರಾಮದಲ್ಲಿ ವೇಣುಗೋಪಾಲ, ಚೌಡೇಶ್ವರಿ, ಈಶ್ವರ ಮೊದಲಾದ ಪ್ರಮುಖ ದೇವಾಲಯಗಳಿವೆ. ವಿಜಯನಗರೋತ್ತರ ಕಾಲದ ವೇಣುಗೋಪಾಲ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು ಸಮಭಂಗಿಯಲ್ಲಿರುವ ವೇಣುಗೋಪಾಲನು ತನ್ನ ನಾಲ್ಕು ಕೈಗಳಲ್ಲಿ ಕೊಳಲು, ಶಂಖ, ಚಕ್ರ ಮತ್ತು ವರದ ಮುದ್ರೆಯಲ್ಲಿದ್ದು ಆಕರ್ಷಕವಾಗಿದೆ. ಅರ್ಧಮಂಟಪದಲ್ಲಿ ಶ್ರೀದೇವಿ ಮತ್ತು ಭೂದೇವಿಯವರ ಪ್ರತ್ಯೇಕ ವಿಗ್ರಹಗಳಿವೆ. ಇದರ ಪಕ್ಕದಲ್ಲಿ ಕುಳಿತ ಭಂಗಿಯಲ್ಲಿರುವ ನಾರಾಯಣನು ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಹೊಂದಿರುವನು. ಇದರ ಎದುರಿಗೆ ಆಳ್ವಾರ್‌ಗಳ ವಿಗ್ರಹಗಳಿದ್ದು ಜೊತೆಗೆ ಉತ್ಸವ ಮೂರ್ತಿಗಳೂ ಕಂಡುಬರುತ್ತವೆ. ನವರಂಗದ ಮಧ್ಯದಲ್ಲಿ ನಾಲ್ಕು ಚೌಕಾಕಾರವಾದ ಸ್ತಂಭಗಳಿವೆ. ದೇವಾಲಯದ ಎದುರಿಗೆ ಎತ್ತರವಾದ ಧ್ವಜಸ್ತಂಭ ಮತ್ತು ತುಳಸಿ ಬೃಂದಾವನಗಳಿವೆ. ಅಲ್ಲದೇ ಈ ದೇವಾಲಯದಲ್ಲಿ ಚಿಕ್ಕಚಿಕ್ಕ ನಾಲ್ಕು ಧ್ವಜಸ್ತಂಭಗಳೂ ಕಂಡುಬರುತ್ತವೆ. ಊರಿನ ಹಿಂಭಾಗದಲ್ಲಿ ಗುಡ್ಡಗಳ ಮಧ್ಯದಲ್ಲಿ ಆಧುನಿಕ ಶೈಲಿಯ ಚೌಡೇಶ್ವರಿ ದೇವಾಲಯವಿದೆ ಇದರಲ್ಲಿ ಗರ್ಭಗೃಹ, ನವರಂಗ ಹಾಗೂ ಮುಖಮಂಟಪಗಳಿವೆ ಈ ದೇವಾಲಯದ ಎದುರಿಗೆ ಕಲ್ಲಿನಿಂದ ನಿರ್ಮಿಸಿರುವ ಪುಷ್ಕರಣಿಯಿದೆ. ಈ ದೇವಾಲಯದ ಹಿಂಭಾಗದಲ್ಲಿ ಎರಡು ತುರುಗೋಳ್‌ಗಳ ವೀರಗಲ್ಲುಗಳಿವೆ. **ದಿಂಮಾಲದಿನ್ನೆ**ಯಲ್ಲಿರುವ ವೀರಗಲ್ಲು ಕ್ರಿ.ಶ.೯೫೦ರಲ್ಲಿ ನೊಳಂಬ ದಿಲೀಪಯ್ಯನು ಈ

ಪ್ರಾಂತ್ಯವನ್ನು ಆಳುತ್ತಿರುವಾಗ ಕೊಂಗಮಂಗಲದ ಮೇದಯ್ಯನೆಂಬ ವೀರನು ಪೊಕ್ಕುಂದದ ಗೋವುಗಳನ್ನು ಅಪಹರಣಕಾರರಿಂದ ರಕ್ಷಿಸುತ್ತಾ ವೀರಮರಣವನ್ನು ಹೊಂದಿದ ವಿಷಯವನ್ನು ದಾಖಲಿಸುತ್ತದೆ. ಇದೇ ಸ್ಥಳದಲ್ಲಿರುವ ಎರಡನೇ ವೀರಗಲ್ಲು ಕ್ರಿ.ಶ.೯೦೦ರಲ್ಲಿ ಮಹೇಂದ್ರ ನೊಳಂಬನ ಆಳ್ವಿಕೆಯಲ್ಲಿ ಪೊಕ್ಕಂದದ ಗೋವುಗಳನ್ನು ಅಪಹರಣಕಾರರಿಂದ ರಕ್ಷಿಸಲು ಹೋರಾಟ ಮಾಡಿದ ಮಾಚಿರಾಯನೆಂಬ ವೀರನು ವೀರ ಸ್ವರ್ಗ ಸೇರಿದ ವಿಚಾರವನ್ನು ದಾಖಲಿಸುತ್ತದೆ. ಇದೇ ಸ್ಥಳದಲ್ಲಿರುವ ಮೂರು ಮತ್ತು ನಾಲ್ಕನೇ ವೀರಗಲ್ಲುಗಳು ಕ್ರಿ.ಶ.೯೫೦ಕ್ಕೆ ಸೇರಿದ್ದ ಪೊಕ್ಕುಂದದ ಬಾರಂಡರಾವಯ್ಯನೆಂಬ ವೀರನು ಬಸವಯ್ಯನೆಂಬ ಗೋವುಗಳ ಅಪಹರಣಕಾರನ ವಿರುದ್ಧ ಹೋರಾಡಿ ವೀರಸ್ವರ್ಗವನ್ನು ಸೇರಿದ ವಿಚಾರವನ್ನು ದಾಖಲಿಸುತ್ತದೆ. ಇಲ್ಲೇ ಇರುವ ಆರನೇ ವೀರಗಲ್ಲು ಕ್ರಿ.ಶ.೮೯೦ರಲ್ಲಿ ಮಾಹಾವಳಿ ಬಾಣರಸನು ಗಂಗ–೬೦೦೦ವನ್ನು ಆಳುತ್ತಿದ್ದಾಗ ಅವಗಣಿ ಮತ್ತಿಗಂಗನ ಮಗ ನಾಗದೇವನು ಪೊಣ್ಕುಂದ–೧೨ರಲ್ಲಿ ತುರುಗೊಳ್‌ಗಳ ಅಪಹರಣದ ವಿರುದ್ಧ ಹೋರಾಡಿದಾಗ ದೇವಯ್ಯನೆಂಬ ವೀರನು ಮಡಿದ ವಿಚಾರವನ್ನು ದಾಖಲಿಸುತ್ತದೆ. ಹುನುಕುಂದದಲ್ಲಿ ಊರಿನ ಪ್ರವೇಶಸ್ಥಳದಲ್ಲಿ ನಿರ್ಮಿಸಿರುವ ಶ್ರೀಸಚ್ಚಿದಾನಂದ ಸರಸ್ವತಿ ಸ್ವಾಮಿಗಳ ಬೃಂದಾವನ ಹಾಗೂ ಮಠ ಇವೆ. ೧೯೭೦ರಲ್ಲಿ

**ಹೆಬ್ಬೆಟ್ಟ** (ಶ್ರೀನಿವಾಸಪುರ ತಾಲೂಕು): ಶ್ರೀನಿವಾಸಪುರದಿಂದ ಆರು ಕಿ. ಮೀ. ದೂರದಲ್ಲಿರುವ ಹೆಬೆಟ್ಟ ಅಥವಾ ಶಾಸನೋಕ್ತ 'ಪೆರ್ಬೆಟ್ಟ' ಅಥವಾ 'ಪೆರ್ವಟ್ಟಮ್' ಗಂಗ ಶ್ರೀಪುರುಷನ ಕಾಲದಿಂದಲೂ ಜನಪ್ರಿಯವಾಗಿರುವ ಪವಿತ್ರ ಹಾಗೂ ಪ್ರಾಚೀನ ಸ್ಥಳವಾಗಿದೆ. ಊರಿನಲ್ಲಿ ಅಲ್ಲಲ್ಲಿ ದೊರೆಯುವ ಯಂತ್ರಕಲ್ಲುಗಳು ಸಂಶೋಧಕರ ಗಮನವನ್ನು ಸಹಜವಾಗಿಯೇ ಸೆಳೆಯುತ್ತವೆ. ಹೆಬ್ಬೆಟ್ಟವು ಗಂಗ ಹಾಗೂ ನೊಳಂಬರ ಶಾಸನಗಳಿಂದಾಗಿ ಪ್ರಸಿದ್ಧಿಗೆ ಬಂದಿದೆ. ಈ ಗ್ರಾಮದ ಕೆರೆ ತೂಬಿನ ಮೇಲಿರುವ ಶಾಸನವು ಕ್ರಿ. ಶ. ೯೫೦ರಲ್ಲಿ ದಿಲೀಪಯ್ಯ ನೊಳಂಬನ ಆಳ್ವಿಕೆಯಲ್ಲಿ ಕೊಂಡಲಗಾವುಂಡನ ಮಗಳಾದ ಅನ್ನಾರಿಯು ಕಡೆಮಗಾವುಂಡನೆಂಬ ಅಧಿಕಾರಿಗೆ ಕೆರೆಗೆ ತೂಬು ಇಡಿಸುವ ಸಲುವಾಗಿ ನೀಡಿದ ದಾನವನ್ನು ನೀಡಿದ ವಿಚಾರವನ್ನು ದಾಖಲಿಸುತ್ತದೆ. ಇದೇ ಗ್ರಾಮದ ಖಾಸಗಿ ತೋಪಿನಲ್ಲಿರುವ ಕ್ರಿ. ಶ. ೯೦೦ರ ಲಕ್ಷಣವುಳ್ಳ ಶಾಸನವು ಪೆರ್‌ಬೆಟ್ಟದಲ್ಲಿ ಸಂಭವಿಸಿದ ಸ್ಥಳೀಯ ದಂಗೆಯಲ್ಲಿ ಆವಿಯಪೋಯನೆಂಬ ವ್ಯಕ್ತಿಯು ಇರಿತಕ್ಕೊಳಗಾಗಿ ಮಡಿದ ಬಗ್ಗೆ ದಾಖಲಿಸುತ್ತದೆ. ಇದೇ ಗ್ರಾಮದ ವ್ಯಾಪ್ತಿಯಲ್ಲಿರುವ ಗಟ್ಟಹಳ್ಳಿಯ ಖಾಸಗಿ ಜಮೀನಿನಲ್ಲಿರುವ ಶಾಸನವು ಕ್ರಿ. ಶ. ೮೭೦ರಲ್ಲಿ ಪಲ್ಲವ ಕುಲದ ನೊಳಂಬಾದಿರಾಜನ ಆಳ್ವಿಕೆಯಲ್ಲಿ ಪರಮಾರಭಟ್ಟಾರಕ, ಮಹಾರಾಜ ಪರಮೇಶ್ವರನು ಆತಣಿಯಮತ (ಗುಂಪಿಗೆ)ಕ್ಕೆ ಸೇರಿದ ಒಬ್ಬ ಪಂಡಿತನು ಈ ಬೆಟ್ಟದಲ್ಲಿ ನೆಲಸಿ ತಪಸ್ಸನ್ನಾಚರಿಸಿ ಪಾಡಿರಿವಳ ಗ್ರಾಮದಲ್ಲಿ ಬ್ರಹ್ಮ ಶಿವಾಚಾರ್ಯ ಪಂಡಿತರಲ್ಲಿ ಆಶ್ರಯಪಡೆದಿದ್ದಾನೆ. ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಇದೇ ಶಾಸನದಲ್ಲಿ ಬಿದಿರೂರಿನ ಬೀದೇಯಿತನು ಪೆರ್ಬೆಟ್ಟದಲ್ಲಿ ವೀರಸ್ವರ್ಗವನ್ನು ಹೊಂದಿದ ವಿಚಾರವನ್ನು ದಾಖಲಿಸಲಾಗಿದೆ. ಇದೇ ಗ್ರಾಮದ ಖಾಸಗಿ ಜಮೀನಿನಲ್ಲಿರುವ ಶಾಸನವು ಕ್ರಿ. ಶ. ೯೨೦ರಲ್ಲಿ ಅನ್ನಯ್ಯನು ಈ ಪ್ರದೇಶವನ್ನು ಆಳುತ್ತಿರುವಾಗ ಆಚಾರ್ಯನೆಂಬುವನ ಸಂಬಂಧಿಯೊಬ್ಬನು ಹೋರಾಟದಲ್ಲಿ ಮಡಿದು ವೀರಸ್ವರ್ಗ ಸೇರಿದ ವಿಚಾರವನ್ನು ದಾಖಲಿಸುತ್ತದೆ. ಇದರ ಬಳಿಯಿರುವ ಇನ್ನೊಂದು ಶಾಸನವು ಕ್ರಿ. ಶ. ೯೦೦ರಲ್ಲಿ ಆಯ್ಯಪ್ಪ ದೇವನು ಈ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದಾಗ ಪೆರ್ಬೆಟ್ಟದಲ್ಲಿ ಹಸುಗಳನ್ನು ಕದ್ದು ಒಯ್ದಾಗ ಭಾವನೆಂಬ ಭಕ್ತನು ಶಿವತಪಸ್ಸನ್ನಾಚರಿಸಿ ಮರಣ ಹೊಂದಿದ ವಿಚಾರವನ್ನು ದಾಖಲಿಸುತ್ತದೆ ಹಾಗೂ ಶಾಸನದಲ್ಲಿ ಐದು ಜನ ಮಹಂತರ ಬಗ್ಗೆ ಉಲ್ಲೇಖವಿದೆ.

**ಹರಪನಾಯಕನಹಳ್ಳಿ:** (ಮುಳಬಾಗಿಲು ತಾಲೂಕು: ಜನಸಂಖ್ಯೆ:೫೫೦) ಹರಪನಾಯಕನಹಳ್ಳಿಯು ಹರಪನಾಯಕ ಪಾಳೆಯಗಾರರ ಕೋಟೆಯಿರುವ ಐತಿಹಾಸಿಕ ಸ್ಥಳವಾಗಿದೆ. ಈ ಗ್ರಾಮಕ್ಕೆ ಸೇರಿದ ಬಿಸೇಗೌಡನೆಂಬ ಪಾಳೆಯಗಾರನು ಚಿಕ್ಕದಾದ ಪಾಳೆಯಪಟ್ಟನ್ನು ಸುಮಾರು ೨೦೦ ವರ್ಷಗಳ ಕೆಳಗೆ ಹೊಂದಿದ್ದನೆಂದು ಪ್ರತೀತಿಯಿದೆ. ಈತನು ಆಂಧ್ರಪ್ರದೇಶದ ಚಂದ್ರಗಿರಿ ಕೋಟೆಗೆ ಮುತ್ತಿಗೆ ಹಾಕಿ ಕೊಳ್ಳೆ ಹೊಡೆದ ಸಾಹಸ ಪ್ರಕರಣವು ಇಂದಿಗೂ ಜನಜನಿತವಾಗಿದೆ. ಈ ಊರಿನ ಮಧ್ಯದಲ್ಲಿ ಬಿಸೇಗೌಡನು ನಿರ್ಮಿಸಿಕೊಂಡಿದ್ದ ಅತ್ಯಂತ ಸುಭದ್ರವಾಗಿರುವ ಸಣ್ಣ ಪ್ರಮಾಣದ ಕಲ್ಲಿನ ಕೋಟೆಯು ಇಂದಿಗೂ ಕಂಡುಬರುತ್ತದೆ. ಈಗ ಆತನ ವಂಶಸ್ಥರು ಇದೇ ಕೋಟೆಯ ಒಳಗಿರುವ ದೊಡ್ಡ ಮನೆಯಲ್ಲಿ ವಾಸಿಸುತ್ತಾರೆ. ಬಿಸೇಗೌಡನು ತನ್ನ ಕದನ ಕಾಲದಲ್ಲಿ ಉಪಯೋಗಿಸಿದ್ದನೆಂದು ಹೇಳಲಾಗುವ ಕತ್ತಿ, ಬಂದೂಕು ಮತ್ತು ಚಾರಿತ್ರಕವಾಗಿ ಮಹತ್ವವೆನಿಸಿರುವ ಆತನ ರಾಜಕೀಯ ದಿನಚರಿಯ ವಿವರಗಳನ್ನು ಆತನ ವಂಶಸ್ಥರು ತಮ್ಮಲ್ಲಿ ಸಂರಕ್ಷಿಸಿಟ್ಟಿರುತ್ತಾರೆ.

ಬಿಸೇಗೌಡನು ಟಿಪ್ಪುಸುಲ್ತಾನನ ನಂತರ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅಧೀನದಲ್ಲಿದ್ದ ಕೆಲವೇ ಪರಾಕ್ರಮಶಾಲಿ ಪಾಳೆಯಗಾರರ ಪೈಕಿ ಒಬ್ಬನೆನಿಸಿದ್ದನು. ಇಂದಿಗೂ ಈ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಈತನ ವೀರಗಾಥೆ ಬಾಯಿಂದ ಬಾಯಿಗೆ ಹರಡಿ ಜನಮನದಲ್ಲಿ ಅಚ್ಚಳಿಯದೇ ಉಳಿದುಕೊಂಡಿದೆ. ಈತನ ವಂಶಜರು ಪೂರ್ವದಲ್ಲಿ ಕಂಚಿ ಮತ್ತು ಕಾಳಹಸ್ತಿಯಲ್ಲಿದ್ದರೆಂದು, ಬಿಸೇಗೌಡನ ಇಬ್ಬರು ಸಹೋದರರಾದ ದಂಡುಹಿರೇಗೌಡ ಮತ್ತು ದಂಡುಸಾಮೇಗೌಡ ಎನ್ನುವವರು ಆಗಿನ ಮೈಸೂರು ಮಹಾರಾಜರ ಸೇನೆಯಲ್ಲಿ ಬೆಳ್ಳಿಕಟ್ಟೆಗೆ ಸರದಾರರಾಗಿದ್ದರು. ಈ ಬೆಳ್ಳಿಕಟ್ಟೆಗೆ ಸರದಾರರಾಗಿದ್ದ ದಂಡು ಹಿರೇಗೌಡ ಮತ್ತು ಸಾಮೇಗೌಡ ಅವರ ಮೂಲಕವೇ ಬಿಸೇಗೌಡನಿಗೆ ಮೈಸೂರು ಅರಸು ಮನೆತನದ ಸಂಪರ್ಕ ದೊರೆಯಿತೆಂದು ತಿಳಿದುಬರುತ್ತದೆ. ಆತನೇ ದಾಖಲಿಸಿರುವ ದಿನಚರಿಯ ಆಧಾರದ ಮೇಲೆ ೧೭೯೯ರ ಜುಲೈ ತಿಂಗಳಲ್ಲಿ ಚಂದ್ರಗಿರಿಯನ್ನು ಮುತ್ತಿಗೆ ಹಾಕಲು ಆತನು ತಯಾರಿ ನಡೆಸಿದ್ದು ಸ್ವಯಂ ವೇದ್ಯವಾಗುತ್ತದೆ. ನಂತರ ಭಾರತೀಯ ಪುರಾತತ್ವ ಇಲಾಖೆಯು ಪ್ರಕಟಿಸಿರುವ ಚಂದ್ರಗಿರಿ ಕುರಿತ ಕರಪತ್ರದಲ್ಲಿರುವಂತೆ "ಬಿಸೇಗೌಡನು ಮೈಸೂರಿನ ಅರಸರ ಆದೇಶದ ಮೇರೆಗೆ ಚಂದ್ರಗಿರಿಗೆ ಮುತ್ತಿಗೆ ಹಾಕಿದನೆಂದು" ವ್ಯಕ್ತವಾಗುತ್ತದೆ. ಈತನು ಚಂದ್ರಗಿರಿಯಿಂದ ಹರಪನಾಯಕನ ಹಳ್ಳಿಗೆ ಹಿಂದಿರುಗುತ್ತಿದ್ದಾಗ ತನ್ನ ದಾಯಾದಿಗಳೊಡನೆ ಸೆಣೆಸಾಟದಲ್ಲಿ ಮರಣ ಹೊಂದಿದನೆಂದು ತಿಳಿದುಬರುತ್ತದೆ. ಈತನ ತರುವಾಯ ಬಿಸೇಗೌಡನ ಹೆಂಡತಿ ಚೌಡಮ್ಮ ತನಗೆ ಮಕ್ಕಳಿಲ್ಲದ ಕಾರಣ ತನ್ನ ಗಂಡನ ತಮ್ಮನ ಮಕ್ಕಳನ್ನು ದತ್ತು ಪಡೆದು ಈ ವಂಶದ ಆಡಳಿತವನ್ನು ಮುಂದುವರೆಸಿದಳೆಂದು ಹೇಳಲಾಗಿದೆ. ಈ ದುರಂತ ಕತೆ ತಿಳಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಚೌಡಮ್ಮನಿಗೆ ಜೋಡಿಗ್ರಾಮದ ಮಾನ್ಯವನ್ನು ಹಾಗೂ ಕೊಂಡೇಹಳ್ಳಿಯನ್ನು ರಕ್ತಮಾನ್ಯವನ್ನಾಗಿ ನೀಡಿದರೆಂದೂ ವ್ಯಕ್ತವಾಗುತ್ತದೆ.

**ಹೊಸೂರು** (ಜನಸಂಖ್ಯೆ: ೬,೪೯೬): ಗೌರಿಬಿದನೂರಿಂದ ೧೨ ಕಿ.ಮೀ. ದೂರದಲ್ಲಿರುವ ಹೊಸೂರು ಅಥವಾ ಕ್ರಿ.ಶ.೧೪ನೇ ಶತಮಾನದಲ್ಲಿ ಉಲ್ಲೇಖಗೊಂಡಿರುವ 'ಹೊಸವೀಡು' ಹೊಯ್ಸಳ ಬಲ್ಲಾಳನು ವಸತಿ ಹೂಡಿದ್ದ ಪ್ರಾಚೀನ ಸ್ಥಳವೆಂದು ತಿಳಿದುಬರುತ್ತದೆ. ಹೊಸೂರು ಕುಮದ್ವತಿಯ ದಡದಲ್ಲಿದ್ದು ಭೌಗೋಳಿಕವಾಗಿ ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣಿನಿಂದ ಕೂಡಿರುವ ಫಲವತ್ತಾದ ಭೂಮಿಯಾಗಿದೆ. ಊರಿನ ಸುತ್ತಮುತ್ತಲೂ ಕೆರೆಗಳು ನಿರ್ಮಾಣಗೊಂಡಿದ್ದು ಸ್ವಲ್ಪ ಸಮೃದ್ಧಿಯ ನೀರು ಲಭ್ಯವಾಗಿರುತ್ತದೆ. ಈ ಊರಿನ ಇತಿಹಾಸವನ್ನು ಗಮನಿಸಿದರೆ, ಹಳೇಬೀಡು ಅಥವಾ ದ್ವಾರಸಮುದ್ರವು ಮಲ್ಲಿಕ್ ಕಾಫರನ ದಾಳಿಗೆ ಸಿಲುಕಿ ನಾಶ ಹೊಂದಿದ ತರುವಾಯ ಮೂರನೇ ಬಲ್ಲಾಳನು ಇಲ್ಲಿಗೆ ವಲಸೆ ಬಂದು ನೆಲಸಿ ಈ ಸ್ಥಳಕ್ಕೆ 'ಹೊಸವೀಡು' ಎಂದು ಕರೆದನೆಂದು ವ್ಯಕ್ತವಾಗುತ್ತದೆ. ಈತನ ಕಾಲದಲ್ಲಿ ನಿರ್ಮಾಣವಾಗಿದೆಯೆಂದು ಸ್ಥಳೀಯವಾಗಿ ಹೇಳಲಾಗುವ (ಯಾವುದೇ ಶಾಸನಗಳೂ ಲಭ್ಯವಿಲ್ಲ) ಚನ್ನಕೇಶವ ದೇವಾಲಯವು ಇದೆ. ಪ್ರಾಚೀನ ಕವಿಯೆಂದು ಹೆಸರಾಗಿರುವ ಶ್ರೀ ಪುಲ್ಲಕವಿಯು ಇದೇ ಊರಿನವನೆಂದು ಪ್ರತೀತಿಯಿದೆ. ಪ್ರಸಿದ್ಧ ಗಾಂಧಿವಾದಿ, ಶಿಕ್ಷಣ ತಜ್ಞ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿದ್ದ ಡಾ॥ ಎಚ್.ನರಸಿಂಹಯ್ಯನವರು ಇದೇ ಗ್ರಾಮದವರು. ಈ ಊರಿನ ಬಳಿಯಿರುವ ಕುರೂಡಿ ಎಂಬಲ್ಲಿ ಸೋಮೇಶ್ವರ ದೇವಾಲಯ, ಜೈನ ದೇವಾಲಯ ಹಾಗೂ ಶಕ್ತಿ ದೇವತೆಗಳಾದ ಮಾರಮ್ಮ, ಚೌಡೇಶ್ವರಿ ಮೊದಲಾದ ದೇವಾಲಯಗಳು ಕಂಡುಬರುತ್ತವೆ. ಈ ಊರಿನ ಸಮೀಪವಿರುವ ರಮಾಪುರವು 'ಪಾದಬೆಟ್ಟ'ವೆಂಬ ಜೈನರ ಯಾತ್ರಾಸ್ಥಳವಾಗಿದೆ. ಈ ಹೊಸವೀಡು ಅಥವಾ ಹೊಸೂರಿನಲ್ಲಿ ವಿಜಯನಗರದ ಅರಸರ ಕಾಲದ ಅರಮನೆ ಇತ್ತೆಂದು ಹೇಳಲಾದ ಎತ್ತರವಾದ ಪ್ರದೇಶವನ್ನು ತೋರಿಸಲಾಗುತ್ತದೆ.